ಸಂವಾದ

ಏಪ್ರಿಲ್ ೨೦೦೪
ರೂ. ೨೦



ಅಂಬೇಡ್ಕರ್ ವಿಶೇಷಾಂಕ

ಗಾಂಧಿ ಮತ್ತು ಅಸ್ಪೃಶ್ಯರು

ಕ್ರಿಕೆಟ್, ಕೋಲಾ, ದೇವಾಲಯ

ದಲಿತ ನೌಕರರಿಂದ ಅಂಬೇಡ್ಕರ್ ನಿರೀಕ್ಷಿಸಿದ್ದೇನು?

ಚರ್ಚೆ: ಧಮ್ಮ ಸ್ವೀಕಾರ

ಜಾತಿ ವಿನಾಶ: ಎಡಪಂಥೀಯ ದೃಷ್ಟಿಕೋನ

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೬

ಏಪ್ರಿಲ್ ೨೦೦೪

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ. ನಟರಾಜ್ ಹುಳಿಯಾರ್

ಪ್ರೊ. ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ ಮತ್ತು

ಮಂಜುನಾಥ್ ಗೀತಾ

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

ದೂರವಾಣಿ : ೨೩೨೮೭೯೪೩ / ೨೩೨೮೧೬೬೭

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
PHONE : 23287943, 23281667

EDITOR :
INDUDHARA HONNAPURA

ಒಳಪುಟಗಳಲ್ಲಿ...

- ❑ ಪತ್ರಗಳು ೩
- ❑ ಮೇರಾ ಭಾರತ್ ಮಹಾನ್ ೪
- ❑ ಅಂತರಂಗ ೫
- ❑ ಭಜರಂಗದಳದ ಕಾರ್ಯಕರ್ತರಲ್ಲಿ ಮನವಿ ೬
  - ○ ಭಾಸ್ಕರ್
- ❑ ಅಸಹನೆ, ಅತೃಪ್ತಿ, ಹೋರಾಟದ ದಿಕ್ಕು ದೆಸೆ ೮
  - ○ ಅರವಿಂದ ಚೊಕ್ಕಾಡಿ

- ❑ ಕುವೆಂಪು ಮಲೆನಾಡಿನಲ್ಲಿ ಕ್ರೌರ್ಯ ೧೨
  - ○ ರವಿಕುಮಾರ್ ಬಾಗಿ
- ❑ ವಾಗ್ವಾದ, ಸವಾಲುಗಳ 'ಸಂವಾದ' ೧೪
  - ○ ಮಂಜುನಾಥ್ ಗೀತಾ
- ❑ ಗಾಂಧಿ ಮತ್ತು ಅಸ್ಪೃಶ್ಯರು ೧೮
  - ○ ಪ್ರೊ. ಶಿವರಾಮಯ್ಯ
- ❑ ತಂತ್ರಾಧ್ಯಯನದ ಜರೂರು ೨೦
  - ○ ಎಸ್.ಎಸ್. ಹಿರೇಮಠ

- ❑ ಧಮ್ಮ ಸ್ವೀಕಾರ: ಎರಡು ದೃಷ್ಟಿಕೋನ ೨೨
  - ○ ರಾಜೇಂದ್ರ ಬಿ. ದೊಡ್ಡಮನಿ, ಕೆ. ಸೌಭಾಗ್ಯ
- ❑ ಪ್ರೊಫೆಸರ್ ಸಂದರ್ಶನ ೨೬
  - ○ ಪ್ರೊ. ರಹಮತ್ ತರೀಕೆರೆ
- ❑ ಜಾತಿ ವಿನಾಶ : ಎಡಪಂಥೀಯ ನೋಟ ೩೦
  - ○ ಎ. ಶಂಕರ್
- ❑ ಸಾಮಾಜಿಕ ಕ್ರಾಂತಿಯಾಗಿ ಸಾಮ್ರಾಜ್ಯಶಾಹಿ ೩೬
  - ○ ಚಂದ್ರಭಾನ್ ಪ್ರಸಾದ್
- ❑ ಕ್ರಿಕೆಟ್, ಕೋಲಾ, ದೇವಾಲಯ ೩೮
  - ○ ಎಂ. ವೆಂಕಟಸ್ವಾಮಿ
- ❑ ಮಾರ್ಕ್ಸ್ ಮತ್ತು ಬುದ್ಧ ೪೦
  - ○ ಶ್ರೀಶ ಉಡುಪ
- ❑ ಶೋಷಿತರ ಹೋರಾಟದ ರೂವಾರಿ ೪೨
  - ○ ಡಾ. ಚಂದ್ರಮಾ ಎಸ್. ಕಣಗಲಿ
- ❑ ದಲಿತ ನೌಕರರಿಂದ ಅಂಬೇಡ್ಕರ್ ನಿರೀಕ್ಷಿಸಿದ್ದೇನು? ೪೮
  - ○ ರಘುನಾಥ ಚೇಡಚವಳ್ಳಿ
- ❑ ಹೊಸ ಪುಸ್ತಕ - ೪೫, ಝೆನ್ - ೪೭, ಬೋಧಿವೃಕ್ಷ - ೫೦

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಕವನಗಳು : ❑ ತೆಂಡೂಲ್ಕರನ ಬ್ಯಾಟೂ... - ೧೩ ❑ ಹೇ ಶೂದ್ರ ತಪಸ್ವಿ - ೧೭
❑ ಮಣ್ಣು ಮರೆಯದ ಮಾತು - ೨೯ ❑ 'ಕಪೋಲಿ'ಯ ಕಪೋಲದಲ್ಲಿಳಿದ ಕಣ್ಣೀರ ಕತೆ - ೪೯

ಮುಖಪುಟ ಚಿತ್ರ : ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನಮಂತ್ರಿ ನೆಹರೂ ಅವರ ಸಮ್ಮುಖದಲ್ಲಿ ಅಂಬೇಡ್ಕರ್ ೧೯೪೭ ರಲ್ಲಿ ಕಾನೂನು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವುದು. ಹಿಂಬದಿಯ ಚಿತ್ರ : ೧. ಪತ್ನಿ ಸವಿತಾ ಅವರೊಂದಿಗೆ ಬಿಡುವಿನ ವೇಳೆಯಲ್ಲಿ ಅಂಬೇಡ್ಕರ್. ೨. ಸಂವಿಧಾನ ರಚನೆ ಸಮಿತಿಯ ಇತರ ಸದಸ್ಯರೊಂದಿಗೆ ಡಾ. ಅಂಬೇಡ್ಕರ್-೧೯೪೭

‘ಸಂವಾದ’ದಿಂದ ಮತ್ತೊಂದು ಜಗತ್ತು ಸಾಧ್ಯ

ಮಾನ್ಯ ಸಂಪಾದಕರೇ,

ಸಾಂದರ್ಭಿಕವಾಗಿ-ಕೊರಗರ ಸಂವೇದನೆಯನ್ನು ಸಂವಹನಗೊಳಿಸಿರುವುದಕ್ಕೆ ಪ್ರತಿಕ್ರಿಯೆ ಸಾಧುವಲ್ಲವೆನಿಸಿದರೂ ಅಸ್ಪೃಶ್ಯತೆಯಿಲ್ಲದ ಸಮಾಜದ ಅನಿವಾರ್ಯತೆಯನ್ನು ಮಾರ್ಚ್ ತಿಂಗಳ ‘ಸಂವಾದ’ದಲ್ಲಿ ತಂದಿರುವುದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ.

ದುರಂತವೆಂದರೆ ಹೃದಯಹೀನ ಮತಾಂಧರು ಕಣ್ಣಿದ್ದೂ ಕುರುಡರಾಗಿ, ತಮ್ಮ ಭದ್ರತೆಗೆ ಇತರರನ್ನು ಕುರುಡರನ್ನಾಗಿಸುವುದು. ಆ ಇತರ ಮಂದಿಯೇ ತಮ್ಮ ವೈಚಾರಿಕ ದಾರಿದ್ರ್ಯದಿಂದ ‘ಧರ್ಮದ ಹೆಣ’ವನ್ನು ಹೊತ್ತಿರುವುದಲ್ಲವೆ?

ಕೊರಗರ ಅಜಲ್ ನಿಷೇಧ ಕಾನೂನು ಘೋಷಣೆಯಾಗಿ ಮೂರು ವರ್ಷಗಳು ಕಳೆದಿವೆ. ಆದರೆ ಕಾನೂನು ಪಾಲಕರೆನಿಸಿಕೊಂಡಿರುವ ಪೊಲೀಸ್ ಇಲಾಖೆಯವರು ಅದನ್ನು ಹಣದೊಂದಿಗೆ ತುಲಾಭಾರಕ್ಕಿಡುತ್ತಿದ್ದಾರೆ. ಪರಿಣಾಮವಾಗಿ ಕೊರಗ ಮಹಿಳೆಯರನ್ನು ಮನುವಾದಿಗಳ ಶನಿಗ್ರಹಾಚಾರ ನಿವಾರಣೆಗೆ ಕಟ್ಟಿಹಾಕುವಲ್ಲಿ ಅವರು ಮುನ್ನಡೆ ಸಾಧಿಸುವಂತಾಗಿದೆ. ಹೊಟ್ಟೆಗೆ ಒದ್ದೆ ಬಟ್ಟೆಯನ್ನು ಕಟ್ಟಿಕೊಂಡಿರುವ ಕೊರಗ ಮಹಿಳೆಗೆ ಉಳ್ಳವರು ಉಂಡೆಸೆವ ಎಂಜಲೆಲೆಯನ್ನರಸುವ ಕಾಯಕವೇ ಶಾಶ್ವತವಾಗಿರಲಿ ಎನ್ನುವ ಧೋರಣೆಯು ಕಾನೂನು ಪಾಲಕರಲ್ಲಿದೆ.

‘ಮತ್ತೊಂದು ಜಗತ್ತು ಸಾಧ್ಯ’ ಎನ್ನುವ ಸಂದೇಶವನ್ನು ಸಾರುವ ‘ಸಂವಾದ’ವು ಎಲ್ಲೆಲ್ಲೂ ತಲೆದೋರಲಿ ಎನ್ನುವುದು ಕೊರಗರ ಹಾರೈಕೆ.

ಸಿ.ಗೋಕುಲ್ ದಾಸ್, ಮಂಗಳೂರು

ಚಳವಳಿಗಳು ಒಂದಾಗಲಿ

ಪ್ರಿಯ ಸಂಪಾದಕರೇ,

ನಂಜುಂಡಸ್ವಾಮಿಯವರ ನೆನಪಿನಲ್ಲಿ ಬರೆದ ಸಂಪಾದಕೀಯ ಓದಿ ಸ್ವಲ್ಪ ಹೊತ್ತು ದಿಗ್ಭ್ರಾಂತನಾದೆ. ಸಮಾಜವಾದಿ ಚಳವಳಿ, ದಲಿತ ಹಾಗೂ ರೈತ ಚಳವಳಿಯಾಗಿ ಹೋಳಾದದ್ದರ ಬಗ್ಗೆ ನನಗೆ ಸತ್ಯದ ಅರಿವಾಗಿರಲಿಲ್ಲ. ದೂರದಲ್ಲಿರುವುದೆಲ್ಲ ನುಣ್ಣಗೇ ಇರುತ್ತದೆ. ಹತ್ತಿರ ಬಂದಷ್ಟೂ ಅದರ ಕುರೂಪ ಕಾಣಿಸತೊಡಗುತ್ತದೆ ಎನ್ನುವುದು ನಿಮ್ಮ ಸಂಪಾದಕೀಯ ಓದಿದ ಮೇಲೆ ನಿಜವೆನ್ನಿಸಿತು.

ಆದರೂ ನಿಮ್ಮಂತೆ ನಾನೂ ಆಶಾಜೀವಿ. ಒಡೆದ ಚಳವಳಿಗಳೆಲ್ಲ ಒಂದಾಗಿ ನಿಂತರೆ ಎಂಥ ಶಕ್ತಿಯಾಗುತ್ತದೆ ಅಲ್ಲವೆ? ಧ್ರುವಗಳೆಂದೂ ಕೂಡುವುದಿಲ್ಲ ಎಂಬುದೇನೋ ನಿಜ. ಆದರೆ ಈಗ ಧ್ರುವಗಳೇ ಇಲ್ಲವಲ್ಲ, ಕೂಡಿಕೆಗೆ ಇನ್ನೇನು ಅಡ್ಡಿ?

ಸದಾನಂದ ಸಿರಿವಾಸೆ, ಶಿವಮೊಗ್ಗ

ವೈಚಾರಿಕ-ಸುಂದರ ‘ಸಂವಾದ’

ಮಾನ್ಯರೇ,

ತಮ್ಮ ಮಾಸಪತ್ರಿಕೆ ‘ಸಂವಾದ’ದ ವಿಶೇಷ ಸಂಚಿಕೆ ತಲುಪಿ ಆಶ್ಚರ್ಯವೂ ಸಂತೋಷವೂ ಆಯಿತು. ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಂಡು, ಜೊತೆಗೆ ವೈಚಾರಿಕ ಚರ್ಚೆ, ಲೇಖನಗಳನ್ನೊಳಗೊಂಡು ‘ಸಂವಾದ’ ನಿಜಕ್ಕೂ ಸುಂದರವಾಗಿದೆ. ಪತ್ರಿಕೆಯನ್ನು ಕಳುಹಿಸಿದ ನಿಮಗೆ ವಂದನೆಗಳು.

ಎಲ್.ವಿ. ಶಾಂತಕುಮಾರಿ,
ಬೆಂಗಳೂರು

ದಿಕ್ಕು ತಪ್ಪಿಸುವ ಚಳವಳಿಗಳು

ಆತ್ಮೀಯ ಇಂದೂಧರರವರಿಗೆ,

ಸಂವಾದದ ಬಗ್ಗೆ ನನಗಿನಿಸಿದ್ದು ಇಷ್ಟು.

೧. ತಾವುಗಳು ಗಾಂಧಿ ವಾದವನ್ನು ಒಪ್ಪಿರುವವರು.

೨. ತಾವುಗಳು ದಲಿತರಿಗೆ ರಾಜಕೀಯ ಅಧಿಕಾರಕ್ಕಿಂತ ಹೆಚ್ಚಿನ ಶಕ್ತಿ ಚಳವಳಿಯಲ್ಲಿದೆ ಎಂದು ಹೇಳುವವರು.

೩. ಗಾಂಧಿವಾದ ಲೋಹಿಯಾವಾದ, ಮಾರ್ಕ್ಸ್‌ವಾದ ಜೆ.ಪಿ. ವಾದ, ಸಮಾಜವಾದ ಇವೆಲ್ಲವನ್ನೂ ಒಪ್ಪಿರುವವರು.

೪. ದಲಿತರ ವಿಮೋಚನೆ ಗಾಂಧಿವಾದ, ಬಸವೇಶ್ವರರ ಚಿಂತನೆಗಳಲ್ಲಿದೆ ಎನ್ನುವವರು.

ಆದರೆ ನಾನು ಮೇಲಿನ ವಾದಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತೇನೆ ಮತ್ತು ಅಸ್ಪೃಶ್ಯರನ್ನು ಸಂಪೂರ್ಣವಾಗಿ ದಿಕ್ಕು ತಪ್ಪಿಸಿದ ಚಳವಳಿಗಳಿವು ಎಂದು ಸಾಕ್ಷಿ ಆಧಾರಗಳ ಮೇಲೆ ನಾನು ಸಾಬೀತು ಪಡಿಸುತ್ತೇನೆ.

ಇರಲಿ ತಮ್ಮ ‘ಸಂವಾದ’ಕ್ಕೆ ನಾನು ಮನಃಪೂರ್ವಕವಾಗಿ ಯಶಸ್ಸನ್ನು ಕೋರುತ್ತೇನೆ.

ವಿಜಯ ಮಹೇಶ್, ಬೆಂಗಳೂರು.

ವಿಶೇಷ ಜ್ಞಾನದ ಕಡೆ ಕೊಂಡೊಯ್ಯುವ ಪತ್ರಿಕೆ

ಪ್ರಿಯ ಸಂಪಾದಕರೇ,

ತಾವು ಕಳಿಸಿದ ‘ಸಂವಾದ’ ನವೆಂಬರ್ ತಿಂಗಳ ಸಂಚಿಕೆ ಬಂದು ತಲುಪಿದೆ. ತಮಗೆ ತುಂಬಾ ಆಭಾರಿಯಾಗಿರುವೆ. ಪತ್ರಿಕೆಯ ಎಲ್ಲಾ ಅಂಕಣಗಳು ಹಾಗೂ ವಿಷಯಗಳ ಚಿಂತನೆ ಅರ್ಥಗರ್ಭಿತವಾಗಿದ್ದು, ನಮ್ಮನ್ನು ವಿಶೇಷ ಜ್ಞಾನದ ಕಡೆಗೆ ಕೊಂಡೊಯ್ಯುವುದರಲ್ಲಿ ಸಂದೇಹವೇ ಇಲ್ಲ.

ನಾನು ಈ ಪತ್ರದ ಜೊತೆಗೆ ತಮ್ಮ ಪತ್ರಿಕೆಗೆ ಚಂದಾದಾರನಾಗಬಯಸಿ ಎಂ.ಒ.ಕೂಡಾ ಕಳುಹಿಸುತ್ತಿರುವೆ.

ರಾಮೇಶ್ವರ ಡಾಣಿ, ಕೊಪ್ಪಳ

ಪತ್ರಾಗಾರ

ಮೀಸಲಾತಿ ಎಂಬ ‘ಟೈಟಾನಿಕ್’ ಹಡಗಿನಲ್ಲಿ ಕುಳಿತು...

ಆತ್ಮೀಯ ಇಂದೂಧರರವರಿಗೆ ವಂದನೆಗಳು,

ಇತ್ತೀಚೆಗಂತೂ ‘ಸಂವಾದ’ ತುಂಬಾ ಗಂಭೀರವಾದ ವಿಷಯಗಳನ್ನು ಹೊತ್ತು ಬರುತ್ತಿದ್ದು ಅನೇಕರ ಅರಿವಿನ ವಿಸ್ತಾರಕ್ಕೆ ಹೆಚ್ಚು ಪ್ರಯೋಜನಕಾರಿಯಾಗುತ್ತಲಿದೆ. ಮೇಲಾಗಿ ಹೊಸ ಓದುಗರನ್ನು ತನ್ನತ್ತ ಸೆಳೆಯುತ್ತಿರುವ ಪತ್ರಿಕೆಯೂ ಹೌದು. ‘ಸಂವಾದ’ದ ವಿಶೇಷ ಸಂಚಿಕೆಯಲ್ಲಿಯ ಕೋಮುವಾದ, ಒಳಮೀಸಲಾತಿ, ದಲಿತರ ಮೂಲಭೂತವಾದ, ಅಲಕ್ಷಿತ ಸಮುದಾಯಗಳು ಮತ್ತು ಮಾಧ್ಯಮ ಅಲ್ಲದೆ ಫೆಬ್ರವರಿ ಸಂಚಿಕೆಯ ‘ಪ್ರಕಾಶಿಸುತ್ತಿದೆ ಭಂಡ ಭಾರತ’ ಈ ಎಲ್ಲ ವಿಚಾರಗಳು ದಲಿತ, ಶೋಷಿತ ಸಮುದಾಯಗಳ ಪ್ರಜ್ಞಾವಂತರು ತಮ್ಮ ಮನಸಾಕ್ಷಿಗಳನ್ನು ಪ್ರಶ್ನಿಸುವ ನೆಲೆಗೆ ತರುವ ಚಿಂತನಾರ್ಹ ಬರಹಗಳಾಗಿವೆ. ಹಾಗೇ ಎಡ-ಬಲ ಎನ್ನುವುದು ದಲಿತ ಸಂಬಂಧ ನಾಶದ ಅಸ್ತ್ರ ಎಂಬ ನಾಗಮ್ಮನವರ, ಹನುಮಂತಯ್ಯ ಇಬ್ಬರ ಮಾತುಗಳೂ ಸಹಜ. ಮೀಸಲಾತಿಯಿಂದಲೇ ಉಸಿರಾಡುತ್ತಿರುವ ದಲಿತ ಸಮುದಾಯಗಳನ್ನು ಎಡಬಲದ ಆಧಾರದಲ್ಲಿ ಒಡೆಯುವುದೇ ಹಲವರ ಪ್ರಮುಖ ಉದ್ದೇಶ; ಆದರೆ ಮೀಸಲಾತಿ ‘ಟೈಟಾನಿಕ್ ಹಡಗಿದ್ದಂತೆ’. ಎಲ್ಲ ಹಂತದಲ್ಲೂ ಮುಳುಗುವ ಹಡಗಿನಲ್ಲಿ ಕುಳಿತು ಒಳ ಮೀಸಲಾತಿ ಚಿಂತನೆ ಎಷ್ಟು ಸರಿ ಎನ್ನುವುದು ಬಹಳ ಮುಖ್ಯವಾಗಬೇಕು.

ಡಾ.ಎಚ್.ಟಿ. ಪೋತೆ, ರಾಯಚೂರು

ಸಂವಾದ ಚಂದಾ ವಿವರ

ಬಿಡಿ ಪ್ರತಿ ರೂ. ೨೦/-	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
೧.ವಿದ್ಯಾರ್ಥಿಗಳು/ ಕಾರ್ಯಕರ್ತರಿಗೆ	ರೂ. ೧೦೦/-	ರೂ. ೩೦೦/-	ರೂ. ೫೦೦/-
೨.ನೌಕರರು ಮತ್ತು ವೃತ್ತಿಪರರಿಗೆ	ರೂ. ೨೦೦/-	ರೂ. ೫೦೦/-	ರೂ. ೮೦೦/-
೩.ಸಂಘ-ಸಂಸ್ಥೆಗಳು, ಉದ್ಯಮಿಗಳಿಗೆ	ರೂ. ೨೪೦/-	ರೂ. ೬೦೦/-	ರೂ. ೧೦೦೦/-
೪.ವಿಶೇಷ ಹಿತೈಷಿ ಚಂದಾದಾರರಿಗೆ	ರೂ. ೫೦೦/-	ರೂ.೧೫೦೦/-	ರೂ. ೨೫೦೦/-

ಆಜೀವ ಚಂದಾ ರೂ. ೫,೦೦೦/-, ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು.

ಶಾಸಕ ಸ್ಥಾನಕ್ಕೆ ಮುಳುವಾದ ಬಡತನ

ಕೊಲ್ಕತ್ತ ಫೆ.೨೯-ಸರ್ಕಾರಿ ಕೆಲಸ ಬಿಟ್ಟು ಶಾಸಕರಾಗಲು ಬಹಳ ಜನ ಹಾತೊರೆಯುತ್ತಾರೆ. ನಿವೃತ್ತರಾದ ಮೇಲೂ ರಾಜಕೀಯಕ್ಕೆ ಧುಮುಕಲು ಬಹಳ ಜನ ಹಂಬಲಿಸುತ್ತಾರೆ.

ಬರ್ದಾನ್ ಜಿಲ್ಲೆಯ ಖಂಡಾಗೋಷ್ ಕ್ಷೇತ್ರದ ಸಿಪಿಎಂ ಶಾಸಕಿ ಜ್ಯೋತ್ಸ್ನಾ ಘೋಷ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಪಕ್ಷದಲ್ಲಿ ಭಿನ್ನಾಭಿಪ್ರಾಯ ಬಂದು ರಾಜೀನಾಮೆ ನೀಡಿದರು ಎಂದು ತಿಳಿದರೆ ಅದು ತಪ್ಪು. ಅವರು ನೌಕರಿಗೆ ಸೇರಿ ಕುಟುಂಬ ಪಾಲನೆ ಮಾಡುವ ಸಲುವಾಗಿ ಶಾಸಕ ಸ್ಥಾನ ತೊರೆದರು!

ಮೇ.೨೦೦೧ ರಲ್ಲಿ ನಡೆದ ಚುನಾವಣೆಯಲ್ಲಿ ಅದೇ ಮೊದಲಬಾರಿಗೆ ಜ್ಯೋತ್ಸ್ನಾ ವಿಧಾನಸಭೆಗೆ ಆಯ್ಕೆಯಾದರು. ಆದರೆ ಅವರಿಗೆ ಶಾಸಕಿಯಾಗಿರಲು ಇಷ್ಟವೇ ಆಗಲಿಲ್ಲ. ಆರಂಭದಿಂದಲೇ ನಾನು ಮತ್ತೆ ಸರ್ಕಾರಿ ನೌಕರಿಗೇ ಹೋಗುತ್ತೇನೆ ನನ್ನನ್ನು ಬಿಡುಗಡೆ ಮಾಡಿ ಎಂದು ಪಕ್ಷವನ್ನು ಕೋರಿದರು. ಕೊನೆಗೂ ಪಕ್ಷ ಅವರು ರಾಜೀನಾಮೆ ನೀಡಲು ಅನುಮತಿ ನೀಡಿತು.

ಘೋಷ್ ಅವರದು ಕಡುಬಡತನವಿರುವ ಕುಟುಂಬ, ಅವಿವಾಹಿತೆ, ಮನೆಯಲ್ಲಿ ನಿರುದ್ಯೋಗಿಗಳಾಗಿರುವ ಇಬ್ಬರು ತಮ್ಮಂದಿರು ಇದ್ದಾರೆ. ಶಾಸಕರಾಗಿ ಅವರಿಗೆ ಬರುತ್ತಿದ್ದ ಸಂಬಳ ಊಟಕ್ಕೂ ಸಾಲುತ್ತಿರಲಿಲ್ಲ. ಇದರಿಂದ ಬೇಸತ್ತು ಸರ್ಕಾರಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿ ಪರೀಕ್ಷೆಗೆ ಕುಳಿತು ಪಾಸಾದರು. ಪಶ್ಚಿಮ ದಿನಾಜಪುರದ ಮಹಿಳಾ ಹಾಸ್ಟೆಲ್‌ನಲ್ಲಿ ಮುಖ್ಯ ವಾರ್ಡನ್ ಕೆಲಸವೇ ಸಿಕ್ಕಿತು.

(ಪ್ರಜಾ ವಾಣಿ)

೩೦ ವರ್ಷ ಸೇವೆ ಸಲ್ಲಿಸಿದರೂ ಖಾಯಂಗೊಳ್ಳದ ಕೆಲಸ

ಉಡುಪಿ, ಫೆ. ೨೪- ಉಡುಪಿಯ ಪ್ರಧಾನ ಅಂಚೆ ಕಚೇರಿಯಲ್ಲಿ ಕಳೆದ ೩೦ ವರ್ಷಗಳಿಂದ ದಿನಗೂಲಿ ನೆಲೆಯಲ್ಲಿ ಕೆಲಸ ಮಾಡುತ್ತಿರುವ ದಲಿತ ಮಹಿಳೆಯೋರ್ವರ ಉದ್ಯೋಗ ಇನ್ನೂ ಖಾಯಂಗೊಳ್ಳದೆ ಇರುವ ಪ್ರಕರಣ ಬೆಳಕಿಗೆ ಬಂದಿದೆ.

ಸುಮಾರು ೪೮ ವರ್ಷ ಪ್ರಾಯದ ಕಿಟ್ಟಿ ಎನ್ನುವ ಕೊರಗ ಮಹಿಳೆ ಉಡುಪಿ ಪ್ರಧಾನ ಅಂಚೆ ಕಚೇರಿಯಲ್ಲಿ ಕಟ್ಟಡದ ಆರಂಭದ ದಿನಗಳಿಂದಲೂ ದಿನಗೂಲಿ ಕೆಲಸ ಮಾಡುತ್ತಿದ್ದಾರೆ. ಬಡತನದಿಂದ ಬಳಲಿರುವ ಕಿಟ್ಟಿ ಇಂದಲ್ಲ ನಾಳೆ ಕೆಲಸ ಖಾಯಂಗೊಳ್ಳಬಹುದು ಎಂಬ ಆಶಾಭಾವನೆಯಿಂದ ದಿನ ಕಳೆಯುತ್ತಿದ್ದಾರೆ.

(ವಾರ್ತಾ ಭಾರತಿ)

ಮೀಸಲು ಅರಣ್ಯ ಕಡಿಯದಂತೆ ಒತ್ತಾಯಿಸಿ ರೈತನ ಆತ್ಮಹತ್ಯೆ

ಮೂಡಿಗೆರೆ, ಫೆ. ೨೮- ತಕ್ಕೋಳ ಮೀಸಲು ಅರಣ್ಯದಲ್ಲಿ ಗಿಡ-ಮರಗಳನ್ನು ಕಡಿಯದಂತೆ ಒತ್ತಾಯಿಸಿ ರೈತನೋರ್ವ ವಿಷ ಸೇವಿಸಿ ಆತ್ಮಹತ್ಯೆಗೈದ ಘಟನೆ ನಡೆದಿದೆ.

ಎಚ್.ಚಂದ್ರೇಗೌಡ (೪೫) ಎಂಬುವರು ವಿಷ ಸೇವಿಸಿ ಸಾವನ್ನಪ್ಪಿದ್ದಾರೆ. ಇಂದು ಮೂಡಿಗೆರೆ ತಾಲ್ಲೂಕಿನ ಕೆಂಜಿಗೆ ಬಾನಳ್ಳಿ, ಬಾಳೇ ಹಳ್ಳಿ ಗ್ರಾಮದಲ್ಲಿ ಅರಣ್ಯ ಇಲಾಖೆಯವರು ಕಡಿತ ಆರಂಭಿಸಿದ್ದು ಇದರ ವಿರುದ್ಧ ಪ್ರತಿಭಟಿಸಿದ್ದ ನೂರಾರು ಕಾರ್ಯಕರ್ತರನ್ನು ಬಂಧಿಸಿದ್ದಾರೆ.

(ವಾರ್ತಾಭಾರತಿ)

ಮೇರಾ ಭಾರತ್ ಮಹಾನ್

ದಲಿತರ ಮೇಲೆ ಹಲ್ಲೆ: ೬ ಬಂಧನ

ಪಿರಿಯಾಪಟ್ಟಣ, ಫೆ. ೨೬ - ನೀರಿನ ವಿಷಯಕ್ಕೆ ಸಂಬಂಧಿಸಿದಂತೆ ದಲಿತರು ಹಾಗೂ ಸವರ್ಣೀಯರ ನಡುವೆ ಹೊನ್ನೇನಹಳ್ಳಿಯಲ್ಲಿ ನಡೆದ ಘರ್ಷಣೆಗೆ ಸಂಬಂಧಿಸಿದಂತೆ ೬ ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ದಲಿತರ ವಿರುದ್ಧ ದೌರ್ಜನ್ಯ ಎಸಗಿರುವವರನ್ನು ಬಂಧಿಸಬೇಕೆಂದು ಜಿಲ್ಲಾಧಿಕಾರಿ ಜಿ.ಕುಮಾರ ನಾಯಕ್ ಆದೇಶ ನೀಡಿದ್ದಾರೆ. ದಲಿತರ ಕೇರಿಗೆ ಗುರುವಾರ ಭೇಟಿ ನೀಡಿದ ಬಳಿಕ ಶಾಲಾ ಆವರಣದಲ್ಲಿ ಹಲ್ಲೆಗೊಳಗಾಗಿರುವ ಕುಟುಂಬಗಳಿಗೆ ಸಾಂತ್ವನ ಹೇಳಿದರು.

ಜಖಂಗೊಂಡಿರುವ ಮನೆಗಳಿಗೆ ಹೆಂಚುಗಳನ್ನು ಮತ್ತು ಅಕ್ಕಿಯನ್ನು ವಿತರಿಸುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

(ವಿಜಯ ಕರ್ನಾಟಕ)

ಮೃತ ರೈತನ ಕುಟುಂಬಕ್ಕೆ ಪರಿಹಾರ ತಿರಸ್ಕಾರ: ಎದುರಾಳಿಗೆ ನೋಟೀಸು

ಬೆಂಗಳೂರು, ಫೆ.೨೪ - ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದ ರೈತನ ಕುಟುಂಬಕ್ಕೆ ಪರಿಹಾರ ನೀಡಲು ತಿರಸ್ಕರಿಸಿರುವ ಕ್ರಮವನ್ನು ಪ್ರಶ್ನಿಸಿ ಹಾಗೂ ಪರಿಹಾರಕ್ಕೆ ನಿರ್ದೇಶನ ಕೋರಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪರಿಶೀಲಿಸಿ ಹೈ ಕೋರ್ಟ್ ಮಂಗಳವಾರ ಎದುರಾಳಿಗೆ ನೋಟೀಸ್ ಜಾರಿ ಮಾಡಿತು.

ಹಿರೇಕೇರೂರು ತಾಲೂಕಿನ ಮಡಲೂರು ಗ್ರಾಮದ ಮಂಜಪ್ಪ ಬನ್ನಿಹಟ್ಟಿ ಎಂಬ ರೈತ ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದು, ಸಾಲ ಮಾಡಿದ ಬಗ್ಗೆ ಇಲಾಖಾಧಿಕಾರಿಗಳು ಪರಿಶೀಲಿಸಿದಾಗ್ಯೂ ಪರಿಹಾರ ನೀಡಲು ರಾಜ್ಯ ಸರ್ಕಾರ ಮತ್ತು ಕಂದಾಯ ಇಲಾಖೆ ತಿರಸ್ಕರಿಸಿದ್ದವು.

ಈ ಬಗ್ಗೆ ಮೃತನ ಪತ್ನಿ ಅನಸೂಯಕ್ಕ ಮತ್ತು ಆತನ ಅಪ್ರಾಪ್ತ ವಯಸ್ಸಿನ ಮಕ್ಕಳಾದ ಮಂಗಳಾ (೫), ಈರಮ್ಮ (೭) ನಿರ್ದೇಶನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿದ ನ್ಯಾ. ಎಚ್.ಎ.ಎಲ್.ದತ್ತು ಎದುರಾಳಿಗೆ ನೋಟೀಸು ಜಾರಿ ಮಾಡುವಂತೆ ಆಜ್ಞಾಪಿಸಿದರು.

(ಕನ್ನಡ ಪ್ರಭ)

ಸುಳ್ಳು ಜಾತಿ ಪ್ರಮಾಣ ಪತ್ರ ತಡೆಗೆ ಸರಕಾರ ವಿಫಲ

ಬೆಂಗಳೂರು, ಮಾ.೯ - ಸುಳ್ಳು ಜಾತಿ ಪ್ರಮಾಣ ಪತ್ರದ ಹಾವಳಿ ತಡೆಗಟ್ಟಲು ಸರಕಾರ ವಿಫಲವಾಗಿದೆ ಎಂದು ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಒಳ ಮೀಸಲಾತಿ ವರ್ಗೀಕರಣಕ್ಕೆ ರಚಿಸಿರುವ ಏಕ ಸದಸ್ಯ ವಿಚಾರಣೆ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎನ್. ವೈ. ಹನುಮಂತಪ್ಪ ಆರೋಪಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯನ್ನುದೇಶಿ ಮಾತನಾಡಿದ ಅವರು, ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಕೆಲವರು ಸರಕಾರಿ ಉದ್ಯೋಗ ಹಾಗೂ ರಾಜಕೀಯದಲ್ಲಿ ಅಧಿಕಾರ ಪಡೆದಿದ್ದಾರೆ. ಇದರ ಹಾವಳಿ ತಡೆಗೆ ಸರಕಾರ ಪ್ರಯತ್ನಿಸಿಲ್ಲ. ಇದು ಸರಕಾರದ ವೈಫಲ್ಯವನ್ನು ತೋರಿಸುತ್ತದೆ ಎಂದರು.

ಸುಳ್ಳು ಪ್ರಮಾಣ ಪತ್ರಗಳನ್ನು ಪಡೆಯುವ ಕಾರಣ ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಜನರಿಗೆ ಅನ್ಯಾಯವಾಗುತ್ತದೆ. ಇದರ ನಿಯಂತ್ರಣ ನನ್ನ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದರು.

(ವಿಜಯ ಕರ್ನಾಟಕ)

ನಿರುದ್ಯೋಗ: ಯುವತಿ ಆತ್ಮ ಹತ್ಯೆ

ಬೆಂಗಳೂರು, ಫೆ. ೨೨ - ಕೆಲಸ ಸಿಗದೆ ಇದ್ದುದರಿಂದ ಬೇಸರಗೊಂಡ ಮಹಿಳೆಯೊಬ್ಬರು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಂದಿನಿ ಲೇಔಟ್ ವ್ಯಾಪ್ತಿಯಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

ಜೈಮಾರುತಿನಗರ ಬಡಾವಣೆಯ ವಾಸಿ ಭಾಗ್ಯಲಕ್ಷ್ಮಿ (೨೧) ಆತ್ಮಹತ್ಯೆ ಮಾಡಿಕೊಂಡವರು. ಇವರು ಮೂಲತಃ ಕುಣಿಗಲ್ ತಾಲೂಕಿನ ಅಮೃತಹಳ್ಳಿಯ ವಾಸಿ. ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದ ಭಾಗ್ಯಲಕ್ಷ್ಮಿ ಅವರು ಒಂದು ವರ್ಷದಿಂದ ಕೆಲಸಕ್ಕಾಗಿ ಅಲೆಯುತ್ತಿದ್ದರು. ಎಲ್ಲಿಯೂ ಕೆಲಸ ಸಿಗದ ಕಾರಣ ಬೆಳಗಿನ ಜಾವ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

(ಕನ್ನಡ ಪ್ರಭ)

ಸಂಪಾದಕೀಯ

ಅಂತರಂಗ

ಬಿ.ಜೆ.ಪಿ ಎಂಬ 'ಕಪ್ಪು ಕುಳಿ'

ಚುನಾವಣೆಗಳು ಹತ್ತಿರ ಬಂದಿವೆ. ಚುನಾವಣೆಗಳು ಬಂದಾಗಷ್ಟೇ 'ಪ್ರಜಾಪ್ರಭುತ್ವ'ದ ನೆನಪಾಗುವ ಜನರು, ಪ್ರಜಾಪ್ರಭುತ್ವ ಎಂದರೆ ಚುನಾವಣೆಗಳು ಮಾತ್ರ ಎಂಬ ತೀರ್ಮಾನಕ್ಕೆ ಬಂದಂತಿದೆ. ಪ್ರಜಾಸತ್ತೆ ಭಾರತೀಯ ಸಮಾಜದ ಒಂದು ಜೀವನ ಕ್ರಮ ಆಗುವವರೆಗೆ ಬಹುಷಃ ಈ ದುರಂತದಿಂದ ಮುಕ್ತಿ ಇಲ್ಲವೇನೊ? ಪ್ರಜಾಪ್ರಭುತ್ವ ಭಾರತದ ಪಾರಂಪರಿಕ ವ್ಯವಸ್ಥೆಗೆ ಬಿದ್ದ ಅತಿದೊಡ್ಡ ಪೆಟ್ಟು. ರಾಜಸತ್ತೆ ಹಾಗೂ ಪುರೋಹಿತಶಾಹಿ ಹಿಡಿತದಲ್ಲಿ ಕೆಲವರು ಹಲವರಿಗಿಂತ ಶ್ರೇಷ್ಠರು ಎಂಬ ಪರಂಪರಾಗತ ಮೌಲ್ಯ ಕುಸಿಯಲು ಪ್ರಜಾಪ್ರಭುತ್ವದ ಪರಿಕಲ್ಪನೆಯೇ ಕಾರಣ. ಒಬ್ಬರಿಗೆ ಒಂದು ಓಟು, ಒಂದೇ ಮೌಲ್ಯ ಎನ್ನುವ ನೀತಿಯ ಮೂಲಕ ಭಾರತೀಯ ಶೋಷಕ ವ್ಯವಸ್ಥೆ ಸಾಮಾಜಿಕ ನ್ಯಾಯಕ್ಕೆ ಅನಿವಾರ್ಯವಾಗಿ ತನ್ನನ್ನು ಒಡ್ಡಿಕೊಳ್ಳಬೇಕಾಯಿತು.

ಸ್ವಾತಂತ್ರ್ಯಾನಂತರ ಪ್ರಜಾಪ್ರಭುತ್ವದ ಮೂಲ ಆಶಯಗಳಾದ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಗಳು, ಜನ ಮೆಚ್ಚುಗೆಗಾದರೂ, ಆಳುವವರ ಬಾಯಿಂದ ಆಗಾಗ್ಗೆ ಹೊರಬೀಳುತ್ತಿದ್ದವು. ಅಂಬೇಡ್ಕರ್, ಲೋಹಿಯಾ ಮೊದಲಾದವರ ನಿರಂತರ ಹೋರಾಟ ಹಲವರ ಆದರ್ಶವಾಗಿತ್ತು. ಜಾತಿ ವಿನಾಶದ ಮೂಲಕ ಮಾತ್ರ ಸಾಮಾಜಿಕ ನ್ಯಾಯವನ್ನು-ಸ್ವಾಭಿಮಾನವನ್ನು ಪುನರ್‌ಸ್ಥಾಪಿಸಬಹುದೆನ್ನುವ ಆಶಯ ಎಲ್ಲರಲ್ಲೂ ಇತ್ತು. ಹಿಂದೂ ವರ್ಣಾಶ್ರಮ ಧರ್ಮವನ್ನು ಪ್ರತಿಪಾದಿಸುತ್ತಿದ್ದ ಗಾಂಧಿಯಂಥವರೂ ಕೊನೆಯಲ್ಲಿ ಅಂತರ್‌ಜಾತಿ ವಿವಾಹಗಳನ್ನು ಹೊರತುಪಡಿಸಿ ಬೇರಾವ ವಿವಾಹಗಳಲ್ಲೂ ಭಾಗಿಯಾಗುವುದಿಲ್ಲ ಎಂದು ತೀರ್ಮಾನಿಸಿದ್ದರು. ಅಷ್ಟರಮಟ್ಟಿಗೆ ಹಿಂದೂವಾದಿಗಳಿಗೂ ಜಾತಿ ವಿನಾಶದ ಅಗತ್ಯ ಮನವರಿಕೆಯಾಗಿತ್ತು.

ಆದರೆ ಕ್ರಮೇಣ ಜಾತಿ ವಿನಾಶದ ಆಶಯ ಕಡಿಮೆಯಾಗುತ್ತಾ ಬಂತು. ಜೆ.ಪಿ. ಚಳವಳಿಯವರೆಗೆ ಅತ್ಯಂತ ಬಲವಾಗಿ ವ್ಯಾಪಿಸಿದ ಜಾತಿ ವಿನಾಶ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆ ಕ್ರಮೇಣ ಕರಗತೊಡಗಿತು. ಸಮಾಜವಾದಿಗಳು, ಕಮ್ಯುನಿಷ್ಟರು ಮತ್ತು ಕಟ್ಟಾ ಬಲಪಂಥೀಯರಾಗಿದ್ದ ಜನಸಂಘಿಗಳು ರಾಜಕೀಯ ಕಾರಣಗಳಿಗಾಗಿ ಹೊಂದಾಣಿಕೆ ಮಾಡಿಕೊಳ್ಳತೊಡಗಿದರು. ಸ್ವಾತಂತ್ರ್ಯಾನಂತರದ ಭಾರತೀಯ ಸಮಾಜ ಒಟ್ಟಾರೆ ತಿರಸ್ಕರಿಸಿದ್ದ ಜನಸಂಘದ ಮನುವಾದಿಗಳು ಮುಖ್ಯವಾಹಿನಿಯಲ್ಲಿ ಸೇರಿ ಬೇರು ಬಿಡತೊಡಗಿದರು.

ನಂತರದ್ದು ನಿಮಗೆಲ್ಲ ಗೊತ್ತಿದೆ. ಪಕ್ಕಕ್ಕೆ ಸರಿಸಲ್ಪಟ್ಟಿದ್ದ ಜನಸಂಘ ಭಾ.ಜ.ಪವಾಗಿ ಪರಿವರ್ತನೆಗೊಂಡು ಮುಖ್ಯವಾಹಿನಿಯಾಯಿತು. ಸಮಾಜವಾದಿಗಳೂ ಸೇರಿದಂತೆ ಅನೇಕ ಪ್ರಗತಿಪರರು ಬಿಜೆಪಿಯ ನೇತೃತ್ವ ವನ್ನು ಒಪ್ಪಿ ಅಧಿಕಾರ ಗ್ರಹಣದ ಪಾಲುದಾರರಾದರು. ಪ್ರಜಾಪ್ರಭುತ್ವದ ಆಶಯಗಳು ಮೂಲೆಗುಂಪಾಗತೊಡಗಿದವು. ರಾಜಸತ್ತೆ ಹಾಗೂ ಪುರೋಹಿತಶಾಹಿ ಹಿಡಿತಗಳನ್ನು ಪರೋಕ್ಷವಾಗಿ ದೇಶದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಮೇಲೆ ಹೇರತೊಡಗಿದರು. ಸಂವಿಧಾನವನ್ನು ಪುನರ್ ಪರಿಶೀಲಿಸುವ ಮಟ್ಟಕ್ಕೂ ಬಂದರು. ಅಧಿಕಾರದ ಪಾಲುದಾರರಾಗಿದ್ದ, ಎಲ್ಲ ಪ್ರಗತಿಪರರು, ಸಮಾಜವಾದಿಗಳು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸರ್ಕಾರದ ಪರವಾಗಿ ವಾದಕ್ಕಿಳಿದರು. 'ಸ್ವಾರ್ಥಕ್ಕಿಂತ ಮಿಗಿಲಾದ ಧರ್ಮ ಬೇರೊಂದಿಲ್ಲ' ಎಂಬ ಹೊಸ ಭಾಷ್ಯ ಬರೆದರು.

ಬಿಜೆಪಿ ಹಿಂದೂ ಪುರೋಹಿತಶಾಹಿಯ ರಾಜಕೀಯ ಮುಖ ಎಂಬುದನ್ನು ಇವರಾರೂ ಅರ್ಥಮಾಡಿಕೊಳ್ಳಲಿಲ್ಲ, ಬಿಜೆಪಿ ನೇತೃತ್ವದ ಎನ್‌ಡಿಎ ಸೇರಿದ್ದ ಬಹುತೇಕ ಇತರೆ ಎಲ್ಲಾ ಪಕ್ಷಗಳು ಈಗ ತಮ್ಮ ಅಸ್ತಿತ್ವ ಕಳೆದುಕೊಳ್ಳತೊಡಗಿವೆ. ಜಾರ್ಜ್, ಚೌತಾಲಾ, ನವೀನ್ ಪಟ್ನಾಯಕ್, ಕರುಣಾನಿಧಿ ಇವರಿಗೆಲ್ಲ ಇದರ ಬಿಸಿ ಚೆನ್ನಾಗಿಯೇ ಮುಟ್ಟಿದೆ. ಬಿಎಸ್‌ಪಿಯಂಥ ಉಗ್ರ ಬ್ರಾಹ್ಮಣವಿರೋಧಿ ಪಕ್ಷ ಕೂಡ ಅಧಿಕಾರಕ್ಕಾಗಿ ಬಿಜೆಪಿ ಸಖ್ಯ ಮಾಡಿತು. 'ಹೊಂದಾಣಿಕೆ' ಎಂಬ 'ವಿನಾಶ ಸೂತ್ರ'ವನ್ನು ತುಂಬಾ ಚೆನ್ನಾಗಿ ಬಳಸಿಕೊಂಡ ಬಿಜೆಪಿ ಹತ್ತಿರ ಬಂದವರನ್ನೆಲ್ಲ ನುಂಗಿ ಹಾಕತೊಡಗಿದೆ.

ಅದು ಆಕಾಶದ 'ಕಪ್ಪು ಕುಳಿ'ಯಂಥದ್ದು. ತನ್ನೆಡೆಗೆ ಬಂದ ಆಕಾಶಕಾಯಗಳನ್ನೆಲ್ಲ ನುಂಗಿ ಬಿಡುವುದೇ ಈ ಕಪ್ಪುಕುಳಿಯ ಕೆಲಸ. ಭಾರತೀಯ ಬ್ರಾಹ್ಮಣ ಧರ್ಮದ್ದು (ಅದನ್ನು ಹಿಂದೂ ಎಂದು ಕರೆಯಬಹುದು) ಅದೇ ಕೆಲಸ. ಅದರ ರಾಜಕೀಯ ಸ್ವರೂಪವಾದ ಭಾಜಪದ್ದು ಅದೇ ಕೆಲಸ. ಹಾಗಾಗಿ ಭಾಜಪ ಎಂದೂ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇವಲ ಒಂದು ರಾಜಕೀಯ ಪಕ್ಷವಾಗಿ ಕೆಲಸ ಮಾಡಿದ್ದೇ ಇಲ್ಲ. ಅದಕ್ಕೆ ಭಾರತದ ರಾಜ್ಯಾಂಗವನ್ನು ಪಾಲಿಸುವ ಶ್ರದ್ಧೆ ಕೂಡ ಇಲ್ಲ. ರಾಜ್ಯಾಂಗಕ್ಕೆ ಬದಲಾಗಿ 'ಮನು ಧರ್ಮಶಾಸ್ತ್ರ' ಹಾಗೂ 'ಬ್ರಾಹ್ಮಣ ಪಂಚಾಂಗ'ವನ್ನೇ ಪ್ರತಿಷ್ಠಾಪಿಸುವ ವ್ಯರ್ಥ ಪ್ರಯತ್ನದಲ್ಲಿ ಅದು ನಿರತವಾಗಿದೆ. ಆ ನಿಟ್ಟಿನಲ್ಲಿ ಸಫಲತೆಯನ್ನೂ ಕಾಣುತ್ತಿದೆ.

ಅದಕ್ಕಾಗಿಯೇ ಸಿದ್ಧಾಂತ ಹಾಗೂ ಕಾರ್ಯಕ್ರಮಗಳ ಮೇಲೆ ಚುನಾವಣೆಗಳು ಇಂದು ನಡೆಯುತ್ತಿಲ್ಲ. ಹಸಿವು-ಬಡತನಗಳು ಚುನಾವಣೆಯ ವಿಷಯಗಳಾಗುತ್ತಿಲ್ಲ. ಭ್ರಷ್ಟಾಚಾರ-ಸ್ವಜನ ಪಕ್ಷಪಾತಗಳು ಚರ್ಚಿತವಾಗುತ್ತಿಲ್ಲ. ಪಕ್ಷಾಂತರ ಯಾರಿಗೂ ಕಿರಿಕಿರಿ ಉಂಟುಮಾಡುತ್ತಿಲ್ಲ. ಮಂದಿರ-ಮಸೀದಿಗಳು ರಾಮ-ಕೃಷ್ಣರು ಚರ್ಚಿತವಾಗುತ್ತಿದ್ದಾರೆ. ರಥಯಾತ್ರೆಗಳು ನಡೆಯುತ್ತಿವೆ. ಕ್ರಿಕೆಟ್‌ನಂಥ ಆಟಗಳು ನಡೆಯುತ್ತಿವೆ. ಚುನಾವಣೆಗೆ ಯುದ್ಧ ಹಾಗೂ ಕ್ರೀಡೆಯನ್ನು ಬಳಸಿಕೊಂಡ ಉದಾಹರಣೆ ಜಗತ್ತಿನಲ್ಲೆಲ್ಲೂ ಇಲ್ಲ. ಆದರೆ ಬಿಜೆಪಿ ೧೯೯೯ರಲ್ಲಿ ಯುದ್ಧವನ್ನು ಬಳಸಿಕೊಂಡಿತು ಮತ್ತು ೨೦೦೪ರಲ್ಲಿ ಕ್ರೀಡೆಯನ್ನು ಅದಕ್ಕೆ ಸಮರ್ಥವಾಗಿ ಬಳಸಿಕೊಳ್ಳುತ್ತಿದೆ.

ಬಲಿಷ್ಠರನ್ನು ಓಲೈಸಿ ಬಡವರು-ಅಶಕ್ತರು ಬದುಕುವುದು ಅರಣ್ಯ ನ್ಯಾಯ. ಬಹುತೇಕ ಗ್ರಾಮೀಣ ಭಾರತ ಈ ನ್ಯಾಯವನ್ನೇ ಇಂದೂ ಪಾಲಿಸುತ್ತಿದೆ. ಪಾಪ ಭಾರತೀಯ ಮುಸ್ಲಿಮರಿಗೂ ಇದು ಇಂದು ಅನಿವಾರ್ಯವಾಗಿದೆ! ಮುಸ್ಲಿಂ ಬುದ್ಧಿಜೀವಿಗಳು, ರಾಜಕಾರಣಿಗಳು ಸಾರಾಸಗಟಾಗಿ ಬಿಜೆಪಿಗೆ ಶರಣಾಗುತ್ತಿರುವುದಕ್ಕೆ ಇದೇ ಕಾರಣ ಇರಬಹುದು. ಅಲ್ಪಸಂಖ್ಯಾತರಲ್ಲಿನ ಸ್ವಾರ್ಥಿಗಳು ಇಂದು ಬಿಜೆಪಿ ಸೇರುವ ಮೂಲಕ ಅವರ ಆತಂಕವನ್ನು ಇಮ್ಮಡಿ ಗೊಳಿಸಿದ್ದಾರೆ. ಹೊರಗಿದ್ದು ಹೋರಾಡುವುದಕ್ಕಿಂತ ಒಳಗಿದ್ದು ಸುಧಾರಿಸುವುದು ಒಳ್ಳೆಯದೆಂದು ಈಚೆಗೆ ಬಿಜೆಪಿ ಸೇರಿದ ಮುಸ್ಲಿಂ ಬುದ್ಧಿಜೀವಿಯೊಬ್ಬರು ಬಡಬಡಿಸುತ್ತಿದ್ದರು. ಬಹುಷಃ 'ಕಪ್ಪು ಕುಳಿ'ಯಲ್ಲಿ ಕರಗಿ ಹೋಗುವುದರಲ್ಲೇ ಅವರು ಮೋಕ್ಷ ಕಂಡುಕೊಂಡಿರಬೇಕು.

ಬ್ರಾಹ್ಮಣಧರ್ಮ (ಹಿಂದೂಧರ್ಮ) ಎಲ್ಲವನ್ನು ನುಂಗಿ ನೀರು ಕುಡಿದು ಅರಗಿಸಿಕೊಳ್ಳುವ 'ವಾತಾಪಿ ಜೀರ್ಣೋಭವ' ಸಂಸ್ಕೃತಿಯದ್ದು. ಅದರ ರಾಜಕೀಯ ರೂಪವಾದ ಬಿಜೆಪಿ ಕೂಡ ಅದೇ ಜಾಯಮಾನದ್ದು. ಕಾರಣ ಯಾವುದೇ ಇರಲಿ, ಹತ್ತಿರ ಹೋದವರಂತೂ ಮರಳುವುದು ಕಷ್ಟದ ಮಾತು. ಅಧಿಕಾರದ ಆಸೆಗೆ ಆಕರ್ಷಿತರಾಗುತ್ತಿರುವ ಎಲ್ಲರೂ ಈ ಬಗ್ಗೆ ಚಿಂತಿಸಲಿ.

❍ ಇಂದೂಧರ ಹೊನ್ನಾಪುರ

ಬಜರಂಗ ದಳದ ಕಾರ್ಯಕರ್ತರಲ್ಲಿ ಒಂದು ಮನವಿ

ಕಾಳಜಿ

ದೇಶವನ್ನು ಎಲ್ಲಾ ಬಗೆಯಲ್ಲಿಯೂ ವಿನಾಶದ ಅಂಚಿಗೆ ತಳ್ಳಿ ಇಡೀ ದೇಶವನ್ನು 'ಹಿಂದೂ ರಾಷ್ಟ್ರ'ವಾಗಿ ಮಾಡಬೇಕೆಂಬ ಹುನ್ನಾರದಲ್ಲಿ ನಿರಂತರ ತೊಡಗಿರುವ ಸಂಘಪರಿವಾರದ ನೇತೃತ್ವದಲ್ಲಿರುವವರೆಲ್ಲರೂ ಮೇಲ್ಜಾತಿಯ ಜನರೇ ಆದರೂ ಆ ಪರಿವಾರಗಳ ಪದಾತಿದಳಗಳಂತೆ ಇರುವ ಕಾರ್ಯಕರ್ತರೆಲ್ಲರೂ ದೇಶದ ದಲಿತ, ಹಿಂದುಳಿದ ವರ್ಗದವರೇ ಎಂಬುದು ಇಡೀ ದೇಶಕ್ಕೆ ಗೊತ್ತಿರುವ ಸತ್ಯ. ಅವರ ಬಡತನ, ಅಜ್ಞಾನಗಳನ್ನೇ ಬಂಡವಾಳ ಮಾಡಿಕೊಂಡು ಮತಾಂಧ ಚಟುವಟಿಕೆಗಳಿಗೆ ಅವರನ್ನು ಪ್ರೇರೇಪಿಸುವ ಸಂಘ ಪರಿವಾರದ ಚಿತಾವಣೆಗೆ ಬಲಿಯಾಗದಿರುವಂತೆ ಲೇಖಕರು ಎಚ್ಚರಿಸಿದ್ದಾರೆ.

○ಭಾಸ್ಕರ್

ಪ್ರಿಯ ಹಿಂದುಳಿದ, ದಲಿತ ಬಡ ವರ್ಗಗಳಲ್ಲಿನ ಬಜರಂಗ ದಳ ಕಾರ್ಯಕರ್ತರೆ, ನೀವುಗಳು ಹಲವಾರು ತೀವ್ರ ಕಷ್ಟಗಳನ್ನು ಸಮಸ್ಯೆಗಳನ್ನು ಎದುರಿಸುತ್ತಿದ್ದೀರಿ. ಭೂಮಿಯಿಲ್ಲದೆ, ಮಾಡಲು ಕೆಲಸ ದೊರೆಯದೆ, ಇರೋ ತುಂಡು ಭೂಮಿಯಲ್ಲಿ ಬೆವರು ಸುರಿಸಿ ಹಗಲು ರಾತ್ರಿ ದುಡಿದರೂ ಬೆಳೆದ ಬೆಳೆಗೆ ರೇಟಿಲ್ಲದೆ ದಿನೇ ದಿನೇ ಏರುತ್ತಿರುವ ಸಾಲದ ಬಡ್ಡಿ ಕಟ್ಟಲಾಗದ ಪರಿಸ್ಥಿತಿ, ಆಟೋ ಅಥವಾ ಎತ್ತಿನ ಗಾಡಿ ಹೊಡೆಯುತ್ತಾ ಜೀವನ ನಡೆಸಲೂ ಕಷ್ಟ ನಿಮಗೆ ಹೊಟ್ಟೆ ಬಟ್ಟೆಗೆ ಸಾಲುವಷ್ಟು ದುಡಿಮೆಗೆ ಅವಕಾಶವೇ ಇಲ್ಲವಾಗಿದೆ. ನಿಮ್ಮ ಮೇಲೆ ದಿನೇ ದಿನೇ ಲೂಟಿ, ಶೋಷಣೆ, ದೌರ್ಜನ್ಯಗಳು ಹೆಚ್ಚಾಗುತ್ತಿವೆ. ನಿಮ್ಮ ಬಡತನ, ಬವಣೆಗಳು ಅಸಮಾಧಾನ, ಆಕ್ರೋಶಗಳು ದಿನೇ ದಿನೇ ಬೆಳೆಯುತ್ತಿವೆ. ಬದುಕಿಗೆ ಭರವಸೆಯಿಲ್ಲದೆ ಹತಾಶ ಪರಿಸ್ಥಿತಿ ಬಂದಿದೆ. ನಿಮ್ಮನ್ನು ಶೋಷಣೆ, ಲೂಟಿ ಮಾಡುತ್ತಿರುವ ದೊಡ್ಡ ಭೂಮಾಲೀಕರ, ದೊಡ್ಡ ಶ್ರೀಮಂತರ ದಲ್ಲಾಳಿ ಬಂಡವಾಳಿಗರ ಆಸ್ತಿ-ಪಾಸ್ತಿಗಳು ದರ್ಪ ದೌರ್ಜನ್ಯಗಳು ದಿನೇ ದಿನೇ ಹೆಚ್ಚಾಗುತ್ತಿವೆ.

ಇಂತಹ ಪರಿಸ್ಥಿತಿಯಲ್ಲಿ ನೀವು ನಂಬಿದ ದೇವರುಗಳ ಮೇಲಿನ ಭಕ್ತಿ ಮತ್ತು ಧರ್ಮದ ಮೇಲಿನ ಶ್ರದ್ಧೆಗಳನ್ನು ಬಳಸುತ್ತಾ, ದುರುಪಯೋಗ ಮಾಡುತ್ತಾ ನಿಮ್ಮನ್ನು ಉದ್ರೇಕಿಸುತ್ತಾ ಬಡಜನರನ್ನು ಪರಸ್ಪರ ಎತ್ತಿ ಕಟ್ಟಲಾಗುತ್ತಿದೆ. ಬಡ ಮುಸ್ಲಿಂ ಬಾಂಧವರನ್ನು ಕ್ರಿಶ್ಚಿಯನ್ ಬಾಂಧವರನ್ನು ನಿಮ್ಮ ಶತ್ರುಗಳೆಂದು ತೋರಿಸಿ ನಿಮ್ಮನ್ನು ಅವರ ಮೇಲೆ ಬಿಡುತ್ತಿದ್ದಾರೆ. ನಿಮ್ಮ ಎಲ್ಲಾ ಕಷ್ಟಗಳಿಗೆ, ಸಮಸ್ಯೆಗಳಿಗೆ ಅವರೇ ಕಾರಣ ಎಂಬಂತೆ ಬಜರಂಗದಳ ನಾಯಕರು ಅರಚುತ್ತಾ ತಿರುಗಾಡುತ್ತಿದ್ದಾರೆ. ನಿಮ್ಮನ್ನು ಹೊಡೆದಾಟ, ಕೊಲೆಗಳಿಗೆ ಇಳಿಸಿ, ಬಡ ಜನರನ್ನು ಮುಸ್ಲಿಂರನ್ನು ಹಿಂದೂಗಳನ್ನು ಪರಸ್ಪರ ಕೊಲ್ಲಿಸಲು, ಗುಜರಾತ್, ಅಯೋಧ್ಯೆಗಳನ್ನು ಕರ್ನಾಟಕದಲ್ಲಿ ಸೃಷ್ಟಿಸಿ ಜನರ ಮಾರಣಹೋಮಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ನಿಮ್ಮ ನಿಜವಾದ ಶತ್ರುಗಳಾಗಿರುವ ನಮ್ಮೆಲ್ಲರ ಕಷ್ಟಗಳಿಗೆ ಮೂಲ ಕಾರಣರಾಗಿರುವ ದೊಡ್ಡದೊಡ್ಡ ಭೂಮಾಲೀಕರು, ದಲ್ಲಾಳಿ ಬಂಡವಾಳ ಶಾಹಿಗಳು, ದೊಡ್ಡ ಅಧಿಕಾರಶಾಹಿಗಳು ಮತ್ತು ಇವರ ಸೇವೆ ಮಾಡುತ್ತಿರುವ ಸಾಮ್ರಾಜ್ಯಶಾಹಿ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ನಿಮ್ಮ ಸಿಟ್ಟು ಆಕ್ರೋಶ ತಿರುಗದಂತೆ ನೋಡಿಕೊಂಡು ಅವರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ.

ನೀವು ನಿಮ್ಮ ಜನರ ವಿರುದ್ಧವೇ ಕೆಲಸ ಮಾಡುತ್ತಾ ಪರಸ್ಪರ ಒಗ್ಗಟ್ಟಾಗದಂತೆ ಮಾಡುವ ಬ್ರಾಹ್ಮಣಶಾಹಿ, ಸಂಚುಗಳನ್ನು ಆರ್.ಎಸ್.ಎಸ್., ಬಜರಂಗದಳ, ವಿಶ್ವಹಿಂದೂ ಪರಿಷತ್, ಬಿ.ಜೆ..ಪಿ., ಹಿಂದೂ ಜಾಗರಣ ವೇದಿಕೆ ಇತ್ಯಾದಿಗಳು ಮಾಡುತ್ತಿವೆ. ನಿಮ್ಮನ್ನು ಸಂಘಟಿಸುತ್ತಾ ಪ್ರಚೋದಿಸಿ ತಪ್ಪು ದಾರಿಗೆಳೆಯುತ್ತಿದ್ದಾರೆ. ನಿಮ್ಮನ್ನು ಮೊದಲಿಂದಲೂ ಕೀಳು ಜಾತಿಯವರೆಂದು, ಶೂದ್ರ ಜಾತಿಯವರೆಂದು ಹೀಯಾಳಿಸಿ ಅವಮಾನಿಸುತ್ತಾ ಬಂದ ಈ ನೀಚ ಬ್ರಾಹ್ಮಣಶಾಹಿ ಮನಸುಗಳೇ ಇಂದು ನಿಮ್ಮನ್ನು ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸಿಕೊಳ್ಳುತ್ತಿವೆ. ಪ್ರತಿಗಾಮಿ ಜನವಿರೋಧಿ ವಿಚಾರಗಳನ್ನು ನಿಮ್ಮ ತಲೆಯೊಳಗೆ ನಾಜೂಕಾಗಿ ತುರಿಸುತ್ತಾ ನಿಮಗೆ ಗೊತ್ತಿಲ್ಲದಂತೆಯೇ ನಿಮ್ಮನ್ನು ನಿಮ್ಮ ಜನರ ವಿರೋಧಿಗಳನ್ನಾಗಿ ಮಾಡುತ್ತಿದ್ದಾರೆ. ಇಂತಹ ಬ್ರಾಹ್ಮಣಶಾಹಿ ಮನಸುಗಳನ್ನು ಇಂದು ಎಲ್ಲಾ ಜಾತಿ ಮತಗಳಲ್ಲೂ ತಯಾರು ಮಾಡುತ್ತಿದ್ದಾರೆ. ಅಂತಹ ವ್ಯಕ್ತಿಗಳನ್ನು ತಮ್ಮ ತೆಕ್ಕೆಗಳಿಗೆ ತೆಗೆದುಕೊಂಡು ಅವರ ಮೂಲಕ ನಿಮ್ಮನ್ನು ಅವರ ಸೇವೆಗೆ ತೊಡಗಿಸಿಕೊಳ್ಳುತ್ತಿದ್ದಾರೆ. ಹಾಗಾಗಿಯೇ ಇಂದು ಹಿಂದುಳಿದ ವರ್ಗದ, ಶೂದ್ರ ವರ್ಗದ ವ್ಯಕ್ತಿಗಳನ್ನು ಬಜರಂಗ ದಳದ ನಾಯಕರೆಂಬಂತೆ ಬಿಂಬಿಸಲಾಗುತ್ತಿದೆ. ಅವರಿಗೆ ಕುರ್ಚಿ, ಅಧಿಕಾರ, ಹಣದ ಆಮಿಷಗಳನ್ನು ಒಡ್ಡುತ್ತಿದ್ದಾರೆ.

ಸಭೆ ಸಮಾರಂಭಗಳಲ್ಲಿ ಅರಚಿ ಆರ್ಭಟಿಸುತ್ತಾ ಹಿಂದೂ ಧರ್ಮದ ರಕ್ಷಕರು ತಾವೇ ಎಂಬಂತೆ ಕೂಗುವ ತೊಗಾಡಿಯಾ, ಪ್ರಮೋದ್ ಮುತಾಲಿಕ್, ಸಿ.ಟಿ.ರವಿ, ಸುನಿಲ್ ಕುಮಾರ್, ಮಹೇಂದ್ರ ಕುಮಾರ್‌ಗಳು ನಿಮ್ಮೊಂದಿಗೆ ಯಾವತ್ತೂ ನಿಲ್ಲುವುದಿಲ್ಲ, ನಿಮ್ಮನ್ನು ಪರಸ್ಪರ ಹೊಡೆದಾಡಿ ಸಾಯಲು ಬಿಟ್ಟು ನಿಮ್ಮ ಚಿತೆಯಲ್ಲೇ ಚಳಿ ಕಾಯಿಸಿಕೊಳ್ಳುವವರು ಇದನ್ನು ನಾವು ಅಯೋಧ್ಯೆ, ಮುಂಬಯಿ, ಸೂರತ್, ಗುಜರಾತ್‌ಗಳ ಉದಾಹರಣೆಗಳ ಮೂಲಕ ನೋಡಬಹುದು. ನಂತರ ಅವರು ನಿಮ್ಮ ಲೂಟಿಕೋರರ, ಉಳ್ಳವರ, ದರ್ಪ ದೌರ್ಜನ್ಯ ಮಾಡುವವರೊಂದಿಗೆ ಶಾಮೀಲಾಗಿ ನಿಲ್ಲುತ್ತಾರೆ. ಈಗಲೂ ಅವರು ಅದನ್ನೇ ಮಾಡುತ್ತಿದ್ದಾರೆ.

ನಿಮ್ಮ ಕಷ್ಟಗಳ ಬಗ್ಗೆ ನಿಮ್ಮ ಮೇಲೆ ಆಗುತ್ತಿರುವ ಶೋಷಣೆ, ದಮನ ದೌರ್ಜನ್ಯಗಳ ಬಗ್ಗೆ ಅವರಿಗೆ ಯಾವುದೇ ಕಾಳಜಿಗಳೂ ಇಲ್ಲ. ನಿಮ್ಮ ಸಮಸ್ಯೆಗಳ ವಿರುದ್ಧ ದನಿಯೆತ್ತಿ ಹೋರಾಡುವುದೂ ಇಲ್ಲ. ಬದಲಿಗೆ ನಿಮ್ಮೆಲ್ಲರ ಪರವಾಗಿ, ನಿಮ್ಮೆಲ್ಲರ ಸಮಸ್ಯೆಗಳ ಮತ್ತು ಕಷ್ಟಗಳ ಪರಿಹಾರಕ್ಕಾಗಿ ಪ್ರಾಮಾಣಿಕವಾಗಿ ಹೋರಾಡುವವರ ವಿರುದ್ಧ ಪ್ರಜಾ ತಾಂತ್ರಿಕ ಹಕ್ಕುಗಳ ರಕ್ಷಣೆಗಾಗಿ ಸೌಹಾರ್ದ ಸಮಾಜಕ್ಕಾಗಿ ದುಡಿಯುವವರ ವಿರುದ್ಧ ನಿಮ್ಮನ್ನು ಎತ್ತಿ ಕಟ್ಟಿದ್ದಾರೆ.

ಕಾರ್ಕಳದ ಈದುವಿನಲ್ಲಿ ನಮ್ಮ ಪಕ್ಷದ ನೇತ್ರಾವತಿ ದಳ ಕಮಾಂಡರ್ ಕಾ. ಪಾರ್ವತಿ ಮತ್ತು ದಳ ಸದಸ್ಯೆ ಕಾ. ಹಾಜಿಮಾರನ್ನು ಕಗ್ಗೊಲೆ ಮಾಡಿದ ಪೊಲೀಸರನ್ನು ಹೊಗಳಿ ಬೆಂಬಲಿಸಿ, ಕಗ್ಗೊಲೆಗಳನ್ನು ಸಮರ್ಥಿಸುವ ಬಜರಂಗದಳ ನಾಯಕರು, ಬಿ.ಜೆ.ಪಿ. ನಾಯಕರು ಪತ್ರಿಕಾ ಹೇಳಿಕೆಗಳನ್ನು ನೀಡಿದ್ದಾರೆ. ಜನರಿಗಾಗಿ ಪ್ರಾಣವನ್ನೇ ಒತ್ತೆಯಿಟ್ಟು ಕೆಲಸ ಮಾಡಿದ ಈ ಕ್ರಾಂತಿ ಯೋಧೆಯರ ನಿಸ್ವಾರ್ಥ, ತ್ಯಾಗಪೂರಿತ ಹೋರಾಟಗಳನ್ನು ಅಗೌರವಿಸಿ ಅವಹೇಳನ ಮಾಡುತ್ತಿರುವ ಪೊಲೀಸರ ಭಂಟರಂತೆ ಮಾಹಿತಿದಾರರಾಗುತ್ತಿರುವ ಬಜರಂಗದಳ, ಬಿ.ಜೆ.ಪಿ. ನಾಯಕರುಗಳು ನಿಮ್ಮ ಬಗ್ಗೆ ಪ್ರಾಮಾಣಿಕ ಕಾಳಜಿ ವಹಿಸಲು ಸಾಧ್ಯವೆ? ಹಿಂದೂ ಮುಸ್ಲಿಂ ಸೌಹಾರ್ದತೆ ತಾಣವಾಗಿದ್ದ ಬಾಬಾಬುಡನ್‌ಗಿರಿಯನ್ನು ಅಯೋಧ್ಯೆ-ಗುಜರಾತ್ ಮಾಡಿ ಜನರ ರುಂಡ ಚೆಂಡಾಡಲು ಹೊರಟಿರುವ ಇವರು ಜನಸಾಮಾನ್ಯರ ಪರವಾಗಿರಲು ಸಾಧ್ಯವೆ? ಪ್ರಗತಿಪರರನ್ನು, ಸಮಾಜದ ಹಿತ ರಕ್ಷಣೆಗಾಗಿ ದುಡಿಯುವವರನ್ನು, ದನಿಯೆತ್ತುವವರನ್ನು ಭಯೋತ್ಪಾದಕರೆಂದು, ದೇಶದ್ರೋಹಿಗಳೆಂದು ಚಿತ್ರಿಸಿರುವ ಈ ನಾಯಕರುಗಳು ಮನುಷ್ಯಧರ್ಮ ವಿರೋಧಿಗಳಲ್ಲವೆ?

ಬನ್ನಿ, ನೀವು ನಿಮ್ಮ ಜನರಿಗಾಗಿ, ನಿಮ್ಮೆಲ್ಲರ ಸಮಸ್ಯೆ, ಕಷ್ಟಗಳ ಪರಿಹಾರಕ್ಕಾಗಿ ಹೋರಾಡಿ. ನಿಮ್ಮ ಶಕ್ತಿ ಕೆಚ್ಚನ್ನು ವ್ಯರ್ಥವಾಗಿ ಶೋಷಕರ ಪರವಾಗಿ ಹರಿಸಬೇಡಿ. ಎಲ್ಲಾ ಬಡಜನರ ಪರವಾಗಿ ನಿಮ್ಮ ಶಕ್ತಿಯನ್ನು

ನಿಮ್ಮ ಶಕ್ತಿಯನ್ನು ತೊಡಗಿಸಿ. ನಿಮ್ಮೆಲ್ಲಾ ಕಷ್ಟಗಳಿಗೆ, ಸಮಸ್ಯೆಗಳ ಮೂಲ ಕಾರಣರಾದ, ನಮ್ಮ ನಿಮ್ಮೆಲ್ಲರ ಶತೃಗಳಾಗಿರುವ ದೊಡ್ಡ ಭೂಮಾಲೀಕರು, ವಿದೇಶಿ ದಲ್ಲಾಳಿ ಬಂಡವಾಳಿಗರು, ಇವರು ಸಾಕುತ್ತಿರುವ ಎಲ್ಲಾ ಚುನಾವಣಾ ರಾಜಕೀಯ ಪಕ್ಷಗಳು, ಇವರು ರಚಿಸುತ್ತಿರುವ ಇವರದೇ ಸರ್ಕಾರಗಳು, ಸರ್ಕಾರದ ಖಾಕಿ ಪೊಲೀಸ್ ಮತ್ತು ಅರಣ್ಯ ಇಲಾಖೆಗಳು ಇವರ ರಾಜಕೀಯ ಅಧಿಕಾರವನ್ನು ಸಶಸ್ತ್ರ ಕ್ರಾಂತಿಕಾರಿ ಹೋರಾಟದಿಂದ ಕಿತ್ತೊಗೆದು ಜನರ ಪರ್ಯಾಯ ರಾಜಕೀಯ ಅಧಿಕಾರವನ್ನು ಸ್ಥಾಪಿಸೋಣ.

ತೊಡಗಿಸಿ. ನಿಮ್ಮೆಲ್ಲಾ ಕಷ್ಟಗಳಿಗೆ, ಸಮಸ್ಯೆಗಳ ಮೂಲ ಕಾರಣರಾದ, ನಮ್ಮ ನಿಮ್ಮೆಲ್ಲರ ಶತೃಗಳಾಗಿರುವ ದೊಡ್ಡ ಭೂಮಾಲೀಕರು, ದೊಡ್ಡ ಕಾಫಿ ಎಸ್ಟೇಟ್ ಮಾಲೀಕರು, ವಿದೇಶಿ ದಲ್ಲಾಳಿ ಬಂಡವಾಳಿಗರು, ಇವರು ಸಾಕುತ್ತಿರುವ ಎಲ್ಲಾ ಚುನಾವಣಾ ರಾಜಕೀಯ ಪಕ್ಷಗಳು, ಇವರು ರಚಿಸುತ್ತಿರುವ ಇವರದೇ ಸರ್ಕಾರಗಳು, ಸರ್ಕಾರದ ಖಾಕಿ ಪೊಲೀಸ್ ಮತ್ತು ಅರಣ್ಯ ಇಲಾಖೆಗಳು ದೊಡ್ಡ ಅಧಿಕಾರಶಾಹಿಗಳು ಇವರೆಲ್ಲಾ ಸೇರಿ ಸೇವೆ ಮಾಡುತ್ತಿರುವ ಸಾಮ್ರಾಜ್ಯಶಾಹಿ ಅಮೆರಿಕ, ಜಪಾನ್, ಬ್ರಿಟನ್, ಜರ್ಮನಿ, ಫ್ರಾನ್ಸ್ ಇತ್ಯಾದಿ ದೇಶಗಳ ಬಹು ರಾಷ್ಟ್ರೀಯ ಕಂಪನಿಗಳನ್ನು ಬಗ್ಗು ಬಡಿದು ಇವರೆಲ್ಲರ ಆಸ್ತಿ-ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಇವರ ರಾಜಕೀಯ ಅಧಿಕಾರವನ್ನು ಸಶಸ್ತ್ರ ಕ್ರಾಂತಿಕಾರಿ ಹೋರಾಟದಿಂದ ಕಿತ್ತೊಗೆದು ಜನರ ಪರ್ಯಾಯ ರಾಜಕೀಯ ಅಧಿಕಾರವನ್ನು ಸ್ಥಾಪಿಸೋಣ. ಜನರ ನಿಜವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸೋಣ. ನಿಜವಾದ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಕಟ್ಟೋಣ. ಸಿ.ಪಿ.ಐ(ಎಂ.ಎಲ್) ಪೀಪಲ್ಸ್ ವಾರ್ ಈ ಗುರಿ ಸಾಧನೆಗಾಗಿಯೇ ಭಾರತದಾದ್ಯಂತ ಕೆಲಸ ಮಾಡುತ್ತಿದೆ. ಆಳುವ ವರ್ಗಗಳಿಗೆ ಸವಾಲೆಸೆದು ಪರ್ಯಾಯ ಕ್ರಾಂತಿಕಾರಿ ಜನಾಧಿಕಾರವನ್ನು ಕಟ್ಟುತ್ತಿದೆ. ಮಲೆನಾಡಿನಲ್ಲೂ ನಾವು ಸಶಸ್ತ್ರ ಕ್ರಾಂತಿಕಾರಿ ಪ್ರಜಾ ಹೋರಾಟವನ್ನು ಕಟ್ಟುತ್ತಿದ್ದೇವೆ.

ಬಜರಂಗದಳ ನಾಯಕರು ನಿಮ್ಮನ್ನು ನಮ್ಮ ವಿರುದ್ಧ ಕೆಲಸ ಮಾಡುವಂತೆ, ಪೊಲೀಸರಿಗೆ ನಮ್ಮ ಸಶಸ್ತ್ರ ದಳಗಳ ಬಗ್ಗೆ ಮಾಹಿತಿ ನೀಡುವಂತೆ ಪುಸಲಾಯಿಸುತ್ತಿದ್ದಾರೆ. ಪೊಲೀಸ್ ಇಲಾಖೆ ಕೂಡ ನಿಮಗೆ ಆಸೆ ಆಮಿಷಗಳನ್ನೊಡ್ಡಿ ನಮ್ಮ ವಿರುದ್ಧ ಕೆಲಸ ಮಾಡಲು ತೊಡಗಿಸಲು ಪ್ರಯತ್ನಿಸುತ್ತಿದೆ. ನೀವು ಈ ಕುತಂತ್ರಗಳನ್ನು ಅರ್ಥಮಾಡಿಕೊಳ್ಳಬಲ್ಲಿರೆಂದು ಭಾವಿಸುತ್ತೇವೆ.

ನಾವು ನವ ಸಮಾಜ ಕಟ್ಟಲಿಕ್ಕಾಗಿ ನಡೆಸುತ್ತಿರುವ ಸಶಸ್ತ್ರ ಕ್ರಾಂತಿಕಾರಿ ಹೋರಾಟವನ್ನು ಬೆಂಬಲಿಸಿ ಸಾಮಾಜಿಕ ಬದಲಾವಣೆಯಲ್ಲಿ ನೀವೆಲ್ಲರೂ ಪಾತ್ರ ವಹಿಸಬೇಕು.. □

ಜಾತಿ ವಿನಾಶ: ಪೊಳ್ಳು ಘೋಷಣೆ

ಜಾತೀಯತೆ ನಾಶಮಾಡಿ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದರು. ನಿಮ್ಮ ಪತ್ರಿಕೆಯಲ್ಲೂ, ಇತರ ಪತ್ರಿಕೆಗಳಲ್ಲೂ ದಿನಬೆಳಗಾದರೆ ಇದೇ ಮಾತನ್ನು ಪದೇ ಪದೇ ಓದುತ್ತೇವೆ. ಆದರೆ ಜಾತೀಯತೆಯನ್ನು ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಎತ್ತಿ ಹಿಡಿಯುತ್ತಿರುವವರೇ ಇರುವ ಈ ಸಮಾಜದಲ್ಲಿ 'ಜಾತೀಯತೆಯನ್ನು ನಾಶಮಾಡಿ ಎನ್ನವುದು ಬರಿಯ ಒಂದು ಪೊಳ್ಳು ಘೋಷಣೆಯಾಗಿದೆ' ಎಂಬುದು ನನ್ನ ಅನಿಸಿಕೆ.

ರಾಜಕೀಯ ನಡೆಯುತ್ತಿರುವುದೇ ಜಾತಿಯ ಆಧಾರದ ಮೇಲೆ. ಮಂತ್ರಿ ಮಂಡಲಕ್ಕೆ ಸಚಿವರನ್ನು ಆಯ್ಕೆ ಮಾಡುವಾಗ ಜಾತಿಯ ಆಧಾರದ ಮೇಲೆ ಆಯ್ಕೆಯಾಗುತ್ತದೆ. ಚುನಾವಣೆಗೆ ಬೇರೆ ಬೇರೆ ಪಕ್ಷಗಳವರು ಉಮೇದುವಾರರನ್ನು ನಿಲ್ಲಿಸುವಾಗ, ಒಕ್ಕಲಿಗರು ಅಧಿಕವಾಗಿರುವ ಕ್ಷೇತ್ರದಲ್ಲಿ ಒಕ್ಕಲಿಗರನ್ನು, ಲಿಂಗಾಯತರು ಜಾಸ್ತಿಯಾಗಿ ಇರುವ ಕ್ಷೇತ್ರದಲ್ಲಿ ಲಿಂಗಾಯತರನ್ನು, ಕುರುಬರು ಹೆಚ್ಚಿನ ಸಂಖ್ಯೆ ಯಲ್ಲಿ ಇರುವ ಕ್ಷೇತ್ರದಲ್ಲಿ ಕುರುಬರನ್ನು ನಿಲ್ಲಿಸಲಾಗುತ್ತದೆ. ಉಮೇದುದಾರರಾಗಿ ನಿಲ್ಲುವವರು ಒಕ್ಕಲಿಗರಾಗಿದ್ದರೆ, ಆದಿ ಚುಂಚನಗಿರಿ ಮಠಾಧೀಶರ ಆಶೀರ್ವಾದ, ಬೆಂಬಲ ಕೋರುತ್ತಾರೆ. ಲಿಂಗಾಯತಯರಾಗಿದ್ದರೆ, ಲಿಂಗಾಯತ ಮಠಾಧೀಶರ ಆಶೀರ್ವಾದ, ಬೆಂಬಲ ಕೋರುತ್ತಾರೆ. ಮೈಸೂರು ಜಿಲ್ಲೆಯ ಪೂರ್ವ ಭಾಗದ ಜಿಲ್ಲೆಗಳಲ್ಲಿ ಲಿಂಗಾಯತರದೇ ಪ್ರಾಬಲ್ಯ. ಹಿಂದೆ ಚುನಾವಣೆಯ ದಿನದಂದು ಲಿಂಗಾಯತ ಮಠಾಧಿಪತಿಗಳನ್ನು ಕರೆಸಿ, ಒಂದು ದಾಸೋಹ ಏರ್ಪಡಿಸುತ್ತಿದ್ದರು. ಪ್ರಸಾದ ಉಂಡ ಮೇಲೆ ಸ್ವಾಮಿಗಳಿಗೆ ಭಕ್ತರು ಅಡ್ಡ ಬೀಳುತ್ತಿದ್ದರು. ಸ್ವಾಮಿಗಳು ಭಕ್ತರಿಗೆ (ಅರ್ಥಾತ್ ಮತದಾರರಿಗೆ) ಉಂಡ ಮನೆಗೆ ಎರಡು ಬಗೆಯ ಬೇಡ ಎಂದು(ಹರಸುತ್ತಿದ್ದರು) ತಾಖೀತ್ ಮಾಡುತ್ತಿದ್ದರು. ಸ್ವಾತಂತ್ರ್ಯ ಬಂದ ಮೇಲೆ ಚುನಾವಣೆಯ ದಿನ ಇಂತಹ ದಾಸೋಹದ ಪದ್ಧತಿ ಜಾರಿಯಲ್ಲಿಲ್ಲ ನಿಜ. ಆದರ ಬದಲು ಸಾರಾಯಿ ಪ್ಯಾಕೆಟ್, ಹಣ, ಸೀರೆ, ಪಂಚೆ ಹಂಚುವ ಪದ್ಧತಿ ಜಾರಿಗೆ ಬಂದಿದೆ.

ಕೇರಳದಲ್ಲಿ ಮುಸಲ್ಮಾನರು ಕ್ರಿಶ್ಚಿಯನ್ನರದೇ ಹೆಚ್ಚಿನ ಪ್ರಾಬಲ್ಯ. ಚರ್ಚ್‌ನವರು, ಮಸೀದಿಯವರು ಯಾರನ್ನು ಬೆಂಬಲಿಸುತ್ತಾರೋ ಅವರೇ ಗೆಲ್ಲುವುದು. ಆದ್ದರಿಂದ ಕಮ್ಯುನಿಸ್ಟರನ್ನು ಮೊದಲು ಮಾಡಿಕೊಂಡು ಎಲ್ಲ ಪಕ್ಷದ ನಾಯಕರೂ, ಚರ್ಚಿನವರನ್ನೂ ಹಾಗೂ ಮಸೀದಿಯವರನ್ನು ಒಲಿಸಿಕೊಳ್ಳುವ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ.

ದಲಿತರು, ಹರಿಜನರು ಉಮೇದುದಾರರಾದರೆ, ಅವರಿಗೆ ಸ್ವಂತ ಅಸ್ತಿತ್ವ ಇಲ್ಲವಾಗಿ, ಅವರು ವಿವಿಧ ಪಕ್ಷಗಳ ನಾಯಕರ (ಅರ್ಥಾತ್ ಕೋಮುವಾದಿ ನಾಯಕರ) ಆಶ್ರಯ ಬೇಡುವುದು ಅನಿವಾರ್ಯ. ಹೀಗಾಗಿ ದಲಿತರು ಹಾಗೂ ಹರಿಜನ ಉಮೇದುದಾರರು, ಜಾತೀಯತೆಯನ್ನು ಎತ್ತಿ ಹಿಡಿಯುವ ರಾಜಕೀಯ ನಾಯಕರ ಕೋಮು ನೀತಿಯನ್ನು ಬೆಂಬಲಿಸುವುದು ಅನಿವಾರ್ಯವಾಗುತ್ತದೆ.

ಆದ್ದರಿಂದ ಇಂದಿನ ರಾಜಕೀಯ ಧೋರಣೆ ಜಾತಿಗಳನ್ನು ಖಾಯಂ ಆಗಿ ಇಡುವ ಒಂದು ಪ್ರಬಲ ಅಸ್ತ್ರ ಎಂಬುದನ್ನು ನಾವು ಮನಗಾಣಬೇಕು.

ಎರಡನೆಯ ಗುನ್ಹೆಗಾರ ಎಂದರೆ ಈ ಮೀಸಲಾತಿಗಳು ರಾಜ್ಯಾಂಗದಲ್ಲಿ ಹರಿಜನ, ಗಿರಿಜನರಿಗೆ ಅವರ ಹಿಂದುಳಿದಿರುವಿಕೆಯ ದೃಷ್ಟಿಯಿಂದ, ಸಮಾಜದಲ್ಲಿ ತುಳಿಯಲ್ಪಟ್ಟವರೆಂಬ ಕಾರಣದಿಂದ ರಾಜ್ಯಾಂಗ ಜಾರಿಯಾದ ದಿನದಿಂದ ಹತ್ತು ವರ್ಷಗಳ ಕಾಲ ಶೇ. ೧೮ ರ, ಮೀಸಲಾತಿ, ಶಿಕ್ಷಣದಲ್ಲಿ, ಶಾಸನ ಸಭೆ ಪಾರ್ಲಿಮೆಂಟ್ ಸದಸ್ಯತ್ವ ನೀಡುವುದರಲ್ಲಿ ಕಾದಿರಿಸಲ್ಪಟ್ಟವು. ಕಾಲ ಕ್ರಮೇಣ ಈ ಮೀಸಲಾತಿಯನ್ನು ದಲಿತರೆಂದು ಕರೆಯಲ್ಪಡುವ ಅನೇಕ ಜಾತಿಯವರಿಗೆ ವಿಸ್ತರಿಸಿ, ಈ ವ್ಯವಸ್ಥೆಯನ್ನು ಮಾಡಲಾಯಿತು. ಹರಿಜನರ ಪೈಕಿ ಹೊಲೆಯರಿಗೆ ಈ ಮೀಸಲಾತಿಯ ಸಿಂಹಪಾಲು ಲಭಿಸಿದೆಯೆಂದೂ, ಮಾದಿಗರು ಈ ಸೌಲಭ್ಯದಿಂದ ವಂಚಿತರಾಗಿರುವರೆಂದೂ ಕೂಗೆದ್ದು ಈಗ ಅವರು ತಮ್ಮ ಹಕ್ಕಿಗಾಗಿ ಹೋರಾಟಕ್ಕಿಳಿದಿದ್ದಾರೆ.

ರಾಜ್ಯಾಂಗದತ್ತವಾಗಿ ತುಳಿಯಲ್ಪಟ್ಟವರಿಗೆ ಮೀಸಲಾತಿ ಸಿಕ್ಕಿದ್ದನ್ನು ಸಹಿಸದ ಒಕ್ಕಲಿಗರು, ಲಿಂಗಾಯತರು, ಹಾಗೂ ಅಲ್ಪ ಸಂಖ್ಯಾತ, ಹಿಂದುಳಿದ ಕೋಮಿನವರು ನಮಗೂ ಈ ಮೀಸಲಾತಿಯ ಲಾಭ ದೊರೆಯಬೇಕೆಂದು ಕೂಗೆಬ್ಬಿಸಿ, ಈಗ ಅವರೂ ಈ ಸೌಕರ್ಯ ಪಡೆಯುತ್ತಿದ್ದಾರೆ.

ಇಡೀ ಸಮಾಜ ಮೀಸಲಾತಿಯನ್ನು ಪ್ರತಿಪಾದನೆ ಮಾಡುತ್ತಿದೆ. ಹರಿಜನರಲ್ಲಿ ಅನೇಕರು ಬೌದ್ಧ ಧರ್ಮಕ್ಕೆ ಸೇರಿಕೊಂಡರಾದರೂ, ಮೀಸಲಾತಿಯ ಲಾಭವನ್ನು ಪಡೆಯುವುದಕ್ಕಾಗಿ ಅವರೂ ಕೂಡ ನಾವು, ಹರಿಜನ ಬೌದ್ಧರು ಅಥವಾ ಬೌದ್ಧರು ನಮಗೂ ಈ ಸೌಕರ್ಯ ಮುಂದುವರೆಸಿ ಎಂದು ಕೇಳುತ್ತಿದ್ದಾರೆ.

ಒಟ್ಟಿನಲ್ಲಿ ಈಗ ಇಡಿ ಸಮಾಜ ಮೀಸಲಾತಿಯನ್ನು ಪ್ರತಿಪಾದನೆ ಮಾಡುತ್ತಿದೆ. ಹರಿಜನರಲ್ಲಿ ಅನೇಕರು ಬೌದ್ಧ ಧರ್ಮಕ್ಕೆ ಸೇರಿಕೊಂಡರಾದರೂ, ಮೀಸಲಾತಿಯ ಲಾಭವನ್ನು ಪಡೆಯುವುದಕ್ಕಾಗಿ ಅವರೂ ಕೂಡ ನಾವು, ಹರಿಜನ ಬೌದ್ಧರು ಅಥವಾ ನವ ಬೌದ್ಧರು ನಮಗೂ ಈ ಸೌಕರ್ಯ ಮುಂದುವರೆಸಿ ಎಂದು ಕೇಳುತ್ತಿದ್ದಾರೆ. ಮೀಸಲಾತಿ ಈಗ ಜಾತಿಗಳಲ್ಲೂ ಖಾಯಂ ಆಗಿ ಇಡುವ ಒಂದು ಅಸ್ತ್ರವಾಗಿ ಪರಿಣಮಿಸಿದೆ.

ಎನ್‌ಡಿ ಸರ್ಕಾರ ಈಗ ಮುಂದುವರೆದ ಜಾತಿಗಳಲ್ಲೂ ಬಡವರನ್ನು ಗುರುತಿಸಿ ಅವರಿಗೂ ಮೀಸಲಾತಿ ಸೌಕರ್ಯ ವಿಸ್ತರಿಸುವ ವಿಚಾರ ಮಾಡುತ್ತಿದೆ.

ಒಟ್ಟಿನಲ್ಲಿ ಪರಿಸ್ಥಿತಿ, ಜಾತೀಯತೆಯ ನಿರ್ಮೂಲನಕ್ಕೆ ಸಹಕಾರಿಯಾಗಿಲ್ಲ. ಜಾತೀಯತೆ ನಿರ್ಮೂಲನವಾಗಬೇಕೆಂದು ಈಗ ಬರೆಯುತ್ತಿರುವವರಲ್ಲಿ ಅನೇಕರು ಜಾತಿಯ ಹೆಸರಿನಲ್ಲಿ ಮೀಸಲಾತಿಯ ಲಾಭ ಪಡೆಯುತ್ತಿರುವವರೇ.

❍ ಎಚ್.ಎಸ್. ದೊರೆಸ್ವಾಮಿ

ಪ್ರಸ್ತುತ ಭಾರತೀಯ ಸಂದರ್ಭದಲ್ಲಿ ಮುಖಾಮುಖಿಯ ತಾತ್ವಿಕ ಚರ್ಚೆಗೆ ಹೆಚ್ಚು ಒಳಗಾಗುತ್ತಿರುವವರೆಂದರೆ ಗಾಂಧಿ ಹಾಗೂ ಅಂಬೇಡ್ಕರ್ ಇಬ್ಬರೇ. ಅಂದು ಅಂಬೇಡ್ಕರ್ ಅವರು ಗಾಂಧಿಯನ್ನು ತರ್ಕಬದ್ಧವಾಗಿ, ವಸ್ತುನಿಷ್ಠವಾಗಿ ವಿಮರ್ಶಿಸುತ್ತಿದ್ದ ರೀತಿಗೂ ಇಂದು ಕೆಲ 'ಕಟ್ಟಾ ಅಂಬೇಡ್ಕರ್‌ವಾದಿಗಳು' ಗಾಂಧಿಯನ್ನು 'ದಿಟ್ಟಿಸುತ್ತಿರುವುದಕ್ಕೂ' ಬಹಳವೇ ವ್ಯತ್ಯಾಸವಿದೆ. ಇದು ಗಾಂಧಿವಾದಿಗಳ ದೃಷ್ಟಿಕೋನಕ್ಕೂ ಅನ್ವಯಿಸುತ್ತದೆ. ಇಂಥ ಸನ್ನಿವೇಶದಲ್ಲಿ ಕಳೆದ ಫೆಬ್ರವರಿ ಸಂಚಿಕೆಯಲ್ಲಿ ಸಣ್ಣಂಗಿ ರಾಜ ಅವರು ಅಂಬೇಡ್ಕರ್ ಹಾಗೂ ಗಾಂಧಿಯ ಬಗ್ಗೆ ವಿಶ್ಲೇಷಿಸಿದ್ದನ್ನು ಲೇಖಕರು ತಮ್ಮದೇ 'ಮಧ್ಯಮ ಮಾರ್ಗ'ದ ಮೂಲಕ ಎದುರುಗೊಂಡಿದ್ದಾರೆ.

○ ಅರವಿಂದ ಚೊಕ್ಕಾಡಿ

ಅಸಹನೆ, ಅತೃಪ್ತಿ, ಹೋರಾಟದ ದಿಕ್ಕು ದೆಸೆ

ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾದ 'ಸಣ್ಣಂಗಿ ರಾಜ' ಅವರ 'ಅಂಬೇಡ್ಕರ್ : ಗಾಂಧೀಕರಣದ ಅಪಾಯಗಳು' ಲೇಖನದಲ್ಲಿ ದಲಿತ ಚಳವಳಿಯ ಕುರಿತ ಪ್ರಾಮಾಣಿಕ ಬದ್ಧತೆ, ಬದುಕನ್ನು ಸಹನೀಯ ಗೊಳಿಸುವ ತುಡಿತ, ದಿಟ್ಟ ಹೋರಾಟದ ಛಲ ವ್ಯಕ್ತವಾಗಿದೆ. ಲೇಖಕರ ಪ್ರಾಮಾಣಿಕ ಬದ್ಧತೆಗಾಗಿ ಅವರು ಅಭಿನಂದನಾರ್ಹರು.

ಆದರೆ ಲೇಖನದಲ್ಲಿ ಜನಾಂಗೀಯ ಅಸಹನೆ ಎದ್ದು ಕಾಣುತ್ತಿದೆ. ಲೇಖಕರ ಈ ಧ್ವನಿಯಿಂದಾಗಿ ಸ್ವತಃ ಅಂಬೇಡ್ಕರ್ ಅವರಲ್ಲೇ ಜನಾಂಗೀಯ ಅಸಹನೆ ಇತ್ತೇನೋ ಎಂಬ ಅಭಿಪ್ರಾಯ ಮೂಡಿಸಿ ಬಿಡುತ್ತದೆ. ಆದರೆ ಅದು ಹಾಗಿಲ್ಲ. ಅಂಬೇಡ್ಕರ್ ಅವರಿಗೆ ಶೋಷಕ ಜಾತಿಯ ಬಗ್ಗೆ ಅತೃಪ್ತಿ ಇತ್ತು. ಬುದ್ದಿ ಇರುವ ಯಾರಿಗೇ ಆದರೂ ಬ್ರಾಹ್ಮಣಶಾಹಿ ವ್ಯವಸ್ಥೆಯ ಬಗ್ಗೆ ಅತೃಪ್ತಿ ಇದ್ದೇ ಇರಬೇಕು. ಆದರೆ ಅಂಬೇಡ್ಕರ್ ಖಂಡಿತವಾಗಿಯೂ ಜನಾಂಗೀಯ ಅಸಹಿಷ್ಣುವಾಗಿರಲಿಲ್ಲ. ಇದೇ ಜನಾಂಗೀಯ ಅಸಹನೆ ಲೇಖನದಲ್ಲಿ ಗಾಂಧೀಜಿಯವರ ಕುರಿತೂ ವ್ಯಕ್ತವಾಗಿದೆ. ಗಾಂಧಿಯನ್ನು ಒಬ್ಬ 'ಥಿಂಕರ್' ಆಗಿ ನೋಡುವ ಬದಲು ಒಬ್ಬ ಸವರ್ಣೀಯ ಅನ್ನುವ ದೃಷ್ಟಿಯಿಂದ ನೋಡಲಾಗಿದೆ. ಇದೊಂದು ವಿಚಿತ್ರ ಗುಣ. ತಮ್ಮ ಪ್ರತಿವಾದಿಯ ವಿರುದ್ಧ ವಾದ ಮಾಡುವಾಗ ಎದುರಾಳಿಯ ವಿಚಾರಗಳನ್ನು ಬದಿಗಿಟ್ಟು ಆತನ ಜಾತಿಯನ್ನು ಗುರುತಿಸಿ ಆತ ಪುರೋಹಿತಶಾಹಿ ಎನ್ನುವುದು ಬಹುತೇಕ ದಲಿತ ಚಿಂತಕರ ಸಾಂಪ್ರದಾಯಿಕ ಗುಣ. ಹುಟ್ಟು ಎನ್ನುವುದು ಆಕಸ್ಮಿಕ. ಯಾರೂ ಅರ್ಜಿ ಹಾಕಿ ಇಂಥ ಜಾತಿಯಲ್ಲಿ ಹುಟ್ಟಬೇಕೆಂದು ಹುಟ್ಟುವುದಿಲ್ಲ.

ಅಂಥಲ್ಲಿ ವ್ಯಕ್ತಿಯ ಧೋರಣೆ ಮುಖ್ಯವೇ ಹೊರತು ಹುಟ್ಟಿದ ಜಾತಿಯಲ್ಲ. ಧೋರಣೆಯ ನಿಟ್ಟಿನಲ್ಲಿ ಹೇಳುವುದಾದರೆ ದಲಿತರ ಅಭ್ಯುದಯದ ದೃಷ್ಟಿಯಿಂದ ಗಾಂಧೀಜಿಯವರ ವಾದಕ್ಕಿಂತ ಅಂಬೇಡ್ಕರ್ ಅವರ ವಾದವೇ ಶಕ್ತಿಯುತವಾದುದು, ಮೌಲಿಕ ವಾದುದು. ಹಾಗಿರುವಾಗ ಗಾಂಧಿವಾದವನ್ನು ಅಂತಹ ಇನ್ನೊಂದು ವಾದದಿಂದ ತಳ್ಳಿಹಾಕಬೇಕೇ ವಿನಾ ಅವರ ಜಾತಿಯನ್ನು ಹೇಳುವುದಲ್ಲ. ಇರಲಿ, ವೈಚಾರಿಕ ದೌರ್ಬಲ್ಯವಿದ್ದಾಗ ಜಾತಿಯನ್ನು ಆಧರಿಸಿ ವ್ಯಾಖ್ಯಾನಿಸುವುದು ಸಹಜ.

ನನ್ನ ಪ್ರಕಾರ ಗಾಂಧೀಜಿಯವರ ವಾದ ಅಂಬೇಡ್ಕರ್‌ವಾದದಷ್ಟು ಬಿಗಿಯಾಗಿ ಇಲ್ಲದೆ ಇರುವುದಕ್ಕೆ ಜಾತಿ ಕಾರಣವಲ್ಲ. ಈ ಇಬ್ಬರು ಚಿಂತಕರ ವ್ಯಾಪ್ತಿ ಕಾರಣ. ಗಾಂಧೀಜಿಯವರದು ಸಮಗ್ರತೆಯ ದೃಷ್ಟಿಕೋನ. ಸಮಗ್ರವನ್ನು ನೋಡಿದಾಗ ಅಲ್ಲಿ ಉಂಟಾಗುವ ಜಟಿಲತೆ ಹೆಚ್ಚು. ಅದರಿಂದಾಗಿ ಯಾವುದನ್ನೂ ಖಚಿತವಾಗಿ 'ಹೀಗೆ' ಅಂತ ವ್ಯಾಖ್ಯಾನಿಸಲು ಕಷ್ಟವಾಗುತ್ತದೆ. ಆದ್ದರಿಂದಲೇ ಗಾಂಧೀಜಿ ವಾಸ್ತವದಿಂದ ದೂರವಾದ ನೈತಿಕತೆಯ ಅತಿರೇಕದ ಹಂತದಲ್ಲಿ ವ್ಯಾಖ್ಯಾನ ನೀಡುತ್ತಾರೆ. ಅದರಿಂದ ವ್ಯಾಖ್ಯಾನವೇನೋ ಪರಿಪೂರ್ಣವಾಗುತ್ತದೆ. ಆದರೆ ವಾಸ್ತವಿಕತೆಯಿಂದ ಬಹುದೂರ ಹೊರಟು ಹೋಗಿಬಿಡುತ್ತದೆ. ಅಂಬೇಡ್ಕರ್ ಅವರಿಗೆ ಗಾಂಧಿ ಎದುರಿಸಿದ ಸಮಸ್ಯೆ ಎದುರಾಗಲಿಲ್ಲ.

ದಲಿತ ಜನಾಂಗದ ಅಭ್ಯುದಯ ಅವರ ನಿಜವಾದ ನೆಲೆಗಟ್ಟು. ಅಂಥಲ್ಲಿ ವಾಸ್ತವ ಮಹತ್ವವುಳ್ಳ ಚಿಂತನೆಯನ್ನು ಕೊಡಲು ಅವರಿಂದ ಸಾಧ್ಯವಾಯಿತು. ಚಿಂತನೆಯ ವ್ಯಾಪ್ತಿ ಕಿರಿದಾಗಿದ್ದಷ್ಟೂ ಹೆಚ್ಚು ಖಚಿತ ವ್ಯಾಖ್ಯಾನವನ್ನು ಕೊಡಲು ಸಾಧ್ಯವಾಗುತ್ತದೆ. ಲೇಖಕರ ಒಂದು ಮಾತನ್ನೇ ಉದಾಹರಣೆಯಾಗಿ ಕೊಡುತ್ತೇನೆ. ಅವರ ಪ್ರಕಾರ ದಲಿತರಿಗೆ ಯಾವ ಅನುಕಂಪವೂ ಅಗತ್ಯವಿಲ್ಲ. ಸರಿ, ದಲಿತವಾದ, ದಲಿತ ಹೋರಾಟದ ವ್ಯಾಪ್ತಿಯಲ್ಲಿ ನಿಂತಾಗ ಬಹಳ ಸುಲಭವಾಗಿ ಈ ಮಾತು ಹೇಳಬಹುದು. ಆದರೆ ಸಮಗ್ರ ಭಾರತದ ದಲಿತ ಜನಾಂಗವನ್ನು ಗಮನಿಸಿ ನೋಡಿ. ಅವರ ಹತಾಶ ಬದುಕನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿ, ಅವರಿಗೆ ಯಾರ ಅನುಕಂಪ, ಪ್ರೀತಿ, ಅಂತಃಕರಣ, ನೆರವು ಬೇಕಾಗಿಲ್ಲವೇ? ಒಬ್ಬ ದಲಿತ ಅಂತಲ್ಲ, ಯಾವ ವ್ಯಕ್ತಿಯೇ ಆದರೂ ದಾರುಣ ಸನ್ನಿವೇಶದಲ್ಲಿ ಅನುಕಂಪವನ್ನು ಬಯಸುತ್ತಾನೆ. ಇದನ್ನು ಗ್ರಹಿಸಿದಾಗ 'ನಮಗೆ ಯಾರ ಅಗತ್ಯವೂ ಇಲ್ಲ' ಅಂತ ತೀರ್ಮಾನ ಕೊಡಲು ಸಾಧ್ಯವಾಗುವುದಿಲ್ಲ. ಇಂಥಲ್ಲಿ ದಲಿತರು ತಾವು ಏಕಾಂಗಿ ಶಕ್ತಿಯಾಗಿ ಹೋರಾಡುವುದಕ್ಕೂ ಎಲ್ಲರನ್ನೂ ಸೇರಿಸಿಕೊಂಡು ಹೋರಾಡಿ ತಮ್ಮ ಸಮಾನ ಹಕ್ಕನ್ನು ಪಡೆಯುವುದಕ್ಕೂ ವ್ಯತ್ಯಾಸವಿದೆ ಎಂದು ಗಮನಿಸಬೇಕು.

ಯಾಕೆಂದರೆ ದಲಿತರು, ಕಮ್ಯುನಿಸ್ಟರು ಎದುರಿಸಬೇಕಾದ ಬ್ರಾಹ್ಮಣಶಾಹಿ ವ್ಯವಸ್ಥೆ ಅಷ್ಟು ಸುಲಭವಾಗಿ ತನ್ನನ್ನು ಬಿಟ್ಟುಕೊಡುವುದಿಲ್ಲ. ಯಾವ ಧರ್ಮ ಯಾವ ಜಾತಿಯಲ್ಲೂ ಇಲ್ಲದ ಅತ್ಯಂತ ಸ್ಥಿತಿ ಸ್ಥಾಪಕ ಗುಣ ಬ್ರಾಹ್ಮಣಶಾಹಿಯ ಬಳಿ ಇದೆ. ಅದು ಸಾಂಖ್ಯರು, ಲೋಕಾಯತರು, ಬೌದ್ಧರ ನಿಲುವುಗಳನ್ನು ಭಗವದ್ಗೀತೆಯ ಒಳಗೆ ಸೇರಿಸಿಕೊಂಡು ಅದನ್ನು ತನ್ನದೇ ಅಂತ ವ್ಯಾಖ್ಯಾನಿಸಿತು. 'ಜಾತಿ ಜಾತಿ' ಅಂತ ಬಾಯಿಬಡಕೊಳ್ಳುವ ಬ್ರಾಹ್ಮಣಶಾಹಿ ಬಲಾಢ್ಯರಾದ ಶೂದ್ರರು ಅಧಿಕಾರ ಪಡೆದಾಗ ಅವರಿಗೊಂದು ಜನಿವಾರ ತೊಡಿಸಿ ಕ್ಷತ್ರಿಯರಾಗಿ ಮಾರ್ಪಡಿಸಿ ತನ್ನೊಳಗೆ ಎಳಕೊಂಡು ಬಿಟ್ಟಿತು. ಇಂಥ ಅದೆಷ್ಟೋ ಉದಾಹರಣೆಗಳನ್ನು ಕೊಡಬಹುದು. ಯೂರೋಪಿಯನ್ ಸಮಾಜದ ಬಂಡವಾಳಶಾಹಿ ವರ್ಗವನ್ನು ನಡುಗಿಸಿದ ಮಾರ್ಕ್ಸ್‌ವಾದ ಈ ದೇಶಕ್ಕೆ ಪ್ರವೇಶಿಸಿದಾಗ ಇಲ್ಲಿನ ಬ್ರಾಹ್ಮಣಶಾಹಿ ವ್ಯವಸ್ಥೆ ವಿಶೇಷ ತಲೆಕೆಡಿಸಿ ಕೊಳ್ಳಲಿಲ್ಲ. ಯಾಕೆಂದರೆ ಕಲ್ಚುರಲ್ ಬೇಸ್ ಅನ್ನು ಹಿಡಿಯಲು ಮಾರ್ಕ್ಸ್ ವಾದಕ್ಕೆ ಆಗುವುದಿಲ್ಲ. ಮತ್ತು ಕಲ್ಚುರಲ್ ಬೇಸ್‌ನಲ್ಲಿ ತನಗೆ ಪ್ರತಿಶಕ್ತಿ ಸಿದ್ಧವಾಗುವ ತನಕ ತಾನು ಸುರಕ್ಷಿತ ಎನ್ನುವುದು ಬ್ರಾಹ್ಮಣಶಾಹಿ ವ್ಯವಸ್ಥೆಗೆ ಗೊತ್ತಿದೆ.

ದಲಿತ ಚಿಂತನೆ, ಶೂದ್ರಪಂಥಗಳಿಗೆ ಬ್ರಾಹ್ಮಣಶಾಹಿಗೆ ಪ್ರತಿ ಅಸ್ತ್ರ ಒಡ್ಡುವ ಸಾಂಸ್ಕೃತಿಕ ಬೇಸ್ ಇದೆ. ಆದರೆ ಬ್ರಾಹ್ಮಣಶಾಹಿ ರೂಪಿಸಿದ ಜಾತಿ ವ್ಯವಸ್ಥೆಯನ್ನು ಮೀರಲಾಗದೆ ಮೀರಲೆತ್ನಿಸುವ ಅದು ಪರೋಕ್ಷವಾಗಿ ಬ್ರಾಹ್ಮಣಶಾಹಿಗೆ ಸಪೋರ್ಟ್ ಮಾಡುತ್ತದೆ. ಒಂದು ಕ್ಷಣ ಯೋಚಿಸಿ, ಗಾಂಧಿಯಂತಹ ವರ್ಚಸ್ವಿ ನಾಯಕನನ್ನು ಜಾತಿ ಆಧಾರದಲ್ಲಿ ವ್ಯಾಖ್ಯಾನಿಸಿದಾಗ ಅವರನ್ನು ಯಾವ ಕಡೆಗೆ ಎತ್ತಿ ಹಾಕುತ್ತಿದ್ದೇವೆ ಎಂಬುದನ್ನು ಗಮನಿಸಬೇಕು. ಖಂಡಿತವಾಗಿಯೂ ಬ್ರಾಹ್ಮಣಶಾಹಿಯ ಕಡೆಗೆ ಎತ್ತಿಹಾಕುತ್ತಿದ್ದೇವೆ. ಅರ್ಥಾತ್ ಗಾಂಧಿಯಂತಹ ವರ್ಚಸ್ವೀ ನಾಯಕನನ್ನು ಬ್ರಾಹ್ಮಣಶಾಹಿಗೆ ಬಿಟ್ಟುಕೊಡುವ ಮೂಲಕ ಪರೋಕ್ಷವಾಗಿ ಬ್ರಾಹ್ಮಣಶಾಹಿಯನ್ನು ಬಲಗೊಳಿಸುತ್ತಿದ್ದೇವೆ. Of Course ಲೇಖಕರ ದೃಷ್ಟಿಯಲ್ಲಿ ಗಾಂಧೀಜಿ ವರ್ಚಸ್ವೀ ನಾಯಕ ಅಲ್ಲದಿರಬಹುದು. ಆದರೆ ಜಾಗತಿಕ ಮಟ್ಟದಲ್ಲಿ ಗಾಂಧಿ ಸ್ಥಾನ ಏನು ಎನ್ನುವುದನ್ನು ಯೋಚಿಸಬೇಕು.

ಲೇಖಕರು ಒಂದೆಡೆ ಗಾಂಧಿ ನಡೆಸಿದ ಸ್ವಾತಂತ್ರ್ಯ ಹೋರಾಟ ಶೇ. ೩೯ ಜನಕ್ಕೋ ಶೇ ೮೦ ಜನಕ್ಕೋ ಅಂತ ಪ್ರಶ್ನಿಸಿದ್ದಾರೆ. ಇಲ್ಲಿ ಶೇ ೮೦ ಅಂದರೆ ದಲಿತ, ಶೂದ್ರ, ಅಲ್ಪಸಂಖ್ಯಾತರೂ ಒಳಗೊಂಡರು. ದಲಿತ ಹೋರಾಟ ಇಂತಹ ತಂತ್ರವೊಂದನ್ನು ಅನುಸರಿಸುತ್ತಿದೆಯೆಂಬುದು



ದಲಿತರು ತಾವು ಏಕಾಂಗಿ ಶಕ್ತಿಯಾಗಿ ಹೋರಾಡುವುದಕ್ಕೂ ಎಲ್ಲರನ್ನೂ ಸೇರಿಸಿಕೊಂಡು ಹೋರಾಡಿ ತಮ್ಮ ಸಮಾನ ಹಕ್ಕನ್ನು ಪಡೆಯುವುದಕ್ಕೂ ವ್ಯತ್ಯಾಸವಿದೆ. ಯಾಕೆಂದರೆ ದಲಿತರು, ಕಮ್ಯುನಿಸ್ಟರು ಎದುರಿಸಬೇಕಾದ ಬ್ರಾಹ್ಮಣಶಾಹಿ ವ್ಯವಸ್ಥೆ ಅಷ್ಟು ಸುಲಭವಾಗಿ ತನ್ನನ್ನು ಬಿಟ್ಟು ಕೊಡುವುದಿಲ್ಲ. ಯಾವ ಧರ್ಮ, ಯಾವ ಜಾತಿಯಲ್ಲೂ ಇಲ್ಲದ ಅತ್ಯಂತ ಸ್ಥಿತಿ ಸ್ಥಾಪಕ ಗುಣ ಬ್ರಾಹ್ಮಣಶಾಹಿಯ ಬಳಿ ಇದೆ. ಅದು ಸಾಂಖ್ಯರು, ಲೋಕಾಯತರು, ಬೌದ್ಧರ ನಿಲುವುಗಳನ್ನು ಭಗವದ್ಗೀತೆಯ ಒಳಗೆ ಸೇರಿಸಿಕೊಂಡು ಅದನ್ನು ತನ್ನದೇ ಅಂತ ವ್ಯಾಖ್ಯಾನಿಸಿತು. ಜಾತಿ ಜಾತಿ ಅಂತ ಬಾಯಿಬಡಕೊಳ್ಳುವ ಬ್ರಾಹ್ಮಣಶಾಹಿ ಬಲಾಢ್ಯರಾದ ಶೂದ್ರರು ಅಧಿಕಾರ ಪಡೆದಾಗ ಅವರಿಗೊಂದು ಜನಿವಾರ ತೊಡಿಸಿ ಕ್ಷತ್ರಿಯರಾಗಿ ಮಾರ್ಪಡಿಸಿ ತನ್ನೊಳಗೆ ಎಳಕೊಂಡು ಬಿಟ್ಟಿತು.

ಎಲ್ಲರಿಗೂ ಗೊತ್ತು. ಆದರೆ ವಾಸ್ತವ ಹಾಗಿದೆಯೇ? ಬ್ರಾಹ್ಮಣೇತರರೆಲ್ಲರೂ ದಲಿತರನ್ನು ತಮಗೆ ಸರಿಸಮನಾಗಿ ನೋಡಿಕೊಳ್ಳುತ್ತಿದ್ದಾರೆಯೇ? ಇಲ್ಲ ಅನ್ನುವುದು ದಲಿತರಿಗೂ ಗೊತ್ತಿದೆ. ಆದರೆ ಬ್ರಾಹ್ಮಣರನ್ನು ಜಾಡಿಸಿದ ಹಾಗೆ ಶೂದ್ರರನ್ನು ಜಾಡಿಸಲು ಆಗುವುದಿಲ್ಲ; ಯಾಕೆಂದರೆ ಆ ಕಡೆಯಿಂದ ದೈಹಿಕ ಆಕ್ರಮಣವೂ ನಡೆದೀತು ಎಂಬುದೂ ಗೊತ್ತಿದೆ. ಇಲ್ಲದೆ ಹೋದರೆ ಮೀಸಲಾತಿಗೆ ಇನ್ನಷ್ಟು ಜಾತಿಗಳು ಸೇರ್ಪಡೆಯಾಗುತ್ತಾ ಹೋದ ಹಾಗೆ ತಮಗೆ ನಿಜವಾದ ಆತಂಕ ಯಾವ ಕಡೆಯಿಂದ ಬರುತ್ತಿದೆ ಎಂಬುದನ್ನು ಗಮನಿಸಲಾಗದಷ್ಟು ದಲಿತ ಚಿಂತಕರು ದಡ್ಡರಲ್ಲ. ಆದರೂ ದಿವ್ಯಮೌನ! ಜಾಣ ಮೌನ! ಯಾಕೆ? ಬ್ರಾಹ್ಮಣಶಾಹಿಯನ್ನು ಎದುರಿಸುವುದಕ್ಕೆ. ಎದುರಿಸುವುದಾದರೂ ಹೇಗೆ? ವಾಚಮಾಗೋಚರ ತೆಗಳುವುದು. ಬ್ರಾಹ್ಮಣರು ಮೌನವಾಗಿರುತ್ತಾರೆ. ಯಾಕೆ? ಬೈದುಕೊಳ್ಳಲಿ ಬಿಡಿ ಅನ್ನುವ ನಿರ್ಲಕ್ಷ್ಯ. ಯಾವಾಗಲೂ ಮಾತನಾಡುವವರಿಗಿಂತ ಮಾತನಾಡದವರು ಅಪಾಯಕಾರಿಗಳು. ಸರಳ ಉದಾಹರಣೆ ನೋಡಿ. ಮೀಸಲಾತಿಯಿಂದ ಬ್ರಾಹ್ಮಣರು ಒಂದಷ್ಟು ಕಳಕೊಂಡಿದ್ದಾರೆ ಎಂಬುದು ಸತ್ಯ (ಇದರ ಅರ್ಥ ಮೀಸಲಾತಿ ಇರಬಾರದೆಂದಲ್ಲ. ಆ ವಿಚಾರ ಆಮೇಲೆ ಚರ್ಚಿಸೋಣ) ಪ್ರತಿಯಾಗಿ ಏನಾಯಿತು? ಬಹುತೇಕ ಬ್ರಾಹ್ಮಣರು ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿ ಮೀಸಲಾತಿಯಿಂದ ಸರಕಾರಿ ಕೆಲಸ ಪಡೆದು ದಲಿತನೊಬ್ಬ ಸಂಪಾದಿಸುವ ಸಂಬಳಕ್ಕಿಂತ ಎಷ್ಟೋ ಪಾಲು ಹೆಚ್ಚು ಸಂಪಾದಿಸತೊಡಗಿದರು. ಸರಿ, ಅಲ್ಲಿಗೂ ದಲಿತರು ಪ್ರವೇಶಿಸಲು ಸಜ್ಜಾದರು. ಆದರೆ ಸಾಫ್ಟ್‌ವೇರ್‌ಗೆ ಪ್ರವೇಶಿಸಬಲ್ಲ ಸಾಧ್ಯತೆ ಇರುವುದು ಎಸಿ ರೂಂನಲ್ಲಿ ಕುಳಿತ ದಲಿತರ ಮಕ್ಕಳಿಗೇ ಹೊರತು ದಟ್ಟ ದರಿದ್ರ ದಲಿತನ ಮಕ್ಕಳಿಗಲ್ಲ. ಅಂಥ ಶಿಕ್ಷಣ ಪಡೆಯುವ ಸಾಮರ್ಥ್ಯವೂ ಅವರಿಗಿಲ್ಲ. ಈಗಲೂ ಸರಕಾರಿ ಕೆಲಸಕ್ಕೆ ಬಾಯಿ ಬಿಡುತ್ತಿರುವುದು ದಾರಿದ್ರ್ಯ ಬ್ರಾಹ್ಮಣರೇ ಹೊರತು ಬಂಡವಾಳ ಶಾಹಿ ಬ್ರಾಹ್ಮಣರಲ್ಲ. ಅಂಥಲ್ಲಿ ಮೀಸಲಾತಿ ಬಗ್ಗೆ ಪ್ರಸ್ತಾಪಿಸಿದಾಕ್ಷಣ 'ಧಾಂಧೂಂ, ಬ್ರಾಹ್ಮಣಶಾಹಿ' ಎಂದು ಹೇಳುವುದು ವಾಡಿಕೆ. ದಕ್ಷತೆಯ ವಿಚಾರಕ್ಕೆ ಬಂದರೆ ಇದು ತನಕ ಬ್ರಾಹ್ಮಣರಿಗೆ ಅವಕಾಶಕೊಟ್ಟು ದಕ್ಷತೆ ಬಂತೋ ಅನ್ನುವ ಪ್ರಶ್ನೆ ಬಂತು. ಸರಿಯೇ, ೫೦ ವರ್ಷ ಮೀಸಲಾತಿ ಕೊಟ್ಟಾಯಿತಲ್ಲ ಅವರಾದರೂ ಯಾಕೆ ದಕ್ಷರಾಗಿಲ್ಲ ಅಂತ ಪ್ರಶ್ನಿಸಿದರೆ ಬಹುಶಃ 'ಬ್ರಾಹ್ಮಣಶಾಹಿ' ಎನ್ನುವ ಹೊರತು ಬೇರೇನೂ ಉತ್ತರವಿಲ್ಲ. ಸತ್ಯ ಸಂಗತಿಯೆಂದರೆ ಇತ್ತಂಡಕ್ಕೂ ದಕ್ಷತೆ ಮುಖ್ಯವಲ್ಲ. ಉದ್ಯೋಗವೇ ಮುಖ್ಯ. ದುರದೃಷ್ಟವೇನೆಂದರೆ ನಮ್ಮ ಚಿಂತಕರು ಚಿಂತಕರಾಗಿರದೆ ರಾಜಕೀಯ ಚಿಂತಕರಾಗಿರುವುದು. ಮೀಸಲಾತಿ ಎನ್ನುವಂಥದ್ದು ಒಂದು ರಾಜಕೀಯ ವ್ಯವಸ್ಥೆ. ರಾಜಕೀಯ ಯಾವಾಗಲೂ ಉನ್ನತ ಹಂತದಲ್ಲಿ ಕಾರ್ಯನಿರ್ವಹಿಸುವಂಥದ್ದು. ಅಂಥಲ್ಲಿ ಬಹುಸಂಖ್ಯಾತ ದಲಿತರು ಶೋಷಿತರು, ರಾಜಕೀಯ ವ್ಯವಸ್ಥೆ ಬಹು ಮಂದಿಯನ್ನು ಗಮನದಲ್ಲಿಟ್ಟುಕೊಂಡು ಮೀಸಲಾತಿಯಂಥ ನಿಯಮ ಮಾಡಬೇಕಾಗುತ್ತದೇ ಹೊರತು ಪ್ರತಿಯೊಬ್ಬ ವ್ಯಕ್ತಿಯ ಸ್ಥಿತಿಯನ್ನು ಗಮನಿಸಲು ಅದಕ್ಕೆ ಸಾಧ್ಯವಿಲ್ಲ. ಗಮನಿಸಬೇಕೆಂದು ನಿರೀಕ್ಷಿಸುವುದು ಸರಿಯೂ ಅಲ್ಲ. ಆದರೆ ರಾಜಕೀಯಕ್ಕೆ ಕಾಣದ ಅಂಶವನ್ನು ಒಬ್ಬ ಸೂಕ್ಷ್ಮಜ್ಞ ಲೇಖಕ, ಚಿಂತಕ ಕಾಣಬೇಕಾಗುತ್ತದೆ. ಅಂಥಲ್ಲಿ ಪ್ರತಿಭೆಯಿದ್ದೂ ಉದ್ಯೋಗ ದೊರೆಯದ ಬ್ರಾಹ್ಮಣ ಯುವಕ/ಯುವತಿಯರಲ್ಲಿ ತಮ್ಮದೇ ಆದ ತಲ್ಲಣಗಳಿರುತ್ತವೆ. ಅದಕ್ಕೆ ನಿಮ್ಮ ಪೂರ್ವಜರೆಲ್ಲ ಅನ್ಯಾಯ ಮಾಡಿದ್ದಾರೆ; ಈಗ ಅನುಭವಿಸಿ ಅನ್ನುವುದು ಉತ್ತರವಲ್ಲ. ಇದೇ ಜಾಡಿನಲ್ಲಿ ಹೇಳಿದರೆ ಮುಸ್ಲಿಮರ ಪೂರ್ವಜರ ತಪ್ಪಿಗೆ ಇಂದಿನವರು ಶಿಕ್ಷೆ ಅನುಭವಿಸಬೇಕು ಎನ್ನುವ ಸಂಘ ಪರಿವಾರದ ವಾದಕ್ಕೂ ಇದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಹಾಗಿರುವಾಗ ಮೇಲುಜಾತಿಯ ಉದ್ಯೋಗ ವಂಚಿತರು ಅವರ ತಲ್ಲಣಗಳನ್ನು ಹೇಳಲು ಅವಕಾಶ ಕೊಡಿ. ಹೇಳಿದೊಡನೆ 'ಬ್ರಾಹ್ಮಣ ಶಾಹಿ' ಅಂತ ಬಾಯಿ ಮುಚ್ಚಿಸ ಬೇಕಾಗಿಲ್ಲ. ಹಾಗೆ ಮಾಡುವುದರಿಂದ ಬ್ರಾಹ್ಮಣಶಾಹಿಯಲ್ಲದವರನ್ನೂ ಬ್ರಾಹ್ಮಣಶಾಹಿತ್ವದೆಡೆಗೆ ತಳ್ಳಿದಂತಾಗುತ್ತದೆ ಎಂಬುದನ್ನು ಗಮನಿಸಬೇಕು. ಅಂದರೆ ಮೀಸಲಾತಿ ರದ್ದಾಗಬೇಕು ಎನ್ನುವುದು ನನ್ನ ಧೋರಣೆಯಲ್ಲ. ಅದು ಇರಲೇಬೇಕು. ಶತಮಾನಗಳಿಂದ ತುಳಿತಕ್ಕೊಳಗಾದ ಸಮುದಾಯಕ್ಕೆ ಇರುವ ಆಶ್ರಯ ಅದೊಂದೇ. ಆದರೆ ಅದರಿಂದಾಗಿ ಅವಕಾಶ ಕಳಕೊಳ್ಳುವ ಮಂದಿಯನ್ನು ಕನ್ವಿನ್ಸ್ ಮಾಡಬೇಕೇ ವಿನಾ 'ಅಟ್ಯಾಕ್' ಮಾಡುವುದಲ್ಲ. ಅಂತಹ ಅಟ್ಯಾಕ್‌ನಿಂದ ಜಾತೀಯತೆ ಬೇಕಿಲ್ಲ' ಎಂದದ್ದುಂಟು. ಇದನ್ನೇ ನಾನು ರಾಜಕೀಯ ಚಿಂತನಾ ಶೈಲಿ ಎಂದು ಕರೆದಿರುವುದು. ಅವರ ಅಭಿಪ್ರಾಯ ಸರಿಯೇ. ಆದರೆ ಯಾಕೆ ಬೇಕಿಲ್ಲ ಅನ್ನುವುದನ್ನು ಕನ್ವಿನ್ಸ್ ಮಾಡಿ ತಿಳಿಸಿಕೊಡಲಿ. ಅನಂತಮೂರ್ತಿ ಅದನ್ನು ಹೇಳುವುದಿಲ್ಲ; ಯಾಕೆಂದರೆ ಅವರಿಗೆ ಉದ್ಯೋಗ ಸಿಕ್ಕಿ ನಿವೃತ್ತರಾಗಿಯೂ ಆಗಿದೆ. ಈಗ ಒಂದೆಡೆ ಪೀಠಾಧಿಪತಿಗಳೊಂದಿಗೆ ಸ್ನೇಹ ಮಾಡಿ ಕೊಳ್ಳುತ್ತಾ ಇನ್ನೊಂದೆಡೆ ಭಯಂಕರ ದಲಿತ ಪರರಂತೆ ನಟಿಸುವುದೇ ಕೆಲಸ. ಇಂತಹ double stand ಗಳನ್ನು ಆಕ್ಷೇಪಿಸಬೇಕಾಗುತ್ತದೆ.

ಈಚೆಗೆ ಬನ್ನಿ Dashing Spirit ನಲ್ಲಿ ಮಾತನಾಡುವ ದಲಿತ ಚಿಂತಕರಿದ್ದಾರೆ. ಅದರ ಪರಿಣಾಮವನ್ನು ತಿನ್ನಲು ಗತಿಯಿಲ್ಲದ ದಲಿತರು ಅನುಭವಿಸಬೇಕಾಗುತ್ತದೆ. ಜಾಗತೀಕರಣದ ತರುವಾಯ ಶೇ. ೪೦ರಷ್ಟು ಉದ್ಯೋಗ ಇಳಿಕೆಯಾಗಿದೆ. ಸಹಜವಾಗಿಯೇ ದಲಿತರಲ್ಲಿಯೂ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಮೀಸಲಾತಿ ಇದ್ದರೂ ಅಲ್ಲಿಯೂ ಸ್ಪರ್ಧೆ. ಎಸಿ ರೂಂನಲ್ಲಿ ಕುಳಿತ ದಲಿತರ ಮಕ್ಕಳೊಂದಿಗೆ ಸ್ಪರ್ಧಿಸುವ ಶಕ್ತಿ ದುರ್ಬಲ ದಲಿತರಿಗಿಲ್ಲ. ಅವರಿಗೆ ಉದ್ಯೋಗ ಬೇಕು. ಎಲ್ಲಿ? ಖಾಸಗಿ ಸಂಸ್ಥೆಗಳಲ್ಲಿ. ಖಾಸಗಿ ಸಂಸ್ಥೆ ಈಗಲೂ ಬಹುಮಟ್ಟಿಗೆ ಬಂಡವಾಳಶಾಹಿ ಮೇಲುಜಾತಿಯವರ ಕೈಯಲ್ಲಿದೆ. ಅವರು ದಲಿತ ಯುವಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಸಿದ್ದರಿಲ್ಲ. ಅದಕ್ಕೆ ಮುಖ್ಯವಾಗಿ ಎರಡು ಕಾರಣಗಳು. ಸಾಂಪ್ರದಾಯಿಕ ಧೋರಣೆ, ದಲಿತರ ಬಗ್ಗೆ ಅಸಹನೆ ಒಂದು ಕಾರಣವಾದರೆ ದಲಿತರಿಗೆ ಕೆಲಸಕೊಟ್ಟರೆ ಆಮೇಲೆ ಆ ಸಂಘ, ಈ ಸಂಘ, ಜಾತಿ ನಿಂದನೆ ಅಂತ ಕಿರಿಕಿರಿ ಶುರುವಾಗುತ್ತದೆಂಬ ಇನ್ನೊಂದು ಕಾರಣ.

ಮೊದಲನೆ ಕಾರಣದಲ್ಲಿ ಪೂರ್ಣ ಸತ್ಯಾಂಶವಿದೆ. ಎರಡನೇ ಕಾರಣದಲ್ಲಿ ಭಾಗಶಃ ಸತ್ಯಾಂಶವಿದೆ. ಅಂಥಲ್ಲಿ ಯಾಕೆ ಅನಗತ್ಯ ತರಲೆ? ಅಂತ avoid ಮಾಡುವುದು ಸಹಜ. ಇಂಥಲ್ಲಿ ದಲಿತರಿಂದಲೇ ಉದ್ಯೋಗ ಕೊಡುವಂತಹ ಖಾಸಗಿ ಸಂಸ್ಥೆ ಆರಂಭವಾಗಬೇಕು. ಬಲವಾಗಿ ನೆಲೆಯೂರ ಬೇಕು. ಘಟಕಗಳೇನೋ ಪ್ರಾರಂಭವಾಗುತ್ತವೆ. ಆದರೆ ಯಾಕೆ ಬಲವಾಗಿ ನೆಲೆಯೂರುತ್ತಿಲ್ಲ? ಸರಳ ಉದಾಹರಣೆ ಯಾಗಿ ಪತ್ರಿಕೆಯನ್ನು ತೆಗೆದುಕೊಳ್ಳುತ್ತೇನೆ.

ದಲಿತರು ಒಂದು ಪತ್ರಿಕೆ ಆರಂಭಿಸಿದರೆಂದು ಭಾವಿಸಿ. ಅದರಲ್ಲಿ ಬಹುಮಟ್ಟಿಗೆ ಮೇಲುಜಾತಿಗೆ ಬೈಗುಳ,

ಜನಾಂಗೀಯ ಅಸಹನೆ ಇರುತ್ತದೆ. ತನ್ನ ಅಭಿಪ್ರಾಯಕ್ಕೆ ಭಿನ್ನ ಅಭಿಪ್ರಾಯದ ಪ್ರಕಟಣೆಯೂ ಇಲ್ಲ. ಆಗ ಸಹಜವಾಗಿಯೇ 'ಅದರಲ್ಲಿ ನಮಗೆ ಬೈಗುಳ ಮಾತ್ರವಿರುತ್ತದೆ; ನಾವೇಕೆ ಖರೀದಿಸಬೇಕು?' ಎನ್ನುವ ಅಭಿಪ್ರಾಯ ಮೂಡುತ್ತದೆ. ತತ್ಪರಿಣಾಮ ಅಂತಹ ಒಂದು ಘಟಕ ಸೋಲುತ್ತದೆ. ಅದೇ ಮೇಲು ಜಾತಿಗಳ ಘಟಕಗಳನ್ನು ನೋಡಿ. ಅವರದು ಬ್ರಾಹ್ಮಣಶಾಹಿ ಧೋರಣೆಯೇ ಇರಬಹುದು; ಆದರೆ ತಮ್ಮ ಧೋರಣೆಗೆ ಭಿನ್ನವಾದ ಅಭಿಪ್ರಾಯ, ಸುದ್ದಿಗಳನ್ನು ಅವರು ಪ್ರಕಟಿಸುತ್ತಾರೆ. ಅದು ಮಾರಾಟವಾಗುತ್ತದೆ. ನೆಲೆಯೂರುತ್ತದೆ. ಈ ದೇಶದಲ್ಲಿ ಬ್ರಾಹ್ಮಣರ ಸಂಖ್ಯೆ ಶೇ. ೪ ಆದರೂ ಸಕ್ಸಸ್ ಆಗುತ್ತಾರೆ. ಯಾಕೆಂದರೆ ಅವರು ಸಮಾಜದ ನಡುವಿನಲ್ಲಿ ನಿಲ್ಲುತ್ತಾರೆ.

ದಲಿತರು Solate ಆಗುತ್ತಾ ಹೋಗುತ್ತಾರೆ. ಅದರಿಂದಾಗಿ ಸೋಲು ಅನಿವಾರ್ಯ. ಅದಕ್ಕೆ ಯಾರನ್ನೂ ದೂಷಿಸಿ ಪ್ರಯೋಜನವಿಲ್ಲ. ಎಲ್ಲಿಯ ತನಕ ದಲಿತ ಹೋರಾಟಗಾರರು ತಾವು ದುಷ್ಟತನದ ವಿರುದ್ಧ ಹೋರಾಡುತ್ತಿದ್ದೇವೆಯೇ ಹೊರತು ಜನಾಂಗದ ವಿರುದ್ಧ ಅಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ರವಾನಿಸುವುದಿಲ್ಲವೋ ಮತ್ತು ಹಾಗೆಯೇ ನಡೆದುಕೊಳ್ಳುವುದಿಲ್ಲವೋ ಅಲ್ಲಿಯ ತನಕ ದುರ್ಬಲ ದಲಿತರು ಇತರರಿಂದ ಶೋಷಿತರಾಗುತ್ತಿರುತ್ತಾರೆ.

ಇದರರ್ಥ ಎಲ್ಲರನ್ನೂ ಮನಃ ಪರಿವರ್ತನೆ ಮಾಡಬೇಕು ಎಂದಲ್ಲ. ಕೆಲವರಿಗೆ ಹೇಗೆ ಹೇಳಿದರೂ ಅರ್ಥ ಆಗುವುದಿಲ್ಲ. ಅಂಥವರ ವಿರುದ್ಧ ಆಕ್ರೋಶದಿಂದ ಹೋರಾಡಬೇಕಾಗುತ್ತದೆ. ಆದರೆ ಆಗಲೂ ನಾವು ವ್ಯಕ್ತಿಗಳನ್ನು ಗುರುತಿಸಬೇಕೇ ವಿನಾ ಜನಾಂಗವನ್ನಲ್ಲ. ಇನ್ನೂ ಕೆಲವರಿದ್ದಾರೆ. ಮನುಷ್ಯ ಸಹಜವಾಗಿ ಅವರಿಗೆ ದಲಿತರ ಮೇಲೆ ಪ್ರೀತಿ ಇರುತ್ತದೆ. ಆದರೆ ಅವರಿಟ್ಟುಕೊಂಡ ಸಂಪ್ರದಾಯ ಅಸ್ಪೃಶ್ಯತೆಯನ್ನು ಆಚರಿಸುವಂತೆ ಮಾಡುತ್ತದೆ. ಅಂಥಲ್ಲಿ ನಾವು ಹೋರಾಡಬೇಕಾದ್ದು 'ಸಂಪ್ರದಾಯ' ಎನ್ನುವ ವ್ಯವಸ್ಥೆಯ ವಿರುದ್ಧವೇ ಹೊರತು ವ್ಯಕ್ತಿಯ ವಿರುದ್ಧವಲ್ಲ. ಇನ್ನೂ ಕೆಲವರಿರುತ್ತಾರೆ. ಅವರು ನಿಜ ಅರ್ಥದಲ್ಲಿ ದಲಿತ ಪರರಾಗಿರುತ್ತಾರೆ. ಆದರೆ ಅವರ ಪ್ರಾರಬ್ಧಕ್ಕೆ ಮೇಲು ಜಾತಿಯಲ್ಲಿ ಹುಟ್ಟಿರುತ್ತಾರೆ. ಅಂಥವರು ಏನೇ ಹೇಳಿದರೂ ಪುರೋಹಿತಶಾಹಿವಾದ ಎನ್ನುತ್ತಾ ಹೋದ ಹಾಗೆ ಒಂದಷ್ಟು ಮಂದಿ ನಿಜವಾಗಿ ಪುರೋಹಿತಶಾಹಿ ಕಡೆಗೆ ವಾಲಿ ಬಿಡುತ್ತಾರೆ. ಇನ್ನೂ ಕೆಲವು ಅತೀ ಅಲ್ಪಸಂಖ್ಯಾತ ಮೇಲು ಜಾತಿಯಲ್ಲಿ ಹುಟ್ಟಿದವರು ತಮ್ಮ ಜಾತ್ಯತೀತ ತತ್ತ್ವ ನಿಷ್ಠೆಗೆ ಬದ್ಧರಾಗಿಯೇ ಇರುತ್ತಾರೆ. ಆದರೆ ದಲಿತರ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ ಬಿಡುತ್ತಾರೆ. ಇಲ್ಲದ್ದನ್ನು ಹೇಳಿದಾಗ ಯಾರಿಗಾದರೂ ಅಷ್ಟು ವೇದನೆಯಾಗುತ್ತದೆ. ಇವರದು ದಾರುಣವಾದ ಸ್ಥಿತಿ.

ಇತ್ತಕಡೆ ಆತ ಮೇಲು ಜಾತಿಯಲ್ಲಿ ಹುಟ್ಟಿದ್ದಾನೆ ಎಂದು ದಲಿತ-ಶೂದ್ರರಿಗೂ ಬೇಡದವನಾಗುತ್ತಾನೆ. ಅತ್ತ ಕಡೆ ಬ್ರಾಹ್ಮಣರು ಮತ್ತವರ ಸಂಗಾತಿ ಜಾತಿಗಳ ವಿರುದ್ಧ ಮಾತನಾಡುತ್ತಾನೆ ಎಂದು ಅವರಿಗೂ ಬೇಡದವನಾಗುತ್ತಾನೆ. ಅಂಥಲ್ಲಿ ಆತ ಏಕಾಂಗಿ, ಹತಾಶೆ ಅವನನ್ನು ಆವರಿಸಿಕೊಳ್ಳುತ್ತದೆ. ಇಂಥಲ್ಲಿ ಖಂಡಿಸಬೇಕಾದದ್ದು ವಿಚಾರವನ್ನೇ ಹೊರತು ಜಾತಿಯನ್ನಲ್ಲ ಎನ್ನುವ ಒಂದು ಬದ್ಧತೆಯನ್ನು ದಲಿತ ಚಿಂತಕರು ಇರಿಸಿಕೊಳ್ಳಬೇಕಾಗುತ್ತದೆ. ವಿಚಾರವನ್ನು ಧಾರಾಳವಾಗಿ ಖಂಡಿಸೋಣ. ಯಾಕೆಂದರೆ ಯಾವೊಬ್ಬ ಚಿಂತಕನ ವಿಚಾರವೂ ಪರಿಪೂರ್ಣವೇನಲ್ಲ. ಹಾಗಂತ ಖಚಿತ ಸಾಕ್ಷಿ ಪುರಾವೆ ಸಿಗದ ಹೊರತು ವಿಚಾರ ಹೇಳಿದವನ ಪ್ರಾಮಾಣಿಕತೆಯನ್ನು ಅಲ್ಲಗಳೆಯಬಾರದು. ಇಲ್ಲಿ ಡಾ. ಮೊಗಳ್ಳಿ ಗಣೇಶ್ ಅವರ ಉದಾಹರಣೆ ಕೊಡಬಯಸುತ್ತೇನೆ. ಹಲವಾರು ಬಾರಿ ನಾನು ಈ ವಿಚಾರ ಎತ್ತಿದ್ದೇನೆ. ಯಾಕೆಂದರೆ ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಮೊಗಳ್ಳಿಯವರ ಬರಹಗಳನ್ನು ಓದಿ ಖುಷಿ ಪಟ್ಟಿದ್ದೆ. ಅಂಥವರೇ ಜನಾಂಗೀಯ ಅಸಹನೆ ವ್ಯಕ್ತಪಡಿಸುತ್ತಾರೆಂದರೆ ಏನೋ ಕಿರಿಕಿರಿಯಾಗುತ್ತದೆ.

ಅವರ ಪ್ರಕಾರ ದಲಿತರಿಗೆ ಒಳ್ಳೆಯದಾಗಬಾರದೆಂದು ಮೇಲು ಜಾತಿಯವರು ಜಾಗತೀಕರಣವನ್ನು ವಿರೋಧಿಸುತ್ತಿದ್ದಾರೆ. ಈ ವಾದ ಎಲ್ಲಿಯ ತನಕ ಅನ್ವಯವಾಗಬೇಕಾಗುತ್ತದೆಂದರೆ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ತನಕವೂ ಜಾತಿ ಕಾರಣಕ್ಕಾಗಿ ಜಾಗತೀಕರಣಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎನ್ನಬೇಕಾಗುತ್ತದೆ. ಸರಿಯೇ, ಆದರೆ ಮೊಗಳ್ಳಿಯವರು ಯಾವ ಸಾಕ್ಷಿ ಪುರಾವೆಯ ಆಧಾರದಲ್ಲಿ ಈ ವಾದ ಮುಂದಿಟ್ಟರು? ಸಾಕ್ಷಿ ಇಲ್ಲ. ಕೇವಲ ಊಹೆ ಮತ್ತು ಜನಾಂಗೀಯ ಅಸಹನೆ. ಅವರ ವಾದವನ್ನು ಪ್ರಶ್ನಿಸಬಾರದು ಎನ್ನುವವರು ಮುಂದಿಡುವ ವಿಚಾರವೆಂದರೆ ಮೊಗಳ್ಳಿಯವರ ಕೃತಿ ಬಗ್ಗೆ ಅತೃಪ್ತಿ ವ್ಯಕ್ತಪಡಿಸುವ ಮೂಲಕ ದಲಿತ ಸಂವೇದನೆಯನ್ನು ತಡೆಯಲಾಗುತ್ತಿದೆ ಎನ್ನುವುದು.

ನನ್ನ ಪ್ರಕಾರ ಜನಾಂಗೀಯ ದ್ವೇಷವನ್ನು ಸಂವೇದನೆ ಎನ್ನಲು ಬರುವುದಿಲ್ಲ. ಜನಾಂಗ ದ್ವೇಷ ಯಾರಿಂದಲೇ ಬಂದರೂ ಅಂತಿಮವಾಗಿ ಅದು ಫ್ಯಾಸಿಸ್ಟ್ ಧೋರಣೆಗೆ ತಲುಪುತ್ತದೆ. ಎರಡನೆಯದಾಗಿ ಮೊಗಳ್ಳಿಯವರಿಗೆ ದಲಿತರ ಬಗ್ಗೆ ಇರುವ ಪ್ರಾಮಾಣಿಕ ಕಾಳಜಿಯ ಬಗ್ಗೆ ಎರಡನೇ ಮಾತೇ ಇಲ್ಲ. ಆದರೆ ಅವರ ಅಭಿಪ್ರಾಯಕ್ಕೆ ವಿರುದ್ಧ ಉಳ್ಳವರೆಲ್ಲ ದಲಿತ ವಿರೋಧಿಗಳು ಎನ್ನುವ ಮೂಲಕ ಇಡೀ ಒಂದು ಜನಾಂಗಕ್ಕೆ ಯಾವ ಸಾಕ್ಷಿಯೂ ಇಲ್ಲದೆ ಆರೋಪವನ್ನು ಹೊರಿಸುವ ಪ್ರಯತ್ನದ ಬಗ್ಗೆ ತಕರಾರು ಇದೆ.

ಇದರ ಹೊರತಾಗಿ ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅಲ್ಲಗಳೆಯುವ ಅಧಿಕಾರ ಕಾರ್ಯಾಂಗ, ನ್ಯಾಯಾಂಗವನ್ನು ಹೊರತುಪಡಿಸಿ ಬೇರಾರಿಗೂ ಇಲ್ಲ. ಹಾಗೆಯೇ ಒಬ್ಬ ಲೇಖಕನ ಅಭಿಪ್ರಾಯವನ್ನು ನಿರಾಕರಿಸುವ ಅಧಿಕಾರ ಮತ್ತೊಬ್ಬ ಲೇಖಕನಿಗಿದೆ. ಆದರೆ ಲೇಖಕನ ಪ್ರಾಮಾಣಿಕತೆಯನ್ನು ಆಧಾರವಿಲ್ಲದೆ ತಳ್ಳಿ ಹಾಕುವ ನೈತಿಕ ಅಧಿಕಾರ ಮತ್ತೊಬ್ಬ ಲೇಖಕನಿಗಿಲ್ಲ. ಈ ನೆಲೆಯಲ್ಲಿ ನನ್ನ ಅತೃಪ್ತಿ ಅಷ್ಟೆ.

ಇನ್ನೊಂದು ವಾದವೆಂದರೆ 'ಮೊಗಳ್ಳಿ ಏನೋ ಹೇಳಿರಬಹುದು, ಅದನ್ನು ಸೀರಿಯಸ್ ಮಾಡುವುದೇಕೆ?' ಎನ್ನುವ ವಾದ. ಆದರೆ 'ಏನೋ ಹೇಳಿರಬಹುದು' ಎಂದು ಹಗುರವಾಗಿ ತೆಗೆದುಕೊಳ್ಳುವಂಥ ಚಿಂತಕರೇನೂ ಅವರಲ್ಲ. ಇನ್ನೊಂದು ವಿಚಿತ್ರವಾದ ವಾದವೆಂದರೆ ದಲಿತರನ್ನು ಎಚ್ಚರಿಸುವುದಕ್ಕಾಗಿ ಋಣಾತ್ಮಕ ಪ್ರಚೋದನೆಯನ್ನು ಮೊಗಳ್ಳಿ ಕೊಟ್ಟಿದ್ದಾರೆ ಎನ್ನುವುದು. ಇದೇ ಧಾಟಿಯಲ್ಲಿ ಹೇಳುವುದಾದರೆ ದಲಿತ ಶೋಷಣೆಯನ್ನೂ ಋಣಾತ್ಮಕ ಪ್ರಚೋದನೆ ಎನ್ನಬಹುದಲ್ಲವೇ? ಬಹುಶಃ ಮೊಗಳ್ಳಿಯವರ ಮೂಲ ನೆಲೆ ಸೃಜನಶೀಲ ಸಾಹಿತ್ಯವಾಗಿರುವುದು ಅವರು ಇಂಥ ವಾದ ಇಡಲು ಕಾರಣ. ಸೃಜನಶೀಲ ಸಾಹಿತ್ಯಕ್ಕೆ ನಾನಾ ರೀತಿಯ ಅರ್ಥ ವ್ಯಾಖ್ಯಾನ ಸಾಧ್ಯವಿದೆ. ಅಲ್ಲಿ ಅವರು ಇಂಥ ಆರೋಪ ಹೊರಿಸಿದರೆ ಜನಾಂಗೀಯ ಅಸಹನೆ ಅಂತ ಆಗುವುದಿಲ್ಲ. ಆದರೆ ವಿಚಾರ ಸಾಹಿತ್ಯದಲ್ಲಿ ಹೀಗೆ ಹೇಳಿದಾಗ ಅದು ಜನಾಂಗೀಯ ಅಸಹನೆಯಾಗಿ ಕಾಣಿಸುತ್ತದೆ. ಅದಾಗ್ಯೂ ಮೊಗಳ್ಳಿಯವರ ವಾದ ಸರಿ ಎಂದಾದರೆ ಬಿಜೆಪಿ ಜಾಗತೀಕರಣಕ್ಕೆ ವಿರುದ್ಧ ಇರಬೇಕಾಗಿತ್ತು. ಆದರೆ ಹಾಗಿಲ್ಲ ಅಲ್ಲವೆ? ಆದರೂ ಮೊಗಳ್ಳಿ ಅವರ ಅಸಹನೆಗೆ ಅರ್ಥವಿದೆ.

ಮೇಲು ಜಾತಿಯಿಂದ ಅವರು ಅಷ್ಟು ನೋವು ಅನುಭವಿಸಿರಬಹುದು. ಅಂಥಲ್ಲಿ ವ್ಯಕ್ತಿಯಾಗಿ ಅವರ ಅಸಹನೆ ಸರಿ. ಆದರೆ ಒಬ್ಬ ಥಿಂಕರ್ ಆಗಿ ನಿಂತಾಗ ಜನಾಂಗೀಯ ಅಸಹನೆಯನ್ನು ಪ್ರಚೋದಿಸುವುದು ಥಿಂಕರ್ ಮಾಡಬೇಕಾದ ಕೆಲಸವಲ್ಲ. ಜನರಿಗೆ ಆತ ಕೊಡಬೇಕಾದ ವೈಚಾರಿಕ ಮುನ್ನೋಟವೂ ಅಲ್ಲ. ಇತ್ತೀಚೆಗೆ ಯಾರೋ ಒಬ್ಬರು 'ಬ್ರಾಹ್ಮಣರ ಸಂಖ್ಯೆ ಜಾಸ್ತಿಯಾಗುತ್ತಿದೆ' ಅಂತ ಆತಂಕ ವ್ಯಕ್ತಪಡಿಸಿದ್ದರು. ಇದಕ್ಕೆ ಆಧಾರವೇನೋ ಗೊತ್ತಿಲ್ಲ. ಹಾಗೊಮ್ಮೆ ಬ್ರಾಹ್ಮಣರ ಸಂಖ್ಯೆ ಹೆಚ್ಚಿದ್ದರೆ ಒಂದಷ್ಟು ಮಂದಿಯ ಜನನವನ್ನು ನೋಡಿ ಅದನ್ನು ಹೇಳಲಾಗದು. ಡೆಮಾಗ್ರಫಿಕಲ್ ಸ್ಟೇಜ್ ಅಧ್ಯಯನ ಮಾಡಬೇಕಾಗುತ್ತದೆ. Proportional increase ಅನ್ನು ನೋಡಬೇಕಾಗುತ್ತದೆ. ಅಷ್ಟಾಗಿಯೂ ಬ್ರಾಹ್ಮಣರ ಸಂಖ್ಯೆ ಹೆಚ್ಚುತ್ತಿದೆ ಎಂದೇ ಭಾವಿಸೋಣ. ಅದರಲ್ಲಿ ಆತಂಕವಿದೆ ಎಂದಾದರೆ ಮುಸ್ಲಿಮರ ಸಂಖ್ಯೆ ಹೆಚ್ಚುತ್ತಿದೆ ಎಂದು ಸಂಘ ಪರಿವಾರ ಆತಂಕ ಪಡುತ್ತಿರುವುದರಲ್ಲಿ ತಪ್ಪಿದೆ ಎನ್ನುವಂತಿಲ್ಲ. ಬ್ರಾಹ್ಮಣರ ಸಂಖ್ಯೆಗಾಗಿ ಆತಂಕ ಪಡುವವರನ್ನು ಪ್ರೋಗ್ರೆಸಿವ್ ಥಿಂಕರ್ಸ್ ಅನ್ನುವುದಾದರೆ ಮುಸ್ಲಿಮರ ಸಂಖ್ಯೆ ಹೆಚ್ಚುತ್ತಿದೆ ಎನ್ನುವವರನ್ನು ಪ್ರೋಗ್ರೆಸಿವ್ ಅಲ್ಲ ಅಂತ ಹೇಗೆ ಹೇಳುವುದು? ನಿಜವಾಗಿ ಆತಂಕ ಪಡಬೇಕಾದದ್ದು ಬ್ರಾಹ್ಮಣ ಶಾಹಿ ಧೋರಣೆ ಹೆಚ್ಚುತ್ತಿರುವುದಕ್ಕೇ ಹೊರತು ಜನಸಂಖ್ಯೆಗಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

ಸಣ್ಣಂಗಿ ರಾಜ ಅವರು ಅಂಬೇಡ್ಕರ್ ಸ್ಫೂರ್ತಿಯಿಂದ ಉಳ್ಳವರ ಎದೆಯಲ್ಲಿ ನಡುಕ ಹುಟ್ಟಿಸಲಾಗಿತ್ತು ಎಂದಿದ್ದಾರೆ. ಬಹಳ ಮಂದಿ ಹೀಗೆ ಭಾವಿಸಿರುವುದುಂಟು. ಆದರೆ ಅದೊಂದು ಭಾವನೆಯೇ ಹೊರತು ವಾಸ್ತವವಾಗಿಲ್ಲ. ಯೂರೋಪಿಯನ್ ಸಮಾಜದಲ್ಲಿ ಮಾರ್ಕ್ಸ್‌ವಾದ ಆ ಕೆಲಸ ಮಾಡಿದಂತೆ ಭಾರತೀಯ ಸಂದರ್ಭದ ದಲಿತ ಚಳವಳಿಯಿಂದ ಮಾಡಲಾಗಲಿಲ್ಲ. ಉಳ್ಳವರು ಅವತ್ತು ಇವತ್ತು ಹುಲುಸಾಗಿ ಮೇಯುತ್ತಲೇ ಇದ್ದಾರೆ. ಅವರನ್ನು ಕಿಂಚಿತ್ತೂ ಅಲುಗಾಡಿಸಲು ಯಾರಿಗೂ ಆಗಿಲ್ಲ. ವಾಸ್ತವವಾಗಿ ಮೇಲು ಜಾತಿಯ ದುರ್ಬಲರನ್ನು ಹೆದರಿಸುವ ಕೆಲಸ ನಡೆದಿದೆಯೇ ಹೊರತು ಉಳ್ಳವರನ್ನಲ್ಲ. ಅದರಿಂದ ತಾತ್ಕಾಲಿಕ ಖುಷಿ ಸಿಗಬಹುದು. ಆವೇಶದಿಂದ ಮಾತನಾಡಿ ಚಪ್ಪಾಳೆ ಗಿಟ್ಟಿಸಬಹುದು. ಆದರದು ವಿವೇಚನಾಪೂರ್ಣ ನಾಯಕತ್ವವಾದೀತೇ? ನಿಜ ಸ್ಥಿತಿಯಲ್ಲಿ ಜಾತಿ ಆಧಾರಿತ ಬೌದ್ಧಿಕ ಅಥವಾ ದೈಹಿಕ ದಾಳಿ ನಡೆದ ಹಾಗೆಲ್ಲ ದಾಳಿಗೊಳಪಟ್ಟ ಸಮುದಾಯದಲ್ಲಿಯೂ ಜಾತೀಯ ಅಸಹನೆಯನ್ನು ಉಳಿಸಿದಂತಾಗುತ್ತದೆ. ಈಗ ಬ್ರಾಹ್ಮಣರ ಸಂಖ್ಯೆ ಹೆಚ್ಚುತ್ತಿದೆ ಎನ್ನುವ

ಬಗೆಗಿನ ಆತಂಕವನ್ನು ಗಮನಿಸಿ. ಆಗ ಬ್ರಾಹ್ಮಣ ವರ್ಗ ಅನಿವಾರ್ಯವಾಗಿ ಡಿಫೆನ್ಸಿವ್ ಆಗ ಬೇಕಾಗುತ್ತದೆ. ಆಗಬಾರದು ಎನ್ನುವ ಹಕ್ಕು ಯಾರಿಗೂ ಇಲ್ಲ. ಆತ್ಮ ಸಂರಕ್ಷಣೆ ಪ್ರತಿಯೊಬ್ಬನ ಹಕ್ಕು. ಹೇಗೆ ಹೇಳುವುದು, ಇವತ್ತು ಬೌದ್ಧಿಕ ವಾಗಿ ಜನಾಂಗೀಯ ಅಸಹನೆ ವ್ಯಕ್ತ ಪಡಿಸಿದವರು ನಾಳೆ ಪೂರ್ಣಾಧಿಕಾರಕ್ಕೆ ಬಂದರೆ 'ಬ್ರಾಹ್ಮಣರನ್ನೆಲ್ಲ ಕೊಲ್ಲಿ' ಅಂತ ಆದೇಶಿಸಲಾರರೆಂಬುದಕ್ಕೆ ಖಾತ್ರಿ ಏನು? ಅಂಥಲ್ಲಿ ಒಂದು ಓಟಿಂಗ್ ಗ್ರೂಫ್ ದಲಿತ ಚಳವಳಿಯನ್ನು ಬೆಂಬಲಿಸದೆ ಹೋಗುತ್ತದೆ. ಹಿಂಗೆಂದೊಡನೆ 'ನಮಗೆ ಯಾರೂ ಬೇಕಾಗಿಲ್ಲ' ಎನ್ನುವವರಿದ್ದಾರೆ. ಸರಿ, ಯಾರು ಬೇಡವೆಂದ ಮೇಲೆ 'ಅವ ದಲಿತ ವಿರೋಧಿ ,ಇವ ದಲಿತರ ಬರಹದ ಬಗ್ಗೆ ಅವಜ್ಞೆ ತೋರಿದ್ದಾನೆ' ಎಂದೆಲ್ಲ ಹೇಳುವುದೇಕೆ? ಯಾರೂ ಬೇಕಾಗಿಲ್ಲ ಎಂದ ಬಳಿಕ ದಲಿತ ಪರ ನಿಲುಮೆಯನ್ನು ನಿರೀಕ್ಷಿಸುವುದಾದರೂ ಏಕೆ?



ಅಂಬೇಡ್ಕರ್ ಕಾಂಗ್ರೆಸ್‌ನ ಮುಖವಾಡ ಕಳಚಿದ್ದರೆಂಬುದು ಸತ್ಯ. ಆದರೆ ಅವರೂ ಸಹ ಕಾಂಗ್ರೆಸ್ ಸರಕಾರದಲ್ಲಿ ಮಂತ್ರಿಯಾಗಿರುವುದು ಅನಿವಾರ್ಯವಾಗಿತ್ತು. ಅಂಬೇಡ್ಕರ್ ತಮ್ಮ ಚಾರಿತ್ರಿಕ ಕರ್ತವ್ಯವನ್ನು ಅತ್ಯಂತ ಶ್ರದ್ಧೆಯಿಂದ ನಡೆಸಿದವರು. ಅದಕ್ಕಾಗಿ ಅವರನ್ನು ಪ್ರಶ್ನಾತೀತವಾಗಿ ಗೌರವಿಸೋಣ. ಆದರೆ ಅವರನ್ನು ಗೌರವಿಸಬೇಕಾದರೆ ಗಾಂಧಿಯನ್ನು ತೆಗಳಬೇಕಾದ ಅಗತ್ಯವೇನೂ ಇಲ್ಲ ಅಲ್ಲವೇ? ಗಾಂಧಿ ಕೂಡ ಅವರ ಚಾರಿತ್ರಿಕ ಕರ್ತವ್ಯವನ್ನು ಮಾಡಿದ್ದಾರೆ. ಅದು ನಮಗೆ ಸರಿ ಎನಿಸುತ್ತಿಲ್ಲ ಎಂದ ಮಾತ್ರಕ್ಕೆ ಅವರ ಚಾರಿತ್ರಿಕ ಪ್ರಾಮುಖ್ಯತೆಯನ್ನೇ ಅಲ್ಲಗಳೆಯುವುದು ಸರಿಯಲ್ಲ.

ಸಣ್ಣಂಗಿ ರಾಜ ಅವರು ಹೇಳುವಂತೆ 'ಹಿಂದೂ ಧರ್ಮದ ಕಟ್ಟುಪಾಡುಗಳನ್ನು ನಿರಾಕರಿಸಿದಷ್ಟೂ ಸಾಧಿಸಬಹುದು ಎಂಬುದನ್ನು ಅಂಬೇಡ್ಕರ್ ತೋರಿಸಿಕೊಟ್ಟಿದ್ದಾರೆ. 'ನೂರಕ್ಕೆ ನೂರರಷ್ಟು ಸತ್ಯವಾದ ಮಾತು ಇದು. ಆದರೆ ನಮ್ಮ ದಲಿತ ಚಳವಳಿಯ ನಾಯಕರು ಜನಾಂಗೀಯ ಅಸಹನೆಯನ್ನು ಪ್ರೋತ್ಸಾಹಿಸುತ್ತಾ ಮತ್ತೆ ಮತ್ತೆ ಬ್ರಾಹ್ಮಣಶಾಹಿತ್ವಕ್ಕೆ ಮರಳುತ್ತಿದ್ದಾರೆ. ಯಾಕೆಂದರೆ ಜನಾಂಗೀಯ ಅಸಹನೆ ಬ್ರಾಹ್ಮಣ ಶಾಹಿಯ ಸಿದ್ಧಾಂತ. ಕೇವಲ ಸ್ಥಾನಾಂತರವೇ ಸಮಾನತೆ ಯೆಂದಾದರೆ ಈ ಧೋರಣೆ ಸರಿ. ನೋಡಿ, ಯಾವ ಕಾಲಕ್ಕೂ ಜಾತಿ ವ್ಯವಸ್ಥೆ ನಾಶವಾಗದ ಹಾಗೆ ಈ ದೇಶದ ದರಿದ್ರ ಬ್ರಾಹ್ಮಣಶಾಹಿ ವ್ಯವಸ್ಥೆ ಇಡೀ ಸಮಾಜವನ್ನು ರೂಪಿಸಿಬಿಟ್ಟಿದೆ. ಅಂಥಲ್ಲಿ ಸ್ಥಾನಾಂತರ ಸಾಧ್ಯವೇ ಹೊರತು ಸಮಾನತೆ ಅಲ್ಲ. ಪ್ರಭುತ್ವದೊಂದಿಗಿನ ರಾಜಿಯ ಬಗ್ಗೆ ಲೇಖಕರು ತಕರಾರು ಎತ್ತಿದ್ದಾರೆ. ಆದರೆ ಒಂದು ಮಟ್ಟಿನ ರಾಜಿ ಅನಿವಾರ್ಯ. ಇಲ್ಲ ಅನ್ನುವುದಾದರೆ ಅಂಡರ್ ಗ್ರೌಂಡ್‌ಗೆ ಇಳಿಯಬೇಕಾಗುತ್ತದೇ ಹೊರತು ಈ ವ್ಯವಸ್ಥೆಯನ್ನು ಒಪ್ಪಿಕೊಂಡೇ, ಅದರ ಸೌಲಭ್ಯವನ್ನು ಉಪಯೋಗಿಸಿಕೊಂಡೇ ನಾವು ಯಾವ ರಾಜಿಗೂ ಸಿದ್ಧರಿಲ್ಲ ಎನ್ನಲು ಬರುವುದಿಲ್ಲ. ಸೂಕ್ಷ್ಮವಾಗಿ ಗಮನಿಸಿ, ಅಂಬೇಡ್ಕರ್ ಕಾಂಗ್ರೆಸ್‌ನ ಮುಖವಾಡ ಕಳಚಿದ್ದರೆಂಬುದು ಸತ್ಯ. ಆದರೆ ಅವರೂ ಸಹ ಕಾಂಗ್ರೆಸ್ ಸರಕಾರದಲ್ಲಿ ಮಂತ್ರಿಯಾಗಿರುವುದು ಅನಿವಾರ್ಯವಾಗಿತ್ತು. ಅಂಬೇಡ್ಕರ್ ತಮ್ಮ ಚಾರಿತ್ರಿಕ ಕರ್ತವ್ಯವನ್ನು ಅತ್ಯಂತ ಶ್ರದ್ಧೆಯಿಂದ ನಡೆಸಿದವರು. ಅದಕ್ಕಾಗಿ ಅವರನ್ನು ಪ್ರಶ್ನಾತೀತ ವಾಗಿ ಗೌರವಿಸೋಣ. ಆದರೆ ಅವರನ್ನು ಗೌರವಿಸಬೇಕಾದರೆ ಗಾಂಧಿಯನ್ನು ತೆಗಳಬೇಕಾದ ಅಗತ್ಯ ವೇನೂ ಇಲ್ಲ ಅಲ್ಲವೇ? ಗಾಂಧಿ ಕೂಡ ಅವರ ಚಾರಿತ್ರಿಕ ಕರ್ತವ್ಯವನ್ನು ಮಾಡಿದ್ದಾರೆ. ಅದು ನಮಗೆ ಸರಿ ಎನಿಸುತ್ತಿಲ್ಲ ಎಂದ ಮಾತ್ರಕ್ಕೆ ಅವರ ಚಾರಿತ್ರಿಕ ಪ್ರಾಮುಖ್ಯತೆಯನ್ನೇ ಅಲ್ಲಗಳೆಯುವುದು, ಅವರೆಲ್ಲ ಕ್ರಿಯೆಗಳಿಗೂ ಅಪ್ರಾಮಾಣಿಕತೆಯನ್ನು ಆರೋಪಿಸುವುದು ಅತ್ಯುತ್ತಮ ಧ್ಯೇಯೋದ್ದೇಶ ಹೊಂದಿರುವ ಚಳವಳಿಯೊಂದು ಮಾಡಬೇಕಾದ ಕೆಲಸವಲ್ಲ.

ಅಂಬೇಡ್ಕರ್ ಮತ್ತು ಗಾಂಧಿ ಇಬ್ಬರ ಬಗ್ಗೆಯೂ ಭಿನ್ನಾಭಿಪ್ರಾಯದ ನಿರ್ವಚನ ಸಾಧ್ಯವಿದೆ. ಆದರೆ ಅವರ ಚಾರಿತ್ರಿಕ ಪ್ರಾಮುಖ್ಯತೆಯ ಬಗ್ಗೆ ಹಾಗೆ ಭಿನ್ನಾಭಿಪ್ರಾಯ ಸಾಧ್ಯವಿಲ್ಲ. ಹಾಗೆ ಮಾಡುವುದು ಚರಿತ್ರೆಗೆ ಎಸಗಿದ ದ್ರೋಹವಾಗುತ್ತದೆ. ಕಟ್ಟ ಕಡೆಗೂ ಗಾಂಧಿ, ಅಂಬೇಡ್ಕರ್ ನಮ್ಮ ಹಾದಿಯ ಒಂದು ಹಿಡಿಬೆಳಕೇ ಹೊರತು ಅವರೇ ಅಂತಿಮ ಸತ್ಯ ಅಲ್ಲ. ಸತ್ಯ ಸಾಕ್ಷಾತ್ಕಾರವನ್ನು ನಮಗೆ ನಾವೇ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಹೋರಾಟಕ್ಕೆ ಜನರನ್ನು ಕಳೆದುಕೊಳ್ಳುವ ಬದಲು ಪಡೆದುಕೊಳ್ಳುವ ದಾರಿಯನ್ನು ಯೋಚಿಸಬೇಕಾಗಿದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಇನ್ನು ಮುಂದೆ ಪ್ರತಿ ತಿಂಗಳ ೨೭ರಂದು ಅಂಚೆಗೆ ಹಾಕಲಾಗುತ್ತದೆ. (ಈ ಹಿಂದೆ ಪ್ರತಿ ತಿಂಗಳ ೧೩ರಂದು ಹಾಕಲಾಗುತ್ತಿತ್ತು.) ಅಂದರೆ ಏಪ್ರಿಲ್ ತಿಂಗಳ ಸಂಚಿಕೆ ಮಾರ್ಚ್ ೨೭ರಂದು ಅಂಚೆಗೆ ಹೋಗುತ್ತದೆ. ಹಾಗಾಗಿ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿಯೇ 'ಸಂವಾದ' ತಮಗೆ ತಲುಪುತ್ತದೆ.

ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ. ನಿಮ್ಮ ದೂರಿನ ಆಧಾರದ ಮೇಲೆ ಇಲ್ಲಿನ ಅಂಚೆ ಕಛೇರಿಯಲ್ಲಿ ನಾವು ವಿಚಾರಿಸಿ ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ.

ಸಾಮಾನ್ಯವಾಗಿ ಎಲ್ಲ ಚಂದಾದಾರರಿಗೂ ಸಕಾಲದಲ್ಲಿ ಪತ್ರಿಕೆ ಸಿಗುತ್ತಿದೆಯಾದರೂ ಕೆಲವರಿಗೆ ಕಾರಣಾಂತರದಿಂದ ಪತ್ರಿಕೆ ಕೈ ಸೇರುತ್ತಿಲ್ಲ. ಈ ಅನಾನುಕೂಲಕ್ಕೆ 'ಸಂವಾದ' ಬಳಗ ವಿಷಾದಿಸುತ್ತದೆ. ಚಂದಾದಾರರು ಪತ್ರಿಕೆ ಸಿಗದಿದ್ದಾಗ ಕೂಡಲೇ ಮೇಲೆ ನಾವು ಸೂಚಿಸಿರುವಂತೆ ಅಂಚೆ ಕಛೇರಿಗೆ ದೂರು ನೀಡುವ ಮೂಲಕ ಹಾಗೂ ಆ ಮಾಹಿತಿಯನ್ನು ನಮಗೆ ತಿಳಿಸುವ ಮೂಲಕ ಸಹಕರಿಸಬೇಕೆಂದು ವಿನಂತಿಸುತ್ತೇವೆ. ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕ

ವಾಸ್ತವ



ಕುವೆಂಪು ಹುಟ್ಟಿ ಬೆಳೆದ ಮಲೆನಾಡು ಅವರ ಕಾಲದಲ್ಲಿದ್ದಂತೆ ಈಗ ಇಲ್ಲ. ಪ್ರಾಕೃತಿಕವಾಗಿ ಅಲ್ಲಿ ಸಿರಿಸಮೃದ್ಧಿಯೇ ಇದ್ದರೂ ಸಾಮಾಜಿಕ, ಆರ್ಥಿಕ ಅಸಮಾನತೆ ಎದ್ದು ಕುಣಿಯುತ್ತಿದೆ. ಕುವೆಂಪು ಆಶಿಸಿದ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ಘೋಷ ವಾಕ್ಯಗಳು ಅವರದೇ ನೆಲದಲ್ಲಿ ನೆಲಕಚ್ಚಿವೆ. ದಟ್ಟ ದಾರಿದ್ರ್ಯದ ನಡುವೆ ನರಳುತ್ತಿರುವ ಅಲ್ಲಿನ ದೀನದಲಿತರ ಸ್ಥಿತಿಗತಿ ಹೃದಯ ವಿದ್ರಾವಕ.

○ರವಿಕುಮಾರ್ ಬಾಗಿ

ಕುವೆಂಪು ಮಲೆನಾಡಿನಲ್ಲಿ ಕ್ರೌರ್ಯದ ಕೇಕೆ!

ಕರ್ನಾಟಕದ ಕಾಶ್ಮೀರ ಎಂದೇ ಖ್ಯಾತಿ ಪಡೆದಿರುವ ಮಲೆನಾಡು ಪ್ರಕೃತಿ ಸೌಂದರ್ಯದಲ್ಲಿ ಎತ್ತಿದ ಕೈ. ಇದನ್ನು ಕಂಡ ಕವಿಗಳು, ಸೌಂದರ್ಯಾರಾಧಕರು ಸೌಂದರ್ಯಾನುಭೂತಿಯಲ್ಲಿ ಹುಚ್ಚೆದ್ದು ಕುಣಿಯುವರು. ರಸಕಾವ್ಯ ಗಂಗೆಯಲ್ಲಿ ತೇಲುವರು, ಮರುಳಾಗುವರು ಹಾಗೂ ಮರುಳುಗೊಳಿಸುವರು. ಈ ಕವಿಗಳು ಹೇಳಿದಂತೆ ಇಲ್ಲಿನ ನಿಸರ್ಗ ಎಲ್ಲರನ್ನೂ ಆಕರ್ಷಿಸುವುದರಲ್ಲಿ ಎರಡು ಮಾತಿಲ್ಲ. ಹಾಗೂ ಅದರ ಪ್ರತೀಕವೆಂಬಂತೆ ಇಲ್ಲಿನ ಮೇಲ್ವರ್ಗದವರ ಬದುಕು ಕಂಗೊಳಿಸುತ್ತಿದ್ದರೆ, ಇಲ್ಲಿನ ದೀನ ದುರ್ಬಲರ ಮತ್ತು ದಲಿತರ ಬದುಕು ಅಷ್ಟೇ ಕಂಗೆಟ್ಟಿದೆ. ಮಲೆನಾಡು ಪ್ರಕೃತಿಯಲ್ಲಿ ಎಷ್ಟು ಸುಂದರವೋ ಅಷ್ಟೆ ರಾಜಕೀಯವಾಗಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮಲಿನವಾಗಿದೆ. ಇಲ್ಲಿನ ಬೆಟ್ಟಗುಡ್ಡಗಳು ಹೇಗೆ ಹಸಿರನ್ನು ತಬ್ಬಿ ಕುಳಿತಿದ್ದಾವೋ ಅಷ್ಟೇ ದಟ್ಟವಾಗಿ ಜಾತೀಯತೆ ಮತ್ತು ಅಸಮಾನತೆಯನ್ನು ಆಪ್ತತೆಯಿಂದ ತಬ್ಬಿ ಕುಳಿತಿದ್ದಾರೆ ಇಲ್ಲಿನ ಜನ. ಪ್ರತಿಯೊಂದು ಹಂತದಲ್ಲೂ ಮೇಲು ವರ್ಗದವರ ಎದುರು ದಲಿತ ಮತ್ತು ಹಿಂದುಳಿದವರು ಚಕಾರವೆತ್ತುವಂತಿಲ್ಲ. ಇವರ ಬದುಕು ಹೀನಾಯವಾದ ಶೋಚನೀಯ ಪರಿಸ್ಥಿತಿ ತಲುಪಿದೆ . 'ಯಜಮಾನ್ಯ' ಪದ್ಧತಿ ಕೇಕೆ ಹಾಕುತ್ತಿದೆ.

'ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು ಎಂಬ ನವಯುಗವಾಣಿ ಘೋಷಿಸಿದೆ ಕೇಳಿ' ಎಂದು ಕುವೆಂಪು ಹೇಳಿರುವ ಈ ಮಾತು ಅವರು ನಿಂತ ತವರು ನೆಲದಲ್ಲೇ ಅಪವಾದವಾಗಿದೆ. ಎಲ್ಲಿ ನೋಡಿದರೂ ಜಾತೀಯತೆ, ಸ್ವಜಾತಿ ಪಕ್ಷಪಾತ, ದೌರ್ಜನ್ಯ, ದಬ್ಬಾಳಿಕೆ

ಮಲೆನಾಡಿನ ಶೋಷಣೆಯ ದುರಂತವೆಂದರೆ 'ಒಪ್ಪಿತ ಜೀತ ಪದ್ಧತಿ' ಇಲ್ಲಿ ಇನ್ನೂ ಸಹ ತಾಂಡವವಾಡುತ್ತಿದೆ. ಇದರ ಸ್ವರೂಪ ಹೇಗಿದೆ ಎಂದರೆ 'ಒಬ್ಬ ವ್ಯಕ್ತಿಗೆ ಒಂದು ಸಾರಿ ಮದುವೆಗೋ ಮುಂಜಿಗೋ ಹತ್ತು ಹದಿನೈದು ಸಾವಿರ ಹಣ ಕೊಟ್ಟರೆ ಅದು ತೀರುವ ತನಕ ಅವರ ಮನೆಯಲ್ಲೇ ದುಡಿಯುತ್ತಿರಬೇಕು. ಈ ಒಪ್ಪಿತ ಜೀತ ಪದ್ಧತಿಗೆ ದಿನವೊಂದಕ್ಕೆ ಕೂಲಿ ಕೇವಲ ೨೦ ರಿಂದ ೨೫ ರೂ ಮಾತ್ರ. ನಾನು 'ನೀವು ಮದುವೆ ಮಾಡಲು ಇಷ್ಟು ಹಣ ಸಾಕಾಗುತ್ತಿದೆಯೆ?' ಎಂದು ಕೇಳಿದರೆ 'ಸಾಕಾಗುತ್ತದೆ' ಎನ್ನುತ್ತಾರೆ. ಇವತ್ತಿನ ದಿನಗಳಲ್ಲಿ ಮೇಲ್ಜಾತಿಯ ಒಬ್ಬ ವ್ಯಕ್ತಿ ಅದೇ ಮದುವೆ ಮಾಡುವಾಗ ಇಷ್ಟು ಹಣ ಬರೀ ಹೂವಿನ ಅಲಂಕಾರಕ್ಕೆ ಸಾಲುವುದಿಲ್ಲ. ಅಂದ ಮೇಲೆ ಇವರ ಆರ್ಥಿಕ ಮಟ್ಟವನ್ನು ಅವರ ಜೀವನ ಶೈಲಿಯನ್ನು ನೀವೇ ನಿರ್ಧರಿಸಿ.

ಮೇಲು ವರ್ಗಕ್ಕೆ ಸೇರಿದ ಶ್ರೀಮಂತರು ಇಲ್ಲಿನ ಚಿನ್ನದ ಬೆಳೆಗಳಾದ ವೆನಿಲ್ಲಾ, ಅಡಿಕೆ, ಭತ್ತ ಮುಂತಾದ ಬೆಳೆಗಳಿಂದ ತಮ್ಮ ಆರ್ಥಿಕತೆಯನ್ನು ಭದ್ರಪಡಿಸಿಕೊಂಡು ಭವ್ಯವಾದ ಮನೆಗಳಲ್ಲಿ ಹಾಯಾಗಿ ಬದುಕು ನೂಕುವವರು ಅದೆಷ್ಟೋ ಮಂದಿ ಇದ್ದಾರೆ. ಕುವೆಂಪುವಿನ 'ಕಲ್ಕಿ' ಇಲ್ಲಿ ಅಮಲೇರಿದ ಕುದುರೆಯಂತೆ ಬಡವರ ಮೇಲೆ ಸವಾರಿಮಾಡುತ್ತಿದೆ. ಹೀಗಿರುವಾಗ ಇವರ ದಬ್ಬಾಳಿಕೆಯನ್ನು ಪ್ರಶ್ನಿಸುವವರಾರು? ದಿನಬೆಳಗಾದರೆ ಅವರ ತೋಟಗಳಿಗೆ ಕೂಲಿಗೆ ಹೋಗಬೇಕು, ಅವರಿಂದಲೇ ಜೀವನದ ಬಂಡಿ ಸಾಗಬೇಕು. ಇಲ್ಲಿ ಕೆಳವರ್ಗದ ಯಾವ ವ್ಯಕ್ತಿಯೂ ಜಮೀನು ಹೊಂದಿಲ್ಲ. ಹೊಂದಿದ್ದರೂ ಅಪರೂಪ. ಅದೂ ಅಲ್ಪ ಸ್ವಲ್ಪ. ದಲಿತರಂತೂ ಇದಕ್ಕೆ ಸಂಬಂಧ ಪಡದ ವ್ಯಕ್ತಿಗಳಂತಿದ್ದಾರೆ. ಮೇಲ್ವರ್ಗದ ದೌರ್ಜನ್ಯದ ಪ್ರತೀಕವೆಂಬಂತೆ ಇತ್ತೀಚೆಗೆ ನಡೆದ 'ವೆನಿಲ್ಲಾ' ಘಟನೆಯನ್ನೇ ತೆಗೆದುಕೊಳ್ಳಿ, ನಾಯಕ ಜನಾಂಗಕ್ಕೆ ಸೇರಿದ ಗುರುಮೂರ್ತಿ ಮತ್ತವನ ಕುಟುಂಬದವರು ವೆನಿಲ್ಲಾ ಕದ್ದಿಲ್ಲದಿದ್ದರೂ ಕದ್ದಿದ್ದಾರೆ ಎಂದು ಆರೋಪಿಸಿ ಆ ಕುಟುಂಬದ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೆಸಗಿ ಇಡೀ ಕುಟುಂಬವನ್ನೇ ಸರ್ವನಾಶ ಮಾಡಿದರು. ಗುರುಮೂರ್ತಿ ಕುಟುಂಬದವರು ಈ ನೀಚರ ನಡುವೆ ಮೂಕ ಪ್ರಾಣಿಯೂ ಸಹ ಬದುಕಬಾರದು ಎಂದು ಇದ್ದ ಒಂದು ಎಮ್ಮೆಗೆ ವಿಷ ಹಾಕಿ ಆಮೇಲೆ ಎಲ್ಲರೂ ಸೇವಿಸಿ ಸತ್ತಿದ್ದಾರೆ. ಇಷ್ಟು ಸಾಲದೆ ಅವರ ದೌರ್ಜನ್ಯದ ಮಟ್ಟವನ್ನು ತಿಳಿಯಲು.

ಇದಿಷ್ಟೇ ಅಲ್ಲದೆ ಸರ್ಕಾರ ಜಾರಿಗೆ ತಂದಿರುವ ಅಕ್ಷರ ದಾಸೋಹ ಕಾರ್ಯದಲ್ಲೂ ಈ ಜಾತಿ ಪದ್ಧತಿಯ ಹೆಮ್ಮಾರಿ ತನ್ನ ರುದ್ರನರ್ತನ ನಡೆಸುತ್ತಿದ್ದಾಳೆ. ಆದರೆ ಅದು 'ಬೂದಿ ಮುಚ್ಚಿದ ಕೆಂಡ' ದಂತಿದೆ ಅಷ್ಟೆ. ಬಹಳಷ್ಟು ಶ್ರೀಮಂತರ ಮಕ್ಕಳು ಮಧ್ಯಾಹ್ನದ ಊಟವನ್ನು ಶಾಲೆಯಲ್ಲಿ ಮಾಡದೆ ಮನೆಗಳಿಗೆ ಹೋಗುತ್ತವೆ. ಕೇಳಿದರೆ ನಮ್ಮ ಅಪ್ಪ ಅಮ್ಮ ಶಾಲೆಯಲ್ಲಿ ಊಟ ಮಾಡಬೇಡಿ ಎಂದಿದ್ದಾರೆ ಎನ್ನುತ್ತವೆ. ಈ ಅಕ್ಷರ ದಾಸೋಹ ಕಾರ್ಯಕ್ರಮ ಮಕ್ಕಳಲ್ಲಿ ಸಹಪಂಕ್ತಿ ಭೋಜನದ ಮೂಲಕ ಚಿಕ್ಕಂದಿನಲ್ಲಿಯೇ ಜಾತ್ಯತೀತ ಮನೋಭಾವ ಬೆಳೆಸಲು ಉತ್ತಮವಾದ ಅಡಿಪಾಯ ಎಂದು ಭಾವಿಸಿರುವ ಈ ಹೊತ್ತಿನಲ್ಲಿ ಇಂತಹ ಘಟನೆಗಳು ಮಕ್ಕಳ ಮೇಲೆ ಪರಿಣಾಮ ಬೀರುವುದಿಲ್ಲವೆ? ಅದರಲ್ಲೂ ಸರ್ಕಾರ ಈ ಬಿಸಿಯೂಟ ಯೋಜನೆಯನ್ನು ಖಾಸಗಿಯವರಿಗೆ ವಹಿಸುವ ತರಾತುರಿಯಲ್ಲಿ ನಿಂತಿದೆ. ಹಾಗೇನಾದರೂ ಖಾಸಗಿಯವರಿಗೆ ನೀಡಿದರೆ ಈಗ ನಡೆಯುತ್ತಿರುವ ಅಸ್ಪೃಶ್ಯತೆ ಮತ್ತಷ್ಟು ಗರಿಗೆದರುವುದರಲ್ಲಿ ಯಾವುದೇ ಸಂಶಯವಿಲ್ಲ. ಏನೂ ಅರಿಯದ ಮುಗ್ಧ ಕಂದಮ್ಮಗಳ

ಕೆಳವರ್ಗದವರನ್ನು ಹುರಿದು ಮುಕ್ಕುತ್ತಿರುವುದು ಒಂದು ಕಡೆಯಾದರೆ, ವಿದ್ಯೆ, ಆಸ್ತಿ ಹಾಗೂ ಅಧಿಕಾರದಿಂದ ವಂಚಿತರಾಗಿ ಕಿತ್ತು ತಿನ್ನುವ ಬಡತನದಲ್ಲಿ ಬೇಯುತ್ತ ಮೂಗುದಾರ ಹಾಕಿದ ಎತ್ತುಗಳಂತೆ ದುಡಿಯುತ್ತಿರುವ ಜನ ಸಮುದಾಯ ಒಂದು ಕಡೆ. ಬೆಳಿಗ್ಗೆಯಿಂದ ಸಂಜೆಯ ತನಕ ಎಷ್ಟು ದುಡಿದರೂ ಕೂಲಿ ಕೇವಲ ೫೦ ರೂ ಮಾತ್ರ. ಇನ್ನು ಇವರಿಗೆ ಓದು ಎಲ್ಲಿಂದ ಬರಬೇಕು? ಹೆಚ್ಚೆಂದರೆ ಎಸ್.ಎಸ್.ಎಲ್.ಸಿ. ಮಾತ್ರ. ನಾನು ಸುಮಾರು ೫೦ ಊರುಗಳಲ್ಲಿ ಸುತ್ತಿದ್ದೇನೆ. ಅದರಲ್ಲಿ ಒಬ್ಬನಾದರೂ ಕೆಳವರ್ಗದ ದಲಿತ ಪದವೀಧರ ಸಿಗಲಿಲ್ಲ. ಕೇಳಿದರೆ 'ಊಟಕ್ಕೆ ಹೊಂಚುವುದೇ ಕಷ್ಟ ಸ್ವಾಮಿ, ಇನ್ನು ಮಕ್ಕಳನ್ನು ಓದಿಸುವುದೆಲ್ಲಿಂದ ಬಂತು' ಎನ್ನುತ್ತಾರೆ. ಹೀಗಿರುವ ಈ ನಾಡಿನಲ್ಲಿ ಕೆಳವರ್ಗದವರ ಪಾಲಿಗೆ ಉನ್ನತ ಶಿಕ್ಷಣವೆಂಬುದು ಗಗನ ಕುಸುಮವಾಗಿದೆ. ಕುವೆಂಪು ನಿಂತ ನೆಲದಲ್ಲಿಯೇ ಇವರ ಸಂದೇಶ. ಜನಸಮುದಾಯವನ್ನು ಮುಟ್ಟದೆ ಇರುವುದು ದುರದೃಷ್ಟದ ಸಂಗತಿ ಎನಿಸುತ್ತದೆ.

ಇನ್ನು ಇಲ್ಲಿರುವ ಧಾರ್ಮಿಕ ಅಂಧಶ್ರದ್ಧೆ ಮೂಢನಂಬಿಕೆ, ಕಂದಾಚಾರಗಳನ್ನಂತೂ ಹೇಳುವ ಹಾಗಿಲ್ಲ. 'ಗುಡಿ, ಚರ್ಚು, ಮಸೀದಿಗಳ ಬಿಟ್ಟು ಹೊರಬನ್ನಿ' ಎನ್ನುವ ಕುವೆಂಪು ಸಂದೇಶವನ್ನು ಗಾಳಿಗೆ ತೂರಿ ಕೇರಿಗೊಂದೊಂದು ಗುಡಿ ಕಟ್ಟುತ್ತಿದ್ದಾರೆ. ಶೂದ್ರ ವರ್ಗಕ್ಕೆ ಸೇರಿದ ಮೇಲು ಜಾತಿಯವರು ಒಂದು ಕಡೆ ಪುರೋಹಿತಶಾಹಿಯನ್ನು ತೆಗಳುತ್ತಿದ್ದರೆ ಇಲ್ಲಿ ಅದಕ್ಕೆ ಅಪವಾದವೆಂಬಂತೆ ಪೋಷಿಸಿಕೊಂಡು ಬರುತ್ತಿರುವುದನ್ನು ನೋಡಿದರೆ ಇವರು ಮುಂದೊಂದು ದಿನ ತಮ್ಮ ತನವನ್ನೇ ಬಿಟ್ಟು ಬ್ರಾಹ್ಮಣೀಕರಣಗೊಳ್ಳುವಂತೆ ಕಾಣುತ್ತದೆ. ಶೂದ್ರರಿಗೆ ಸಾಂಸ್ಕೃತಿಕವಾಗಿ ಆತ್ಮ ಅಥವಾ ಅಸ್ತಿತ್ವವೇ ಇಲ್ಲವೆ?

ಮನಸ್ಸು ಅರಳಿ ಕಂಗೊಳಿಸುವ ಕಾಲದಲ್ಲಿ ಕಲ್ಲೊಡೆದು ಕಮರಿಸಿದಂತಾಗುವುದಿಲ್ಲವೆ?

ಇಲ್ಲಿಯ ಬಡವರು ಮತ್ತು ಶ್ರೀಮತರ ನಡುವಿನ ಅಂತರವಂತೂ ಅಜಗಜಾಂತರ. ಅವರ ಆರ್ಥಿಕ ಮಟ್ಟ ಹೆಚ್ಚಿದಂತೆ ವ್ಯಕ್ತಿತ್ವ ಕುಗ್ಗಿ ದರ್ಪ, ದೌರ್ಜನ್ಯ ಇಮ್ಮಡಿಸಿದೆ. ಇದು ಯಾವ ಘಟ್ಟ ತಲುಪಿದೆ ಎಂದರೆ ಕೆಳವರ್ಗದ ಜನಪದ ಕಲೆಗಳಾದ ಕೋಲಾಟ, ಡೊಳ್ಳುಕುಣಿತ, ತಮಟೆ, ಗೊರವರಕುಣಿತ, ಗೊಮಟೆ ಪದ, ಮುಂತಾದವುಗಳ ಬಗ್ಗೆ ಅವರಿಗೇ ಕೀಳರಿಮೆ ಮೂಡಿಸುವ ಮೂಲಕ ಒಂದು ರೀತಿಯ ಸಾಂಸ್ಕೃತಿಕ ರಾಜಕಾರಣವೂ ಸಹ ನಡೆಯುತ್ತಿದೆ.

ನಾಕಂಡಂತೆ ಹೇಳುವುದಾದರೆ, ಈ ದೇಶದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಬ್ರಿಟೀಷರಿದ್ದಾರೆ ಎಂದರೆ ಅದು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಾತ್ರ. ಅಷ್ಟರ ಮಟ್ಟಿಗೆ ಇಲ್ಲಿಯ ಮೇಲ್ವರ್ಗದವರ ದರ್ಪ, ದೌರ್ಜನ್ಯ, ದಬ್ಬಾಳಿಕೆ, ತಳ ಸಮುದಾಯಗಳ ಮೇಲೆ ನಡೆಯುತ್ತಿದೆ.

ನಾನು ಇದೆಲ್ಲವನ್ನು ಇಷ್ಟು ಮುಕ್ತವಾಗಿ ಹೇಳಲು ಕಾರಣ ವೆಂದರೆ 'ಬೀದಿ ನಾಟಕ' ಕಾರ್ಯಕ್ರಮದ ಮೂಲಕ ನಾನು ಒಬ್ಬ ಸಾಮಾನ್ಯ Street Player ಆಗಿ ಇಲ್ಲಿನ ಒಂದೊಂದು ಊರಿನ, ಕೇರಿ ಕೇರಿಯ ಮನೆ ಮನೆಗಳನ್ನು ಸುತ್ತಿದ್ದೇನೆ ಅದರ ಅನುಭವದ ಹಿನ್ನೆಲೆಯ ಗ್ರಹಿಕೆ ಈ ವಿಚಾರಗಳ ತಳವಾಗಿದೆ.

ಕುವೆಂಪುರವರ ಕಾದಂಬರಿಗಳನ್ನು ಓದುತ್ತಿದ್ದರೆ ಮಲೆನಾಡಿನ ಬಗ್ಗೆ ಅಪಾರ ಹೆಮ್ಮೆ ಹಾಗೂ ನೋಡಬೇಕೆಂಬ ಹಂಬಲ, ಕುತೂಹಲ ಉಂಟಾಗುವುದು ಸಹಜ. ಇವರು ತಮ್ಮ ಕಾದಂಬರಿಯಲ್ಲಿ ಮೇಲ್ಜಾತಿಯ ದರ್ಪ,ಕ್ರೌರ್ಯವನ್ನು ಸಮರ್ಥವಾಗಿ ಚಿತ್ರಿಸಿರುವುದಕ್ಕಿಂತಲೂ ಇಲ್ಲಿನ ಬದುಕು ನಿಕೃಷ್ಟವಾಗಿದೆ ಎನಿಸುತ್ತದೆ. ಏಕೆಂದರೆ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ನಾಯಿಗುತ್ತಿಯ ಚಿತ್ರಣ ಕ್ಕಿಂತಲೂ ಇಲ್ಲಿರುವ ನೈಜ ಬದುಕು ಮತ್ತಷ್ಟು ಹದಗೆಟ್ಟಿದೆ.

ಇನ್ನು ರಾಜಕೀಯವಾಗಿ ನೋಡುವುದಾದರೆ ಈ ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯ ಎಲ್ಲರಿಗೂ ಸಿಕ್ಕಿದೆ ಎಂದು ನಮ್ಮ ನಾಯಕರು ಗಂಟಲು ಹರಿದುಕೊಳ್ಳುತ್ತಾರೆ. ಇದು ಇಲ್ಲಿಯ ಪರಿಸ್ಥಿತಿಗೆ ತದ್ವಿರುದ್ಧವಾಗಿದೆ. ಸಮಾನತೆ ಬಯಸಿದ ಕುವೆಂಪುವಿನ ಈ ನಾಡಿನಲ್ಲಿ ಅದೂ ಸಹ ಉಳ್ಳವರ ಸ್ವತ್ತಾಗಿರುವುದು ಖೇದಕರ ಸಂಗತಿ.

ಇಲ್ಲಿಯ ಗ್ರಾಮ ಪಂಚಾಯಿತ್ಗಳಲ್ಲಿ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಅಧಿಕಾರ ದಲ್ಲಿದ್ದರೂ ಕೇವಲ ನಾಮ ಮಾತ್ರವಾಗಿದ್ದಾರೆ. 'ಆನೆ ನಡೆದದ್ದೇ ದಾರಿ' ಎನ್ನುವಂತೆ ಉಳ್ಳವರ ಮಾತುಗಳೇ ಇವರ ನಿರ್ಧಾರಗಳಾಗಿವೆ. ಎಷ್ಟೋ ಜನರಿಗೆ ಇನ್ನೂ ಸರಿಯಾದ ಮನೆಗಳಿಲ್ಲ, ಕೆಲವರಿಗೆ ಇದ್ದರೂ ವಿದ್ಯುತ್ ದೀಪಗಳಿಲ್ಲ. ಹೀಗೆ ಶೋಷಣೆಯ ಕೂಪದಲ್ಲಿ ಬದುಕುತ್ತಿದ್ದಾರೆ. ಇದು ಸಂಪತ್ತು ಮತ್ತು ಅಧಿಕಾರಗಳ ವಿಕೇಂದ್ರಿಕರಣವೆ?

ದೇವರು, ಧರ್ಮ, ಜಾತಿ ಹೀಗೆ ಹಲವಾರು ಮೂಢ ನಂಬಿಕೆಯ ಕೂಪದಲ್ಲಿ ಬಿದ್ದಿರುವವರನ್ನು ಕುರಿತು ಕುವೆಂಪು. 'ನೂರು ದೇವರ ನೂಕಾಚೆ ದೂರ' ಎಂದು ಒಂದು ಕಡೆ ಅಂದರೆ ಆತನು ಸಾಗುವ ದಿಕ್ಕನ್ನು ಮತ್ತು ಪಡೆಯುವ ಮುಕ್ತಿಯನ್ನು ಕುರಿತು 'ಓ ನನ್ನ ಚೇತನ ಆಗುನೀ ಅನಿಕೇತನ' ಎಂದಿದ್ದಾರೆ. ಮನುಷ್ಯನ ಅಮಾನವೀಯ ಪ್ರವೃತ್ತಿಯನ್ನು ಕಂಡು 'ಸಾಕಿನ್ನು ಸೇರಿರೈ ಮನುಜ ಮತಕ್ಕೆ ಓ ಬನ್ನಿ ಸೋದರರೆ ವಿಶ್ವಪಥಕ್ಕೆ' ಎಂದು ಇವುಗಳೆಲ್ಲವುಗಳ ಮೂಲಕ ವಿಶ್ವ ಮಾನವ ಸಂದೇಶ ಸಾರಿದ ಈ ಕವಿಯ ಮಾತುಗಳು ಇಂದಿಗೂ ಪಾಲಿಸುವವರಿಲ್ಲದೆ ಕೇವಲ ಪುಸ್ತಕದಲ್ಲಿ ಮಾತ್ರ ಬೆಚ್ಚಗೆ ಕುಳಿತಿವೆ.

ಬಹುಶಃ ಇದು ಇಲ್ಲಿರುವ ಪ್ರಕೃತಿ ಮಾತೆಗೆ ಮಾತ್ರ ಕೇಳಿಸಿದೆ. ಆದ್ದರಿಂದಲೇ ಅದು ಯಾವುದೇ ಮೀನಮೇಷ ಎಣಿಸದೆ ಸಮೃದ್ಧಿಯಾಗಿದೆ.

ಆದರೆ ಆ ನಿಸರ್ಗದಲ್ಲಿ ವಾಸಿಸುವವರಿಗೆ ಮಾತ್ರ ಅದು ಇನ್ನೂ ಕೇಳಿಸುತ್ತಿಲ್ಲ. ಕೂಗಿ ಎಚ್ಚರಿಸಿದರೂ ಅವರ ಕಿವಿಗಳು ಮರಗಟ್ಟಿವೆ. ಇದನ್ನೂ ನೋಡಿದರೆ ಇದು ಎಂಥಾ ದೇಶವಯ್ಯ ಎನಿಸುತ್ತದೆ. □

ತೆಂಡೂಲ್ಕರನ ಬ್ಯಾಟೂ... ಗಾಂಧಿಯ ಪುಟಗೋಸಿಯೂ...

ಯಾರು ಬಂದದ್ದು ವಜ್ರ ವೈಢೂರ್ಯಗಳ ರಥದಲ್ಲಿ;
ಮೆರೆಯುತ್ತಾ
ಜೀವಂತ ಸೂರ್ಯನನ್ನು ನಾಚಿಸಿ ರಾಜ ಬೀದಿಗಳಲ್ಲಿ
ಜಾಜಿ, ಸಂಪಿಗೆ, ಮಲ್ಲಿಗೆ, ಗುಲಾಬಿಗಳ ಮೈ ಚೆಲ್ಲಿ
ಇವರು ನಡೆದಲ್ಲೆಲ್ಲ ಹಿಮಾಲಯದೆತ್ತರಕೆ ನೆಗೆಯುವುದು
ಭಾರತದ ಬಂಗಾಳ ಕೊಲ್ಲಿ!
'ಬರ' ದಿಂದ, 'ಹಸಿವಿ'ನಿಂದ ಯಾರೂ ಸತ್ತಿಲ್ಲ.....ಬದುಕಿರುವ
ಭಾರತಾಂಬೆಯ ಮೇಲಾಣೆ, ನಮ್ಮ ಬಣ್ಣದ
ಕಂಪ್ಯೂಟರ್‌ಗಳಲ್ಲಿರುವ ಅಂಕಿ ಅಂಶಗಳ ಮೇಲಾಣೆ
ಉಗ್ರಾಣಗಳಲ್ಲಿ ಕೊಳೆಯುತ್ತಿರುವ ರಾಶಿ ರಾಶಿ ಅಕ್ಕಿ-ಗೋಧಿಗಳ
ಮೇಲಾಣೆ; ತಿಂದು ತೇಗುತ್ತಿರುವ ಕೊಬ್ಬಿದ ಇಲಿ-ಹೆಗ್ಗಣಗಳ
ಮೇಲಾಣೆ

ಬಂಬಾಯಿಯ ಸ್ಲಮ್ಮಿನ ಹುಡುಗರ ಬಾಯಲ್ಲಿ ಅರೆ ಬೆಂದ
ಬಟಾಣಿ ಕಾಳು; ಬರಿ ಮೈ ತುಂಬಿರುವ 'ಹಚ್ಚೆ'ಗಳಲ್ಲಿ
ಕಿಲಕಿಲ ನಗುತ್ತಿದ್ದಾಳೆ ಐಶ್ವರ್ಯ ರೈ
ಫುಟ್‌ಪಾತ್ ಅಂಗಡಿಗಳಲ್ಲಿ ಬಿಕರಿಯಾಗುತ್ತಿವೆ ಬಿಸಿ-
ಬಿಸಿ ಆಲೂ ಬಜಿ; ಬದುಕಿಲ್ಲಿ ನಿರಂತರ ಗಜಿಬಿಜಿ
ಹೆಪ್ಪುಗಟ್ಟಿದ ಜೊಲ್ಲಿಗೆ ಇಲಿ, ಜಿರಲೆಗಳು ಥಕ್ಕಥೈ
ಸೈ! ತೆಂಡೂಲ್ಕರನ ಮಾಯಕಾರ ಬ್ಯಾಟು
ಲೂಟಿ ಮಾಡಿದೆ ಕೋಟಿ ಕೋಟಿ ಡಾಲರ್-ನೋಟು
ತೆರೆದುಕೊಂಡಿದೆ ಉದ್ದಗಲಕ್ಕೂ ಇಂಡಿಯಾ ಗೇಟು
'ಮೇರಾ ಭಾರತ್ ಮಹಾನ್...' ಛಾನ್ಸು ಸಿಕ್ಕಿ ತಲೆ ಬಿಚ್ಚಿದರೆ
ಬುರುಡೆ ತುಂಬಾ ಕೋಕಾ ಪೆಪ್ಸಿಗಳ ದರ್ಬಾರು
ತುಂಬುವುದುಂಟು ಬಡವರು ಸಂಡಾಸಿಗೆ ಅದರಲ್ಲೇ ನೀರು!
ಆರತಿಯೆತ್ತಿರೆ ಇವಗೆ...ಭಾರತ ಮಾತೆಯ
ಸುಪುತ್ರನಿಗೆ
ಸಿನಿಮಾದಲ್ಲಿನ ದೇವದಾಸ ರೆಡಿಯಾಗಿದ್ದಾನೆ ವಿದೇಶಕ್ಕೆ
ಹಾರಲು
ಸಿಕ್ಕಿದರೆ ವೀಸ
ಮುನಿದಿದ್ದಾನೆ ಮಹಾನುಭಾವ ವರುಣ
ನಗುತ್ತಿವೆ ಪ್ರೇತ ನಗರಗಳು ಝಗಮಗಿಸುವ ಅಲಂಡಿ
ದೀಪಗಳ ಬೆಳಕಿನಲ್ಲಿ
ಹೆಣಗಳ ಕೈಗಳಲ್ಲಿ ಅಮೃತ ಕಲಶಗಳು
ಉರಿದು ಕರಕಲಾಗುತ್ತಿವೆ ದೇಶ ಭಕ್ತರ ಲಿವರುಗಳು
ಹರಾಜಿಗಿಟ್ಟಿದ್ದೇವೆ ಬನ್ನಿ
ಕೋಟಿ ಕೋಟಿ ಬಣ್ಣದ ಕನಸುಗಳ...
ಜೊತೆಗೆ ಗಾಂಧಿಯ ಪುಟಗೋಸಿ
ನೇಣು ಹಾಕಿಕೊಳ್ಳಲು ಇರುವುದಿಲ್ಲ ಫಾಸಿ.

○ಕೇಶವರೆಡ್ಡಿ ಹಂದ್ರಾಳ

'ಸಂವಾದ' ವಾರ್ಷಿಕ ವಿಶೇಷಾಂಕವನ್ನು ಪ್ರೊ. ಎಲ್. ಬಸವರಾಜು ಬಿಡುಗಡೆ ಮಾಡಿದರು. ಪ್ರೊ. ದೇಜಗೌ, ಎವಿಆರ್‌ಸಿ ನಿರ್ದೇಶಕಿ ಡಾ. ಎನ್. ಉಷಾರಾಣಿ, ಪತ್ರಕರ್ತ ಅಗ್ನಿ ಶ್ರೀಧರ್ ಮತ್ತು ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಷಣ್ ಭಾಗವಹಿಸಿದ್ದರು.

ವಿಚಾರ ಸಂಕಿರಣ

'ಸಂವಾದ' ಪತ್ರಿಕೆಗೆ ಒಂದು ವರ್ಷ ತುಂಬಿದ ನೆನಪಿಗಾಗಿ ಕಳೆದ ಫೆಬ್ರವರಿ ೧ರಂದು ಮೈಸೂರು ವಿಶ್ವವಿದ್ಯಾಲಯ ಪತ್ರಿಕೋದ್ಯಮ ವಿಭಾಗ ಮತ್ತು ಮೈಸೂರಿನ 'ಸಂವಾದ' ಓದುಗರ ಬಳಗ ಜಂಟಿಯಾಗಿ 'ವಿಚಾರ ಸಂಕಿರಣ'ವನ್ನು ಏರ್ಪಡಿಸಿದ್ದವು. ಮೈಸೂರಿನ ಎಲ್ಲ ಪ್ರಗತಿಪರ ಚಿಂತಕರು, ಸಾಹಿತಿಗಳು, ಕಲಾವಿದರು, ಪತ್ರಕರ್ತರು ಭಾಗವಹಿಸಿದ್ದ ಈ ವಿಚಾರ ಸಂಕಿರಣದಲ್ಲಿ ಇಡೀ ದಿನ ಸಭಿಕರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಸಂಕಿರಣದಲ್ಲಿ ವಿವಿಧ ಚಿಂತಕರು ಮಂಡಿಸಿದ ಅಭಿಪ್ರಾಯಗಳ ಸಾರವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

○ ಮಂಜುನಾಥ್ ಗೀತಾ

ವಾಗ್ವಾದ, ಸವಾಲುಗಳ 'ಸಂವಾದ'

ಆರಂಭಿಕ ಹಂತದಲ್ಲಿ ಸಮಾಜಮುಖಿಯಾದ ಒಂದು ಆದರ್ಶವಾಗಿದ್ದ ಪ್ರತಿಕೋದ್ಯಮ ಇಂದು ಮಾರುಕಟ್ಟೆಯ ಮಾಧ್ಯಮವಾಗಿ ಸರಕು ಸಂಸ್ಕೃತಿಯ ಉದ್ಯಮವಾಗಿ ಪರಿವರ್ತನೆಗೊಂಡಿದೆ. ಸಾಮಾಜಿಕ ಅಸಮಾನತೆ, ವೈಷಮ್ಯಗಳ ವಿರುದ್ಧ ಜನಪರ ಕಾಳಜಿಯೊಂದಿಗೆ ವ್ಯವಹರಿಸಬೇಕಿದ್ದ ಮುಖ್ಯವಾಹಿನಿಯ ಪ್ರತಿಕೋದ್ಯಮ ಕೇವಲ ಲಾಭಗಳಿಕೆಯ ಸಾಧನವಾಗಿ ಸಮಾಜದೊಳಗಿದ್ದೂ ಸಮಾಜ ವಿಮುಖಿಯಾದಂತಿದೆ.

ಇಂತಹ ಪರಿಸ್ಥಿತಿಯಲ್ಲಿ ಜನಪರ ಧೋರಣೆಗಳನ್ನಿಟ್ಟುಕೊಂಡು ಹೊರಟ ಪರ್ಯಾಯ ಪತ್ರಿಕೋದ್ಯಮ ಮುಖ್ಯ ವಾಹಿನಿ ಪತ್ರಿಕೋದ್ಯಮದ ಭರದೊಳಗೆ ಮೂಲೆ ಗುಂಪಾಗುತ್ತಿದೆ. ಈ ದಿಸೆಯಲ್ಲಿ 'ಸಂವಾದ' ದಂತಹ ಪತ್ರಿಕೆಗಳು ಪರ್ಯಾಯ ಪತ್ರಿಕಾ ಮಾಧ್ಯಮವಾಗಿ ಯಾವ ಮಟ್ಟದಲ್ಲಿ ಯಶಸ್ವಿಯಾಗಬಹುದು ಎಂಬುದು 'ಸಂವಾದ' ಓದುಗರ ಬಳಗ ಮತ್ತು ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗ ಜಂಟಿಯಾಗಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ವ್ಯಕ್ತವಾದ ಅಭಿಪ್ರಾಯ.

ಇಂತಹದೊಂದು ಚರ್ಚೆಗೆ ಪೂರಕವೆಂಬಂತೆ ಸಂಕಿರಣದಲ್ಲಿ 'ಸಂವಾದ'ದ ಒಲವು ನಿಲುವು ಕುರಿತು ವಿಚಾರ ಮಂಡಿಸಿದ ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಷಣ ವಿಷಾದದಿಂದಲೇ ಹೇಳಿದ್ದು ಹೀಗೆ: ಕಳೆದ ೨೫-೩೦ ವರ್ಷಗಳ ಹಿಂದೆ ಮಾನವ, ಆಂದೋಲನ, ಪಂಚಮ ಪತ್ರಿಕೆಗಳ ಮೂಲಕ ನಡೆಯುತ್ತಿದ್ದ ವಾಗ್ವಾದಗಳೇ, ಅದೇ ಪ್ರಶ್ನೆಗಳೆ 'ಸಂವಾದ'ದಲ್ಲಿ ಸ್ವಲ್ಪ ಬೇರೆ ಪರಿಭಾಷೆಯಲ್ಲಿ ಹೊರಡುತ್ತಿವೆಯೇ ಹೊರತು ನಮ್ಮ ಉದ್ದೇಶಗಳು ಹೊಸ ಸವಾಲುಗಳಿಗೆ ತಕ್ಕಂತೆ ಬದಲಾಗುತ್ತಿಲ್ಲವೇನೋ.

ಅಷ್ಟೆಲ್ಲ ವಾಗ್ವಾದಗಳಿಗೆ ಕಾರಣವಾಗಿದ್ದಂತಹ 'ಪಂಚಮ'ವಾಗಲೀ, 'ಮಾನವ'ವಾಗಲೀ ಬಹುಕಾಲ ಉಳಿಯಲಿಲ್ಲ. ಅಂತಹದೇ ಆಶಯಗಳನ್ನು ಇಟ್ಟುಕೊಂಡಿರುವ 'ಸಂವಾದ' ಒಂದು ವರ್ಷದ ಕಾಲ ನಿರಂತರವಾಗಿ ಹಾಗೂ ಯಶಸ್ವಿಯಾಗಿ ನಡೆದುಕೊಂಡು ಬಂದಿರುವುದಕ್ಕೆ ಅವರು ಕುತೂಹಲದೊಂದಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಈ ಹಿಂದೆ 'ಪ್ರಜಾವಾಣಿ' ಯಂತಹ ಮುಖ್ಯವಾಹಿನಿ ಪತ್ರಿಕೋದ್ಯಮದ ಪತ್ರಿಕೆಯಲ್ಲೂ ಕೆಲಸ ಮಾಡಿದ್ದ ಅನುಭವದ 'ಸಂವಾದ'ದ ಸಂಪಾದಕ ಇಂದೂಧರ ಹೊನ್ನಾಪುರ ಅವರ ಪ್ರಾಸ್ತವಿಕ ಮಾತುಗಳಲ್ಲಿ ಮುಖ್ಯವಾಹಿನಿಯ ಪತ್ರಿಕೆಗಳು ಮಾರುಕಟ್ಟೆಯ ಸರಕುಗಳಲ್ಲೊಂದಾಗಿ, ಗ್ರಾಹಕ ಸಂಸ್ಕೃತಿಯ ಅಂಗವಾಗಿ, ಪತ್ರಕರ್ತರು ಮಾರಾಟ ಪ್ರತಿನಿಧಿಗಳ ಮಟ್ಟಕ್ಕೆ ಇಳಿದಿರುವುದರ ಬಗ್ಗೆ ತೀವ್ರ ಅಸಮಾಧಾನವಿತ್ತು.

ದೊಡ್ಡ ದೊಡ್ಡ ಪತ್ರಿಕಾಲಯಗಳಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಒಬ್ಬ ಪ್ರಮುಖ ವರದಿಗಾರ ಅಥವಾ ಮುಖ್ಯ ಉಪಸಂಪಾದಕ ಕೆಲಸ ಬಿಟ್ಟು ಹೋಗುತ್ತಾನೆಂದರೆ ಪತ್ರಿಕೆಯ ಮಾಲೀಕ ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ ಓರ್ವ ಜಾಹೀರಾತು ಪ್ರತಿನಿಧಿ ಕೆಲಸ ಬಿಟ್ಟು ಹೋಗುತ್ತಾನೆಂದರೆ ಆತನ ಜಂಘಾಬಲವೇ ಉಡುಗಿ ಹೋಗುತ್ತದೆ. ಮಾಲೀಕನ ಮರ್ಜಿಗನುಗುಣವಾಗಿ ಆತ ಅನಿವಾರ್ಯವಾಗಿ ಮಾರಾಟ ಪ್ರತಿನಿಧಿಯ ಮಟ್ಟಕ್ಕೆ ಇಳಿದಿರುವ ದುರಂತ ನಮ್ಮ ಕಣ್ಣ ಮುಂದೆ ಇದೆ.

೨-೩ ಲಕ್ಷ ಜನ ಬೆಂಗಳೂರಿಗೆ ಬಂದು ತಮ್ಮ ಹಕ್ಕುಗಳಿಗಾಗಿ ರ್‍ಯಾಲಿ ನಡೆಸಿದರೆ ಅವರು ಯಾಕೆ ರ್‍ಯಾಲಿ ಮಾಡಿದರು ಎಂಬುದರ ಬಗ್ಗೆ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆ ಒಂದು ಸಾಲಿನ ಸುದ್ದಿಯನ್ನೂ ಬರೆಯುವುದಿಲ್ಲ. ಬದಲಿಗೆ ಅವರುಗಳ ಪ್ರತಿಭಟನೆಯಿಂದ ಯಾವ ಯಾವ ಕಂಪೆನಿ ಮುಖ್ಯಸ್ಥರಿಗೆ ಕಚೇರಿಗೆ ತಲುಪಲು ತಡವಾಯಿತು ಎಂದು ಚಿತ್ರ ಸಮೇತ ಸುದ್ದಿ ಪ್ರಕಟಿಸುತ್ತಾರೆ. ೮೦ ರ ದಶಕದ ಮೊದಲ ಭಾಗದಲ್ಲಿ ವಿನೋಬ ಭಾವೆಯವರು ಗೋಹತ್ಯೆ ವಿರುದ್ಧ ಉಪವಾಸ ಸತ್ಯಾಗ್ರಹ ಹೂಡುತ್ತೇನೆಂದು ಹೇಳಿದಾಗ ಇಡೀ ದೇಶದ ತುಂಬ ಯಾರೂ ಅದರ ಬಗ್ಗೆ ಮಾತಾಡಿಕೊಳ್ಳಲಿಲ್ಲ. ಆದರೆ ದೇಶಾದ್ಯಂತ ಇದ್ದ ಪತ್ರಕರ್ತರೆಲ್ಲರೂ ಗೋಹತ್ಯೆ ನಿಷೇಧಕ್ಕಾಗಿ ಒತ್ತಾಯಿಸಿ ವಿನೋಬಾ ಭಾವೆ ಉಪವಾಸ ಮಾಡುತ್ತಿದ್ದಾರೆ ಎಂದು ಮುಖಪುಟದ ಸುದ್ದಿ ಮಾಡಿ ಪ್ರಕಟಿಸಿದರು. ಹರಿಯಾಣದ ಝಜ್ಜಾರ್‌ನಲ್ಲಿ ಹೊಟ್ಟೆಪಾಡಿಗಾಗಿ ಸತ್ತ ದನದ

ಚರ್ಮವನ್ನು ಸುಲಿದ ದಲಿತರನ್ನು ಹಾಡುಹಗಲೇ ದಾರುಣವಾಗಿ ಕಲ್ಲು ಹೊಡೆದು ಸಾಯಿಸಲಾಯಿತು. ಇದು ಯಾವ ಪತ್ರಿಕೆಗೂ ಮುಖಪುಟದ ಸುದ್ದಿಯಾಗಲೇ ಇಲ್ಲ ಎಂದು ಅವರು ಪತ್ರಿಕೆಗಳ ಬೇಜವಾಬ್ದಾರಿಯ ಕುರಿತು ಕಳವಳ ವ್ಯಕ್ತಪಡಿಸಿದರು.

ಇಡೀ ಸಮಾಜದ ಸಾಕ್ಷಿ ಪ್ರಜ್ಞೆಯಾಗಿರಬೇಕಾಗಿದ್ದ ಎಲ್ಲಾ ಚಳುವಳಿಗಾರರು, ಲೇಖಕರು, ಕಲಾವಿದರು ಇಂದು ವ್ಯವಸ್ಥೆಯ ಜೊತೆ ಹಂತ ಹಂತವಾಗಿ ಕರಗಿ ಹೋಗಲು ನೆಪಗಳನ್ನು, ಪ್ರಯತ್ನಗಳನ್ನು ಹುಡುಕುತ್ತಿದ್ದಾರೆ. ಒಂದು ಕಾಲದಲ್ಲಿ ಸರ್ಕಾರದ ಕೃಪಾಕಟಾಕ್ಷದಲ್ಲಿದ್ದ ಸಾಹಿತ್ಯ. ಸಂಘ-ಸಂಸ್ಥೆಗಳನ್ನು ದೂರ ಇಟ್ಟಿದ್ದವರೆಲ್ಲರೂ ಇಂದು ಅದರ ಉಸ್ತುವಾರಿ ವಹಿಸಿಕೊಳ್ಳುತ್ತಿದ್ದಾರೆ. ಸಾಹಿತ್ಯ ಸಮ್ಮೇಳನಕ್ಕೆ ಪ್ರತಿಯಾಗಿ ಜನಪರ ಸಮ್ಮೇಳನವೊಂದನ್ನು ಮಾಡಬೇಕೆಂಬ ಶಕ್ತಿ ಕಳೆದುಕೊಂಡಿರುವ ಬರಹಗಾರರು ಸಾಹಿತ್ಯ ಅಕಾಡೆಮಿಯಲ್ಲಿ ನನ್ನದೊಂದು ಪುಸ್ತಕ ಪ್ರಕಟವಾಗದಿದ್ದರೆ ನನಗೆ ಮನ್ನಣೆ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ರೈತ ಚಳವಳಿಗಳು, ದಲಿತ ಚಳವಳಿಗಳು ಇಂದು ಸರ್ಕಾರದ ಮುಂದೆ ಮಂಡಿಯೂರಿ ಕುಳಿತು ಭಿಕ್ಷೆ ಬೇಡುವ ಸ್ಥಿತಿ ನಿರ್ಮಾಣವಾಗಿದೆ.

ಇಂತಹ ವೈಚಾರಿಕ ಶೂನ್ಯತೆ ನಮ್ಮನ್ನು ಆವರಿಸುತ್ತಿರುವ ಪರಿಸ್ಥಿತಿಯಲ್ಲಿ ಈ ಎಲ್ಲಾ ಚರ್ಚೆಗಳಿಗೆ ಚಾಲನೆ ನೀಡಬೇಕೆಂಬ ಉದ್ದೇಶದಿಂದ 'ಸಂವಾದ'ವನ್ನು ಆರಂಭಿಸಿದುದಾಗಿ ಇಂದೂಧರ ಹೊನ್ನಾಪುರ ಸ್ಪಷ್ಟಪಡಿಸಿದರು.

ವಿಚಾರ ಸಂಕಿರಣದಲ್ಲಿ 'ಸಂವಾದ' ಪತ್ರಿಕೆಯ ಸದ್ಯದ ಮಿತಿ ಹಾಗೂ ಸಾಧ್ಯತೆಗಳೆರಡನ್ನೂ ಕರಾರುವಾಕ್ಕಾಗಿ ಗುರುತಿಸಿ ಮಾತನಾಡಲು ಯತ್ನಿಸಿದ ಡಿ.ಎಸ್. ನಾಗಭೂಷಣ ಅವರು ಪರ್ಯಾಯ ಪತ್ರಿಕೋದ್ಯಮದ ತೊಡಕುಗಳ ಬಗ್ಗೆ ಹೇಳುತ್ತಲೇ 'ಸಂವಾದ' ದಂತಹ ಪತ್ರಿಕೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ 'ಫೋಕಸ್' ಮಾಡಲು ಸಾಧ್ಯವೆಂಬ ಅಭಿಪ್ರಾಯಪಟ್ಟರು.

ಸಾಂಸ್ಕೃತಿಕವಾಗಿ ಬಹಳಷ್ಟು ಚರ್ಚೆಗಳನ್ನು ಹುಟ್ಟುಹಾಕಿರುವ 'ಸಂವಾದ'ಯಾಕೋ ಅಷ್ಟಾಗಿ ರಾಜಕಾರಣವನ್ನು ಮುಟ್ಟಿಲ್ಲ ಎಂದು ಅವರು ಗುರುತಿಸಿದರು. ಝಜ್ಜಾರ್‌ನಲ್ಲಿ ಸತ್ತ ದನದ ಮಾಂಸ ಸುಲಿದಿದ್ದಕ್ಕೆ ದಲಿತರನ್ನು ಸುಟ್ಟರು. ಆ ಬಗ್ಗೆ ಒಂದೂ ಮಾತಾಡದ ಬಿಎಸ್‌ಪಿ ಪಕ್ಷ ಅಲ್ಲಿದೆ. ಮುಜ್ಫರ್ ನಗರದಲ್ಲಿ ದಲಿತ ಹುಡುಗಿಯನ್ನು ಯಾದವ ಹುಡುಗ ಮದುವೆಯಾದಾಗ ಅವರಿಬ್ಬರನ್ನೂ ನೇಣು ಹಾಕಿದರು. ಇದರ ಬಗ್ಗೆ ಮಾತನಾಡದ ಸಮಾಜವಾದಿ ಪಕ್ಷ ಅಲ್ಲಿದೆ. ಈ ಪಕ್ಷಗಳು ಯಾಕೆ ಇಂತಹ ಹೆಸರುಗಳನ್ನಿಟ್ಟುಕೊಂಡಿವೆ? ಇವರ ರಾಜಕಾರಣ ಏನು? ಈ ಬಗ್ಗೆ ಕಟುವಾದ, ವಸ್ತುನಿಷ್ಠವಾದ ವಿಶ್ಲೇಷಣೆಗಳು 'ಸಂವಾದ'ದಲ್ಲಿ ಬರಬೇಕಾಗಿದೆ.

ಬಹುಮುಖ್ಯವಾಗಿ ನಾಗಭೂಷಣ ಅವರು ಗಮನಾರ್ಹ ವಿಚಾರವೊಂದರ ಬಗ್ಗೆ ಹೇಳಿದರು. ಇಂದು ಎಲ್ಲೆಡೆ, ಮುಖ್ಯವಾಗಿ ತೃತೀಯ ರಾಷ್ಟ್ರಗಳಲ್ಲಿ ಆತಂಕದೊಂದಿಗೆ ಚರ್ಚಿತವಾಗುತ್ತಿರುವ ಜಾಗತೀಕರಣದ ಬಗ್ಗೆ ನಾವೆಲ್ಲರೂ ಉತ್ತರಕ್ಕೆ ಹುಡುಕಾಡುತ್ತಿರುವಾಗ ಅವೆಕ್ಕೆಲ್ಲ ಸಮರ್ಥ ಉತ್ತರ ಭಾರತದಂತಹ ರಾಷ್ಟ್ರದಲ್ಲಿಯೇ ಬೀಜರೂಪದಲ್ಲಿ ಹಲವೆಡೆ ಕ್ರಿಯಾಶೀಲವಾಗಿರುವುದರ ಬಗ್ಗೆ ಗಮನ ಸೆಳೆದರು. ಜಾಗತೀಕರಣದ ಸವಾಲಿಗೆ ಪರ್ಯಾಯವಾಗಿ ಹುಟ್ಟಿಕೊಂಡಿರುವ ಬೇರೆ ಬೇರೆ ಅಭಿವೃದ್ಧಿ ಮಾರ್ಗಗಳು - ಅದು ಮೇಧಾ ಪಾಟ್ಕರ್ ಇರಬಹುದು, ಅಣ್ಣಾ ಹಜಾರೆ, ಇಳಂಗೋವನ್, ರಾಜೇಂದ್ರ ಅಗರಲಾಲ್ ಇರಬಹುದು. ಇಂತಹ ಎಲ್ಲಾ ಅಭಿವೃದ್ಧಿಶೀಲ ದೇಶಗಳ ಅಭಿವೃದ್ಧಿ ಮಾರ್ಗಗಳ ಬಗ್ಗೆ 'ಸಂವಾದ'ದಲ್ಲಿ ಚಿಂತನೆ ನಡೆಯಬೇಕೆಂಬುದು ಅವರು ನೀಡಿದ ಮುಖ್ಯ ಸಲಹೆ.


ಮಾತಿನ ಮಧ್ಯೆ ಧ್ಯಾನಸ್ಥರಾದ ಪ್ರೊ. ಎಲ್.ಬಸವರಾಜು

ಇಡೀ ಸಮಾಜದ ಸಾಕ್ಷಿ ಪ್ರಜ್ಞೆಯಾಗಿರಬೇಕಾಗಿದ್ದ ಎಲ್ಲಾ ಚಳವಳಿಗಾರರು, ಲೇಖಕರು, ಕಲಾವಿದರು ಇಂದು ವ್ಯವಸ್ಥೆಯ ಜೊತೆ ಹಂತ ಹಂತವಾಗಿ ಕರಗಿ ಹೋಗಲು ನೆಪಗಳನ್ನು, ಪ್ರಯತ್ನಗಳನ್ನು ಹುಡುಕುತ್ತಿದ್ದಾರೆ. ಒಂದು ಕಾಲದಲ್ಲಿ ಸರ್ಕಾರದ ಕೃಪಾಕಟಾಕ್ಷದಲ್ಲಿದ್ದ ಸಾಹಿತ್ಯ. ಸಂಘ- ಸಂಸ್ಥೆಗಳನ್ನು ದೂರ ಇಟ್ಟಿದ್ದವರೆಲ್ಲರೂ ಇಂದು ಅದರ ಉಸ್ತುವಾರಿ ವಹಿಸಿಕೊಳ್ಳುತ್ತಿದ್ದಾರೆ. ಸಾಹಿತ್ಯ ಸಮ್ಮೇಳನಕ್ಕೆ ಪ್ರತಿಯಾಗಿ ಜನಪರ ಸಮ್ಮೇಳನವೊಂದನ್ನು ಮಾಡಬೇಕೆಂಬ ಶಕ್ತಿ ಕಳೆದುಕೊಂಡಿರುವ ಬರಹಗಾರರು ಸಾಹಿತ್ಯ ಅಕಾಡೆಮಿಯಲ್ಲಿ ನನ್ನದೊಂದು ಪುಸ್ತಕ ಪ್ರಕಟವಾಗದಿದ್ದರೆ ನನಗೆ ಮನ್ನಣೆ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ರೈತ ಚಳವಳಿಗಳು, ದಲಿತ ಚಳವಳಿಗಳು ಇಂದು ಸರ್ಕಾರದ ಮುಂದೆ ಮಂಡಿಯೂರಿ ಕುಳಿತು ಭಿಕ್ಷೆ ಬೇಡುವ ಸ್ಥಿತಿ ನಿರ್ಮಾಣವಾಗಿದೆ.

ಅವರ ವಿಚಾರ ಮಂಡನೆಯ ಮತ್ತೊಂದು ಮುಖ್ಯ ವಿಷಯ ಅಂಬೇಡ್ಕರ್ ಹಾಗೂ ಗಾಂಧಿ ಇಬ್ಬರ ಮುಖಾಮುಖಿ ಕುರಿತದ್ದು. ಅಂಬೇಡ್ಕರ್ ಹೋದ ನಂತರ ಅನೇಕ ಬದಲಾವಣೆಗಳು ದಲಿತ ಪ್ರಪಂಚದಲ್ಲಿ ಆಗಿವೆ. ಅವುಗಳನ್ನು ಗಮನಕ್ಕೆ ತಂದುಕೊಳ್ಳದೆ ಮತ್ತೆ ನಾವು ಅಂಬೇಡ್ಕರ್ ಕ್ರೋಧದಿಂದಲೇ ಮಾತನಾಡುವುದು ಎಷ್ಟು ಸರಿ? ಅಂಬೇಡ್ಕರ್ ಮತ್ತು ಗಾಂಧಿಯವರ ವಾಗ್ವಾದಗಳನ್ನು ಅದೇ ಹಿಂದೂ ಧರ್ಮದ, ಜಾತಿ ಪದ್ಧತಿಯ ನೆಲೆಯಲ್ಲಿಯೇ ಮತ್ತೆ ಮತ್ತೆ ಚರ್ಚಿಸುವುದು ಎಷ್ಟು ಸರಿ? ಎಂಬ ಅವರ ಪ್ರಶ್ನೆಯ ಬಗ್ಗೆ ಯಾವುದೇ ತಕರಾರುಗಳಿರದಿದ್ದರೂ 'ಹಿಂದೂ ಧರ್ಮ' ಎನ್ನುವುದು ಹಲವಾರು ಪ್ರಭಾವಗಳಿಗೆ ಒಳಗಾಗಿ ವೈದಿಕ ಧರ್ಮದ ಚಹರೆಯನ್ನು ಕಳೆದುಕೊಂಡಿದೆ ಎಂಬ ಅವರ ಅಭಿಮತ ಮತ್ತಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿತು. ಹಿಂದೂ ಧರ್ಮವನ್ನು ಬೌದ್ಧ ಹಿಂದೂಧರ್ಮವೆಂಬ ಭಿನ್ನ ಪರಿಕಲ್ಪನೆಯ ಮೂಲಕ ಅವರು ಗುರುತಿಸಲು ಯತ್ನಿಸಿದರು.

ಅಂಬೇಡ್ಕರ್‌ವಾದಿಗಳು, ಲೋಹಿಯಾವಾದಿಗಳು ಮತ್ತಿತ್ತರರು ಈ ಕಾಲದಲ್ಲಿ ತಮ್ಮ ಪರಿಭಾಷೆಗಳನ್ನು ಬದಲಾಯಿಸಿಕೊಳ್ಳದೆ, ಹಳೆಯ ಆಶಯಗಳೊಂದಿಗೇ ಹೊರಟರೆ ಹೆಚ್ಚು ಜನರನ್ನು ತಲುಪಲಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಗಾಂಧಿ ಮತ್ತು ಪಶ್ಚಿಮದ ನಾಗರಿಕತೆ, ಗಾಂಧಿ ಮತ್ತು ಅಂಬೇಡ್ಕರ್ ಮುಖಾಮುಖಿ ಹಾಗೂ ಗಾಂಧಿ ಮತ್ತು ಹಿಂದೂ ಧರ್ಮದ ಮುಖಾಮುಖಿಯನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳದೆ ಹೋದರೆ ಏನನ್ನೂ ಮಾಡಿದಂತಾಗುವುದಿಲ್ಲ ಎಂದು ನಾಗಭೂಷಣ ಅವರು ಅಭಿಪ್ರಾಯಪಟ್ಟರು.

ಮೂಲಭೂತ 'ವ್ಯಾಧಿ'ಗಳು!

ಸಂಕಿರಣದ ಉದ್ಘಾಟನಾ ಭಾಷಣ ನೆರವೇರಿಸಿದ ಹಿರಿಯ ವಿದ್ವಾಂಸ ಡಾ.ಎಲ್. ಬಸವರಾಜು ಅವರು 'ಮೂಲಭೂತ ವ್ಯಾಧಿ'ಗಳ ಕುರಿತು ಹೆಚ್ಚು ಬೇಸರದಿಂದ ಮಾತನಾಡಿದಷ್ಟೇ ವಿಚಾರವಾದಿಗಳೆನಿಸಿಕೊಂಡವರ ಒಂದು ಬಗೆಯ 'ಪಲಾಯನ'ದ ಬಗ್ಗೆಯೂ ಬಹಳ ಖಾರವಾಗಿ ನುಡಿದರು.

ಮೂಲಭೂತವಾದಿಗಳು ಯಾವತ್ತೂ ಪ್ರಗತಿಪರರನ್ನು ಬಡಬಗ್ಗರನ್ನು ತಲ್ಲಣಗೊಳಿಸುವಂತಹ ಚಟುವಟಿಕೆಗಳನ್ನು ನಡೆಸುತ್ತಾರೆ. ಬಾಬರಿ ಮಸೀದಿ ಉರುಳಿಸುತ್ತಾರೆ. ಅದನ್ನು ಪ್ರತಿಭಟಿಸಲು ಹೊರಟ ವಿಚಾರವಂತ ಜನ ಅನ್ನ, ಬಟ್ಟೆ ನಿರುದ್ಯೋಗ ಸಮಸ್ಯೆಗಳನ್ನು ಮರೆತು ಚಳವಳಿ ಹೂಡಲು ಹೊರಡುತ್ತಾರೆ. ಜನರ ಮನಸ್ಸುಗಳನ್ನು ಬೆಸೆಯುವುದಕ್ಕೆ ಏನೆಲ್ಲವನ್ನೂ ಮಾಡಬಹುದೋ ಅವರೆಲ್ಲರೂ ಬಾಬಾ ಬುಡನ್‌ಗಿರಿಗೆ ಓಡಿ ಹೋಗುತ್ತಾರೆ. ಇವುಗಳಿಗೆ ನಾವು ಪ್ರತಿಕ್ರಿಯಿಸಬಾರದೆಂದೇನೂ ಅಲ್ಲ. ಆದರೆ ಅಳತೆ ಮೀರಿ ಪ್ರತಿಕ್ರಿಯಿಸಲು ಹೊರಡುತ್ತೇವೆ. ಆಗ 'ಸಂವಾದ'ಗಳು ನಿಂತು ಹೋಗಿ ಸಂಘರ್ಷಗಳು ಆರಂಭಗೊಳ್ಳುತ್ತವೆ ಎಂದು ಅವರು ಹೇಳಿದರು.

'ಅಲಕ್ಷಿತ ವರ್ಗಗಳ ಬಗ್ಗೆ ಪತ್ರಿಕೋದ್ಯಮದ ಜವಾಬ್ದಾರಿ' ಕುರಿತು ವಿಚಾರ ಮಂಡನೆ ಮಾಡಿದ ಡಾ. ಎನ್.ಉಷಾರಾಣಿ ಪತ್ರಿಕೋದ್ಯಮದಿಂದ ನಾವು ಅಲಕ್ಷಿತ ವರ್ಗಗಳ ಹಿತವನ್ನು ಅವರ ಸಾಮಾಜಿಕ ಜವಾಬ್ದಾರಿಯನ್ನು ಅಪೇಕ್ಷಿಸುವುದು ನಿಜವಾಗಿಯೂ ಮರೀಚಿಕೆ ಎಂಬುದಾಗಿ ಅಭಿಪ್ರಾಯಪಟ್ಟರು.

ಮುಖ್ಯವಾಹಿನಿಯಲ್ಲಿರುವ ಇಂದಿನ ಪತ್ರಿಕೆಗಳು ಮೇಲ್ವರ್ಗಗಳ ಮುಖವಾಣಿಯಾಗಿವೆ. ಬಹುಸಂಸ್ಕೃತಿಯ ಭಾರತ

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಪ್ರೊ. ದೇಜಗೌ ಮಾತಾಡಿದರು. ಡಾ. ಉಷಾರಾಣಿ ಹಾಗೂ ಆಂದೋಲನ ದಿನಪತ್ರಿಕೆಯ ಸಂಪಾದಕರಾದ ರಾಜಶೇಖರ್ ಕೋಟಿ ಅವರು ಚಿತ್ರದಲ್ಲಿದ್ದಾರೆ.

ದಂತಹ ದೇಶದಲ್ಲಿ ಎಲ್ಲಾ ವರ್ಗಗಳನ್ನು ಪ್ರತಿನಿಧಿಸುವ ಬಹುರೂಪಿ ಪತ್ರಿಕೆಯ ಬದಲಾಗಿ ಏಕರೂಪಿಯಾದ ಪತ್ರಿಕೆಗಳು, ಕೆಲವೇ ವರ್ಗಗಳ ಹಿತಕಾಯುವ ಪತ್ರಿಕೆಗಳು ಹುಟ್ಟಿಕೊಂಡಿವೆ. ಅಲಕ್ಷಿತ ವರ್ಗಗಳಿಂದ ಬಂದ ಎಷ್ಟು ಮಂದಿ ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು, ಹಿಂದುಳಿದವರು ಪತ್ರಕರ್ತರಾಗಿದ್ದಾರೆ? ಸಂಪಾದಕರಾಗಿದ್ದಾರೆ?

ಶೇ.೭೦ರಷ್ಟು ಇರುವ ಕೆಳವರ್ಗದವರ ನೋವು-ನಲಿವುಗಳಿಗೆ, ಅಭಿಪ್ರಾಯಗಳಿಗೆ, ಸಂಸ್ಕೃತಿಗೆ ಮನ್ನಣೆ ಇಲ್ಲದಿದ್ದರೆ ಅದು ಒಂದು ಬಗೆಯ ಅಲ್ಪ ಸಂಖ್ಯಾತ ವರ್ಗದ ಪತ್ರಿಕೋದ್ಯಮವಾದಂತಾಯಿತು. ಅಮೆರಿಕಾದಲ್ಲೂ ಕಪ್ಪು ಜನಾಂಗದವರ ಪತ್ರಿಕೋದ್ಯಮ, ಬಿಳಿ ಜನಾಂಗದವರ ಪತ್ರಿಕೋದ್ಯಮ ಅಂತ ಇದೆ. ಅಲ್ಲಿನ ಕರಿಯರು ಪತ್ರಿಕೋದ್ಯಮದಲ್ಲಿ ಉತ್ತಮ ಶಿಕ್ಷಣವನ್ನು ಪಡೆದು ಮುಖ್ಯವಾಹಿನಿಯ ಪತ್ರಿಕೋದ್ಯಮದಲ್ಲಿದ್ದಾರೆ. ಅಂತಹ ವಾತಾವರಣ ಇಲ್ಲಿಯೂ ಸೃಷ್ಟಿಯಾಗಬೇಕಾಗಿದೆ.

ಪತ್ರಿಕಾರಂಗದಲ್ಲಿ ಅಲಕ್ಷಿತ ವರ್ಗಗಳ ಪತ್ರಕರ್ತರ ಸಂಖ್ಯೆ ಕಡಿಮೆ ಇದೆ. ಅದು ಹೆಚ್ಚಾಗಬೇಕು. ಅಂತಹ ಜವಾಬ್ದಾರಿಯುತವಾದ ಶಿಕ್ಷಣ ಕೆಳವರ್ಗದಿಂದ ಬಂದ ವಿದ್ಯಾರ್ಥಿಗಳಿಗೆ ದೊರೆಯುವಂತೆ ಮಾಡಬೇಕು. ಅದಕ್ಕಾಗಿ 'ಸಂವಾದ'ದಂತಹ ಪರ್ಯಾಯ ಪತ್ರಿಕೋದ್ಯಮದ ಮಾರ್ಗಗಳನ್ನು ಕಂಡುಕೊಳ್ಳಬೇಕು. ಪರ್ಯಾಯ ಪತ್ರಿಕೋದ್ಯಮ ಪತ್ರಿಕೆಗಳ ಕೊರತೆಯೆಂದರೆ ಅವುಗಳಿಗೆ ಓದುಗರಿಗೆ ಸಂಖ್ಯೆ ಕಡಿಮೆ ಇರುವುದು. ಇದಕ್ಕೆ ಮುಖ್ಯ ಕಾರಣ ಪರ್ಯಾಯ ಪತ್ರಿಕೆಗಳ ಪತ್ರಕರ್ತರು ಚಳವಳಿಗಳ ಹಿನ್ನೆಲೆಯಿಂದ ಬಂದಂಥವರು. ಹಾಗಾಗಿ ತಮ್ಮದೇ ಸಿದ್ಧಾಂತಗಳಿಗೆ ಕಟ್ಟು ಬಿದ್ದಿರುತ್ತಾರೆ. ಆಗ ಚಳವಳಿ ಹಾಗೂ ಪತ್ರಿಕೋದ್ಯಮದ ದಾರಿಗಳು ಬೇರೆಯದೇ ಆಗಿ ಗೋಚರವಾಗುತ್ತವೆ. ಆದ್ದರಿಂದ ಅಂತಹ ಪತ್ರಕರ್ತರು ಇವೆರಡರ ಮಧ್ಯದ ದಾರಿಯನ್ನು ತುಳಿಯಬೇಕಾಗುತ್ತದೆ ಎಂಬುದು ಅವರು ಸೂಚಿಸಿದ ಪರಿಹಾರ.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ವಿಶ್ರಾಂತ ಕುಲಪತಿ ಪ್ರೊ.ದೇಜಗೌ 'ಸಂವಾದ'ದ ಒಟ್ಟಾರೆ ಪ್ರಯತ್ನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅವರು ಮಾತನಾಡಿದ್ದು ವಿವಿಧ ವರ್ಗಗಳ ಆಹಾರಪದ್ಧತಿಯನ್ನು ಬದಲಾಯಿಸಲು ಬಲವಂತವಾಗಿ ಯತ್ನಿಸುವ ಪರೋಕ್ಷ ದಬ್ಬಾಳಿಕೆಗಳ ಬಗ್ಗೆ.

ಗೋವಧೆಯ ಬಗ್ಗೆ ಹೇಳುವಾಗ ದನಗಳನ್ನು ಸಲಹುವ ರೈತರ ಸಂಕಷ್ಟಗಳನನ್ನು ರೈತ ಚಳವಳಿಗಳೂ ಅರ್ಥಮಾಡಿಕೊಂಡಿಲ್ಲವೆಂದರು. ಸರ್ಕಾರ ಗೋವಧೆಯನ್ನು ನಿಲ್ಲಿಸುವುದಾದರೆ ಎಲ್ಲಾ ಪ್ರಾಣಿಗಳನ್ನು ಕೊಲ್ಲುವುದನ್ನು ನಿಲ್ಲಿಸಿಬಿಡಲಿ. ಗೋಮಾಂಸವನ್ನು ಸೇವಿಸುವ ೪೦ ಕೋಟಿಗೂ ಹೆಚ್ಚು ಮಂದಿ ಈ ದೇಶದಲ್ಲಿ ಇದ್ದಾರೆ.

ಬಸವಣ್ಣನವರ ಬಗ್ಗೆ ಅಂಬೇಡ್ಕರ್ ಅಭಿಪ್ರಾಯವನ್ನು ಉಲ್ಲೇಖಿಸಿದ ದೇಜಗೌ ಅವರು ಬಸವಧರ್ಮ ಬಸವಣ್ಣನ ನಂತರ ಲಿಂಗಾಯಿತರ, ಕಂದಾಚಾರಿಗಳ ಧರ್ಮವಾಗಿ ಮಾರ್ಪಟ್ಟಿತು ಎಂದು ಹೇಳಿದರು.

ಮೂಲಭೂತವಾದ ವರ್ಸಸ್ ಪತ್ರಿಕೋದ್ಯಮ'ದ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದ 'ಅಗ್ನಿ' ವಾರಪತ್ರಿಕೆಯ ಸಂಪಾದಕರಾದ ಶ್ರೀಧರ್ ಅವರು ಹೆಚ್ಚು ಮಾತಾಡಿದ್ದು ಇಡೀ

ಅಂಬೇಡ್ಕರ್ ಹೋದ ನಂತರ ಅನೇಕ ಬದಲಾವಣೆಗಳು ದಲಿತ ಪ್ರಪಂಚದಲ್ಲಿ ಆಗಿವೆ. ಅವುಗಳನ್ನು ಗಮನಕ್ಕೆ ತಂದುಕೊಳ್ಳದೆ ಮತ್ತೆ ನಾವು ಅಂಬೇಡ್ಕರ್ ಕ್ರೋಧದಿಂದಲೇ ಮಾತನಾಡುವುದು ಎಷ್ಟು ಸರಿ? ಅಂಬೇಡ್ಕರ್ ಮತ್ತು ಗಾಂಧಿಯವರ ವಾಗ್ವಾದಗಳನ್ನು ಅದೇ ಹಿಂದೂ ಧರ್ಮದ, ಜಾತಿ ಪದ್ಧತಿಯ ನೆಲೆಯಲ್ಲಿಯೇ ಮತ್ತೆ ಮತ್ತೆ ಚರ್ಚಿಸುವುದು ಎಷ್ಟು ಸರಿ?

ಜಗತ್ತನ್ನು ತನ್ನ ಅಂಗೈ ಅಂಕೆಯಲ್ಲಿಟ್ಟುಕೊಳ್ಳಲು ಹಲವು ತಂತ್ರಗಳ ಮೂಲಕ ಹವಣಿಸುತ್ತಿರುವ ಅಮೆರಿಕಾದ ಸಾಮ್ರಾಜ್ಯಶಾಹಿಯ ಕ್ರೌರ್ಯದ ಬಗ್ಗೆ. ಜಾಗತಿಕ ಮಟ್ಟದಲ್ಲಿ ಮೂಲಭೂತವಾದವನ್ನು ಹರಡಲು ಮುಸ್ಲಿಂ ಸಮುದಾಯದ ರಾಷ್ಟ್ರಗಳ ಮೇಲೆ ವಿಧವಿಧದ ಕುಮ್ಮಕ್ಕು ಹಾಗೂ ಅನಿವಾರ್ಯತೆಯ ಆಮಿಷಗಳನ್ನು ನೀಡುತ್ತ ತಾನೊಂದು ದೈತ್ಯಶಕ್ತಿಯಾಗಿ ಅಮೆರಿಕಾ ಬೆಳೆದು ಬಂದ ಇತಿಹಾಸವನ್ನು ಅವರು ತೆರೆದಿಟ್ಟರು. ಇಡೀ ಮಾನವ ಕುಲವನ್ನು ಕಂಗೆಡಿಸುವ ಜಾಗತಿಕ ಯುದ್ಧಗಳು ಜರುಗುವಲ್ಲಿ ಅಮೆರಿಕಾದ್ದು ಸಿಂಹ ಪಾಲು. ಭಾರತದಂತಹ ಬಲಾಢ್ಯ ಪ್ರಜಾತಾಂತ್ರಿಕ ವ್ಯವಸ್ಥೆಯ ರಾಷ್ಟ್ರವನ್ನು 'ಅಭಿವೃದ್ಧಿ'ಯ ಹೆಸರಿನಲ್ಲಿ ತನ್ನ ಮಾರುಕಟ್ಟೆಯ ಮಾಯಾಜಾಲದೊಳಗೆ ಸಿಲುಕಿಸಿ ಹೇಗೆ ಅದು ದುರ್ಬಲಗೊಳಿಸಲು ಯತ್ನಿಸುತ್ತದೆ ಎಂಬುದನ್ನು ವಿಶ್ಲೇಷಣಾತ್ಮಕವಾಗಿ ಪ್ರಸ್ತುತಪಡಿಸಿದರು. ಜಾಗತೀಕರಣ ಭಾರತದ ದೇಶೀಯ ಆರ್ಥಿಕ ಮೂಲಗಳನ್ನು ಧಕ್ಕೆಗೊಳಿಸಿದರೆ ಹಿಂದೂಮೂಲಭೂತವಾದ ಅಥವಾ ನೇರವಾಗಿ ಶ್ರೀಧರ್ ಹೇಳುವಂತೆ 'ಬ್ರಾಹ್ಮಣ್ಯ' ದೇಶದ ಎಲ್ಲಾ ತಳಸಮುದಾಯಗಳನ್ನು ದಮನಗೊಳಿಸುತ್ತದೆ. ಹಾಗಾಗಿ ಇವೆರಡೂ ಸದ್ಯ ಭಾರತ ಎದುರಿಸುತ್ತಿರುವ ಮುಖ್ಯ ಆತಂಕಗಳು ಎಂಬುದು ಅವರ ವಾದವಾಗಿತ್ತು.

ವಿದ್ಯಾವಂತ, ಗಂಭೀರ, ಸೀಮಿತ ಓದುಗ ಸಮುದಾಯವನ್ನು ಮಾತ್ರ ತಲುಪುತ್ತಿರುವ 'ಸಂವಾದ' ಜನಸಾಮಾನ್ಯರನ್ನು ಮುಟ್ಟಬೇಕೆಂದಲ್ಲಿ ದಿನಪತ್ರಿಕೆಯಾಗಿ ಮಾರ್ಪಾಟುಗೊಳ್ಳಬೇಕೆಂಬ ಸಲಹೆ ಕೊಟ್ಟವರು ಮೈಸೂರಿನ 'ಆಂದೋಲನ' ದಿನ ಪತ್ರಿಕೆಯ ಸಂಪಾದಕರಾದ ರಾಜಶೇಖರ ಕೋಟಿ. ಸಾಮಾಜಿಕ ಕಳಕಳಿ ಇಟ್ಟುಕೊಂಡು ವೈಚಾರಿಕ ನೆಲೆಗಟ್ಟಿನ ಮೇಲೆ ತಾವು ಹಲವು ವರ್ಷಗಳ ಹಿಂದೆ 'ಆಂದೋಲನ' ವಾರಪತ್ರಿಕೆಯನ್ನು ಹುಟ್ಟು ಹಾಕಿದ ಸಂದರ್ಭದಲ್ಲಿ ಪತ್ರಿಕೆ ಹೆಚ್ಚು ಯಶಸ್ವಿಯಾಗಲಿಲ್ಲ. ತಾವು 'ಆಂದೋಲನ'ವನ್ನು ದಿನಪತ್ರಿಕೆಯಾಗಿ ಹೊರತಂದ ಮೇಲೆ ಸಾಕಷ್ಟು ಯಶಸ್ಸು ಸಾಧಿಸಲು ಸಾಧ್ಯವಾಯಿತು ಎಂದು ತಮ್ಮ ಅನುಭವಗಳನ್ನು ಅವರು ತೆರೆದಿಟ್ಟರು.

ಪ್ರತಿಕ್ರಿಯೆ ನೀಡಿದ ಪತ್ರಕರ್ತರಾದ ಬಿ.ಎಂ.ಹನೀಫ್ ಅವರು ಭಾರತದಲ್ಲಿ ಅಲ್ಪಸಂಖ್ಯಾತ ವರ್ಗವಾದ ಮುಸ್ಲಿಮರು ಅನುಭವಿಸುತ್ತಿರುವ ತಲ್ಲಣಗಳ ಬಗ್ಗೆ ಮಾತನಾಡಿದರು.

ಮುಸ್ಲಿಂ ಸಮುದಾಯದವರಾಗಿ ಅವರು ಅನುಭವಿಸಬೇಕಾದ ವೈರುಧ್ಯಗಳು, ದ್ವಂದ್ವಗಳು, ಅಸಹಾಯಕತೆಗಳು ಇಡೀ ಸಮುದಾಯದ ಸ್ಥಿತಿಯನ್ನು ಪ್ರತಿನಿಧಿಸಿದವು.

ಇಡೀ ವಿಚಾರ ಸಂಕಿರಣವನ್ನು ತಮ್ಮ ಹೆಗಲ ಮೇಲೆ ಹೊತ್ತು ಓಡಾಡಿ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಿಕೊಟ್ಟವರು 'ಸಂವಾದ' ಓದುಗರ ಬಳಗದ ಕುಪ್ಪೆ ನಾಗರಾಜು ಹಾಗೂ ಎಲ್.ಎಂ. ಚಂದ್ರು. ಮಧ್ಯಾಹ್ನದ ಉಪಹಾರ, ಊಟದ ವ್ಯವಸ್ಥೆ ಇಲ್ಲದಿದ್ದರೂ ಸಾಕಷ್ಟು ಸಂಖ್ಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಸಭಿಕರು ನಮ್ಮ ನಡುವೆ ಇನ್ನೂ ಪ್ರಗತಿಪರ ಚಿಂತನೆಗಳತ್ತ ತುಡಿಯುವ ಸಮಾನ ಮನಸ್ಸುಗಳು ಇವೆ ಎಂಬುದನ್ನು ಸಾಬೀತು ಪಡಿಸಿದರು. □

ಹೇ! ಶೂದ್ರ ತಪಸ್ವಿ...
ಬದುಕಿಗೆ ಬಂದಿಖಾನೆ ಕಟ್ಟಿದ
ಕಟ್ಟುಕಟ್ಟಳೆಗಳ ಕತ್ತರಿಸಿ
ಬದನೆಶಾಸ್ತ್ರಗಳನು ಬಜಾರಿನಲಿ
ಬೆತ್ತಲೆ ನೇಣು ಹಾಕಿರುವೆವು;
'ಕರಿಸಿದ್ಧ'ನ ಪಿರಕದವರು ನಾವು
ಕರಿನೆಲದ ಹಾಡಿಗೆ ಪಲ್ಲವಿಯಾದವರು.
ನಮ್ಮದೇ ನೆತ್ತರೆಣ್ಣೆಯನೆರೆದು
ಜಗಕೆ ಕೈದೀವಿಗೆ ಹಿಡಿದು
ಆದಿ ಹಾಡಿನ
ಆದಿಮ ರಾಗಗಳನ್ನು
ನಾಭಿ ನಾಡಿನಲಿ ಮೀಟಿ
ನೆಲದ ಮೊಳಕೆಯ ಕೊರಳಿಗೆ ತುಂಬಿ
ಗುಡುಗಾಗಿ ಗುಡುಗಿ ಗಿಡುಗನಂಗಳದಲ್ಲಿ
ಗೆಜ್ಜೆಕಟ್ಟಿ ಕುಣಿಯುವೆವು!
ನವಿಲುಗಣ್ಣಿನ ಕನಸು ಕಟ್ಟಿಕೊಂಡು
ಗುಂಡಿಗೆಯ ನೋವನೆ
ಅಗ್ನಿಕಾವ್ಯವಾಗಿ ಹಾಡಿ
ಕಾವ್ಯಖಡ್ಗದಲಿ ಬೇನೆಗಳಿಗೆ ಮದ್ದು ನೀಡುವವು
'ಹಳೆಮನೆ ಭೈರ'ನ ಮಲೆಯ ಮಕ್ಕಳು.

ಹೇ! ಶೂದ್ರ ತಪಸ್ವಿ...
'ತ್ರಿಶೂಲ ಹಿಡಿದು
ಬೆಳದಿಂಗಳ ನೊರೆವಾಲುಗೆನ್ನೆಯ ಮಗುವ
ಮುಗ್ಧ ಮುಖಮುದ್ರೆಯನು ಕೆಡಿಸಿ
ಮೆತ್ತಿಕೊಂಡು ರಕ್ತವನು
ಮಾನವೀಯತೆಯ ಮುಖಕ್ಕೆ ಮಸಿ ಬಳಿದು
ಗಟಾರಕ್ಕೆ ಬಿದ್ದ ರಾಮರನು'
ಕೈಗೂಸಿನಂತೆ ಮಡಿಲೊಳಾಡಿಸಿ
ಕುಲಬೇನೆಯ ಸೂತಕ ಕಳೆವ
ಎದೆಹಾಲು ಕುಡಿಸಿದ ಅವ್ವ ನೀನು;
ಬರವಣಿಗೆ- ಬದುಕನ್ನೆ
ಕ್ರಾಂತಿಕಾವ್ಯವಾಗಿಸಿ ಕಾಡುವ
ನಿನ್ನ ಉಸಿರು
ನಮ್ಮ ಎದೆ ಕುಲುಮೆಯಲಿ
ತಿದಿಯೊತ್ತುತ್ತಿದೆ ಎಚ್ಚರದ ಜ್ವಾಲೆಯಾಗಿ!
ನಮ್ಮ ಕಣ್ಣ ಕತ್ತಲೆಗಿಳಿದ ನಿನ್ನ ಜ್ವಾಲೆ
ಕಣ್ಣೊಳಗಿನ ಬೆಳಕಾಗಿ
ಮುರುಕು ಗುಡಿಸಲಲ್ಲಿ
ಗುಂಡಿಗೆಯ ಗಾಯಗಳು ಕಣ್ಣೀರುಗರೆದು
ಕಪ್ಪುರಕ್ತದಿಂದ ಬರೆಯುವೆವು ನೋಡು;
ಹಸಿರು ಕವಿತೆ!;
ಬಂದೂಕದ ಬಾಯಿಗೆ ಎದೆಗೊಟ್ಟು ನಗುತ್ತದೆ ಕವಿತೆ
ಹೂವಿನಂತೆ!

ಹೇ! ಶೂದ್ರ ತಪಸ್ವಿ...
ಸೂರ್ಯನ ನೆತ್ತಿಗೆ ಗುದ್ದಿ
ಬೆಂಕಿಮಳೆಗರೆಸಿ
ಉಲ್ಕೆಗಳ ಎಳೆತಂದು ದ್ರೋಣರಿಗಪ್ಪಳಿಸಿ
ಭೂಲೋಕಕೆ ಹಂಚಿ ಮಿಗುವಷ್ಟು
ಏಕಲವ್ಯನಿಗೆ ಪ್ರೀತಿಯುಣಿಸಿದ ಕವಿಯೇ
ಎಲ್ಲ ತತ್ವದಲ್ಲೆ ಮೀರಿ
ಬೆಟ್ಟದಂತೆ ನಿಂತ ನಿನ್ನ ಕಾವ್ಯವನು
ಅಖಂಡವಾಗಿ ತಬ್ಬಿಕೊಂಡವರು ನಾವು;
ಜಲಗಾರನ ಮಕ್ಕಳು.
ನಮ್ಮ ಮೂಕರಾಗದ ಮಟ್ಟುಗಳಿಗೆ
ಸೀಮೆ ಎಲ್ಲೆಗಳಿಲ್ಲ
ಮತಭಾಷೆ, ಗಡಿದೇಶ ಮೊದಲಿಲ್ಲ

ಕದ-ಗೋಡೆ-ಮಾಳಿಗೆಗಳಿಲ್ಲದ
ಹೆಸರಿರದ ಮನೆಗೆ ನಡೆಸುವ
ನಿನ್ನ ಹಾಡನು ಹಾಡುವ
'ತಿಮ್ಮಿ'ಯ ನೆರಿಗೆ ಕಾವಿನ ಹಾಲುಂಡವರ
ಹಸಿರು ಕವಿತೆ
ಆಕಾಶದೆತ್ತರಕ್ಕೆ ಬೆಳೆದು
ನಕ್ಷತ್ರಗಳ ನಗಿಸಿ
ನಭೋಮಂಡಲದಿಂದ ನರಮಂಡಲಕ್ಕೆ
ಬೆಳಕು ತಂದು
ಬತ್ತಿದೆದೆ ಚಿಲುಮೆಯಲಿ
ಉಕ್ಕಿಸುವುದು ಪ್ರೀತಿಯೊರತೆ
ಹತ್ತಿಸುವುದು ಬೆಳಕ ಹಣತೆ
ಮೂಡಿಸುವುದು ಕಣ್ಣೊಳಗೆ ಕಣ್ಣು
ನಿನ್ನ ಹಾಗೆ

ಹೇ! ಶೂದ್ರ ತಪಸ್ವಿ...

❍ ವಡ್ಡಗೆರೆ ನಾಗರಾಜಯ್ಯ

ಗಾಂಧಿ ಮತ್ತು ಅಸ್ಪೃಶ್ಯರು

ವಿಶ್ಲೇಷಣೆ

ಅಸ್ಪೃಶ್ಯತೆಯೆಂಬ 'ತನುಮನ'ಗಳ ಸಂಕಟವನ್ನು ಮಾನವೀಯ ಕಾಳಜಿ ಇಟ್ಟುಕೊಂಡು ಗ್ರಹಿಸ ಲೆತ್ನಿಸಿದ ಗಾಂಧೀಜಿಯ ಕಳಕಳಿ ಹೊರಗಿನಿಂದ ಹೊರಟದ್ದು, ಆದ್ದರಿಂದ ಅದು ಕೃತಕವೆಂಬುಂದು ಹಲವರ ವಾದ. ಅದು ಅಸ್ಪೃಶ್ಯತೆಯನ್ನು ವ್ಯಕ್ತಿಗತ ವಾಗಿ ಅನುಭವಿಸಿದವರ ಸ್ವಸಂಕಟದಿಂದ ಉದ್ಭವಿಸಿದ ಸಿಟ್ಟೂ ಇರಬಹುದು. ಹಾಗಾಗಿ ಅಂತಹವರ ಕಣ್ಣಿಗೆ ಅಂಬೇಡ್ಕರ್ ಹತ್ತಿರದವ ರಾಗಿಯೂ, ಗಾಂಧೀ ದೂರದವರಾಗಿಯೂ ಗೋಚರಿಸುತ್ತಾರೆ. ಅಸ್ಪೃಶ್ಯತೆಯನ್ನು ತಮ್ಮದೇ ವೈಯಕ್ತಿಕವೆನ್ನಬಹುದಾದ ಸಿದ್ಧಾಂತದೊಳಗಿಟ್ಟು ಗ್ರಹಿಸಿದ ಗಾಂಧಿಯ ಅಸ್ಪೃಶ್ಯತೆ ಕುರಿತಾದ ಚಿಂತನೆಗಳನ್ನು ಇಲ್ಲಿ ತೀವ್ರ ಚರ್ಚೆಗೊಳಪಡಿಸಲಾಗಿದೆ. ಈ ಬಗ್ಗೆ ಇನ್ನೂ ಹೆಚ್ಚಿನ 'ಸಂವಾದ'ವನ್ನು ಪತ್ರಿಕೆ ಬಯಸುತ್ತದೆ.

○ ಪ್ರೊ. ಶಿವರಾಮಯ್ಯ

ಸನಾತನ ವಾತಾವರಣದಲ್ಲಿ ಬೆಳೆದ ಗಾಂಧೀಜಿಗೆ ತನ್ನ ಹನ್ನೆರಡನೆಯ ವಯಸ್ಸಿನಲ್ಲಿಯೇ ಅಸ್ಪೃಶ್ಯತೆ ಎಂಬುದು ಒಂದು ಸಾಮಾಜಿಕ ಕಳಂಕವೆಂದು ಅನ್ನಿಸಿದ್ದು ನಿಜ. ಆದರೆ ಅವರ ಸಾರ್ವಜನಿಕ ಜೀವನದ ಮಹತ್ತರ ಘಟ್ಟಗಳನ್ನು ಗಮನಿಸುತ್ತ ಬಂದರೆ ಪೂನಾ ಒಪ್ಪಂದ (೧೯೩೨) ದವರೆಗೆ ಗಾಂಧೀಜಿ ಅಸ್ಪೃಶ್ಯರ ಬಗ್ಗೆ ಯಾವ ವಿಶೇಷ ಆಸ್ಥೆಯನ್ನೂ ತೋರಿಸಿದಂತೆ ಕಾಣುವುದಿಲ್ಲ. ಪೂನಾ ಒಪ್ಪಂದದ ಪರಿಣಾಮವೋ ಎಂಬಂತೆ ೧೯೩೨ ರ ತರುವಾಯ ಅಸ್ಪೃಶ್ಯರ ಮಂದಿರ ಪ್ರವೇಶಕ್ಕಾಗಿ ಪ್ರಚಾರಾಂದೋಲನ ಯೋಜನೆಯನ್ನು ಹಾಕಿಕೊಂಡರು. ಮತ್ತು ಹರಿಜನ ಸೇವಕ ಸಂಘ ಸ್ಥಾಪನೆಯನ್ನೂ ಮಾಡಿದರು. ಆದರೆ ಇವೂ ಕೂಡು ನಿರೀಕ್ಷಿತ ಫಲಗಳನ್ನು ನೀಡಲಿಲ್ಲ. ಮೊದಲನೆಯದಾಗಿ ಅಸ್ಪೃಶ್ಯರೇ ಹಮ್ಮಿಕೊಂಡಿದ್ದ ಕೇರಳದ ಗುರುವಾಯೂರು ದೇವಾಲಯದ ಪ್ರವೇಶ ಸತ್ಯಾಗ್ರಹ ಸಂದರ್ಭದಲ್ಲಿ ಅದು ಬಾಗಿಲು ತೆರೆಯದಿದ್ದಾಗ, ಗಾಂಧೀಜಿ ಸವರ್ಣೀಯರ ಮನವೊಲಿಸಬೇಕೆಂದರೇ ಹೊರತು ಅಸ್ಪೃಶ್ಯರಿಗೆ ನೈತಿಕ ಬೆಂಬಲ ನೀಡಿ ಹೇಳಿಕೆ ನೀಡಲಿಲ್ಲ. ಹಾಗೆಯೇ ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಲಾದ ಅಸ್ಪೃಶ್ಯತೆ ಆಚರಣೆ ನಿಷೇಧ ಮಸೂದೆಯನ್ನು ಅಂಗೀಕರಿಸುವಂತೆ ಒತ್ತಡ ಹಾಕಲಿಲ್ಲ. ಮತ್ತು ಹರಿಜನ ಸೇವಕ ಸಂಘವನ್ನು ಸ್ಥಾಪಿಸಿದರಾದರೂ, ಅದರಲ್ಲಿ ಹರಿಜನರಿಗೆ ಯಾವ ಸದಸ್ಯತ್ವ ಇಲ್ಲದಿದ್ದರೂ ಕೂಡ ಕಾಂಗೆಸ್ ಅನ್ನು ಪ್ರತಿಭಟಿಸಲಿಲ್ಲ. ಕ್ರಮೇಣ ಆ ಸಂಘವೇ ಕಣ್ಮರೆಯಾಯಿತು. ಹಾಗೆಯೇ ಕಾಂಗ್ರೆಸ್ ಪಕ್ಷವು ಪೂನಾ ಒಪ್ಪಂದದ ಪ್ರಕಾರ ಮೀಸಲಾತಿ ಕ್ಷೇತ್ರಗಳಲ್ಲಿ ತಮ್ಮ ಕೈಗೊಂಬೆ ವ್ಯಕ್ತಿಗಳನ್ನು ನಿಲ್ಲಿಸಿದಾಗಲೂ ಆ ಪಕ್ಷಕ್ಕೆ ಬುದ್ಧಿವಾದ ಹೇಳಲಿಲ್ಲ ಮತ್ತು ಕವಿತಾ ಎಂಬ ಗ್ರಾಮದಲ್ಲಿ ಸವರ್ಣೀಯ ಮಕ್ಕಳ ಜೊತೆಗೆ ಅಸ್ಪೃಶ್ಯರ ಮಕ್ಕಳನ್ನು ಕೂಡಿಸುವುದಿಲ್ಲವೆಂಬ ತಕರಾರು ಬಂದಾಗ ಗಾಂಧೀಜಿ ಅಸ್ಪೃಶ್ಯರ ಮಕ್ಕಳು ಬೇರೆ ಶಾಲೆಗೆ ಹೋಗಿ ಸೇರಿಕೊಳ್ಳಲಿ ಎಂದು ಬಿಟ್ಟರು. ಇವು ಕೆಲವು ನಿದರ್ಶನಗಳು. ಒಟ್ಟಾರೆ ಗಾಂಧೀಜಿಯು ಅಸ್ಪೃಶ್ಯರ ಸಲುವಾಗಿ ಒಂದೇ ಒಂದು ಸಲವಾದರೂ ತಮ್ಮ ರಾಜಕೀಯ ಬ್ರಹ್ಮಾಸ್ತ್ರಗಳಾದ ಉಪವಾಸ ವ್ರತವನ್ನಾಗಲೀ ಸತ್ಯಾಗ್ರಹವನ್ನಾಗಲೀ ಮಾಡಿದ ದಾಖಲೆ ಇಲ್ಲ.

ಆದರು ಗಾಂಧೀಜಿ ಹರಿಜನೋದ್ಧಾರಕರು, ಅಸ್ಪೃಶ್ಯತೆಯ ನಿವಾರಕರು ಎಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಾರೆ. ಆದರೆ ವಸ್ತುಸ್ಥಿತಿಯ ಅರಿವಿದ್ದ ಡಾ. ಅಂಬೇಡ್ಕರ್ ಅವರು ಗಾಂಧೀಜಿ ಹಾಗೂ ಕಾಂಗ್ರೆಸ್ಸಿಗರು ಮಾಡಿದ ಹರಿಜನೋದ್ಧಾರ ಹಾಗೂ ಅಸ್ಪೃಶ್ಯತೆಯ ನಿವಾರಣೆಯ ಪ್ರಚ್ಛನ್ನ ಮುಖವಾಡವನ್ನು ತಮ್ಮ ಬರಹಗಳು ಹಾಗೂ ಭಾಷಣಗಳಲ್ಲಿ ಕಿತ್ತುಹಾಕಿ ಸತ್ಯ ಸಂಗತಿಗಳನ್ನು ಅನಾವರಣ ಮಾಡುತ್ತಾರೆ. (ನೋಡಿ:ಸಂಪುಟ ೫ ಮತ್ತು ೯) ಇಂಥ ಸುಳ್ಳು ಪ್ರಚಾರಗಳಿಂದ ವ್ಯಗ್ರರಾದ ಡಾ. ಅಂಬೇಡ್ಕರ್ ಕಾಂಗ್ರೆಸ್ಸು ಮತ್ತು ಗಾಂಧೀಜಿ ಅಸ್ಪೃಶ್ಯರಿಗೆ ಮಾಡಿರುವುದೇನು ? ಎಂದು ಪ್ರಶ್ನಿಸಿ, 'ಅಸ್ಪೃಶ್ಯರೇ ಇವರ ಔದಾರ್ಯದ ಉರುಳಿಗೆ ಬೀಳದಿರಿ' ಎಂದು ಎಚ್ಚರಿಸುತ್ತಾರೆ. ಅಲ್ಲದೆ 'ಸವರ್ಣೀಯರು ಸರ್ವಾಧಿಕಾರಿಗಳಾಗುವ ಈ ಸ್ವಾತಂತ್ರ್ಯವನ್ನು ನೀಡಬೇಡಿ' ಎಂದು ಬ್ರಿಟಿಷರಿಗೆ ಮನವಿಯನ್ನು ಮಾಡಿಕೊಳ್ಳುತ್ತಾರೆ. ಅಂತೂ ಕಾಂಗ್ರೆಸ್ ಮತ್ತು ಗಾಂಧೀಜಿ ಅಸ್ಪೃಶ್ಯರನ್ನು ನಡೆಸಿಕೊಂಡದ್ದು ಇವತ್ತಿಗೂ ಕೂಡ ಒಂದು ಕಪ್ಪು ಕಲೆಯೇ ಆಗಿ ಉಳಿದಿದೆ. ಅಷ್ಟೇ ಅಲ್ಲ ಇವತ್ತಿಗೂ ಸವರ್ಣೀಯರ ಸಂಕೋಲೆ ಇನ್ನೂ ಬಿಗಿಗೊಳ್ಳುತ್ತಲೇ ಹೋಗುತ್ತಿದೆ.

ಹೀಗಿದ್ದೂ ಗಾಂಧೀಜಿ ಹಾಗೂ ಅಂಬೇಡ್ಕರ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎನ್ನುವವರ ಮಾತನ್ನು ಒಪ್ಪುವುದು ಹೇಗೆ ? ಇದನ್ನು ಕುರಿತು ಇನ್ನಷ್ಟು ವಿವರಿಸಿಕೊಳ್ಳಬಹುದು: ಮೇಲಿನ ಇಬ್ಬರೂ ಮಹನೀಯರ ಗೊತ್ತುಗುರಿಗಳು ಬೇರೆ ಬೇರೆಯೇ ಆಗಿದ್ದವು. ವಣಿಕ ಮನೆತನದ ಗಾಂಧೀಜಿಗೆ ಇನ್ನೂರು ವರ್ಷಗಳ ಬ್ರಿಟಿಷ್ ಗುಲಾಮಗಿರಿಯನ್ನು ಸದ್ಯ ಕಳೆದುಕೊಳ್ಳಬೇಕೆಂಬ ಅವಸರವಿದ್ದರೆ, ಜೋಪಡಿ ಹಟ್ಟಿಯ ಅಂಬೇಡ್ಕರ್‌ರಿಗೆ ಎರಡು ಸಾವಿರ ವರ್ಷಗಳ ಮೇಲ್ಪಟ್ಟ ಗುಲಾಮಗಿರಿಯ ವಿಮೋಚನೆಯ ಒಳಗುದಿ ಇತ್ತು. ಆದಕ್ಕಾಗಿ ಅವರು ತುಳಿದ ದಾರಿಗಳೂ ಪರಸ್ಪರ ವಿರುದ್ಧವಾಗಿದ್ದವು, ಪರಿಣಾಮವೂ ಕೂಡ.

ಗಾಂಧೀಜಿ ಅಸ್ಪೃಶ್ಯತೆಯನ್ನು ಒಂದು ನೈತಿಕ ಕಳಂಕವೆಂದು ಭಾವಿಸಿ ಅದನ್ನು ಸಮಗ್ರ ಹಿಂದೂಗಳು ಪಶ್ಚಾತ್ತಾಪ, ಪ್ರಾಯಶ್ಚಿತ್ತ ಹಾಗೂ ಮನಃ ಪರಿವರ್ತನೆಯಿಂದ ನಿವಾರಿಸಿಕೊಳ್ಳಬೇಕೆಂದು ಬಯಸಿದರು. ಇದು ಅವರ ರಾಜಕೀಯ ಹೋರಾಟದ ನಡುವಿನ ಆನುಷಂಗಿಕ ಭಾಗವಾಗಿ ಅನಿವಾರ್ಯವೆಂಬಂತೆ ತೋರಿಬಂದಿತು. ಆದರೆ ಅಂಬೇಡ್ಕರ್ ಅವರಿಗೆ ಇದು ಬದುಕು ಕಲಿಸಿದ ವಾಸ್ತವದ ಪಾಠವಾಗಿತ್ತು. ಆದ್ದರಿಂದಲೇ ಅಸ್ಪೃಶ್ಯರ ಸಮಸ್ಯೆಯನ್ನು ಸಂವಿಧಾನದ ಚೌಕಟ್ಟಿನಲ್ಲಿಯೇ ನಿವಾರಿಸಿಕೊಳ್ಳಬೇಕೆಂದು ಅವರು ಬಯಸಿದರು. ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ಒಮ್ಮೆ ಆ ಬಿಳಿಯರಿಂದ ಹೊರ ನೂಕಿಸಿಕೊಂಡ ಅಪಮಾನಕ್ಕೆ ಗುರಿಯಾಗಿ ಚಾಣಕ್ಯ ಪಣತೊಟ್ಟು ಬ್ರಿಟಿಷರನ್ನು ಹೊರಹಾಕಲು ಸಿಡಿದು ನಿಂತರು. ಇಂತಲ್ಲಿ ಶತ ಶತಮಾನದಿಂದಲೂ ಸವರ್ಣೀಯರ ಕಾಲ್ ತುಳಿತಕ್ಕೆ ಸಿಕ್ಕಿ ಜರ್ಜರಿತರಾದ ಅಸ್ಪೃಶ್ಯರಿಗೆ ಇನ್ನೆಷ್ಟು ನೋವು, ಛಲ, ಆತ್ಮಪ್ರತ್ಯಯ ಇರಲಿಕ್ಕಿಲ್ಲ? ಇತಿಹಾಸದ ಕಡತವನ್ನು ಬಿಚ್ಚುವುದು ಬೇಡ, ಇರಲಿ.

ಭಾರತದ ಸಕಲಾರಿಷ್ಟಗಳಿಗೂ ಇಲ್ಲಿನ ಜಾತಿ ವ್ಯವಸ್ಥೆಯೇ ಕಾರಣವೆಂಬುದು ಜಾಗತಿಕ ಸತ್ಯ. ಆದರೆ ಗಾಂಧೀಜಿ ಇಂಥ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಆಡಿದ ಮಾತುಗಳೇನು ಎಂಬುದು ೧೯-೨೧-೨೨ ರ ನವಜೀವನದ ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟವಾಗಿದೆ. ಆ ಸಾರ ಸಂಗ್ರಹವನ್ನು ಡಾ. ಅಂಬೇಡ್ಕರ್ ಅವರ 'ಬರಹಗಳು ಮತ್ತು ಭಾಷಣ ಗಳು' ಸಂಪುಟ ೯ ರಲ್ಲಿ (ಪುಟ-೩೧೧-೩೧೯) ಕೊಡಲಾಗಿದೆ. ಆ ಪ್ರಕಾರ ಗಾಂಧೀಜಿಯ ಕೆಲವು ವಿಚಾರಗಳು ಈ ಪ್ರಕಾರ ಇವೆ.

ಹಿಂದೂ ಸಮಾಜದ ಗಟ್ಟಿ ನೆಲೆಗೆ ಕಾರಣ ಅದರ ಜಾತಿ ವ್ಯವಸ್ಥೆ; ಸ್ವರಾಜ್ಯದ ಬೀಜಗಳು ಇದರಲ್ಲಿವೆ; ವಿವಿಧ ಜಾತಿಗಳು ಸೈನ್ಯದ ಬೇರೆ ಬೇರೆ ತುಕಡಿಗಳಿದ್ದಂತೆ; ಜಾತಿ ವ್ಯವಸ್ಥೆ ಸೃಷ್ಟಿಸುವ ಸಮುದಾಯವು ಸಂಘಟನಾ ಚಾತುರ್ಯದಿಂದ ಕೂಡಿರುತ್ತದೆ; ಇದು ಜೀವನ ಶಿಕ್ಷಣ (Basic Education)ಕ್ಕೆ ಸಿದ್ಧ ಸಾಧನವನ್ನು ಒದಗಿಸುತ್ತದೆ, ಪ್ರತಿ ಯೊಂದು ಜಾತಿಯೂ ಒಂದೊಂದು ಜಾತಿ ಬ್ರಿಗೇಡ್ ಸ್ಥಾಪಿಸಬಹುದು; ರಾಷ್ಟ್ರೀಯ ಐಕ್ಯತೆಗೆ ಸಹಭೋಜನ ಮತ್ತು ಅಂತರ್ ಜಾತಿ ವಿವಾಹಗಳು ಅವಶ್ಯಕವೇನಲ್ಲ, ಸಹಭೋಜನವು ಸ್ನೇಹವನ್ನು ಹೆಚ್ಚಿಸುತ್ತದೆ ಎಂಬ ಮಾತು ಸುಳ್ಳು; ಊಟಮಾಡುವ ಕ್ರಿಯೆಗೂ ನೈಸರ್ಗಿಕ ಕ್ರಿಯೆ (Nature Call)ಗೂ ಯಾವ ವಿಧದ ವ್ಯತ್ಯಾಸವೂ ಇಲ್ಲ; ಇವೆರಡೂ ಏಕಾಂತದ ಕ್ರಿಯೆಗಳು; ಸಹಭೋಜನ ಹಾಗೂ ಅಂತರ್‌ಜಾತಿ ವಿವಾಹಕ್ಕೆ ಅವಕಾಶವಿಲ್ಲವೆಂದ ಮಾತ್ರಕ್ಕೆ ಜಾತಿ ವ್ಯವಸ್ಥೆ ಕೆಟ್ಟದೆಂದು ಹೇಳಬಾರದು;

> **ಗಾಂಧೀಜಿ ಅಸ್ಪೃಶ್ಯತೆಯನ್ನು ಒಂದು ನೈತಿಕ ಕಳಂಕವೆಂದು ಭಾವಿಸಿ ಅದನ್ನು ಸಮಗ್ರ ಹಿಂದೂಗಳು ಪಶ್ಚಾತ್ತಾಪ, ಪ್ರಾಯಶ್ಚಿತ್ತ ಹಾಗೂ ಮನಃ ಪರಿವರ್ತನೆಯಿಂದ ನಿವಾರಿಸಿಕೊಳ್ಳಬೇಕೆಂದು ಬಯಸಿದರು. ಇದು ಅವರ ರಾಜಕೀಯ ಹೋರಾಟದ ನಡುವಿನ ಆನುಷಂಗಿಕ ಭಾಗವಾಗಿ ಅನಿವಾರ್ಯವೆಂಬಂತೆ ತೋರಿಬಂದಿತು. ಆದರೆ ಅಂಬೇಡ್ಕರ್ ಅವರಿಗೆ ಇದು ಬದುಕು ಕಲಿಸಿದ ವಾಸ್ತವದ ಪಾಠವಾಗಿತ್ತು. ಆದ್ದರಿಂದಲೇ ಅಸ್ಪೃಶ್ಯರ ಸಮಸ್ಯೆಯನ್ನು ಸಂವಿಧಾನದ ಚೌಕಟ್ಟಿನಲ್ಲಿಯೇ ನಿವಾರಿಸಿಕೊಳ್ಳಬೇಕೆಂದು ಅವರು ಬಯಸಿದರು.**

ಇದನ್ನು ನಾಶಮಾಡುವುದೆಂದರೆ ಹಿಂದೂಗಳು ತಮ್ಮ ಅನುವಂಶಿಕ ಉದ್ಯೋಗಗಳನ್ನು ಬಿಟ್ಟು ಬಿಡುವುದೆಂದೇ ಅರ್ಥ; ಇದರ ಪಲ್ಲಟವೆಂದರೆ ಅರಾಜಕತೆಗೆ ಆಹ್ವಾನ; ಒಟ್ಟಾರೆ ಜಾತಿ ವ್ಯವಸ್ಥೆಯು ಸಮಾಜದ ಒಂದು ನೈಸರ್ಗಿಕ ವ್ಯವಸ್ಥೆ ಇತ್ಯಾದಿ.

ಇವು ಗಾಂಧೀಜಿಯ ಕೆಲವು ಆಣಿ ಮುತ್ತುಗಳು! ಮೊದಲನೆಯದಾಗಿ, ಅವರು ಇಂಥ ಮಾತುಗಳನ್ನು ತೀರ ಮುಗ್ಧರಾಗಿ ಆಡಿದರೋ ಹೇಗೆ ಎಂಬ ವಿವೇಚನೆಗೆ ನಾವು ಒಳಗಾಗುವಂತಿದೆ. ಆದರೆ ಗಾಂಧೀಜಿ ತುಂಬಾ ಜಾಣರು. ಆದ್ದರಿಂದಲೇ ಅಂಬೇಡ್ಕರ್ ಅವರ ಜಾತಿ ವ್ಯವಸ್ಥೆಯನ್ನು ಅತ್ಯಂತ ವೈಜ್ಞಾನಿಕವಾಗಿ ಪರಿಶೀಲಿಸಿ, ಇದೆಲ್ಲ ತೀರ ಬಾಲಿಶವಾಗಿದೆಯೆಂದು ಲೇವಡಿ ಮಾಡಿ ತಿರಸ್ಕರಿಸಿಬಿಟ್ಟರು. ಅದರಲ್ಲಿ ಯಾವ ಮುಚ್ಚು ಮರೆಯೂ ಇಲ್ಲ, ಪ್ರಜ್ಞಾವಂತರು ಅವರ ಸಂಪುಟಗಳನ್ನೇ ಪರಿಶೀಲಿಸಬಹುದು.

ಎರಡನೆಯದು ಗಾಂಧೀಜಿಯ ಆರ್ಥಿಕ ನೀತಿ: ಇದೂ ಕೂಡ ಅವರ ಜಾತಿ ವ್ಯವಸ್ಥೆಗೇ ಥಳುಕು ಬಿದ್ದಿದೆ. ಅವರ ಗ್ರಾಮ ಸ್ವರಾಜ್ಯ ಮತ್ತು ಅಂತ್ಯೋದಯದ ಮಾತುಗಳು ಏನಿದ್ದರೂ ಅವರ ಜಾತಿ ವ್ಯವಸ್ಥೆಯ ಕರ್ಮಕಾಂಡಕ್ಕೆ ಹೊಂದಿಕೊಂಡೇ ತೀರಬೇಕಾಗುತ್ತದೆ. ಕಸುಬುಗಳು ಮತ್ತು ವೃತ್ತಿಗಳು ಜಾತಿಗೆ ಅಧೀನವಾಗಿದ್ದು ಅವು ವಂಶಪಾರಂಪರ್ಯವಾಗಿ ನೈಪುಣ್ಯತೆಯನ್ನು ಗಳಿಸಿಕೊಂಡಿರುತ್ತವೆಯಂತೆ. ಎಂದರೆ ಕಮ್ಮಾರ ಕಮ್ಮಾರನಾಗಿಯೇ ಚಮ್ಮಾರ ಚಮ್ಮಾರನಾಗಿಯೇ ಇರಬೇಕು ಎಂದಾಯಿತು. ಹೀಗಾದರೆ ಸರ್ವೋದಯ ಹೇಗಾದೀತು?

ಮೂರನೆಯದು, ಪಶ್ಚಿಮದ ನಾಗರಿಕತೆ ಮತ್ತು ಕೈಗಾರಿಕೀಕರಣದ ಬಗ್ಗೆ: ಪಶ್ಚಿಮದ ನಾಗರಿಕತೆಯನ್ನು ಗಾಂಧೀಜಿ 'ಸೈತಾನನ ಸೃಷ್ಟಿ' ಎಂದರು. ಆದರೆ ಇವತ್ತಿನ ನಮ್ಮ ಅನುಭವದ ಮಾತೆಂದರೆ ಆ ನಾಗರಿಕತೆ ಮತ್ತು ಕೈಗಾರೀಕರಣದಿಂದ ನಮ್ಮ ಜಾತಿ ವ್ಯವಸ್ಥೆಯ ಬೇರುಗಳು ಸ್ವಲ್ಪ ಸಡಿಲಗೊಂಡಿದ್ದು ನಿಜ. ಒಟ್ಟಾರೆ ಗಾಂಧಿವಾದದ ತಿರುಳು ಎಂದರೆ ಅಂಬೇಡ್ಕರ್ ಅವರು ಹೇಳುವ ಪ್ರಕಾರ, ಜಾತಿ ಆಧಾರಿತ ಉದ್ಯೋಗ ವ್ಯವಸ್ಥೆ, ಗೋಪೂಜೆ, ಪುನರ್‌ಜನ್ಮ, ಕರ್ಮಸ್ತಸಿದ್ಧಾಂತ ಇತ್ಯಾದಿ. ಇಂಥ ಶಾಪಗ್ರಸ್ಥ ವ್ಯವಸ್ಥೆಯನ್ನು ಕುರಿತು 'ಇದು ಅನಿಷ್ಟ ವ್ಯವಸ್ಥೆ' ಎಂದು ಅವರು ನಿರಾಕರಿಸಲೇ ಇಲ್ಲ.

ನಾಲ್ಕನೆಯದು, ಗಾಂಧೀಜಿಯ ಧರ್ಮದರ್ಶಿತ್ವದ ನೀತಿ: ಇವತ್ತಿನ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉದಾರ ಕೊಡುಗೆಯನ್ನು ದೇವರ ಹುಂಡಿಗೋ ರಾಜಕೀಯ ಪಕ್ಷಗಳ ಫಂಡಿಗೋ ನೀಡುತ್ತವೆಯೇ ಹೊರತು ದೀನಾನಾಥ ಬಡವರಿಗೆ ಕೊಡುವುದುಂಟೆ? ಇಲ್ಲ, ಉದಾರ ದಾನಾದಿಗಳು ಹೋಗಲಿ, ಜಾಗತೀಕರಣದ ದೆಸೆಯಿಂದಾಗಿ ಇವತ್ತು ದಲಿತರ ಸಂವಿಧಾನ ಬದ್ಧ ಮೀಸಲಾತಿ ಸೌಲಭ್ಯಗಳೇ ಎಕ್ಕ ಹುಟ್ಟಿಹೋಗುತ್ತಿವೆ. ಇನ್ನು ಗಾಂಧೀಜಿಯ ಧರ್ಮದರ್ಶಿತ್ವದ ನೀತಿ ಪಾಠವನ್ನು ಯಾರು ಕೇಳುವರು ? ಅಕಸ್ಮಾತ್ ಇದು ಕಾರ್ಯರೂಪಕ್ಕಿಳಿದರೂ ದಲಿತರು ಆತ್ಮ ಪ್ರತ್ಯಯವಿಲ್ಲದೆ ದೈವೇಶಿಗಳಾಗಿ ಬಾಳಬೇಕಾಗುತ್ತದೆ. ರಾಜ್ಯಾಂಗ ಬದ್ಧ ಮೀಸಲಾತಿ ಸೌಲಭ್ಯಗಳೇ ಇವತ್ತು ಅಪ್ರಸ್ತುತವಾಗುತ್ತಿವೆ. ಕಡೆಯದಾಗಿ ಪೂನಾ ಒಪ್ಪಂದದ (೧೯೩೨) ಸಂದರ್ಭದಲ್ಲಿ ಅಂಬೇಡ್ಕರ್ ದಲಿತರ ಬೇಡಿಕೆಯಾದ ಕಮ್ಯೂನಲ್ ಅವಾರ್ಡ್ ಅನ್ನು ಬಿಟ್ಟುಕೊಟ್ಟು ಗಾಂಧೀಜಿಯ ಪ್ರಾಣ ಉಳಿಸಿಕೊಟ್ಟರು. ಆಗ ಗಾಂಧೀಜಿಯ ವರ್ತನೆ ಹೇಗಿತ್ತೆಂದರೆ ಚಂಡಿಹಿಡಿದ ಮಗು ತನಗೆ ಬೇಕಾದ ತಿಂಡಿಯನ್ನು ಪಡೆದಂತೆ ಎನ್ನಬಹುದು. ಹೀಗೇ ಸುಮಾರು ೨೧ ಭಾರಿ ಉಪವಾಸ ಸತ್ಯಾಗ್ರಹವನ್ನು ಹೂಡಿದ ಗಾಂಧೀಜಿ ತಮ್ಮ ಇಷ್ಟಕಾರ್ಯಗಳನ್ನು ಸಾಧಿಸಿಕೊಂಡರು. ಆದರೆ ಅಸ್ಪೃಶ್ಯರ ಪರವಾಗಿ ಯಾವತ್ತೂ ಉಪವಾಸ ಸತ್ಯಾಗ್ರಹ ಕೈಗೊಳ್ಳಲಿಲ್ಲವಲ್ಲ! ಅಸ್ಪೃಶ್ಯರ ನೋವು ಸಂಕಟದ ಅರಿವಿದ್ದರೂ ಕೂಡ ಅವರು ಏನೂ ಮಾಡದವರಾಗಿದ್ದರು. ಅಥವಾ ಕಾಂಗ್ರೆಸ್ಸಿನಲ್ಲಿದ್ದ ಸವರ್ಣೀಯ ರಾಜಕಾರಣಿಗಳನ್ನು ಮುಖಾಮುಖಿಯಾಗಿ ಎದುರಿಸಲಾರದೆ ಅಸಹಾಯಕರಾಗಿದ್ದರು. ಇವತ್ತಿನ ಮಂದಿರ-ಮಸೀದಿಯ ವಿವಾದದ ಸಂದರ್ಭದಲ್ಲಿ ಅವರೇನಾದರೂ ಇದ್ದಿದ್ದರೆ 'ಆ ಪಾಳು ನೆಲವನ್ನು ಅತ್ತಲಾಗಿ ಹಿಂದೂಗಳಿಗೇ ಬಿಟ್ಟು ಬಿಡಿ' ಎಂದು ಉಪವಾಸ ಕೂರುತ್ತಿದ್ದರೇನೋ! ಕ್ಷಮಿಸಿ. ಆದ್ದರಿಂದ ಮಹಾತ್ಮಾಜಿಯವರ ಬಗ್ಗೆ ಸಕಲ ಗೌರವಾದರ ಪೂರ್ವಕವಾಗಿ ಹೇಳಬಹುದಾದ ಒಂದು ಮಾತೆಂದರೆ, ಗಾಂಧೀವಾದವೆಂಬುದೂ ಉದಾರವಾದಿ ಮನುವಾದವೇ. ಅದು ಹಸಿದ ಹೆಬ್ಬುಲಿಯನ್ನು ತನ್ನ ಅರಿವಿಗೇ ಬಾರದಂತೆ ಆತ್ಮಹತ್ಯೆಗೆ ದೂಡಿದ ಪುಣ್ಯಕೋಟಿ ಎಂಬ ಪಶುವಿನ ಮುಗ್ಧವರ್ತನೆಯೋ ಎಂಬಂತಿದೆ. ಆದ್ದರಿಂದ ಅಸ್ಪೃಶ್ಯರು ತಮ್ಮ ಉಳಿವಿನ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾದರೆ ಗಾಂಧೀವಾದವನ್ನು ಅತ್ತ ಸರಿಸಿ, ಅಂಬೇಡ್ಕರ್ ವಾದವನ್ನು ಮುನ್ನಲೆಗೆ ತಂದುಕೊಂಡು ಕಾರ್ಯತತ್ಪರರಾಗಬೇಕು. ಆದರೆ, ಈಗ ಇವರಲ್ಲಿರುವ ಸಮಸ್ಯೆ ಎಂದರೆ ಎಡಗೈ-ಬಲಗೈ ಎಂಬ ಕಚ್ಚಾಟಗಳು ದಿನೇದಿನೆ ತಾರಕಕ್ಕೇರುತ್ತಿವೆ. ಇದರ ಲಾಭ ಯಾರಿಗೆಂಬುದನ್ನು ಅರಿತು ಆ ಎರಡೂ ಬಣಗಳು ಒಟ್ಟಿಗೆ ಕುಳಿತು ಯೋಚಿಸಿ, ಚರ್ಚಿಸಿ ಕಾರ್ಯೋನ್ಮುಖರಾಗಬೇಕಾಗಿದೆ. ಅಂತೂ ಹೊಸ ಇತಿಹಾಸದ ಸಂಧಿಕಾಲ ಇನ್ನೇನು ಸಮೀಪವಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೩೨೮ ೧೬೬೭

ತಂತ್ರಾಧ್ಯಯನದ ಜರೂರು

ಪರಂಪರೆ

ಅಲೌಕಿಕ ಆಧ್ಯಾತ್ಮಕ್ಕಿಂತ ಭಿನ್ನ ಚಿಂತನೆ ಆಚಾರಣೆಗಳನ್ನೊಳಗೊಂಡ ವಿವಿಧ ತಂತ್ರಪಂಥಗಳು ಭಾರತೀಯ ಪರಂಪರೆಯೊಳಗೆ ಪೂರ್ವೇತಿಹಾಸ ಕಾಲದಿಂದಲೂ ನಿಗೂಢವಾಗಿಯೇ ಉಳಿದಿವೆ. ಶುದ್ಧ ಅವೈದಿಕ ನೆಲೆಗಳಿಂದ ಹುಟ್ಟಿಕೊಂಡಿರುವ ಅಂತಹ ಹಲವು ತಂತ್ರಾಚರಣೆಗಳನ್ನು ಅಪಹರಿಸಿ ತನ್ನ ಅನುಕೂಲಕ್ಕೆ ತಕ್ಕಂತೆ ಪುನರ್‌ರಚಿಸಿಕೊಂಡಿರುವ ವೈದಿಕ ಆಧ್ಯಾತ್ಮದ ಬೌದ್ಧಿಕ ಕಳ್ಳತನ ಇಂದಿಗೂ ಬೂದಿ ಮುಚ್ಚಿದ ಕೆಂಡದಂತಹ ಸತ್ಯ. ಆ ಬಗೆಯ ಜೀವಪರ, ಲೌಕಿಕ ತಂತ್ರಪಂಥಗಳು ಈಗಲೂ ಬೇರೆ ಬೇರೆ ರೂಪಗಳಲ್ಲಿ ಅಲ್ಲಲ್ಲಿ ಮುಖದೋರುತ್ತಿರುವುದು ಅವುಗಳ ಸಾರ್ವಕಾಲಿಕ ಜೀವಂತಿಕೆಯ ಪ್ರಾಕೃತಿಕ ಲಕ್ಷಣ.

○ ಎಸ್.ಎಸ್. ಹಿರೇಮಠ

ಭಾರತೀಯ ಚಿಂತನೆಯ ಜೀವ ಸೆಲೆಯಾದ 'ತಂತ್ರ' ಏಕಕಾಲಕ್ಕೆ ಪ್ರೀತಿ ಮತ್ತು ದ್ವೇಷಗಳೆರಡರ ಅತಿರೇಕವನ್ನು ಗಳಿಸಿದ ಅದ್ಭುತ ಧಾರೆ. ಇಂದಿಗೂ ಕೂಡ ಅದು ಒಂದೆಡೆ ಅಶ್ಲೀಲ ಸಾಹಿತ್ಯವಾಗಿ ಜನಪ್ರಿಯವಾಗಿದ್ದರೆ ಇನ್ನೊಂದೆಡೆ, ಉನ್ನತ ಮಟ್ಟದ ಸಂಶೋಧನೆಗೆ ಆಕರವಾಗಿದೆ. ಇಂಥ ಕುತೂಹಲಕಾರಿಯಾದ, ನಿಗೂಢವಾದ ಕ್ಷೇತ್ರದ ಬಗ್ಗೆ ತುಂಬ ಸೂಕ್ಷ್ಮವಾಗಿ ವ್ಯವಹರಿಸಬೇಕಾಗುತ್ತದೆ.

ಯಾವುದೇ ಆಚರಣೆ ಮತ್ತು ನಂಬಿಕೆ ; ಅದು ಹುಟ್ಟಿದ ಕಾಲದ ಸಂದರ್ಭವನ್ನು ಆಶ್ರಯಿಸಿರುತ್ತದೆ; ಆಧರಿಸಿರುತ್ತದೆ. 'ತಂತ್ರ'ದ ಪಂಚಮ'ಮ' ಕಾರಗಳ (ಮದ್ಯ, ಮಾಂಸ, ಮತ್ಸ್ಯ, ಮೈಥುನ, ಮುದ್ರಾ) ಬಳಕೆಯ ಕುರಿತು ಪರ್ಯಾಲೋಚಿಸುವಾಗ ಈ ಮಾತನ್ನು ಗಮನದಲ್ಲಿಟ್ಟಿರಬೇಕು. ಇಲ್ಲಿ ಹೇಳಿರುವ ಐದೂ ಲೌಕಿಕ ಬದುಕಿನ ಸುಖದ ಮೂಲಾಂಶಗಳೆಂಬುದು ನಿರ್ವಿವಾದ. ಆದಿಕಾಲದ ಮಾನವ ಮಾಂಸಹಾರಿಯೆ, 'ತಂತ್ರ'ದ ವಿಶೇಷತೆ ಎಂದರೆ ಲೌಕಿಕ ಸಂತೋಷದ ಮೂಲ ಆಕರಗಳಾದ ಇವನ್ನು ದೈಹಿಕ ಸಾಧನೆಗೆ, ಕೊನೆಗೆ ಆಂತರಿಕ ಸಿದ್ಧಿಗೆ ಬಳಸಿಕೊಳ್ಳಬೇಕೆಂಬುದು. ಹಾಗೆ ನೋಡಿದರೆ ಶಿಷ್ಟರಿಗೆ ಅಶ್ಲೀಲವೆಂದು 'ಮೈಲಿಗೆ' ಎಂದು ತೋರುವ, ವಿಕೃತ ಮೈಥುನ, ಮಾಂಸಾಹಾರ, ಮದ್ಯಪಾನಗಳ ವಿಚಾರಗಳು ವೇದಗಳಲ್ಲೇ ಸಾಕಷ್ಟು ಕಡೆ ಪ್ರಸ್ತಾಪವಾಗುತ್ತವೆ. ಆದಿಕಾಲದ ಆರ್ಯರೂ ಅಂದಿನ ಇತರ ಸಮೂಹಗಳಿಗಿಂತ ಬೇರೇನಿರಲಿಲ್ಲ. ಆದರೆ ನಂತರದ ವೈದಿಕತೆ ಮಡಿ, ಮೈಲಿಗೆ, ಮೇಲು ಕೀಳು, ಶ್ರೇಷ್ಠ ಕನಿಷ್ಠಗಳ ಹುದುಲಲ್ಲಿ ಸಿಕ್ಕು ತಾನು 'ಕಮಲ'ವಾಗಿ ಅರಳಿತು. ಇದೇ ಬ್ರಾಹ್ಮಣತ್ವ. ತನ್ನ ಏಳ್ಗೆಗೆ ಉಳಿದೆಲ್ಲ ಸಂಸ್ಕೃತಿಗಳೂ 'ಕೆಸರೆ'ಂದೇ ಅದು ಭಾವಿಸಿತು.

ಇನ್ನೊಂದೆಡೆ ಮುಂಡಾ-ದ್ರಾವಿಡ ಮೂಲಕ 'ತಂತ್ರ' ಬ್ರಾಹ್ಮಣ್ಯವನ್ನು ಒಳಗೊಂಡು, ಎಲ್ಲ ಚಿಂತನೆಗಳಿಗೆ, ದರ್ಶನಗಳಿಗೆ ಕಲೆ-ವಿಜ್ಞಾನಾದಿಗಳಿಗೆ ಜೀವ ಜಲವಾಯಿತು, ತಾಯಿ ನೆಲವಾಯಿತು.

ವೈದಿಕ ವಾಙ್ಮಯ ಅಪಾರವಿರುವಂತೆ, ಈ ದೇಶಿ ವಾಙ್ಮಯವೂ ಸಮೃದ್ಧವಾಗಿದೆ. ವೈದಿಕರ ಆಕ್ರಮಣಕ್ಕೆ ತುತ್ತಾದ ಸ್ಥಳೀಯ ಸಮುದಾಯಗಳ ಜತೆ ಅದು ನೇಪಾಳ, ಟಿಬೇಟ್, ಬಂಗಾಲ, ಬಿಹಾರಗಳಂಥ ದೂರದ (ಆರ್ಯಾವರ್ತದ ಹೊರಗಿನ) ಮೂಲೆಗಳನ್ನು ಸೇರಿ ಬಚಾವಾಗುಳಿಯಲು ಯತ್ನಿಸಿತು. ಇಂದಿಗೂ 'ತಂತ್ರ' ಗ್ರಂಥಗಳು ದೊರಕುವುದೇ ಈ ನಾಡುಗಳಲ್ಲಿ. ಆದರೆ ಅವೆಲ್ಲ ಪ್ರಾದಿಮ ರೂಪದವಲ್ಲ; ಪರಿಷ್ಕಾರಗೊಂಡು, ಮಧ್ಯಯುಗದಲ್ಲಿ ಲಿಪಿತಗೊಂಡ ಕೃತಿಗಳು. ಮೇಲ್ವರ್ಗ ಮೇಲ್ಜಾತಿಗಳು ತಮ್ಮ ಹಿತಾಸಕ್ತಿಗೆ ಹೊಂದುವಂತೆ ಇವನ್ನು ದಾಖಲಿಸಿಕೊಂಡವು. ಇಂಥವುಗಳ ಮೂಲಕವೇ ಅವುಗಳ ಆದಿಮ ರೂಪಾಕೃತಿಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯ. ನಮ್ಮ ನಾಡಿನ ಶ್ರಮಿಕ ಕುಲಗಳ ಇತಿಹಾಸದ ಸಂದರ್ಭದ ವಿಚಿತ್ರ ವ್ಯಂಗ್ಯ ಇದೇ.

ಹೌದು 'ತಂತ್ರ' ಗಳು ಈ ದೇಶದ ಶ್ರಮ ಜೀವಿ ಸಮುದಾಯಗಳ ಜ್ಞಾನ ನಿಧಿ. ಅಲ್ಲಿ ಹೊಲೆಯರು, ಮಾದಿಗರು, ಬೇಡರು, ಗೊಲ್ಲರು, ಕುರುಬರು, ಕೊರಚರು, ಒಡ್ಡರು, ಉಪ್ಪಾರರು, ವಿವಿಧ ಕರಕುಶಲ ಕರ್ಮಿಕುಲಗಳು - ಇವರೆಲ್ಲರ ಅನುಭವ ಹೆಪ್ಪುಗಟ್ಟಿದೆ. ಇದು ತುಂಬ ವೈವಿಧ್ಯಮಯವಾಗಿದೆ, ಅಪಾರವಾಗಿದೆ. ಹಲವಾರು ರೂಪಾಕೃತಿಗಳಲ್ಲಿ ಚೆಲ್ಲವರಿದಿದೆ. ಭಾರತೀಯ ಪ್ರಾದಿಮ ಕಲೆವಿಜ್ಞಾನ ದರ್ಶನಗಳ ಹುಟ್ಟಿಗೆ ಕಾರಣವಾಗಿದೆ. 'ದರ್ಶನ' ಕ್ಷೇತ್ರದಲ್ಲಿ ಭೌತವಾದಿಗಳಿಗೆ ಆಹಾರವಾಗಿರುವಂತೆ, ಆಧ್ಯಾತ್ಮವಾದಿಗಳೂ ಅದನ್ನು ದೋಚಿದ್ದಾರೆ. ಲೌಕಿಕ ಸಾಧನೆಗೆ ಆಸ್ಪದವಾಗಿರುವಂತೆ, ಆತ್ಮಿಕ ಸಿದ್ಧಿಗೆ ಉಪಕರಣವೂ ಆಗಿದೆ. ಅಂದರೆ ಇದರರ್ಥವೇನು? ಏಕೆಂದರೆ ಭೌತವಾದ, ಆಧ್ಯಾತ್ಮವಾದಗಳು ತದ್ವಿರುದ್ಧ ನೆಲೆಗಳು. ತಂತ್ರ ಎರಡಕ್ಕೂ ಹೊಂದುತ್ತದೆಂದರೆ ಏನೆಂದಾಯಿತು ?

'ತಂತ್ರ' ಒಂದೇ ಏಕೆ, ನಮ್ಮ ದೇಶದ ಮೊದಲ ತತ್ವಜ್ಞಾನಗಳೆಲ್ಲವೂ ಜಾತ್ಯತೀತ ('ಸೆಕ್ಯೂಲರ್') ಉದಾರ (ಲಿಬರಲ್), 'ಅವೈದಿಕ' ಮತ್ತು ಇವೆಲ್ಲಕ್ಕೆ ಕಳಸವಿಟ್ಟಂತೆ 'ನಾಸ್ತಿಕ', ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆಗಳು ಈ ನಿದರ್ಶನಗಳು. ವಿವಿಧ ಬಗೆಯ ಶೈವ, ಶಾಕ್ತಗಳನ್ನು ಇವುಗಳ ಜತೆ ಸೇರಿಸಬಹುದು. ಇವೆಲ್ಲವನ್ನು ನಂತರದ ಬೌದ್ಧ, ಜೈನ, ವೇದಾಂತಾದಿ ಅವೈದಿಕ ಧರ್ಮ ದರ್ಶನಗಳು ವಿಪುಲವಾಗಿ ಬಳಸಿಕೊಂಡವು.

ಆಸ್ತಿಕ-ನಾಸ್ತಿಕರಿಬ್ಬರೂ ಈ ಮೂಲಧಾರೆಗಳಿಗೆ ಋಣಿಯಾದರು. ಆಸ್ತಿಕರ ಹಾವಳಿ ಹೆಚ್ಚಾಯಿತೇಕೆಂದರೆ ಆಳುವ ಪ್ರಭುತ್ವ ಅವರಿಗೆ ಆಶ್ರಯ ನೀಡಿತು. ಈ ಶೋಷಕ ವರ್ಗದ ಸಮರ್ಥನೆ, ಪ್ರತಿಪಾದನೆಗೆ ನಿಂತವು 'ಆಸ್ತಿಕ ಮತ ತತ್ವ'ಗಳು. 'ನಾಸ್ತಿಕ ತತ್ವ'ಗಳನ್ನು ನಿರಂತರವಾಗಿ ತುಳಿಯುತ್ತ ಸರ್ವನಾಶ ಮಾಡುತ್ತ ಬರಲಾಯಿತು. ಆದರೂ ಅದು ಎಲ್ಲೆಲ್ಲಿಯೋ ಅಡಗಿ ಉಸಿರು ಹಿಡಿದುಕೊಂಡಿತು.

ಖೇದದ ಸಂಗತಿ ಎಂದರೆ ನಮ್ಮ ದುಡಿಯುವ ಜನ ಕುಲಗಳು, ಅವನ್ನು ಪ್ರತಿನಿಧಿಸುವ ವಿದ್ವಾಂಸರು, ಸಂಘಟಕರು, ಹೋರಾಟಗಾರರು, ಈ 'ಚಿಂತನೆ'ಯ ಮಹತ್ವವನ್ನೇ ಮನಗಾಣದಂತಿರುವುದು. ತಾನೇ ಭಾರತದ ಏಕೈಕ ಪ್ರಧಾನಧಾರೆಯೊ ಎಂಬಂತೆ ವಿಜೃಂಭಿಸುತ್ತಿರುವ 'ಹಿಂದೂ ಕೋಮುವಾದಿ' ಸಾಂಸ್ಕೃತಿಕ ರಾಜಕೀಯ ಹುನ್ನಾರಗಳಿಗೆ ನಮ್ಮ ಯುವ ಪೀಳಿಗೆ, ಶೋಷಿತ ಜನ ಕುಲಬಾಂಧವರು ಬಲಿಯಾಗುತ್ತಿರುವುದು. ಬಹುಮುಖೀ ಸಂಸ್ಕೃತಿ, ಚಿಂತನೆಗಳು ಕಣ್ಮರೆಯಾಗಿ ಏಕಮುಖೀ ವಿಚಾರದ ವಿಕಾರಕ್ಕೆ ತುತ್ತಾಗುವುದೇ ರಾಷ್ಟ್ರಪ್ರೇಮವಲ್ಲ.

'ತಂತ್ರ'ದಲ್ಲಿರುವ ಇತ್ಯಾತ್ಮಕ ಮತ್ತು ಉತ್ತಮಾಂಶಗಳ ಕುರಿತು ಚರ್ಚೆಗೆ ಸಾಕಷ್ಟು ಅವಕಾಶವಿದೆ. ನಿದರ್ಶನಕ್ಕೆ ಮಹಿಳೆಯರ ಕುರಿತ ತಂತ್ರದ ದೃಷ್ಟಿಕೋನ-ಇಂದಿನ ಸ್ತ್ರೀವಾದಿ ಚಿಂತನೆ ಮತ್ತು ಮಹಿಳಾ ವಿಮೋಚನಾ ಚಳವಳಿಗಳಿಗೆ ಬಹಳಷ್ಟು ಪ್ರೇರಣೆ, ಸ್ಫೂರ್ತಿ ನೀಡಬಲ್ಲದು. ಅವುಗಳಿಗೆ ಹೊಸ ಆಯಾಮವನ್ನೇ ಕೊಡಬಲ್ಲದು. 'ದೇಸೀಯತೆ'ಯ ಕುರಿತ ಪ್ರಸ್ತುತ ಸಂದರ್ಭದ ಹುಡುಕಾಟಕ್ಕೆ 'ತಂತ್ರ' ದೊಡ್ಡ ಆಕರವಾಗುತ್ತದೆ. ಸಂಸ್ಕೃತಿ ಶೋಧಕರು ಮುಟ್ಟಬೇಕಾದ 'ಗಂಗೋತ್ರಿ' ಕೂಡ ಅದೇ. ಕಲೆ ವಿಜ್ಞಾನಗಳ ಸಂಶೋಧಕ ಇದನ್ನು ನಿರ್ಲಕ್ಷಿಸುವಂತಿಲ್ಲ. ದಲಿತರು ಮತ್ತು ತಳ ವರ್ಗ ಜಾತಿಗಳು ತಮ್ಮ ವಿಮೋಚನೆಗಾಗಿ ಮಾಡಬೇಕಾದ ಹೋರಾಟಕ್ಕೆ, ಅನನ್ಯ 'ತಾತ್ವಿಕನೆಲೆ' ಇರುವುದೇ ತಂತ್ರದಂಥ ನಮ್ಮ ಮೂಲಗಳಲ್ಲಿ. ಅದರ ಜತೆ ಇಂದಿನ ಅಂಬೇಡ್ಕರ್, ಪೆರಿಯಾರ್, ಲೋಹಿಯ, ಮಾರ್ಕ್ಸ್ ಚಿಂತನೆಗಳು ಅತ್ಯಗತ್ಯ, ಅನಿವಾರ್ಯ ಎಂಬುದನ್ನು ಮರೆಯಬಾರದು.

ಏಕೆಂದರೆ ಎಷ್ಟೇ 'ಅಭಿಮಾನ'ದ ಮಾತನ್ನು ಆಡಿದರೂ 'ತಂತ್ರ'ಕ್ಕೆ ಅದರದೇ ಆದ ಗಂಭೀರ ಇತಿ ಮಿತಿಗಳಿವೆ. ಅದು ಯಾವ ಕಾಲದಲ್ಲಿ ಹುಟ್ಟಿತೋ ಆ ಕಾಲದ ಇತಿ ಮಿತಿಗಳವು. ಅದನ್ನು ಯಥಾವತ್ತಾಗಿ ಇಂದು ಸ್ವೀಕರಿಸಲಿಕ್ಕಾಗದು. ಅದರಲ್ಲಿ ಪ್ರಗತಿಪರ ಹೋರಾಟಕ್ಕೆ ನೆರವಾಗುವ ಜೀವಂತ ಅಂಶಗಳನ್ನು ಹೆಕ್ಕಬೇಕು ನಿರ್ಜೀವ ಸಂಗತಿಗಳನ್ನು ಕೈ ಬಿಡಬೇಕು. ಈವರೆಗೆ ನಿರ್ವಚಿಸಲಾದ ವಿಚಾರಗಳಿಗೆ ಈಗ ಸಾಕ್ಷಿ, ಪುರಾವೆಗಳನ್ನು ಹೀಗೆ ಒದಗಿಸಬಹುದು-

ಈ ದೇಶದ ಸಂಗೀತ ಜ್ಞಾನಕ್ಕೆ ಸಂಬಂಧಿಸಿ ದೊರಕುವ ಮೊಟ್ಟಮೊದಲ ಕೃತಿ 'ಬೃಹದ್ದೇಶಿ'. ಇದನ್ನು ರಚಿಸಿದವ ಮತಂಗಮುನಿ. ಈತ ಹಂಪಿಯ ಮತಂಗ ಪರ್ವತದಲ್ಲಿ ಸಂಗೀತ ಶಾಲೆ ನಡೆಸುತ್ತಿದ್ದ ಮಹಾಜ್ಞಾನಿ, 'ತಾಂತ್ರಿಕ'. ನಮಗಿಲ್ಲಿ ತುಂಬ ಮುಖ್ಯವಾಗುವ ಅಂಶವೆಂದರೆ ಈತ 'ಮಾದಿಗ' ಕುಲದವ ಎಂಬುದು. ಮೂಲದಲ್ಲಿ ಆಂಧ್ರದವರಾದ ಮಾದಿಗರು ಕರ್ನಾಟಕದಲ್ಲೂ ವ್ಯಾಪಕವಾಗಿ ಹಿಂದೆಯೇ ಹಬ್ಬಿ ಹರಡಿದರು. ಈ ಕೃತಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ.

ಈ ಮಾದಿಗ ಕುಲದವಳಾದ 'ಮಾತಂಗಿ' ತಂತ್ರಜ್ಞಾನ ಕ್ಷೇತ್ರದ ಅತ್ಯಂತ ಪ್ರಧಾನವಾದ 'ಶಕ್ತಿ'. ಇದರ ವಿವರಗಳನ್ನು ಇಲ್ಲಿ ವಿಸ್ತರಿಸಲು ಅವಕಾಶವಾಗಲಾರದು. 'ಮಾದಿಗ' ಎಂಬ ದ್ರಾವಿಡ ಪದದಿಂದಲೇ ಸಂಸ್ಕೃತ ವಾಙ್ಮಯದಲ್ಲಿ ಮಾತಂಗ ಎಂಬ ಆದಿಮ ರಾಜ ಕುಲದ ಬಗ್ಗೆ ಸಾಕಷ್ಟು ವಿವರಗಳು ಗೊತ್ತಿರುತ್ತವೆ. ನಮ್ಮ ಜನಪದ ಸಂಸ್ಕೃತಿ ಪ್ರಪಂಚದಲ್ಲಿ ಮಾತಂಗಿಯ ಪ್ರಾಮುಖ್ಯತೆಯನ್ನು ಪ್ರತ್ಯೇಕವಾಗಿ ನೆನಪಿಸಲೇಬೇಕು. ದುರುಗಮ್ಮ 'ದುರ್ಗೆ'ಯಾದ ಕತೆಗೆ ಇದು ನಿಕಟವಾಗಿ ಸಂಬಂಧಿಸಿದೆ. ಏಕೆಂದರೆ ಮಾತಂಗಿಯೆ ದುರುಗಮ್ಮ ಮಾತಂಗಿಯರೇ 'ದುರುಗೇರು'. ಈ ಕುರಿತು ತುಂಬ ಆಳವಾದ ಸಂಶೋಧನೆ ಸಾಧ್ಯವಿದೆ.

ಆರ್.ಎಸ್. ಶರ್ಮ ಎಂಬ ಪ್ರಖ್ಯಾತ ಇತಿಹಾಸಕಾರ ಹೇಳುವಂತೆ 'ಮತಂಗ' ಪಾರಮೇಶ್ವರ ತಂತ್ರ ಆಂಧ್ರ ಮತ್ತು ಪೂರ್ವ ಮಧ್ಯ ಪ್ರದೇಶದ ಮಾದಿಗರಲ್ಲಿ ಹುಟ್ಟಿದೆ. ದಕ್ಷಿಣ ಭಾರತದಲ್ಲಿ 'ಮಾತಂಗ ಆಗಮ' ದೊರಕಿದೆ. 'ಸವರೋ'ಗಳಲ್ಲಿ 'ಸವರ ತಂತ್ರ' ಇದೆ. ಹೀಗೆ ಅಸಂಖ್ಯ ತಂತ್ರಗಳು ಮುಂಡಾ ಮತ್ತು ದ್ರಾವಿಡ ಬುಡಕಟ್ಟುಗಳಲ್ಲಿ ಹುಟ್ಟಿವೆ. ಜೈನ ಮತ್ತು ಬೌದ್ಧರ ಮೇಲೆ ಕರ್ನಾಟಕದ ಮತ್ತು ಆಂಧ್ರದ ತಾಂತ್ರಿಕರ ತೀವ್ರ ಪ್ರಭಾವ ಉಂಟಾಗಿ ಅವುಗಳಲ್ಲಿ ಪ್ರತ್ಯೇಕ ಪಂಥಗಳೇ ಹುಟ್ಟಿದವು. ಜೈನರಲ್ಲಿ 'ಜ್ವಾಲಿನಿ ಕಲ್ಪ', ಭೈರವ ಪದ್ಮಾವತಿ ಕಲ್ಪ' ಅವರ ತಾಂತ್ರಿಕ ಗ್ರಂಥಗಳು; ಸಹಜಯಾನ ಮತ್ತು ವಜ್ರಯಾನಗಳು ಬೌದ್ಧ ತಂತ್ರ ಪಂಥಗಳು.

ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟ ಮಾಡಿರುವ 'ಶಿವತತ್ತ್ವ ರತ್ನಾಕರ' ಎಂಬ ವಿಶ್ವಕೋಶದಂಥ ಗ್ರಂಥದಲ್ಲಿ 'ಹರಮೇಖಲಾ ತಂತ್ರ' ಎಂಬ ಸಣ್ಣ ತಂತ್ರ ಗ್ರಂಥ ಸೇರ್ಪಡೆಯಾಗಿದೆ. (ಸಂಪಾದಕರು ಅದನ್ನು 'ಇಂದ್ರಜಾಲ' ಎಂದು ತಪ್ಪಾಗಿ ಭಾಪಿಸಿದ್ದಾರೆ) ತಂತ್ರ ಗ್ರಂಥಗಳು ವೈದಿಕ ಗ್ರಂಥಗಳಿಗಿಂತ ಹಲವಾರು ಪಟ್ಟು ಹೆಚ್ಚಿವೆ. ಅವುಗಳಲ್ಲಿ ಕೆಲವು ಹೀಗಿವೆ--

'ಹೇವಜ್ರ ತಂತ್ರ', 'ಸಿದ್ಧಪಂಚಶಿಖಾ' 'ಕುಲಾರ್ಣವ ತಂತ್ರ', 'ಕುಬ್ಜಿಕಾ ಮತ ತಂತ್ರ', 'ನಿಶ್ವಾಸ ಸಂಹಿತಾ',

'ತಂತ್ರ' ಗಳು ಈ ದೇಶದ ಶ್ರಮಜೀವಿ ಸಮುದಾಯಗಳ ಜ್ಞಾನ ನಿಧಿ. ಅಲ್ಲಿ ಹೊಲೆಯರು, ಮಾದಿಗರು, ಬೇಡರು, ಗೊಲ್ಲರು, ಕುರುಬರು, ಕೊರಚರು, ಒಡ್ಡರು, ಉಪ್ಪಾರರು, ವಿವಿಧ ಕರಕುಶಲ ಕರ್ಮಿಕುಲಗಳು - ಇವರೆಲ್ಲರ ಅನುಭವ ಹೆಪ್ಪುಗಟ್ಟಿದೆ. ಹಲವಾರು ರೂಪಾಕೃತಿಗಳಲ್ಲಿ ಚಲ್ಲವರಿದಿದೆ. ಭಾರತೀಯ ಪ್ರಾದಿಮ ಕಲೆವಿಜ್ಞಾನ ದರ್ಶನಗಳ ಹುಟ್ಟಿಗೆ ಕಾರಣವಾಗಿದೆ. 'ದರ್ಶನ' ಕ್ಷೇತ್ರದಲ್ಲಿ ಭೌತವಾದಿಗಳಿಗೆ ಆಹಾರವಾಗಿರುವಂತೆ, ಆಧ್ಯಾತ್ಮವಾದಿಗಳೂ ಅದನ್ನು ದೋಚಿದ್ದಾರೆ.

ಸವ್‌ಜ್ಞಾನನೋತ್ತರ ತಂತ್ರ','ಯೋಗರತ್ನ ಮಾಲಾ', ' ಪಾರಮೇಶ್ವರಿ ತಂತ್ರ,', 'ಕಿರಣ ತಂತ್ರ'.

ಬೌದ್ಧರ ತಂತ್ರ ಗ್ರಂಥಗಳು-'ಗುಹ್ಯ ಸಮಾಜ','ವಜ್ರ ಶಿಖರ','ಸರ್ವತಥಾಗತ ತತ್ವ ಸಂಗ್ರಹ','ಮಹಾವೈರೋಚನ' 'ಕೌಲ ಚೂಡಾಮಣಿ', 'ವಾರಾಹಿ ತಂತ್ರ', 'ವಜ್ರ ಯೋಗಿಣಿ ಸಾಧನಾ', 'ತಂತ್ರಲೋಕ','ಸಿದ್ಧಯೋಗೇಶ್ವರಿ ಮತ', 'ಅನಾಮಕತಂತ್ರ' 'ಮಾಲಿನೀ ವಿಜಯೋತ್ತರ' 'ಕಾಮಿಕಾಗಮ' ಇತ್ಯಾದಿ. ತಂತ್ರದಲ್ಲಿ ಅನೇಕ ವಿಭಾಗಗಳಿದ್ದು 'ಪೂರ್ವ'ದಲ್ಲಿ ೨೮, 'ಉತ್ತರ'ದಲ್ಲಿ ೨೪, 'ಪಶ್ಚಿಮ'ದಲ್ಲಿ ೨೦, 'ದಕ್ಷಿಣ'ದಲ್ಲಿ ೨೨ ಗ್ರಂಥಗಳಿವೆ. ಇವುಗಳಲ್ಲಿ ಹಲವಾರು ಪ್ರಕಟವಾಗಿವೆ. ಉದಾಹರಣೆಗೆ 'ಪೂರ್ವ'ದ ಗಾರುಡ ತಂತ್ರ ಗ್ರಂಥಗಳು-೧, ಹರಂ, ೨. ಹುಂಕಾರಂ, ೩. ಬಿಂದುಸಾರಂ, ೪. ಕಲಾಮೃತಂ, ೫. ಶಬರಂ, ೬. ಪಕ್ಷಿರಾಜಂ, ೭. ಪಂಚಭೂತಂ ಇತ್ಯಾದಿ, ದಕ್ಷಿಣ ತಂತ್ರಗ್ರಂಥಗಳು ೧.ಸ್ವಚ್ಛಂಧ ಭೈರವಂ, ೨. ಚಂಡ ಭೈರವಂ, ೩.ಕ್ರೋಧ ಭೈರವಂ, ೪. ಉನ್ಮತ್ತ ಭೈರವಂ ಇತ್ಯಾದಿ. ಯಾಮಲ ಗ್ರಂಥಗಳು, ಪೀಠ ಗ್ರಂಥಗಳು (ಮಂತ್ರಪೀಠ, ವಿದ್ಯಾಪೀಠ, ಮುದ್ರಾಪೀಠ, ಮಂಡಲಪೀಠ), ಆಗಮ ಗ್ರಂಥಗಳು, ಆಮ್ನಾಯ ಗ್ರಂಥಗಳು (ಪೂರ್ವಾಮ್ನಾಯ, ಪಶ್ಚಿಮಾಮ್ನಾಯ ಇತ್ಯಾದಿ) ಹೀಗೆ ತಂತ್ರ ಪ್ರಪಂಚ ತುಂಬ ದೊಡ್ಡದು. (ನೋಡಿ-ಡಿಜ್ ಕೋವಸ್ಕಿ ಮತ್ತು ಭಟ್ಟಾಚಾರ್ಯ ಮೊದಲಾದವರ ಗ್ರಂಥಗಳು)

ದಲಿತ ಸಂಘಟನೆ ಮತ್ತು ಹೋರಾಟದಲ್ಲಿ ಪ್ರೀತಿ ಇರುವ ವಿದ್ವಾಂಸರು ಒಂದೆಡೆ ಕಲೆತು, ಶಿಸ್ತುಬದ್ಧವಾಗಿ ವ್ಯವಸ್ಥಾಬದ್ಧವಾಗಿ ಶೋಧನೆಗೆ ತೊಡಗಿಕೊಂಡರೆ ಮಾತ್ರ ಭಾರತೀಯ ಶ್ರಮಿಕ ಜನತೆಯ ಒಟ್ಟು ಹೋರಾಟಕ್ಕೆ ಬೇಕಾದ ಅದ್ಭುತ ತಾತ್ವಿಕ ನೆಲೆಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿದೆ. ಏಕೆಂದರೆ ಇದು ಒಬ್ಬ ವ್ಯಕ್ತಿಯಿಂದ ಪೂರ್ಣಗೊಳ್ಳುವ ಕೆಲಸವಲ್ಲ. ಸಾಮೂಹಿಕ ನೆಲೆಯ ಸುಸಂಘಟಿತ ಪ್ರಯತ್ನದ ಜರೂರಿದೆ. ಈ ನಿಟ್ಟಿನತ್ತ 'ಸಂವಾದ' ಬಳಗ ಆಲೋಚಿಸಬೇಕೆಂದು ಒತ್ತಾಯಿಸುತ್ತೇನೆ. ನೇಪಾಳ, ಟಿಬೇಟ್, ಭೂತಾನ್, ಸಿಕ್ಕಿಂ, ಚೀನಾ ಮೊದಲಾದೆಡೆ ದೊರಕುವ ತಂತ್ರ ಗ್ರಂಥಗಳನ್ನು ತರಿಸಿಕೊಳ್ಳಬೇಕಾಗುತ್ತದೆ. ವಿಭಾಗಗಳಾಗಿ ಹಂಚಿಕೊಂಡು ಗಂಭೀರವಾಗಿ, ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ, ಕ್ಷೇತ್ರ ಕಾರ್ಯ ಕೈಕೊಳ್ಳಬೇಕಾಗುತ್ತದೆ. ಫಲಿತಗಳನ್ನು ಪ್ರಕಟಿಸುವಂತಾಗಬೇಕಾಗುತ್ತದೆ. ಇದಕ್ಕೆಂದು ಯೋಜನೆ ಸಿದ್ಧವಾಗಬೇಕಾಗುತ್ತದೆ.

ರಾಷ್ಟ್ರೀಯ ವಿಮೋಚನಾ ಚಳವಳಿಯ ಸಂದರ್ಭದಲ್ಲಿ ಗಾಂಧೀ, ತಿಲಕ್, ಠಾಕೂರ್, ರಾಧಾಕೃಷ್ಣನ್, ಅರವಿಂದೋ, ವಿವೇಕಾನಂದ ಮೊದಲಾದವರು ಜನವಿರೋಧಿಯಾದ 'ವೇದಾಂತ ' ಕ್ಕೆ ಒತ್ತುಕೊಟ್ಟದರ ದುಷ್ಪರಿಣಾಮವೇ ಇಂದಿನ ಹಿಂದೂವಾದಿ ಅತಿರೇಕಗಳು ವಿಜೃಂಭಿಸುತ್ತಿರುವುದಕ್ಕೆ ಕಾರಣ. ಆಗ ತಂತ್ರಾದಿ ಅವೈದಿಕ ಧಾರೆಯನ್ನು ನಿರ್ಲಕ್ಷಿಸಲಾಯಿತು. ಜಾತ್ಯತೀತ, ನಾಸ್ತಿಕ ಚಿಂತನಾ ಧಾರೆಯನ್ನು ಉದ್ದೇಶಪೂರ್ವಕವಾಗಿ, ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಯಿತು. ಅಪಪ್ರಚಾರ ಮಾಡಲಾಯಿತು.

ಇಂದಿನ ತೀವ್ರತರ ತಾತ್ವಿಕ ಬಿಕ್ಕಟ್ಟಿನ ಸಂದರ್ಭ ನಮ್ಮ ಅದ್ಭುತ ಪರಂಪರೆಯ ಮರು ಶೋಧನೆಗೆ ಒತ್ತಾಯಿಸುತ್ತಿದೆ. □

ಧಮ್ಮ ಸ್ವೀಕಾರ : ದೃಷ್ಟಿಕೋನ - ೧

ದಲಿತರಿಗೆ ಸೀಮಿತವಾಗಿರಬಾರದು.

ಚರ್ಚೆ

ಆದಿಕಾಲದಿಂದಲೂ ದಲಿತರ ಬದುಕಿನ ವ್ರಣದಂತೆ ಬಾಧಿಸುತ್ತಿರುವ 'ಅಸ್ಪೃಶ್ಯತೆ'ಯನ್ನು ನೀಗಿಕೊಳ್ಳಲು ಅಂಬೇಡ್ಕರ್ ಆದಿಯಾಗಿ ಎಲ್ಲರೂ ಕಂಡುಕೊಂಡಿರುವ ಮದ್ದು ಮತಾಂತರ. ಅಸ್ಪೃಶ್ಯತೆಯ ಕಳಂಕದಿಂದ ಕಳಚಿಕೊಳ್ಳಲು ದಲಿತರಿಗೆ ಬೌದ್ಧಧರ್ಮ ಮೋಕ್ಷ ಮಾರ್ಗವಾಗಿ ಕಾಣುತ್ತಿದ್ದರೆ ಇನ್ನೊಂದೆಡೆ ಕೇಂದ್ರ ಸರ್ಕಾರ 'ಮತಾಂತರ ನಿಷೇಧ ಕಾಯ್ದೆ'ಯನ್ನು ಜಾರಿಗೊಳಿಸಲು ಪಿತೂರಿ ಹೂಡುತ್ತಿದೆ. ಬೌದ್ಧ ಧರ್ಮವನ್ನು ಸ್ವೀಕರಿಸದೆ ದಲಿತರಿಗೆ ಅಸ್ಪೃಶ್ಯತೆಯಿಂದ ವಿಮೋಚನೆಯೇ ಇಲ್ಲ ಎಂದು ಬಹುತೇಕ ಎಲ್ಲರೂ ವಾದಿಸುತ್ತಿರುವ ಈ ಹೊತ್ತಿನಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವುದನ್ನು ಕುರಿತ ಎರಡು ಅಭಿಪ್ರಾಯಗಳು ಇಲ್ಲಿವೆ.

○ ಡಾ|| ರಾಜೇಂದ್ರ ಬಿ. ದೊಡ್ಡಮನಿ

ಕತ್ತಲಾಗುತ್ತಿದ್ದ ಏಷ್ಯಖಂಡಕ್ಕೆ ಬೆಳಕಿನ ಜ್ಯೋತಿಯನ್ನು ಮೂಡಿಸಿದ ಮಹಾನ್ ಚಾರಿತ್ರಿಕ ವ್ಯಕ್ತಿಯೇ ಭಗವಾನ್ ಗೌತಮ ಬುದ್ಧ. ಭಾರತದ ಮಹಾನ್ ಕ್ರಾಂತಿಕಾರಕ ತತ್ವವೇತ್ತರಲ್ಲಿ ಅವರು ಬಹುಶಃ ಮೊದಲಿಗರು. ವೇದಗಳೇ ಪ್ರಮಾಣವೆಂಬ ನಂಬಿಕೆಯನ್ನು, ಅವುಗಳ ಅಧಿಕಾರವನ್ನು ತಿರಸ್ಕರಿಸಿದ ಮಹಾನ್ ಚೇತನ. ಅದರಂತೆಯೇ ವರ್ಣ ವ್ಯವಸ್ಥೆಯನ್ನು ಖಂಡಿಸಿದರು. ಅದರ ಜೊತೆಗೆ ಯಾವುದೇ ಪವಿತ್ರ ಗ್ರಂಥಗಳ ಪ್ರಮಾಣಕ್ಕಿಂತಲೂ ತರ್ಕಬದ್ಧ ವಿಚಾರದಿಂದ ಸತ್ಯಾನ್ವೇಷಣೆ ಸಾಧ್ಯವೆಂದು ಸಾರಿದರು. ಅವರ ಚಿಂತನೆ ಮತ್ತು ಸಂವಾದಗಳು ಇದೇ ಮಾತನ್ನು ಬಿಂಬಿಸುತ್ತವೆ. ಹೀಗೆ ಸುಮಾರು ೨೫೦೦ ವರ್ಷಗಳಷ್ಟು ಪ್ರಾಚೀನವಾದ ಬೌದ್ಧಧರ್ಮದ ತತ್ವವು, ಪರಸ್ಪರ ಪ್ರೀತಿ-ಗೌರವ, ಶಾಂತಿ-ಸಮಾನತೆ ಮತ್ತು ಅಹಿಂಸೆಯುತ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧಧರ್ಮ ಇಂದಿಗೂ ತನ್ನ ಪ್ರಸುತ್ತವನ್ನು ಕಾಪಾಡಿಕೊಂಡು ಬಂದಿದೆ.

ಈ ಧರ್ಮದ ಇನ್ನೊಂದು ವಿಶಿಷ್ಟ ಗುಣವೆಂದರೆ, ಸತ್ಯವನ್ನು ಹುಡುಕಿ ಆ ಸತ್ಯದ ಸ್ವರೂಪವನ್ನು ಜನ ಸಾಮಾನ್ಯರಿಗೂ ಪರಿಚಯಿಸಿ ಒತ್ತಾಯವಿಲ್ಲದ ಎಲ್ಲರೂ ಒಪ್ಪುವ ವೈಜ್ಞಾನಿಕ ವಿಚಾರಗಳನ್ನು ಮಂಡಿಸುವುದರ ಮೂಲಕ ಜನಸಾಮಾನ್ಯರ ಜನಮೆಚ್ಚುಗೆಯನ್ನು ಗಳಿಸಿಕೊಂಡಿರುವುದು ಈ ಧರ್ಮದ ಪ್ರಮುಖ ತತ್ವವಾಗಿದೆ. ಇಂಥ ಉತ್ತಮ ಕಾರ್ಯ, ನಡತೆ ಮತ್ತು ದೃಢ ಮನಸ್ಸುಗಳ ತಳಹದಿಯ ಮೇಲೆ ನಿಂತ ಜಾತಿರಹಿತವಾದ ಧರ್ಮವಾಗಿದೆ.

ಹೀಗೆ ತನ್ನ ಪ್ರಸುತ್ತತೆಯನ್ನು ಹೊಂದುತ್ತಾ ಬಂದ ಬೌದ್ಧಧರ್ಮವನ್ನು ೨೦ನೇ ಶತಮಾನದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಅವರು ಸ್ವೀಕರಿಸಿದ್ದರಿಂದ ಭಾರತದಲ್ಲಿ ಪಾಮುಖ್ಯ ಪಡೆಯಿತು. ಇದೇ ಸಂದರ್ಭದಲ್ಲಿ ಈ ದೇಶದ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕ್ರೂರವಾದ ಮೌಢ್ಯತೆಯು ಬೆಳೆಯಲಾರಂಭಿಸಿತು. ಜಾತೀಯತೆ, ಅಸಮಾನತೆ ಮತ್ತು ಅಂಧಕಾರದಂತ ಅಮಾನವೀಯತೆ ಯನ್ನೇ ಹಿಂದೂ ಧರ್ಮ ತನ್ನ ಸಾಮಾಜಿಕ ಸಂದೇಶವಾಗಿ ಮಾಡಿಕೊಂಡಿತು. ಈ ಎಲ್ಲಾ ಸಂಕೋಲೆಗಳಿಂದ ಹೊರ ಬರಲು ಡಾ|| ಬಿ.ಆರ್.ಅಂಬೇಡ್ಕರ್ ಅವರು ಮೊದಲು 'ಎಚ್ಚರಗೊಳಿಸಿದ್ದೇ' ದಲಿತರನ್ನು. ಅವರು ೧೯೩೫ರಲ್ಲಿ ದಲಿತರನ್ನು ಹೀನಾಯವಾಗಿ ಕಾಣುವ ಹಿಂದೂ ಧರ್ಮವನ್ನು ತೊರೆದು ಬೌದ್ಧಧರ್ಮಕ್ಕೆ ಮತಾಂತರಗೊಳ್ಳಲು ತಮ್ಮ ಎಚ್ಚರಿಕೆಯ ನಿಲುವನ್ನು ಈ ರೀತಿಯಾಗಿ ವ್ಯಕ್ತಪಡಿಸಿದರು.

"I was born a Hindu and I had no choice about that, but I will not die a Hindu" ಈ ನಿರ್ಧಾರವನ್ನು ವ್ಯಕ್ತಪಡಿಸಲು ಹಿಂದೂ ಧರ್ಮದಲ್ಲಿದ್ದ ಅಸ್ಪೃಶ್ಯತೆ, ಅಸಮಾನತೆ ಮತ್ತು ಅಮಾನವೀಯತೆ. ಅಂತೆಯೇ ಡಾ|| ಅಂಬೇಡ್ಕರ್ ನೊಂದು ಹೀಗೆ ನುಡಿದರು, 'ಹಿಂದೂ ಧರ್ಮ ನಮ್ಮನ್ನು (ಅಸ್ಪೃಶ್ಯರನ್ನು) ಸರ್ವನಾಶ ಮಾಡಿದೆ. ಒಂದು ದಿನ ಈ ಧರ್ಮ ನಾಶವಾಗುತ್ತದೆ. ಕೊನೆಗೆ ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಬುದ್ಧಿಜೀವಿಗಳು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡುವ ಸಂದರ್ಭ ಬಂದಿದೆ.

ಬೌದ್ಧಧರ್ಮವು ಭಾರತ ಭೂಮಿಯಲ್ಲಿ ಹುಟ್ಟಿದ ಅಪ್ಪಟ ಶ್ರೇಷ್ಠ ಮಾನವ ಧರ್ಮವೆಂಬುದನ್ನು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಗೌತಮ ಬುದ್ಧನು ಸುಮಾರು ಏಳು ವರ್ಷಗಳ ಕಾಲ ಮಾಡಿದ ಕಠಿಣ ತಪಸ್ಸಿನ ಫಲದಿಂದ ಈ ಸಾವಿರಾರು ವರ್ಷಗಳಿಂದ ಸಾಮಾಜಿಕ ನ್ಯಾಯಕ್ಕಾಗಿ ಕಾದು ಕುಳಿತ ಜನ ಸಮುದಾಯಕ್ಕೆ ಸ್ಫೂರ್ತಿ, ಚೇತನ ತಂದುಕೊಟ್ಟ ಮಹಾನ್ ಧರ್ಮವೇ ಬೌದ್ಧಧರ್ಮ. ಹಾಗಾಗಿ ಬೌದ್ಧಧರ್ಮವು ತನ್ನ ನೀತಿಯನ್ನು ಏಷ್ಯಖಂಡವಲ್ಲದೆ, ಟಿಬೆಟ್, ಚೀನಾ, ಜಪಾನ್, ಮಧ್ಯ ಏಶಿಯಾಗಳಲ್ಲೂ, ಬರ್ಮಾ, ಸಿಂಹಳ, ದಕ್ಷಿಣ ಪೂರ್ವ ದೇಶಗಳಲ್ಲೂ ವ್ಯಾಪಕವಾಗಿ ಹರಡಿ ಪ್ರಪಂಚದ ಮಾನವ ಜನಾಂಗಕ್ಕೆ ಪರಿಚಯ ವಾಯಿತು. ಈ ತಿರುಳೇ ಜಗತ್ತಿನ ಎಲ್ಲಾ ಜನ ಸಮುದಾಯದವರನ್ನು 'ಎಚ್ಚರಗೊಳಿಸುವ' ತತ್ವ ಈ ಧರ್ಮದ ಮೂಲ ಪದವಾಯಿತು.

ಅಂತೆಯೇ ಬೌದ್ಧಧರ್ಮದ ಸತ್ಯಶೋಧನೆಯ ರೀತಿ ಭಾರತೀಯ ತರ್ಕಶಾಸ್ತ್ರ ಅಥವಾ ನ್ಯಾಯಶಾಸ್ತ್ರಗಳ ಉಗಮಕ್ಕೆ ಕಾರಣವಾಯಿತು. ಬುದ್ಧರ ಕಾಲದಲ್ಲಿಯೇ ಅವರ ವಿಚಾರ ಜನಪ್ರಿಯವಾಗತೊಡಗಿ ಸಮಾಜದ ವಿವಿಧ ವರ್ಗಗಳ ಜನರು ಅವರ ಹತ್ತಿರ ಬಂದು ಶಿಷ್ಯರಾದರು. ಅವರಲ್ಲಿ ರಾಜಸುತರೂ ಇದ್ದರು. ತರ್ಕಶುದ್ಧ ರೀತಿಯ ಸತ್ಯಶೋಧದಲ್ಲಿ ದೇವರ ಅಹಿತ್ತ್ವದ ಬಗ್ಗೆ ಯಾವುದೇ ಸ್ಥಾನ ವಿರಲಿಲ್ಲ. ಅದು ಬೌದ್ಧಧರ್ಮದ ಮುಖ್ಯ ಪ್ರಶ್ನೆಯೇ ಆಗಿದ್ದಿಲ್ಲ. ಬೌದ್ಧಧರ್ಮ ಒತ್ತು ಕೊಟ್ಟಿದ್ದು ಮನುಷ್ಯನ ನೀತಿಮತ್ತೆಗೆ, ಸೌಹಾರ್ದಭಾವಕ್ಕೆ, ಪರಸ್ಪರ ಪ್ರೇಮಕ್ಕೆ. ಅದಕ್ಕಿಂತಲೂ ಪ್ರಮುಖವಾಗಿ, ಈ ಪರಿಸರದಲ್ಲಿ ಜೀವಿಸುವ ಎಲ್ಲಾ ಪ್ರಾಣಿ ಜೀವಿಗಳಿಗೂ, ಪ್ರೀತಿ-ಸಹನೆ ತೋರಿಸಿದ ಶ್ರೇಷ್ಠ ಧರ್ಮವಾಗಿದೆ.

ಏಕೆಂದರೆ, ಬೌದ್ಧಧರ್ಮವು ನೈತಿಕತೆಯನ್ನು ಆಧಾರವಾಗಿ ಹೊಂದಿದೆ ಎಂದು ಉದಾಹರಿಸಿದ ಡಾ|| ಅಂಬೇಡ್ಕರ್ ಅವರು ಹಿಂದೂ ಧರ್ಮದಲ್ಲಿ 'ದೇವರು' ಎಂಬ ತಪ್ಪು ಕಲ್ಪನೆಯಿಂದ ಇಡೀ ನಾಗರಿಕ ಸಮಾಜವೇ ನಾಶದತ್ತ ಸಾಗಿದೆ ಎಂಬುದನ್ನು ಸಾಬೀತು ಪಡಿಸಿದರು. ಭಾರತದ ಎಲ್ಲಾ ಧರ್ಮವನ್ನು ಆಳವಾಗಿ ಸಂಶೋಧನೆ ಮಾಡಿದ ಅವರು ಕೊನೆಗೆ 'ದೀಕ್ಷಾ' ಪಡೆದಿದ್ದು ಬೌದ್ಧಧರ್ಮದಲ್ಲಿ, ಗೌತಮ ಬುದ್ಧ ತನ್ನನ್ನು ದೇವರೆಂದು ಎಂದೂ ಹೇಳಿಕೊಳ್ಳಲಿಲ್ಲ. ಅಷ್ಟೇ ಅಲ್ಲದೆ ದೇವರನ್ನು ನಂಬಲು ಕೂಡ ಅವನು ಹೇಳಲಿಲ್ಲ. ಬುದ್ಧನನ್ನು ಬಿಟ್ಟರೆ ಎಲ್ಲಾ ಧರ್ಮಗಳ ಸ್ಥಾಪಕರು ತಮ್ಮನ್ನು ಮೋಕ್ಷದಾತರೆಂದು ಹೇಳಿಕೊಂಡಿರುವುದು ದುರಂತದ ಸಾಕ್ಷಿ.

ಇಲ್ಲಿ ಮತಾಂತರ ಚಿಂತನೆಗೆ ಮುಖ್ಯವಾಗಿ ಪುಷ್ಟೀಕರಿಸುವ ವಿಚಾರ ಇಷ್ಟೇ. ಯಾವ ಹಿಂದೂ ಧರ್ಮದ ವ್ಯವಸ್ಥೆಯೊಳಗೆ ದಲಿತರು ಹಾಗೂ ಹಿಂದುಳಿದ ವರ್ಗಗಳ ಜನರಿಗೆ ಗೌರವಯುತವಾಗಿ ತಮ್ಮ ಜೀವನ ನಡೆಸಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾದಾಗ ಅದರಿಂದ ಮತಾಂತರ ಹೊಂದಿ, ಸಮಾನತೆ ಪರವಾಗಿ ನಿಂತು ಬೌದ್ಧಧರ್ಮ ಸ್ವೀಕಾರ ಮಾಡುವುದು ಅನಿವಾರ್ಯವಾಗಿದೆ. ಇಲ್ಲಿ ಸಾಮಾಜಿಕ ಸಮಾನತೆಯ ನಿರ್ಧಾರ ಮತ್ತು ಆಧ್ಯಾತ್ಮಿಕ ಒಲವು ಮತಾಂತರಕ್ಕೆ ಪ್ರೇರಣೆ ನೀಡುವ ಮುಖ್ಯಕಾರಣ. ಅದಕ್ಕಿಂತಲೂ ಮುಖ್ಯವಾಗಿ ಮನುಷ್ಯನ ತುಚ್ಛಗುಣಗಳನ್ನು ದೂರ ಮಾಡಿ ಸ್ವಚ್ಛ ಜೀವನವನ್ನು ನಡೆಸಲು ಈ ಧರ್ಮದಲ್ಲಿ ಮಹತ್ವದ ಸ್ಥಾನವಿದೆ. ಈ ರೀತಿಯಾಗಿ ಬೌದ್ಧಧರ್ಮವು ಪ್ರಪಂಚದ ಎಲ್ಲಾ ವರ್ಗಕ್ಕೂ ಸ್ವಾಭಿಮಾನದ ಜೀವನವನ್ನು ನಡೆಸಲು ಅದು ತನ್ನದೇ ಆದ ತತ್ವಗಳನ್ನು ಹೊಂದಿದೆ,

೧. ಬೌದ್ಧಧರ್ಮವು ಸಮಾಜವನ್ನು ಉಳಿಸಿ ಬೆಳಸಲು ನೈತಿಕತೆಯನ್ನು ಆಧಾರವಾಗಿ ಹೊಂದಿದೆ.

೨. ಅದು ವಿಚಾರ ಶಕ್ತಿಯನ್ನು ಅಂದರೆ ವಿಜ್ಞಾನವನ್ನು ಆಧಾರವಾಗಿ ಹೊಂದಿದೆ.

೩. ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವ ತತ್ವಗಳಿಗೆ ಸ್ಥಾನವಿರುವ ನೈತಿಕತೆಯೂ ಆ ಧರ್ಮದ ಆಧಾರವಾಗಿದೆ.

೪. ಅದು ಬಡತನವನ್ನು ನಿರ್ಮೂಲನೆ ಮಾಡುವಂಥದ್ದಾಗಿದೆ.

೫. ಅದು ಮುಖ್ಯವಾಗಿ ಜಾತಿರಹಿತವಾಗಿದೆ.

೬. ಅದು ಮಾನವ ಜೀವನ ಅಷ್ಟೇ ಅಲ್ಲದೇ ಈ ಪರಿಸರದಲ್ಲಿ ವಾಸವಿರುವ ಎಲ್ಲಾ ಜೀವಿಗಳಿಗೂ ಪ್ರೀತಿ-ಸಹನೆ ತೋರಿಸುವಂಥದ್ದಾಗಿದೆ.

ಈ ಎಲ್ಲಾ ಮಾನವೀಯ ತತ್ವಗಳು ಬೌದ್ಧಧರ್ಮದಲ್ಲಿ ಕಾಣುವುದನ್ನು ಗಮನಿಸಿದಾಗ, ಅದು ಭಾರತದಲ್ಲಿ ಇನ್ನೆಲ್ಲ ಧರ್ಮಗಳಿಗಿಂತ ಶ್ರೇಷ್ಠವಾಗಿ ತನ್ನ ಪ್ರಸುತ್ತತೆಯನ್ನು ಉಳಿಸಿ ಕಾಪಾಡಿಕೊಂಡು ಬಂದಿರುವುದು ನಮಗೆ ಸ್ಪಷ್ಟವಾಗುತ್ತದೆ. ಹೀಗೆ ಭಾರತದ ಧಾರ್ಮಿಕ ಮತ್ತು ತಾತ್ವಿಕ ಇತಿಹಾಸದಲ್ಲಿ ಬೌದ್ಧಧರ್ಮವು ವಂದು 'ಮಹತ್ವದ' ಮೈಲಿಗಲ್ಲು ಎಂಬುದು ಎದ್ದು ಕಾಣುತ್ತದೆ. ಇಂಥ ಮಾನವೀಯ ತತ್ವಗಳ ಪರವಾಗಿ ನಿಂತ ಬೌದ್ಧಧರ್ಮಕ್ಕೆ ದಲಿತರು ಹಾಗೂ ದಲಿತೇತರರು ಮತಾಂತರ ಹೊಂದುತ್ತಿರುವುದು ಈ ದೇಶದ ಚರಿತ್ರೆಗೆ ಒಂದು ದೊಡ್ಡ ಸವಾಲಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಆದ್ದರಿಂದ ೧೯೫೬ರ ಅಕ್ಟೋಬರ್ ೧೪ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಬೌದ್ಧಧರ್ಮದಿಂದಲೇ ನಮಗೆ ಮುಕ್ತಿ ಎಂದು ಕರೆ ನೀಡುತ್ತಾ ತಮ್ಮ ಐದು ಲಕ್ಷ ಅಪಾರ ಅನುಯಾಯಿಗಳೊಂದಿಗೆ ಹಿಂದೂ ಧರ್ಮವನ್ನು ತೊರೆದು ಬೌದ್ಧಧರ್ಮಕ್ಕೆ ಮತಾಂತರ ಹೊಂದುವುದರ ಮೂಲಕ ಭಾರತದ ೨೦ನೇ ಶತಮಾನದ ಮಹಾ ಬೌದ್ಧ ರಕ್ಷಕರಾದರು. ಅಂದಿನಿಂದ ಭಾರತದಲ್ಲಿ ದಲಿತರು ಮಾತ್ರವಲ್ಲದೆ, ದೇಶದ ಬುದ್ಧಿಜೀವಿಗಳು, ಆಧ್ಯಾತ್ಮದಲ್ಲಿ ಆಸಕ್ತಿ ಉಳ್ಳವರು ಬೌದ್ಧ ಧರ್ಮಕ್ಕೆ ಮತಾಂತರ ಹೊಂದುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇಡೀ ಭಾರತವೇ ಇಂದು ಧ್ಯಾನದ ಕಡೆಗೆ ಒಲವು ತೋರುತ್ತಿದೆ. ಏಕೆಂದರೆ, ನಮ್ಮದು ಜಾತ್ಯಾತೀತ ದೇಶ. ಇಲ್ಲಿ ಯಾರು ಯಾವ ಧರ್ಮಕ್ಕೆ ಬೇಕಾದರೂ ಹೋಗಬಹುದು.

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾಗಿರುವುದು ಇಷ್ಟೇ. ೧೯೫೬ರಲ್ಲಿ ಡಾ. ಅಂಬೇಡ್ಕರ್ ಅವರು ಈ ಧರ್ಮಕ್ಕೆ ಮತಾಂತರ ಹೊಂದಿರುವುದು ಸರಳ ವಿಷಯವೇನಲ್ಲ, ಅವರು ಸುಮಾರು ೩೦ ವರ್ಷಗಳ ಕಾಲ ಸಂಶೋಧನೆ ನಡೆಸಿ, ತಮ್ಮ ಪ್ರೀತಿ, ಗೌರವ, ಸ್ವಾಭಿಮಾನ ಮತ್ತು ಮಾನವೀಯ ಮೌಲ್ಯಗಳನ್ನು ಜನಸಾಮಾನ್ಯರ ಜೊತೆಗೆ ಹಂಚಿಕೊಳ್ಳುವುದರ ಮುಖಾಂತರ ಬೌದ್ಧಧರ್ಮಕ್ಕೆ ಮತಾಂತರ ಹೊಂದಿ ಈ ದೇಶಕ್ಕೆ ಪ್ರಮುಖ ಪ್ರೇರಣೆಯಾದರು. In the year of 1956, brought millions of exploited untouchables and others towards a new social life. ಈ ರೀತಿಯಾಗಿ ಡಾ|| ಅಂಬೇಡ್ಕರ್ ಅವರ ತರುವಾಯ ಬೌದ್ಧಧರ್ಮದಲ್ಲಿ ಆಸಕ್ತಿ ಬರುತ್ತಿರುವುದಕ್ಕೆ ದಲಿತ ಚಳವಳಿಗಳು ಪ್ರಮುಖ ಕಾರಣ. ಈ ಚಳವಳಿಗೆ ಪ್ರೇರಣೆ ಡಾ. ಅಂಬೇಡ್ಕರ್. ಅಂತೆಯೇ ಇಂದು ದಲಿತರನಲ್ಲಿ ಹಲವಾರು ಜನ ನವ ಬೌದ್ಧರಾಗುತ್ತಿದ್ದಾರೆ ಎಂದರೆ ಬೌದ್ಧಧರ್ಮ ಇನ್ನೂ ತನ್ನ ಸಾಮಾಜಿಕ ಅಂತಃಸತ್ವವನ್ನು ಕಳೆದುಕೊಂಡಿಲ್ಲ ಎಂಬುದಕ್ಕೆ ಪ್ರಮುಖ ನಿದರ್ಶನ. ನಾನೇಕೆ ಈ ಮಾತನ್ನು ವಿಶೇಷವಾಗಿ ಪ್ರಸ್ತಾಪಿಸುತ್ತಿದ್ದೇನೆ ಎಂದರೆ, ಡಾ. ಅಂಬೇಡ್ಕರ್ ಅವರು ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಬೇಕಾದರೆ, ಅದನ್ನು ನೂರಾರು ಸಲ ಯೋಚಿಸಿ, ಚಿಂತನೆ ಮಾಡಿ ಒಂದು ಅಂತಿಮ ನಿರ್ಧಾರಕ್ಕೆ ಬರುತ್ತಿದ್ದರು. ಹಾಗಾಗಿ ಅವರ ನಿರ್ಧಾರಗಳು ಬಹಳ ಕಾಲ ಪ್ರಸುತ್ತವಾಗಿಯೇ ಉಳಿಯುತ್ತಿದ್ದವು. ಇಂಥ ನಿರ್ಧಾರಗಳಿಗೆ ನಮ್ಮ ದೇಶದ ಸಂವಿಧಾನವೇ ನಿಜವಾದ ಸಾಕ್ಷಿ.

ಸಾವಿರಾರು ವರ್ಷಗಳಿಂದ ಸಾಮಾಜಿಕ ನ್ಯಾಯಕ್ಕಾಗಿ ಕಾದು ಕುಳಿತ ಜನ ಸಮುದಾಯಕ್ಕೆ ಸ್ಫೂರ್ತಿ, ಚೇತನ ತಂದುಕೊಟ್ಟ ಮಹಾನ್ ಧರ್ಮವೇ ಬೌದ್ಧಧರ್ಮ. ಹಾಗಾಗಿ ಬೌದ್ಧಧರ್ಮವು ತನ್ನ ನೀತಿಯನ್ನು ವಿಶ್ವಖಂಡವಲ್ಲದೆ, ಟಿಬೆಟ್, ಚೀನಾ, ಜಪಾನ್, ಮಧ್ಯ ಏಶಿಯಾಗಳಲ್ಲೂ, ಬರ್ಮಾ, ಸಿಂಹಳ, ದಕ್ಷಿಣ ಪೂರ್ವ ದೇಶಗಳಲ್ಲೂ ವ್ಯಾಪಕವಾಗಿ ಹರಡಿ ಪ್ರಪಂಚದ ಮಾನವ ಜನಾಂಗಕ್ಕೆ ಪರಿಚಯವಾಯಿತು. ಈ ತಿರುಳೇ ಜಗತ್ತಿನ ಎಲ್ಲಾ ಜನ ಸಮುದಾಯದವರನ್ನು 'ಎಚ್ಚರಗೊಳಿಸುವ' ತತ್ವವಾಗಿ ಧರ್ಮದ ಮೂಲ ಪದವಾಯಿತು.

ಇತ್ತೀಚೆಗೆ ಭಾರತದ ಸುಂದರ ನಗರವಾದ ಬೆಂಗಳೂರಿನಲ್ಲಿ ೪೮ನೇ ಡಾ. ಅಂಬೇಡ್ಕರ್ ಬೌದ್ಧಧರ್ಮ ಪರಿವರ್ತನ ದಿನದ ನಿಮಿತ್ತ ೫೦ ಸಾವಿರಕ್ಕೂ ಹೆಚ್ಚು ದಲಿತರು ಬೌದ್ಧ ಧರ್ಮವನ್ನು ಸ್ವೀಕಾರ ಮಾಡಿರುವುದು ಈ ದೇಶದ ಐತಿಹಾಸಿಕ ಮೈಲುಗಲ್ಲಾಗಿದೆ. ಏಕೆಂದರೆ, ೧೯೫೬ರ ನಂತರ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಜನಸಮೂಹ ಸೇರಿರುವುದು ಇದೇ ಮೊದಲನೆಯದಾಗಿದೆ. ಇಂಥ ಮತಾಂತರ ಚಿಂತನೆ ಪ್ರತಿ ವರ್ಷ ೧೪ನೇ ಅಕ್ಟೋಬರ್ ನಮ್ಮ ದೇಶಕ್ಕೆ ಚಿರಸ್ಥಾಯಿಯಾಗಬೇಕಾಗಿದೆ. ಬೌದ್ಧಧರ್ಮ ಸ್ವೀಕಾರ ಮಾಡುವಾಗಿನ ಸಂದರ್ಭವು ಒಂದೇ ಜನಸಮುದಾಕ್ಕೆ ಸೀಮಿತವಾಗಿರಬಾರದು. ಅದು ಸಾರ್ವತ್ರಿಕವಾಗಬೇಕು. ಈ ಧರ್ಮಕ್ಕೆ ಬರೀ ದಲಿತರೇ ಮತಾಂತರ ಹೊಂದಿದರೆ ಸಾಲದು, ಪ್ರಜ್ಞಾವಂತ ವರ್ಗದ ಜನರು ಬೌದ್ಧಧರ್ಮದ ಬಗ್ಗೆ ಚಿಂತನೆ ಮಾಡಿದರೆ 'ಬೌದ್ಧಭಾರತ' ನಿರ್ಮಾಣವಾಗುವ ಕನಸು ದೂರವಿರಲಾರದು. ಒಂದು ವಿರ್ಪಯಾಸದ ಸಂಗತಿ ಎಂದರೆ ಈ ದೇಶದಲ್ಲೇ ಹುಟ್ಟಿದ ಬೌದ್ಧಧರ್ಮಕ್ಕೆ ಮಹತ್ವದ ಪ್ರೇರಣೆ ಕಾಣಿಸದಿರುವುದು ನಮ್ಮ ದೇಶದ ಒಂದು ದುರಂತ. ಈ ಧರ್ಮಕ್ಕೆ ಡಾ. ಅಂಬೇಡ್ಕರ್ ಅವರು ಮತಾಂತರ ಹೊಂದಿರುವುದಕ್ಕೋ ಏನೋ, ಜಾತಿವಾದಿ ನಾಯಕರು ಹಾಗೂ ಮನುವಾದಿ ಚಿಂತಕರು ಈ ಧರ್ಮಕ್ಕೆ ಪ್ರೇರಣೆ ನೀಡದಿರುವುದು ವಿಪರ್ಯಾಸದ ಸಂಗತಿ.

ಇಂಥ ಸಂದರ್ಭದಲ್ಲಿ ನಮ್ಮ ದೇಶದ ಚರಿತ್ರೆಯು ತುಂಬ ವಿಚಿತ್ರವಾದ ಪವಾಡಗಳನ್ನು ಸೃಷ್ಟಿಸುವಂತಾಗಿದ್ದು ವಾಸ್ತವತೆಯನ್ನು ಮರೆಮಾಚುತ್ತಾ ಅವಾಸ್ತವತೆಯನ್ನು ಪುಷ್ಟೀಕರಿಸುವ ಜಾಯಮಾನದ್ದಾಗಿದೆ. ಇತ್ತೀಚೆಗೆ, ಖ್ಯಾತ ಕಾದಂಬರಿಕಾರ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುವ ಎಸ್.ಎಲ್. ಭೈರಪ್ಪನವರು, 'ಬೌದ್ಧಧರ್ಮ ಜೀವ ವಿರೋಧಿ' ಎಂದು ಅತ್ಯಂತ ಹಗುರವಾಗಿ ಮಾತನಾಡಿ ರುವುದು ವಿಪರ್ಯಾಸದ ಸಂಗತಿ. ಏಕೆಂದರೆ, ನಾಗರಿಕ ಸಮಾಜಕ್ಕೆ 'ಜೀವವನ್ನೇ ತೆಗೆಯುವ' ತುಂಬ ಆತಂಕಕಾರಿಯಾದ ಹಿಂದೂ ಧರ್ಮದ ಅನಿಷ್ಟ ತತ್ವಗಳನ್ನು ಎತ್ತಿ ಹಿಡಿದ ಅವರು ನಾಗರಿಕ ಸಮಾಜಕ್ಕೆ ಅಜ್ಞಾನದ ಕತ್ತಲೆ ಯಿಂದ ಬೆಳಕಿನ ಜ್ಞಾನದತ್ತ ಕೊಂಡ್ಯೊಯುವ 'ಜೀವ ರಕ್ಷಕ', ಬೌದ್ಧಧರ್ಮದ ಬಗ್ಗೆ ಹೀಗೆ ಮಾತನಾಡುತ್ತಾ ಮನುವಾದಿಗಳ ಪಂಕ್ತಿಯಲ್ಲಿ ಸೇರಿರುವುದು ಪ್ರಜ್ಞಾವಂತ ನಾಗರಿಕ ಸಮಾಜಕ್ಕೆ ಸ್ಪಷ್ಟವಾಗುತ್ತದೆ. ದಲಿತರಿಗೆ ಎಲ್ಲಕ್ಕಿಂತಲೂ ಮುಖ್ಯವಾಗಿ ಆತ್ಮಗೌರವ ಇದೆ. ಆ ಆತ್ಮಗೌರವ ಬೌದ್ಧಧರ್ಮದಲ್ಲಿದೆ ಎಂಬುದನ್ನು ಬಹುಷಃ ಅವರು ಮರೆತಿರಬೇಕು. ಇನ್ನೊಂದು ವಿಪರ್ಯಾಸವೆಂದರೆ, ಲಕ್ಷಾಂತರ ಜನರು ಇಂದು ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿ ತಮ್ಮ ಹೊಸ ಬದುಕನ್ನು ಸ್ವಚ್ಛಗೊಳಿಸುತ್ತಾ ಸಾಗಿರುವಾಗ ನಮ್ಮ ಘನ ಸರ್ಕಾರ 'ಮತಾಂತರ ನಿಷೇಧ ಕಾಯ್ದೆ'ಯನ್ನು ಸೃಷ್ಟಿಸುತ್ತಿರುವುದು ಈ ದೇಶದ ಕುಟಿಲ ರಾಜಕೀಯದ ನಿಜವಾದ ದುರಂತ.

ಈ ಪ್ರಕ್ಷುಬ್ಧ ವಾತಾವರಣದಲ್ಲಿ ದಲಿತರು ಹಾಗೂ ದಲಿತೇತರರು ಬೌದ್ಧಧರ್ಮದ ಮತಾಂತರ ವಿಷಯದಲ್ಲಿ ಅಂಧಾಭಿಮಾನಕ್ಕೆ ಅವಕಾಶ ಕೊಡದೆ, ಆ ಅಭಿಮಾನಕ್ಕೆ ಸಾರ್ವತ್ರಿಕ ಸತ್ಯವನ್ನು ನಿರ್ಮಾಣ ಮಾಡುವ ಸಮಯ ಈಗ ಬಂದಿದೆ. ಇಂದು ಬೌದ್ಧಧರ್ಮಕ್ಕೆ ಮತಾಂತರ ಹೊಂದುವುದಕ್ಕಿಂತ ಮೊದಲು ನಾವು ಹಿಂದೂ ಧರ್ಮದ ಕೆಲವು ಮೌಢ್ಯತೆಯನ್ನು ಬಿಟ್ಟು ಹೊರಬರಬೇಕು. ಹಾಗಾದಾಗ ಮಾತ್ರ ಬೌದ್ಧಧರ್ಮಕ್ಕೆ ಒಂದು ಮಹತ್ವ ಬರುವುದರಲ್ಲಿ ಯಾವ ಸಂಶಯವಿಲ್ಲ.

ಒಟ್ಟಿನಲ್ಲಿ ಬೌದ್ಧಧರ್ಮಕ್ಕೆ ಮತಾಂತರ ಹೊಂದುವ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಹಂಚಿಕೊಂಡ ಸ್ವಾಭಿಮಾನ, ಗಂಭೀರತೆ ಮತ್ತು ಮಾನವೀಯ ಮೌಲ್ಯಗಳು ನಮಗೆ ಆದರ್ಶವಾಗಿರಬೇಕು. ಇಂದು ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರು ಎಲ್ಲಾ ಬುದ್ಧಿವಂತ ಜನರು ಒಟ್ಟುಗೂಡಿ ಚಿಂತನೆ ಮಾಡುವ ಸಮಯ ಬಂದಿದೆ. ಇಂಥ ಚಿಂತನೆ ಇಲ್ಲವೆಂದರೆ, ಕ್ರೂರವಾಗಿ ಕಾಣುವ ಈ ಹಿಂದೂ ವ್ಯವಸ್ಥೆಯಲ್ಲಿ ನಿಧಾನವಾಗಿ ನಾವೆಲ್ಲರೂ ನಾಶವಾಗುತ್ತೇವೆ.

The insperation behind Dr. Ambedkar's concept of Budhism is still relevant in India. Similar is the plight of thousands of depressed classes and others having gained the illuminating path of Dr. Ambedkar's concept of Budhism. □

ಧಮ್ಮ ಸ್ವೀಕಾರ : ದೃಷ್ಟಿಕೋನ - ೨

ಬೌದ್ಧ ಧಮ್ಮ : ಜಾಗತಿಕ ಅನಿವಾರ್ಯ

ಪ್ರಪಂಚದ ಯಾವುದೇ ಧರ್ಮವು ಎಲ್ಲಾ ಜಾತಿಯ, ವರ್ಗದ, ಬೇರೆ ಭಾಷೆಯ, ಸಂಸ್ಕೃತಿಯ ವರ್ಣದ, ಕಲೆಯ ಬೇರೆ ಪ್ರದೇಶಗಳಲ್ಲಿ ವಾಸಿಸುವ ಜನಗಳ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವ ಮತ್ತು ಅವರು ಸ್ವಾಭಿಮಾನದಿಂದ ಬದುಕಲು, ಕಳಂಕರಹಿತವಾಗಿ, ಮುಕ್ತವಾತಾವರಣದಲ್ಲಿ ಜಾತಿ ಬೇಧಗಳಿಲ್ಲದೆ, ಸಮಾನತೆ, ಸಹಭಾಗಿತ್ವ, ಭಾತೃತ್ವ, ಶಾಂತಿ ನೆಮ್ಮದಿಯಿಂದ ಅಭಿವೃದ್ಧಿಯ ಪಥದಲ್ಲಿ ತೆಗೆದುಕೊಂಡು ಹೋಗುವುದೇ ಧರ್ಮದ ಪ್ರಧಾನವಾದಂತಹ ಗುರಿಯಾಗಿದೆ. ಅಂತಹ ಧರ್ಮವನ್ನು ಮಾನವನ ಹಿತವನ್ನು ಕಾಪಾಡುವ ಧರ್ಮವೆಂದು ಹೇಳಲು ಸಾಧ್ಯ. ಈ ತತ್ವಗಳು, ಸಿದ್ಧಾಂತಗಳಿಗೆ ವಿರುದ್ಧವಾದಂತಹ ಯಾವುದೇ ಧರ್ಮವನ್ನು ಮಾನವನಿಗೆ ಹಿತವಾದಂತಹ ಧರ್ಮ ಎಂದು ಹೇಳಲು ಸಾಧ್ಯವಿಲ್ಲ. ಇಂತಹ ಧರ್ಮಗಳ ಸಾಲಿಗೆ ಹಿಂದೂ ಧರ್ಮ ಸೇರಿದೆ.

ಭಾರತ ದೇಶದ ಹಿಂದೂ ಧರ್ಮ, ಮನುಷ್ಯನನ್ನು ಮನುಷ್ಯನನ್ನಾಗಿ ಗೌರವಿಸಿಲ್ಲ. ಅಮಾನವೀಯರನ್ನಾಗಿ ಮಾಡಿದೆ. ಬಹು ಜನರ ಸ್ವಾಭಿಮಾನ, ಮಾನವೀಯತೆಯನ್ನು ಕಿತ್ತುಕೊಂಡಿದೆ. ಸಾಮಾಜಿಕವಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಧಾರ್ಮಿಕವಾಗಿ ಬಹುಜನರನ್ನು ಕ್ರೂರ ದೃಷ್ಟಿಯಿಂದ ನೋಡಿದೆ. ಈ ಹಿಂದೂ ಧರ್ಮ ಬಹುಜನರಲ್ಲಿ ಹಲವಾರು ಜಾತಿ, ವರ್ಗ, ಭಾಷೆ, ಧರ್ಮ, ವರ್ಣ, ಮೇಲು- ಕೀಳುಗಳನ್ನಾಗಿ ಮಾಡಿ ಮನುಷ್ಯ- ಮನುಷ್ಯನ ನಡುವೆ ದೊಡ್ಡ ಕಂದಕಗಳನ್ನು ಮಾರ್ಪಾಡು ಮಾಡಿದೆ. ಜೊತೆಗೆ ಈ ಹಿಂದೂ ಧರ್ಮ ಭಾರತದ ಮೂಲನಿವಾಸಿಗಳನ್ನು ಹೊಲೆಯ, ಮಾದಿಗ, ಸಮಗಾರ, ಬೋವಿ ಇತ್ಯಾದಿ ಆರು ಸಾವಿರ ಜಾತಿಗಳಾಗಿ ವಿಂಗಡಿಸಿ ಚಾರಿತ್ರಿಕವಾಗಿ ಬಹುಜನರನ್ನು ದಮನ ಮಾಡಲು ಈ ಧರ್ಮ ಕಟಿಬದ್ಧ ವಾಗಿದೆ. ಇಂತಹ ಧರ್ಮದ ಗೊಡ್ಡು ಸಂಸ್ಕೃತಿ, ಪುರಾಣ, ಕೊಳಕುಗಳನ್ನು ಜಗತ್ತಿಗೆ ತೋರಿದವರು ಮೊಟ್ಟಮೊದಲಿಗೆ ತಮಿಳುನಾಡಿನಲ್ಲಿ ವಾಸಿಸುತ್ತಿದ್ದಂತಹ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ರವರು. ಇವರು ದಕ್ಷಿಣ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಳವಳಿಯ ಕ್ರಾಂತಿಯನ್ನು ಮಾಡಿ ಜಗತ್ತಿನ ಗಮನವನ್ನು ಸೆಳೆದಿದ್ದಾರೆ.

> ಹಿಂದೂ ಧರ್ಮ, ಮನುಷ್ಯನನ್ನು ಮನುಷ್ಯನನ್ನಾಗಿ ಗೌರವಿಸಿಲ್ಲ. ಬಹು ಜನರ ಸ್ವಾಭಿಮಾನ, ಮಾನವೀಯತೆಯನ್ನು ಕಿತ್ತುಕೊಂಡಿದೆ. ಸಾಮಾಜಿಕವಾಗಿ ಶೈಕ್ಷಣಿಕವಾಗಿ, ಆರ್ಥಿಕ ವಾಗಿ, ರಾಜಕೀಯ ವಾಗಿ ಹಾಗೂ ಧಾರ್ಮಿಕವಾಗಿ ಕ್ರೂರ ದೃಷ್ಟಿಯಿಂದ ನೋಡಿದೆ. ಹಲವಾರು ಜಾತಿ, ವರ್ಗ, ಭಾಷೆ, ಧರ್ಮ, ವರ್ಣ, ಮೇಲು- ಕೀಳುಗಳನ್ನಾಗಿ ಮಾಡಿ ಮನುಷ್ಯ- ಮನುಷ್ಯನ ನಡುವೆ ದೊಡ್ಡ ಕಂದಕಗಳನ್ನು ಮಾರ್ಪಾಡು ಮಾಡಿದೆ. ಭಾರತದ ಮೂಲನಿವಾಸಿಗಳನ್ನು ಹೊಲೆಯ, ಮಾದಿಗ, ಸಮಗಾರ, ಬೋವಿ ಇತ್ಯಾದಿ ಆರು ಸಾವಿರ ಜಾತಿಗಳಾಗಿ ವಿಂಗಡಿಸಿ ಚಾರಿತ್ರಿಕವಾಗಿ ಬಹುಜನರನ್ನು ದಮನ ಮಾಡಲು ಕಟಿಬದ್ಧ ವಾಗಿದೆ.
>
> ○ಕೆ. ಸೌಭಾಗ್ಯ

ಪೆರಿಯಾರ್ ಕ್ರಾಂತಿ:

೧. ಹಿಂದೂ ಧರ್ಮದಲ್ಲಿ ಬರುವಂತಹ ದೇವರು, ಧರ್ಮ ಮೂಢನಂಬಿಕೆಗಳಂತಹ ಮಾನಸಿಕ ಗುಲಾಮಗಿರಿಯನ್ನು ತೊರೆದು ಸ್ವಾಭಿಮಾನದಿಂದ ಬದುಕುವುದು.

೨. ಬ್ರಾಹ್ಮಣವಾದಿ ವೇದ, ಶಾಸ್ತ್ರ ಪುರಾಣಗಳಲ್ಲಿನ ವೈರುಧ್ಯಗಳನ್ನು ಜನತೆಯ ಮುಂದೆ ಬಿಚ್ಚಿಟ್ಟು ಶೂದ್ರ-ಅತಿಶೂದ್ರರು ಅವುಗಳನ್ನು ಧಿಕ್ಕರಿಸುವಂತೆ ಮಾಡಿದರು.

೩. ಪ್ರಕೃತಿಯಲ್ಲಿ ಎಲ್ಲಾ ಕಾಲವು ಶ್ರೇಷ್ಠ ಆದ್ದರಿಂದ ರಾಹುಕಾಲ, ಗುಳಿಕಕಾಲ, ಯಮಗಂಡಕಾಲ ಮುಂತಾದ ಬ್ರಾಹ್ಮಣಶಾಹಿ ನಂಬಿಕೆಗಳನ್ನು ತಿರಸ್ಕರಿಸಿ ರಾಹುಕಾಲದಲ್ಲಿ ಮದುವೆ; ನಾಮ ಕರಣ ಮುಂತಾದ ಶುಭಕಾರ್ಯಗಳನ್ನು ತಾವೇ ಮುಂದೆ ನಿಂತು ಮಾಡಿಸಿದರು.

೪. ಕಪ್ಪು ಅನಿಷ್ಟ ಎಂಬ ಮನುವಾದಿ ನಂಬಿಕೆಯನ್ನು ಧಿಕ್ಕರಿಸಿ ಕಪ್ಪು ಶ್ರೇಷ್ಠ ಬಿಳಿ ಅನಿಷ್ಟ ಎಂಬ ವೈಜ್ಞಾನಿಕ ವಿಶ್ಲೇಷಣೆ ಕೊಟ್ಟರು. ಹೀಗೆ ಪೆರಿಯಾರ್‌ರವರು ಹಿಂದೂಧರ್ಮ, ಸಂಸ್ಕೃತಿ ಮತ್ತು ಆಚರಣೆಗಳ ವಿರುದ್ಧ ದೊಡ್ಡ ವೈಚಾರಿಕ ಕ್ರಾಂತಿಯನ್ನೆ ಮಾಡಿದ್ದಾರೆ.

ಭಾರತದ ಹಿಂದೂ ಧರ್ಮ ಎಲ್ಲಾ ಜಾತಿಯ ಜನರನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಾಲ್ಕು ವರ್ಗಗಳನ್ನಾಗಿ ಮಾಡಿ ಬ್ರಾಹ್ಮಣ ಬಾಯಿಂದಲೂ, ಕ್ಷತ್ರಿಯ ತೋಳಿನಿಂದಲೂ, ವೈಶ್ಯ ತೊಡೆಯಿಂದಲೂ ಹಾಗೂ ಶೂದ್ರ ಪಾದದಿಂದ ಜನಿಸಿದ್ದಾನೆ ಎಂಬ ಮಹಾನ್ ಸುಳ್ಳಿನ ಕಂತೆಯನ್ನು ಹೇಳಿದೆ. ಯಾವ ಮನುಷ್ಯ ಪ್ರಾಣಿ, ಪಕ್ಷಿಗಳಾಗಲೀ ಕಾಮ ಕ್ರಿಯೆ ಇಲ್ಲದೆ ಬಾಯಿಂದ, ತೋಳಿನಿಂದ, ತೊಡೆಯಿಂದ ಮತ್ತು ಪಾದದಿಂದ ಜನಿಸುವುದು ಸಾಧ್ಯವೇ? ಎಂಬ ಸಾಮಾನ್ಯ ಅರಿವು ಆ ಧರ್ಮಕ್ಕಿದ್ದಂತಿಲ್ಲ. ಹಾಗೆಯೆ ಪ್ರತಿಯೊಂದು ಜಾತಿಗೂ ತನ್ನದೇ ಆದಂತಹ ವೃತ್ತಿಯಲ್ಲಿ ತೊಡಗುವಂತೆ ಮಾಡಲಾಗಿದೆ.

ಇವೆಲ್ಲವೂ ಸಹ ಆರ್ಯರ ಪೂರ್ವಯೋಜಿತ ತಂತ್ರವಾಗಿದೆ ಎಂಬುದನ್ನು ನಾವು ಇತಿಹಾಸದ ಪುಟಗಳನ್ನು ತಿರುಗಿಸಿ ನೋಡಿದಾಗ ನಮಗೆ ತಿಳಿಯುತ್ತದೆ. ಮನುಸ್ಮೃತಿಯು ಬೋಧಿಸುವ ಚತುರ್‌ವರ್ಣವು ಮಾನವನ ಪ್ರಗತಿಗೆ ಕಂಟಕಪ್ರಾಯವಾಗಿದೆ. ಮನುಸ್ಮೃತಿಯ ಪ್ರಕಾರ ಶೂದ್ರರು ಗಬ್ಬು ಕೆಲಸಗಳನ್ನೇ ಮಾಡಬೇಕು, ಅಂತಹವರಿಗೆ ವಿದ್ಯೆ ಏಕೆ ಬೇಕು? ವಿದ್ಯೆ ಬ್ರಾಹ್ಮಣರಿಗೆ ಮಾತ್ರ ಮೀಸಲು, ಕ್ಷತ್ರಿಯರು ಆಯುಧ ಹಿಡಿಯಬೇಕೆಂದು, ವೈಶ್ಯರು ವ್ಯಾಪಾರ ಮಾಡಬೇಕೆಂತಲೂ, ಮತ್ತು ಶೂದ್ರರು ಈ ಮೂರು ಮೇಲ್ಜಾತಿಗಳ ಸೇವೆಯನ್ನು ಮಾಡಬೇಕೆಂತಲೂ ಮನು ತಿಳಿಸಿದ್ದಾನೆ. ಮನುಸ್ಮೃತಿ ಎಂಬುದು ಪುರೋಹಿತಶಾಹಿಗಳಿಗೆ ಸಂವಿಧಾನವಿದ್ದಂತೆ. ಅದೇ ಅಂತಿಮ, ಇಂತಹ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಮಾತ್ರ ಲಾಭ ಉಂಟು. ಆದರೆ ಶೂದ್ರರಿಗೆ ಯಾವ ಲಾಭವುಂಟು? ಅಲ್ಲಿ ಬಹುಜನರಿಗೆ ಯಾವುದೇ ಮಹಾತ್ವಕಾಂಕ್ಷೆ ಹುಟ್ಟಲು ಸಾಧ್ಯವೇ ಇಲ್ಲ. ಈ ಹಿಂದುಗಳು ಈ ವ್ಯವಸ್ಥೆಯನ್ನು ಸುಮ್ಮನೆ ಜಾರಿಗೆ ತಂದಿಲ್ಲ ಅಥವಾ ಅದೊಂದು ಕೇವಲ ಆಚರಣೆಯಲ್ಲ. ಅದು ಅವರ ಧರ್ಮವಾಗಿದೆ. ಈ ಹಿಂದೂ ಧರ್ಮದಲ್ಲಿ ಬಹುಜನರಿಗೆ ಉಳಿಗಾಲವಿಲ್ಲ. ಈ ಧರ್ಮದಲ್ಲಿ ಯಾರಿಗೂ ಮುಕ್ತಿಯಿಲ್ಲ, ವಿಮೋಚನೆಯಿಲ್ಲ. ಹಿಂದೂ ಧರ್ಮದ ಕಟ್ಟಳೆಗಳ ಪ್ರಕಾರ ಮೇಲ್ಜಾತಿ ಎನಿಸಿಕೊಂಡವರಿಗೆ ಮಾತ್ರ ಲಾಭವುಂಟು. ಈ ಹಿಂದೂ ಧರ್ಮವು ಬಹುಜನರ ಕನಸುಗಳನ್ನು ಕೊಲ್ಲುವ, ಅಥವಾ ನಾಶ ಮಾಡುವ ಧರ್ಮವಾಗಿದೆ. ಒಬ್ಬ ಬ್ರಾಹ್ಮಣ ಹೆಂಗಸು ಒಂದು ಮಗುವನ್ನು ಹೆತ್ತಳೆಂದರೆ, ಅಂದಿನಿಂದ ಅವಳ ನೋಟವು ಹೈಕೋರ್ಟ್ ಅಥವಾ ಸುಪ್ರಿಂಕೋರ್ಟ್‌ನಲ್ಲಿ ಖಾಲಿಯಿರುವ ಯಾವುದೇ ನ್ಯಾಯಧೀಶನ ಸ್ಥಾನದ ಮೇಲೆ ನೆಟ್ಟಿರುತ್ತದೆ. ಆದರೆ ಅದೇ ವೇಳೆಗೆ ಒಬ್ಬ ಜಾಡಮಾಲಿ ಹೆಂಗಸು ಒಂದು ಮಗುವನ್ನು ಹೆತ್ತಳೆಂದರೆ ಅವಳು ತನ್ನ ಮಗನಿಗಾಗಿ ನಗರಸಭೆಯ ಜಾಡಮಾಲಿ ಕೆಲಸಕ್ಕಿಂತ ಹೆಚ್ಚಿಗೆ ಬೇರೆ ಏನನ್ನು ಯೋಚಿಸಿರಲಾರಳು. ನಮ್ಮ ಹೆಣ್ಣುಮಕ್ಕಳಲ್ಲಿ ಯಾವುದೇ ಮಹತ್ವದ ಆಲೋಚನೆಗಳಿಲ್ಲದಿರುವುದಕ್ಕೆ ಹಾಗೂ ಬ್ರಾಹ್ಮಣ ಹೆಂಗಸಿನಲ್ಲಿ ಮಹತ್ವಾಕಾಂಕ್ಷೆಗಳು ತುಂಬಿರುವುದಕ್ಕೆ ಹಿಂದೂ ಧರ್ಮವೇ ಕಾರಣವಾಗಿದೆ. ಇಂತಹ ವಿಚಿತ್ರವಾದ ಮಾನಸಿಕ ಸ್ಥಿತಿಗಳನ್ನು ಈ ಧರ್ಮವು ನಿರ್ಮಿಸಿದೆ. ಇಂತಹ ಹಿಂದು ಧರ್ಮದಲ್ಲಿ ಜೀವನವನ್ನು ನಡೆಸಲು ಸಾಧ್ಯವೇ?

ನಾಗರು ಆರ್ಯರ ಭೀಕರ ದಬ್ಬಾಳಿಕೆಗೆ ಬಲಿಯಾಗಿ ಅತ್ಯಂತ ಹತಾಶ ಸ್ಥಿತಿಯಲ್ಲಿದ್ದರು. ಅಂತಹ ಹತಾಶ ಬದುಕಿನಿಂದ ಪಾರಾಗಲು ಅವರೆಲ್ಲರೂ ಒಬ್ಬ ಮಹಾನ್ ವ್ಯಕ್ತಿಗಾಗಿ ಕಾಯುತ್ತಿದ್ದರು. ಅಂತಹ ಮಹಾ ಪುರುಷನನ್ನು ಭಗವಾನ್ ಬುದ್ಧರಲ್ಲಿ ಕಂಡುಕೊಂಡರು. ಹದಗೆಟ್ಟು ಅಳಿದು ಹೋಗುತ್ತಿದ್ದ ನಾಗ ಜನಾಂಗವನ್ನು ಭಗವಾನ್ ಬುದ್ಧರು ಉಳಿಸಿದರು. ಭಗವಾನ್ ಬುದ್ಧರಿಂದ ವಿಮೋಚನೆ ಪಡೆದ ನಾಗರು ಬೌದ್ಧಧಮ್ಮವನ್ನು ವಿಶ್ವದಾದ್ಯಂತ ಹರಡಿದರು ಎಂಬ ಈ ಮೇಲಿನ ಉಕ್ತಿಗಳನ್ನು ಬಾಬಾಸಾಹೇಬರು ನಮಗೆ ತಿಳಿಸಿದ್ದಾರೆ.

ಬೌದ್ಧಧಮ್ಮ : ಬೌದ್ಧಧಮ್ಮದ ಮೂಲಭೂತ ನಿಯಮವೇ ಸಮಾನತೆಯಾಗಿದೆ. ಮೇಲು-ಕೀಳು ಎಂಬ ಬೇಧವನ್ನು ವಿರೋಧಿಸಿ ಸಮಾನತೆಯ ಬಗ್ಗೆ ಮಾತನಾಡಿದ ಮಹಾನ್

ವ್ಯಕ್ತಿ ಎಂದರೆ ಭಗವಾನ್ ಬುದ್ಧರು ಮಾತ್ರ. ಭಗವಾನ್ ಬುದ್ಧರ ಕಾಲದಲ್ಲಿ ಧಮ್ಮವನ್ನು ಒಪ್ಪಿಕೊಂಡ ಭಿಕ್ಕುಗಳ ಪೈಕಿ ನೂರಕ್ಕೆ ಎಪ್ಪತ್ತೈದು ಮಂದಿ ಭಿಕ್ಕುಗಳು ಬ್ರಾಹ್ಮಣ ಜಾತಿಯವರೇ ಆಗಿದ್ದರು. ಉಳಿದ ಇಪ್ಪತ್ತೈದು ಮಂದಿ ಮಾತ್ರ ಶೂದ್ರರಾಗಿದ್ದರು. ಆದರೂ ಸಹ ಬೌದ್ಧ ಧಮ್ಮವನ್ನು ಶೂದ್ರರ ಧರ್ಮವೆಂದು ಕರೆಯಲಾಗಿತ್ತು. ಭಗವಾನ್ ಬುದ್ಧರು ಹೇಳುತ್ತಾ 'ಓ ಭಿಕ್ಕುಗಳೇ ನೀವುಗಳು ವಿಭಿನ್ನ ಜಾತಿಗಳಿಂದ ಹಾಗೂ ವಿವಿಧ ನಾಡುಗಳಿಂದ ಬಂದಿರುವಿರಿ. ನದಿಗಳು ಬೇರೆ ಬೇರೆಯಾಗಿಯೇ ಹರಿದು ಬಂದರೂ, ಅವೆಲ್ಲವೂ ಸಮುದ್ರದಲ್ಲಿ ಒಂದಾದಾಗ ಮಾತ್ರ ತಮ್ಮ ತಮ್ಮ ಪ್ರತ್ಯೇಕ ಅಸ್ತಿತ್ವಗಳನ್ನು ಕಳೆದುಕೊಳ್ಳುತ್ತವೆ. ಅವು ಸಮುದ್ರದಲ್ಲಿ ಬೆರೆತ ಮೇಲೆ, ಮಹಾನದಿಯಿಂದ ಗಂಗಾನದಿಯನ್ನು ಬೇರ್ಪಡಿಸಿ ನೋಡಲು ಹೇಗೆ ಸಾಧ್ಯವಿಲ್ಲವೊ ಅದರಂತೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ವಿವಿಧ ವರ್ಣಗಳಿಂದ ಬಂದಿರುವ ನೀವುಗಳು ತಥಾಗತರು ಬೋಧಿಸುವ ಧಮ್ಮವನ್ನು ಸ್ವೀಕರಿಸಿ, ಸಂಘವನ್ನು ಸೇರಿದಾಗ ನಿಮ್ಮ ವರ್ಣಬೇಧಗಳು ಮಾಯವಾಗಿ, ನೀವೆಲ್ಲರೂ ಒಂದಾಗುವಿರಿ ಮತ್ತು ಪರಸ್ಪರ ಸಮಾನರಾಗುವಿರಿ' ಎಂಬ ನುಡಿಮುತ್ತುಗಳನ್ನು ಬುದ್ಧರು ನುಡಿದಿದ್ದಾರೆ.

ಬೌದ್ಧಧಮ್ಮವು ಕೇವಲ ನಮ್ಮ ದೇಶಕ್ಕೆ ಮಾತ್ರವಲ್ಲದೆ ಇಡೀ ಪ್ರಪಂಚಕ್ಕೆ ಬೇಕಾಗಿದೆ. ಈ ಧಮ್ಮವು ಬಹುಜನರ ಒಳಿತಿಗಾಗಿದೆ. ಬಹುಜನರ ಒಳಿತಿನಲ್ಲೇ ಬಹುಜನರ ಸುಖವೂ ಇದೆ. ಇದು ಆದಿಯಲ್ಲೂ ಒಳ್ಳೆಯದಾಗಿದೆ, ಮಧ್ಯದಲ್ಲೂ ಒಳ್ಳೆಯದಾಗಿದೆ ಮತ್ತು ಕೊನೆಯಲ್ಲೂ ಒಳ್ಳೆಯದಾಗಿದೆ, ಇದುವೇ ತಮ್ಮ ಧಮ್ಮ. ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಹಾಗು-ಹೋಗುಗಳನ್ನು ಗಮನಿಸಿದರೆ ಬೌದ್ಧ ಧಮ್ಮವು ಇಡೀ ಜಗತ್ತಿನಲ್ಲಿ ಅತ್ಯುತ್ತಮವಾದ ಧರ್ಮವಾಗಿದೆ. ಅದರಲ್ಲಿ ಯಾವ ಅನುಮಾನವೂ ಇಲ್ಲ ಎಂಬ ಎಲ್ಲಾ ಬಗೆಯಲ್ಲೂ ಪರಿಪೂರ್ಣವಾಗಿದೆ ಮತ್ತು ಬೌದ್ಧ ಧರ್ಮವು ಮಾತ್ರ ಜಗತ್ತನ್ನು ರಕ್ಷಿಸಲು ಸಾಧ್ಯ.

ಬಾಬಾಸಾಹೇಬ್ ಅಂಬೇಡ್ಕರ್‌ರವರು ಸ್ವತಃ ತಮ್ಮ ಜೀವನದಲ್ಲಿ ತಾವೇ ಅನುಭವಿಸಿದಂತಹ ನೋವು ಹಿಂದೂ ಧರ್ಮದ ವ್ಯವಸ್ಥೆಯಲ್ಲಿನ ಬದುಕು ಮತ್ತು ಶತಮಾನಗಳಿಂದ ಕ್ರೂರ ಹಿಂದೂ ಪುರೋಹಿತಶಾಹಿ ಸಾಮಾಜಿಕ ವ್ಯವಸ್ಥೆಗೆ ಬಲಿಯಾಗಿರುವ ನಾನು ಮತ್ತು ನನ್ನ ಜನಾಂಗ ಈ ಹಿಂದೂ ಧರ್ಮದಿಂದ ಮುಕ್ತಿಗೊಳ್ಳಬೇಕೆಂದು ತೀರ್ಮಾನಿಸುತ್ತಾ ಹಿಂದೂ ಧರ್ಮವನ್ನು ಕುರಿತು ಕೆಲವು ಉಕ್ತಿಗಳನ್ನು ಹೇಳುತ್ತಾರೆ.

೧. ಅನ್ನದಾನ, ವಸತಿ, ಮಾನವೀಯತೆ, ಸ್ವಾಭಿಮಾನ ಇಲ್ಲದಂತೆ ಮಾಡಿದ ಹಿಂದೂ ಧರ್ಮದಲ್ಲಿ ಏಕಿರಬೇಕು?

೨. ಬಹುಜನರು ಶೂರರ ವಂಶಕ್ಕೆ ಸೇರಿದವರು, ಸ್ವಾಭಿಮಾನ, ದೇಶಭಕ್ತಿ ಇಲ್ಲದೆ ಜೀವಿಸುವುದು ಅತ್ಯಂತ ಹೇಯವಾದುದು.

೩. ಅಸ್ಪೃಶ್ಯತೆಯಿಂದಾಗಿ ನಿಮ್ಮಲ್ಲಿರುವ ಪ್ರತಿಭೆ, ಶಕ್ತಿಗಳು ನಿರ್ವೀಯವಾಗಿ ಹೋಗುತ್ತಿವೆ.

೪. ಜೀವನದಲ್ಲಿ ಪ್ರಗತಿಯ ಸರ್ವತೋಮುಖ ಅಭಿವೃದ್ಧಿ ಕಾಣಬೇಕಾದರೆ ಹಿಂದೂ ಧರ್ಮ ತ್ಯಜಿಸಬೇಕೆಂದು ಹೇಳಿದರು.

ಹೀಗೆ ಪ್ರಪಂಚಕ್ಕೆ ಸಮಾನತೆಯ ಸಿದ್ಧಾಂತವನ್ನು ಕೊಡು

ಬೌದ್ಧಧಮ್ಮದ ವಿರುದ್ಧ ಎಷ್ಟೆ ಅಪಪ್ರಚಾರ ನಡೆದರೂ ಈ ಧಮ್ಮವು ಇಲ್ಲಿಗ್ಗಿಂತ ಯೂರೋಪ್, ಅಮೆರಿಕಾ, ಜಪಾನ್, ಚೈನಾ, ಶ್ರೀಲಂಕಾ ಮುಂತಾದ ರಾಷ್ಟ್ರಗಳಲ್ಲಿ ಹೆಚ್ಚಿನ ಮಾನ್ಯತೆ ಪಡೆದಿದೆ. ಬುದ್ಧ ವಿಶ್ವಮಾನ್ಯ ವ್ಯಕ್ತಿ, ಇಂಡಿಯಾದ ಹೊರಗೆ ಯಾರಿಗೂ ರಾಮನಾಗಲೀ ಕೃಷ್ಣನಾಗಲೀ ಗೊತ್ತಿಲ್ಲ. ಆದರೆ ಇಡೀ ಜಗತ್ತೇ ಕೊಂಡಾಡುವ ಹೆಸರು ಭಗವಾನ್ ಬುದ್ಧ, ಬೌದ್ಧಧಮ್ಮ ಈ ದೇಶದ ಧರ್ಮವಾಗಿದೆ.

ವಂತಹ ಬೌದ್ಧಧಮ್ಮವನ್ನು ಬಾಬಾಸಾಹೇಬ್ ಅಂಬೇಡ್ಕರ್‌ರವರು ಅಕ್ಟೋಬರ್ ೧೪, ೧೯೫೬ರಲ್ಲಿ ಐದು ಲಕ್ಷ ಅನುಯಾಯಿಗಳೊಡನೆ ಸ್ವೀಕಾರ ಮಾಡಿದರು. ಬೌದ್ಧ ಧಮ್ಮ ಸ್ವೀಕಾರ ನಂತರ ಬಾಬಾಸಾಹೇಬರು ಐದು ಲಕ್ಷ ಅನುಯಾಯಿಗಳನ್ನು ಕುರಿತು ಭಾಷಣ ಮಾಡುತ್ತಾ ಹಿಂದೂ ಧರ್ಮವನ್ನು ತ್ಯಜಿಸುವ ಚಳವಳಿಯನ್ನು ನಾನು ೧೯೩೫ರಲ್ಲಿ ನಾಸಿಕ್‌ನಲ್ಲಿ ಪ್ರಾರಂಭಿಸಿದೆ. ಅಂದಿನಿಂದ ಈ ನನ್ನ ಹೋರಾಟವು ಮುಂದುವರಿಯುತ್ತಾ ೧೯೩೫ರಲ್ಲಿ ಇಯೋಲದಲ್ಲಿ ಒಂದು ಬಾರಿ ಬಹಿರಂಗ ಸಭೆಯಲ್ಲಿ ನಾನು ಒಂದು ಪ್ರತಿಜ್ಞೆಯನ್ನು ಮಾಡಿದ್ದೆ 'ನಾನು ಹಿಂದೂವಾಗಿ ಹುಟ್ಟಿರಬಹುದು. ಆದರೆ ಹಿಂದೂವಾಗಿ ಸಾಯಲಾರೆ'. ಈ ಪ್ರತಿಜ್ಞೆಯು ನಿನ್ನೆಯ ದಿನ ನೆರವೇರಿದೆ. ಈಗ ನನಗೆ ತೀವ್ರ ಆನಂದವಾಗಿದೆ. ನನಗೆ ಹೇಳಿಕೊಳ್ಳಲಾಗದಷ್ಟು ಸಂತೋಷವಾಗುತ್ತಿದೆ. ಈಗ ನನಗೆ ನರಕದಿಂದ ಬಿಡುಗಡೆಯಾದಷ್ಟು ಸಂತಸವಾಗುತ್ತಿದೆ. ನಿನ್ನೆಯ ದಿನ ನನ್ನೊಟ್ಟಿಗೆ ದೀಕ್ಷೆ ಸ್ವೀಕರಿಸಿದ ತಮ್ಮೆಲ್ಲರಿಗೂ ಇಂತಹ ಅನುಭವವಾಗಬೇಕು.

ಬೌದ್ಧಧಮ್ಮದ ವಿರುದ್ಧ ಎಷ್ಟೇ ಅಪಪ್ರಚಾರ ನಡೆದರೂ ಈ ಧಮ್ಮವು ಇಲ್ಲಿಗ್ಗಿಂತ ಯೂರೋಪ್, ಅಮೆರಿಕಾ, ಜಪಾನ್, ಚೈನಾ, ಶ್ರೀಲಂಕಾ ಮುಂತಾದ ರಾಷ್ಟ್ರಗಳಲ್ಲಿ ಹೆಚ್ಚಿನ ಮಾನ್ಯತೆ ಪಡೆದಿದೆ. ಭಗವಾನ್ ಬುದ್ಧರು ವಿಶ್ವಮಾನ್ಯ ವ್ಯಕ್ತಿ. ಇಂಡಿಯಾದ ಹೊರಗೆ ಯಾರಿಗೂ ರಾಮನಾಗಲೀ ಕೃಷ್ಣನಾಗಲೀ ಗೊತ್ತಿಲ್ಲ, ಆದರೆ ಇಡೀ ಜಗತ್ತೇ ಕೊಂಡಾಡುವ ಹೆಸರು ಭಗವಾನ್ ಬುದ್ಧ, ಬುದ್ಧನ ಮಾರ್ಗವು ಈ ನೆಲದಿಂದ ಹುಟ್ಟಿದೆ. ಬೌದ್ಧಧಮ್ಮ ಈ ದೇಶದ ಧರ್ಮವಾಗಿದೆ. ಈ ಧಮ್ಮಕ್ಕೆ ೨,೦೦೦ ವರ್ಷಗಳ ಇತಿಹಾಸವಿದೆ. ಇಷ್ಟು ವರ್ಷಗಳ ಕಾಲ ಈ ಧರ್ಮವನ್ನು ಸ್ವೀಕರಿಸದೇ ಇದ್ದುದಕ್ಕೆ ನನಗೆ ನಿಜಕ್ಕೂ ವಿಷಾದವಾಗುತ್ತಿದೆ.

ನೀವು ಕೈಗೊಂಡಿರುವ ಈ ದೀಕ್ಷೆ ಅತ್ಯಂತ ಜವಾಬ್ದಾರಿಯುತವಾದದ್ದು. ನಾವು ಕೆಲವು ನಿರ್ಣಯಗಳನ್ನು ಮಾಡಿದ್ದೇವೆ. ನಮ್ಮ ಯುವಕರು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಂಶವೇನೆಂದರೆ ಕೇವಲ ಹೊಟ್ಟೆ ಪಾಡಿಗಾಗಿ ಸರ್ಕಾರಿ ಬಾಬುಗಳಾಗಬೇಡಿ. ಸ್ವಾರ್ಥಿಗಳಾಗಬೇಡಿ. ಕೇವಲ ನಿಮಗಾಗಿ ನೀವು ಬದುಕುವ ಆಲೋಚನೆ ಇಟ್ಟುಕೊಳ್ಳಬೇಡಿ. 'ನಾನು ನನ್ನ ಸಂಪಾದನೆಯಲ್ಲಿ ಕನಿಷ್ಠ ಪಕ್ಷ ಒಂದು ರೂಪಾಯಿಗಳಲ್ಲಿ ಐದು ಪೈಸೆಯ ಭಾಗವನ್ನು ಧಮ್ಮ ಕಾರ್ಯಕ್ಕೆ ಮೀಸಲಿಡುತ್ತೇನೆ' ಎಂಬ ನಿರ್ಣಯ ನೀವು ಕೈಗೊಳ್ಳಬೇಕು ಎನ್ನುತ್ತಾ ಬಾಬಾಸಾಹೇಬ್ ಅಂಬೇಡ್ಕರರು ಈ ಧಮ್ಮ ಸಂದೇಶವನ್ನು ನೀಡಿದ್ದಾರೆ. ವಿಶ್ವದ ಬೌದ್ಧ ಸಾಹಿತ್ಯದಲ್ಲಿ ಈ ಸಂದೇಶವು ಮಹತ್ತರ ಸ್ಥಾನ ಪಡೆದಿದೆ.

ಈ ನೆಲದಲ್ಲೇ ಹುಟ್ಟಿ ಜಗತ್ತನ್ನೆಲ್ಲಾ ವ್ಯಾಪಿಸಿಕೊಂಡು ಈ ನೆಲದಿಂದಲೇ ಮರೆಯಾದ ಬುದ್ಧ ಭಗವಾನರ ಧಮ್ಮವನ್ನು ಬಾಬಾ ಸಾಹೇಬರು ಮತ್ತೆ ಜೀವಂತಗೊಳಿಸಿದರು. ಆದ್ದರಿಂದಲೇ ಅವರನ್ನು ೨೦ನೇ ಶತಮಾನದ ಬುದ್ಧ ಎಂದು ಕೊಂಡಾಡಲಾಗಿದೆ.

ಬೌದ್ಧಧಮ್ಮ ಸ್ವೀಕರಿಸಿದ ನಂತರ ಅಸ್ಪೃಶ್ಯರ ಸಮಸ್ಯೆಗಳು ಪರಿಹಾರವಾಗಲಿಲ್ಲ. ಈ ಬೌದ್ಧಧಮ್ಮ ನುತಾಂತರದಿಂದ ಗಬ್ಬು ನಾರುತ್ತಿರುವ, ಕೊಚ್ಚೆಗುಂಡಿಯಂತಿರುವ ಹಿಂದೂ ಧರ್ಮದ ಸಾಮಾಜಿಕ ವ್ಯವಸ್ಥೆಯಿಂದ ಹೊರಬಂದು ಮುಕ್ತ ವಾತಾವರಣದಲ್ಲಿ ಇದ್ದೇವೆ. ಆದರೆ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನಾವು ಸ್ವತಂತ್ರರಾಗಿಲ್ಲ. ಬೌದ್ಧರಾದ ಬಹುಜನರಿಗೆ ಹಿಂಸೆ, ದೌರ್ಜನ್ಯ, ತಾರತಮ್ಯಗಳು ತಪ್ಪಲಿಲ್ಲ ಮತ್ತು ಗುಲಾಮಗಿರಿಯಿಂದ ವಿಮೋಚನೆ ಸಿಗಲಿಲ್ಲ. ಆದರೆ ನಾವು ಏನು ಮಾಡಬೇಕು? ಬಾಬಾಸಾಹೇಬರು ತನ್ನ ಕೊನೆಯ ಉಸಿರೆಳೆಯುವುದಕ್ಕೂ ಮುನ್ನಾ ದಿನ ಹೇಳುತ್ತಾರೆ. 'ನನ್ನ ಅಂತರಾಳದ ಬೇಗೆಯನ್ನು ನೀವು ಅರಿಯಲಾರಿರಿ. ನನ್ನ ಕಣ್ಣೀರಿಗೆ ಕಾರಣವನ್ನು ನೀವು ತಿಳಿಯಲಾರಿರಿ. ನನ್ನ ಜೀವನ ಕಾಲದಲ್ಲಿ ನನ್ನ ಜನಾಂಗವು ಈ ದೇಶದ ಆಳುವ ವರ್ಗವಾಗುವುದನ್ನು ಕಾಣಬೇಕೆಂದಿದ್ದೆ. ಆದರೆ ನಾನಿಂದು ಅನಾರೋಗ್ಯದಿಂದ ಅತಿಯಾಗಿ ಬಳಲಿದ್ದೇನೆ. ನನ್ನ ಜೀವನದ ಮಹದಾಸೆಯನ್ನು ನನ್ನ ಅನುಯಾಯಿಗಳು ಪೂರೈಸುವರೆಂದು ನಾನು ತಿಳಿದಿದ್ದೆ. ಆದರೆ ಈ ಮೂರ್ಖರು ತಮ್ಮದೇ ಸ್ವಾರ್ಥ ಸಾಧನೆಯಲ್ಲಿ ಮುಳುಗಿದ್ದಾರೆ. ಹಾಗೂ ತಮ್ಮ ಗೋರಿಯನ್ನು ತಾವೇ ತೋಡಿಕೊಳ್ಳುತ್ತಿದ್ದಾರೆ'. ಬಹುಜನರು ಈ ದೇಶದ ಆಳುವ ವರ್ಗವಾಗಬೇಕಿತ್ತು ಎನ್ನುವುದೇ ಬಾಬಾಸಾಹೇಬರ ಆಶಯವಾಗಿತ್ತು ಗುರಿಯಾಗಿತ್ತು. ಬಹುಜನ ಸಮುದಾಯವನ್ನು ಆಳುವ ವರ್ಗವನ್ನಾಗಿಸಲು ಬಾಬಾ ಸಾಹೇಬರು ತಮ್ಮ ಜೀವನವಿಡಿ ಹೋರಾಡಿದರು. ಬಾಬಾಸಾಹೇಬರು ಕನಸನ್ನು ನನಸು ಮಾಡಲು ನಾವು ಏನು ಮಾಡಬೇಕೆಂದರೆ ಆಳುವ ವರ್ಗವಾಗಬೇಕು. ಬಹುಜನರು ತನ್ನ ಸ್ವಂತ ಶಕ್ತಿಯಿಂದ ಸರ್ಕಾರವನ್ನು ರಚನೆ ಮಾಡಿದಾಗ, ಸರ್ಕಾರದಲ್ಲಿ ಅಧಿಕಾರಯುತ ಪಾಲನ್ನು ಪಡೆದಾಗ ಅದು ಆಳುವ ವರ್ಗವಾಗುತ್ತದೆ. ಆಳುವ ವರ್ಗಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯೂ ತಾನೇ ಮಂತ್ರಿಯಾದಂತೆ ಭಾವಿಸುತ್ತಾನೆ. ಒಂದು ಜನಾಂಗವು 'ಆಳುವ ವರ್ಗ'ವಾಗುವುದರೊಂದಿಗೆ ಸ್ವಾಭಿಮಾನ, ಸ್ವಾವಲಂಬನೆ ಮತ್ತು ಘನತೆಯಿಂದ ಬಾಳುತ್ತಾನೆ. ಬಹುಜನರನ್ನು ಇಂತಹ ಆಳುವ ವರ್ಗವನ್ನಾಗಿಸಲು ಬಾಬಾಸಾಹೇಬರು ಕನಸು ಕಂಡಿದ್ದರು ಮತ್ತು ಭಾರತದ ಎಲ್ಲಾ ಜಾತಿ, ಜನಾಂಗವೂ ಆಡಳಿತ ನಡೆಸುವಲ್ಲಿ ತಮ್ಮ ನ್ಯಾಯಯುತ ಪಾಲು ಪಡೆಯಬೇಕೆಂದು ಬಯಸಿದ್ದರು. □

ನೆನಪು



ಪ್ರೊ. ನಂಜುಂಡಸ್ವಾಮಿ ಅವರು (೧೯೩೬) ನಾಡಿನ ಬಹುದೊಡ್ಡ ಚಿಂತಕರು. ಹೋರಾಟಗಾರರು, ೭೦ರ ದಶಕದ ಎಲ್ಲಾ ಜನಪರ ಚಳವಳಿಗಳಿಗೆ ಪ್ರೇರಕ ಶಕ್ತಿಯಾಗಿ ನಿಂತವರು. ೮೦ರ ದಶಕದಲ್ಲಿ ರೈತ ಸಂಘವನ್ನು ಕಟ್ಟಿ ಆಳುವವರ ಗುಂಡಿಗೆಯನ್ನು ನಡುಗಿಸಿದವರು. ಜಾಗತಿಕ ಮಟ್ಟದಲ್ಲಿ ರೈತರ ಹಿತಕ್ಕಾಗಿ ಹೋರಾಡಿದವರು. ಈಚೆಗೆ ನಿಧನರಾದ ಅವರ ನೆನಪಿಗಾಗಿ ೨೭-೦೧-೦೩ರಂದು ನಡೆಸಿದ ಸಂದರ್ಶನವನ್ನು ಪುನರ್ ಮುದ್ರಿಸುತ್ತಿದ್ದೇವೆ.

ಸೌಜನ್ಯ : ಕನ್ನಡ ಅಧ್ಯಯನ, ಕನ್ನಡ ವಿವಿ.

ಸಂದರ್ಶನ:
ಪ್ರೊ. ರಹಮತ್ ತರೀಕೆರೆ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಸಂ. ಸಮಾನ ಮನಸ್ಕರು ಒಂದುಕಡೆ ಸೇರೋಕೆ ಕಾಮನ್ ಪ್ರೋಗ್ರಾಂ ಇರುವುದು ಒಂದಾದರೆ, ಕಾಮನ್ ಎನಿಮಿ ಕೂಡ ಇರಬೇಕಾಗುತ್ತೆ. ಅಂತಹ ಪ್ರಧಾನ ಶತ್ರು ಯಾರು?

ನಂ. ಈಗಿರೋವಂಥ ರಾಜಕೀಯ ಪಕ್ಷಗಳು. ಅದನ್ನು ಸಾಕ್ತಾ ಇರೋವಂತಹ ಹಿತಾಸಕ್ತಿಗಳು. ಕೆಲವು ವೆಸ್ಟೆಡ್ ಇಂಟರೆಸ್ಟ್‌ಗಳು ಎಲ್ಲ ರಾಜಕೀಯ ಪಕ್ಷಗಳನ್ನು ಸಾಕ್ತಾಯಿವೆ. ಯಾವುದೇ ರಾಜಕೀಯ ಪಕ್ಷಗಳೂ ತಮ್ಮ ಸ್ವತಂತ್ರ ಅಸ್ತಿತ್ವ ಉಳಿಸಿಕೊಂಡಿಲ್ಲ ಇವತ್ತಿಗೂ. ಅವೆಲ್ಲ ಯಾರದೋ ಏಜೆಂಟ್ ಆಗಿ ಕೆಲಸ ಮಾಡೋವಂಥ ಗುಂಪುಗಳಾಗಿವೆ ಹೊರತು, ಒಂದು ರಾಜಕೀಯ ಪಕ್ಷಕ್ಕೆ ಬೇಕಾದಂತಹ ಚೌಕಟ್ಟಿನಲ್ಲಿ ಕೆಲಸ ಮಾಡೋವಂತಹ ಗುಂಪುಗಳಾಗಿ ಉಳಿದಿಲ್ಲ. ಆ ಕಾರಣ ನಮ್ಮ ಶತ್ರುಗಳು ಯಾರು ಅನ್ನೋದು ಸ್ಪಷ್ಟ. ಆದರೆ ಚಳವಳಿಗಳ ಶಕ್ತಿ ಮುಂದೆ ಆ ಶತ್ರುಗಳು ನಿಲ್ಲಕ್ಕೆ ಸಾಧ್ಯ ಇಲ್ಲ. ಆ ಶಕ್ತಿಗಳ ವಿರುದ್ಧ ಜನಾಭಿಪ್ರಾಯ ಈಗಾಗಲೇ ಸಿದ್ಧ ಆಗಿದೆ. ಆದರೆ ಈ ಜನಾಭಿಪ್ರಾಯಕ್ಕೆ ಒಂದು ದಾರಿ ತೋರಿಸೋವಂಥ ಒಂದು ವೇದಿಕೆ ಸೃಷ್ಟಿಯಾಗಿಲ್ಲ ಅಷ್ಟೆ.

ಸಂ. ರೈತಸಂಘವು ರಾಜಕಾರಣದಲ್ಲಿ ಇರಿಸಿಕೊಂಡಿರುವ ಎಚ್ಚರ, ತೋರಿಸುವ ಪ್ರಜ್ಞೆ ಇವೆಲ್ಲ ಜನಪರವಾಗಿದೆ, ಬಹಳ ಪ್ರಖರವಾಗಿದೆ, ಸರಿ. ಆದರೆ ನಮ್ಮ ಹಳ್ಳಿಗಾಡಿನ ಜಾತಿಸಮಾಜದಲ್ಲಿ, ಭೂರಹಿತ ಕೂಲಿಕಾರ್ಮಿಕರು ಇರೋ ಸಮಾಜದಲ್ಲಿ, ಅದರ ಪಾತ್ರದ ಬಗ್ಗೆ ಈ ಜನಪರತೆ ಅನ್ನೋದು ಕಾಣ್ತಾ ಇಲ್ಲ. ರೈತಸಂಘ ಈಗಲೂ ಊಳಿಗಮಾನ್ಯ ಪದ್ಧತಿಯನ್ನು ಒಪ್ಪಿಕೊಂಡಿರೋ ಭೂಮಾಲೀಕರಿಂದ ತುಂಬಿದೆ ಅಲ್ಲವಾ?

ಜಾತೀಕರಣದಿಂದ ಜಾಗತೀಕರಣದವರೆಗೆ...

ನಂ. ಹಾಗೇನಿಲ್ಲ ತಾವು ಗಮನಿಸಿಲ್ಲ ಅಂತ ಕಾಣುತ್ತೆ, ನಮ್ಮ ಸಂಘಟನೆ ಯಾವ್ಯಾವ ಗ್ರಾಮದಲ್ಲಿದ್ದೆ, ಅಲ್ಲೆಲ್ಲೂ ಕೋಮುಗಲಭೆ ಆಗಿಲ್ಲ. ಕಾರಣ, ಸಣ್ಣಪುಟ್ಟ ಸಮಸ್ಯೆಗಳು ಹಿಂದಿನಿಂದ ಏನು ಉಳಿದುಕೊಂಡು ಬಂದಿವೆ, ಊಳಿಗಮಾನ್ಯ ಪದ್ಧತಿ ಅಂದರಲ್ಲ, ಅದಕ್ಕಿಂತ ದೊಡ್ಡ ದೊಡ್ಡ ಸಮಸ್ಯೆಗಳ ಕಡೆ ಅವರ ಗಮನ ಬಿದ್ದಿದ್ದರಿಂದ ಈ ಸಾಂಪ್ರದಾಯಿಕ ವೈಷಮ್ಯಗಳು ಅಸಮಾನತೆ ತಾರತಮ್ಯ ಇತ್ಯಾದಿ ಹಳ್ಳಿಗಳಲ್ಲಿ ಕಾಣಸ್ತವೆ, ಅವು ಕ್ರಮೇಣ ಅದೃಶ್ಯ ಆಗ್ತಾಯಿವೆ. ಹಾಗಾಗಿ ನಮ್ಮ ಸಂಘ ಎಲ್ಲೆಲ್ಲಿದೆಯೋ ಅಲ್ಲಿ ಕೋಮುಗಲಭೆ ಮಾತ್ರವಲ್ಲ ಜಾತಿಗಲಭೆಗಳೂ ಆಗಿಲ್ಲ. ಚಳವಳಿನಲ್ಲಿ ಕಂಡು ಬರುವಂಥ ಈ ನಿಲುವು ನಿಧಾನಗತಿನಲ್ಲೇ ಆಗಬಹುದು, ಅಂತೂ ಆಗ್ತಾ ಇದೆ.

ಸಂ. ನನ್ನ ಪ್ರಶ್ನೆಯ ಉದ್ದೇಶ ಭೂಹಂಚಿಕೆ ಬಗ್ಗೆ ನಿಲುವು ಏನು ಅಂತ ತಿಳಿಯೋದಾಗಿದೆ ಸಾರ್. ಕರ್ನಾಟಕದಲ್ಲಿ ಕಾಗೋಡು ಸತ್ಯಾಗ್ರಹ ಆಗಿದೆ, ದೇವರಾಜ ಅರಸರು ತಂದ ಭೂಸುಧಾರಣೆ ಆಗಿದೆ. ಆದರೂ ಭೂಹಂಚಿಕೆ ಅನ್ನೋದು ಪೂರ್ಣ ರೀತಿಯಲ್ಲಿ ನಡೆದಿಲ್ಲ.

ನಂ. ನಮ್ಮ ದೃಷ್ಟಿಕೋನದ ಪ್ರಕಾರಒಂದು ಕುಟುಂಬದ ಹಿಡುವಳಿಗೆ ನಾವು ಕೊಟ್ಟಿರೋಂಥ ವಿಶ್ಲೇಷಣೆ. ಆ್ಯಜ್ ಮಚ್ ಲ್ಯಾಂಡ್ ಆ್ಯಜ್ ಎ ಫ್ಯಾಮಿಲಿ ನೀಡ್ಸ್ ವಿತೌಟ್ ಹೈರಿಂಗ್ ಎಕ್ಸ್‌ಟ್ರನಲ್ ಲೇಬರ್. ಇದು ಸಮಾಜವಾದದ ಕೊನೆ ಹಂತ. ನಿಮಗೆ ಒಂದು ಉದಾಹರಣೆ ಹೇಳಬೇಕು, ಭೂಮಿ ಬಗ್ಗೆ ನಮ್ಮ ನಿಲುವು ಏನು ಅಂತ. ನಾವು ಚಿಕ್ಕಮಗಳೂರಿನಲ್ಲಿ ಬೆಂಬಲ ಕಳಕೊಂಡೆವು. ಕಾರಣ, ಕಾಫಿ ತೋಟಗಳಿಗೂ ಭೂಸುಧಾರಣೆ ಅನ್ವಯಿಸಬೇಕು ಅಂತ ನಾವು ಘೋಷಣೆ ಹಾಕಿದ್ದು. ಆ ದಿವಸದಿಂದ ಕಾಫಿ ತೋಟದ ಏರಿಯಾದ ರೈತರೆಲ್ಲ ನಮ್ಮನ್ನು ಬಿಟ್ಟು ಹೋಗ್ ಬಿಟ್ಟರು. ಇವತ್ತಿಗೂ ಅದೇ ನಿಲುವು ನಮ್ಮದು. ಲ್ಯಾಂಡ್ ರಿಫಾರ್ಮ್ಸ್ ಶುಡ್ ಬಿ ಅಪ್ಲೈಡ್ ಟು ಈವನ್ ಪ್ಲಾಂಟೇಷನ್ಸ್. ಇನ್ನೂ ಭೂಸುಧಾರಣೆ ಆಗಬೇಕು. ಈಗ ಆಗಿರೋದು ಅಂಥ ಸಮರ್ಪಕವಾದ ಭೂಸುಧಾರಣೆ ಏನಲ್ಲ. ಲ್ಯಾಂಡ್ ಟು ದ ಟಿಲ್ಲರ್ ಅಂತ ಏನಂತೀವಿ, ಆ ಸುಧಾರಣೆ ಇನ್ನೂ ಆಗಿಲ್ಲ. ಕಾಗೋಡು ಸತ್ಯಾಗ್ರಹ, ಅದು ಗೇಣಿದಾರರ ಚಳವಳಿ. ಅಷ್ಟೇ ಹೊರತು, ಉಳುವವನ ಚಳವಳಿ ಅಲ್ಲ. ಆದಾದ ಮೇಲೆ ಟೆನೆನ್ಸಿ ಲಾ ಬಂದಿದ್ದು. ದೇವರಾಜ ಅರಸು ಮಾಡಿದ್ದೂನೂ ಅಷ್ಟೇನೆ. ಟೆನೆನ್ಸಿ ಲಾ ಅಂತ ತಂದ ಅಥವಾ ಆಬ್ಸೆಂಟಿವ್ ಲ್ಯಾಂಡ್ ಲಾರ್ಡಿಸಂ ತೆಗೆದುಹಾಕೋ ಪ್ರಯತ್ನ ಆಯ್ತು ಹೊರತು, ಲ್ಯಾಂಡ್ ಟು ದಿ ಟಿಲ್ಲರ್ ಆಗಲೇ ಇಲ್ಲ. ಇನ್ನೂ ಆಗಿಲ್ಲ.

ಸಂ. ನೀವು ಹೇಳಿದಿರಿ, ಗುಣಾತ್ಮಕ ಬದಲಾವಣೆಗೆ ಬೇಕಾದಂಥ ಬುದ್ಧಿಜೀವಿಗಳ ದೊಡ್ಡ ಸಂಖ್ಯೆ ಕರ್ನಾಟಕದಲ್ಲಿದೆ ಅಂತ. ಆದರೆ ಬುದ್ಧಿಜೀವಿ ವರ್ಗದಲ್ಲಿ ಜಾಗತೀಕರಣ ಕುರಿತು ಬಗೆಬಗೆಯ ಅಭಿಪ್ರಾಯಗಳಿವೆ. ಸೈದ್ಧಾಂತಿಕ ಗೊಂದಲ ಇದೆ. ನೀವು ಇಂಟರ್‌ನ್ಯಾಷನಲ್ ರಿಲೇಶನ್ಸ್ ಅಧ್ಯಯನ ಮಾಡಿದೋರು. ಪಾಠ ಹೇಳಿದೋರು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ರೈತ ಚಳವಳಿಗಾರನಾಗಿ ಕೆಲಸ ಮಾಡಿದೋರು, ಗ್ಲೋಬಲೈಜೇಶನನ್ನ ಹೆಂಗೆ ವಿಶ್ಲೇಷಣೆ ಮಾಡ್ತೀರಿ?

ನಂ. ಗೊಂದಲ ಬರೋದಕ್ಕೆ ಕಾರಣ, ನಮ್ಮಲ್ಲಿ ಬಹುಪಾಲು ಅರ್ಥಶಾಸ್ತ್ರಜ್ಞರು ಪ್ರಾಮಾಣಿಕರಲ್ಲ. ಅವಕಾಶವಾದಿಗಳು. ಜೊತೆಗೆ ಆತ್ಮವಿಶ್ವಾಸ ಇಲ್ಲದವರು. ಜಾಗತೀಕರಣ ಇಟ್ ಹ್ಯಾಸ್ ಬಿಕಮ್ ಎ ರಿಯಾಲಿಟಿ. ವಿ ಕಾಂಟ್ ಗೋ ಎಗೇನೆಸ್ಟ್ ಇಟ್ ಅನ್ನೋ ತೀರ್ಮಾನಕ್ಕೆ ಬಂದ್ಬಿಟ್ಟಿರೋರು. ಇನ್ನು ಕೆಲವು ಎಕಾನಾಮಿಸ್ಟ್ ಕೆಟ್ಟ ಭಾಷೆ ಉಪಯೋಗಿಸಿದ್ದಾರೆ. 'ಇಫ್ ಯು ಕಾಂಟ್ ರೆಸಿಸ್ಟ್ ಲೆಡೌನ್ ಅಂಡ್ ಎಂಜಾಯ್ ಇಟ್' ಅಂತ. ಇದಕ್ಕಿಂತ ಹೇಸಿಗೆ ನಿಲುವು ಏನಾದರೂ ಇದೆಯಾ? ಇಂಥ ಅರ್ಥಶಾಸ್ತ್ರಜ್ಞರು ನಮ್ಮ ಸುತ್ತಮುತ್ತ ಇದಾರೆ ಸ್ವಾಮಿ. ಇದು ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿದೆ. ಆದರೆ ನನಗೆ ಇನ್ನೂ ವಿಶ್ವಾಸ ಇದೆ. ಇಫ್ ಇಂಡಿಯಾ ಟೇಕ್ಸ್ ದಿ ಲಿಡರ್‌ಶಿಪ್ ಆಫ್ ಥರ್ಡ್‌ವರ್ಲ್ಡ್ ಕಂಟ್ರೀಸ್, ವಿ ಕ್ಯಾನ್ ಡಿಸ್ಮ್ಯಾಯ್ ದಿಸ್ ಕೈಂಡ್ ಆಫ್ ಗ್ಲೋಬಲೈಜೇಶನ್. ಇದಕ್ಕೆ ಇನ್ನೂ ಸ್ವಲ್ಪ ಕಾಲ ಬೇಕಾಗುತ್ತೇನೋ. ಒಂದೊಂದು ಸಾರಿ ಧೈರ್ಯವಾಗಿ ಮಾತಾಡೋ ಧ್ವನಿ ಕೇಳ್ತಾ ಇದೆ, ನಮ್ಮ ಸರಕಾರ ವಕ್ತಾರರ ಬಾಯಿಂದ. ಯಾರು ಅಂತರಾಷ್ಟ್ರೀಯ ಸಮಾಲೋಚನೆಗಳಿಗೆ ಹೋಗ್ತಾರೋಅವರಿಂದ. ಮತ್ತೆ ಯಾವುದೋ ಪ್ರೆಶರ್‌ನಿಂದ ಧ್ವನಿ ಕ್ಷೀಣ ಆಗುತ್ತೆ. ಆದರೆ ಇಲ್ಲಿ ಸಮಸ್ಯೆ ಜಾಸ್ತಿ ಜಾಸ್ತಿ ಆಗ್ತಾ, ಜನಾಂದೋಲನದ ಒಂದು ಒತ್ತಡಕ್ಕೆ ಅವರೂ ಧೈರ್ಯವಾಗಿ ಮಾತಾಡಲೇಬೇಕಾಗುತ್ತೆ. ಸೋ ಈಗ ಇಂಡಿಯಾ, ಮಲೇಶಿಯಾ, ಪಾಕಿಸ್ತಾನ ಇವು ಸ್ವಲ್ಪಮಟ್ಟಿಗೆ ನಾಯಕತ್ವ ತಗೊಂಡಿವೆ. ಜಾಗತೀಕರಣದ ಸಮಸ್ಯೆ ಈ ದೇಶಗಳಲ್ಲಿ ಜಾಸ್ತಿ ಆಗ್ತಾ ಆಗ್ತಾ ಇನ್ನೂ ಗಟ್ಟಿಧ್ವನಿಯಲ್ಲಿ ಮಾತಾಡಿಕ್ಕೆ ಪ್ರಾರಂಭ ಆಗಬಹುದು. ಫೈನಲೀ ಕ್ಯಾಪಿಟಲಿಜಂ ಹ್ಯಾಸ್ ಟು

ಕೊಲ್ಯಾಪ್ಸ್ ಅಲಾಂಗ್ ವಿಥ್ ಡಬ್ಲ್ಯೂಟಿಓ ಹ್ಯಾಸ್ ಟು ಕೊಲ್ಯಾಪ್ಸ್. ಆದರೆ ಈ ಕುಸಿತ ಬೇಗ ಆಗೋದ ಕ್ಕೋಸ್ಕರವಾಗಿ ನಾವು ಮಾಡ್ತಾ ಇರೋ ಚಳವಳಿಯಿದು. ತಡ ಆದರೆ, ಅವು ಕೊಲ್ಯಾಪ್ಸ್ ಆಗೋಕ್ ಮುಂಚೆ ಸಾಕಷ್ಟು ಹಾನಿ ಮಾಡಿ ಬಿಡುತ್ವೆ. ಈ ಹಾನಿ ತಪ್ಪಿಸೋ ಕೋಸ್ಕರ ಈ ಚಳವಳಿಗಳು.

ಸಂ. ಈಗ ಆಫಘಾನಿಸ್ತಾನದ ಮೇಲೆ ಅಮೆರಿಕ ಭಯೋತ್ಪಾದನೆ ನಿವಾರಣೆ ಹೆಸರಲ್ಲಿ ದಾಳಿ ಮಾಡಿತು. ಇದಕ್ಕೂ ಗ್ಲೋಬಲೈಜೇಶನ್ನಿಗೂ ಇರೋ ಸಂಬಂಧ ಎಂಥದ್ದು?

ನಂ. ನಾವು ಜಾಗತೀಕರಣವನ್ನ ಕಲೋನಿಯಲಿಜಂನ ಮುಂದು ವರಿಕೆ ಅಂತ ಕರೀತಾ ಇರೋದು. ಇಟೀಜ್ ಎ ಪ್ರೊಸೆಸ್ ಆಫ್ ಎ ರಿಕಲೋನೈಜೇಶನ್. ಆಫ್ಟರ್ ದಿ ಫಸ್ಟ್ ಫೇಜ್ ಆಫ್ ಕಲೋನೈಜೇಶನ್, ಇದನ್ನ ನಾವು ಗ್ಲೋಬಲೈ ಜೇಶನ್ ಅಂತ ಅರ್ಥೈಸಿರೋರು. ಈಗ ಇರಾಕ್ ಮೇಲೆ ಯುದ್ಧ ಮಾಡಬೇಕ ಅನ್ನೋದನ್ನ ನಾವು ಅಮೆರಿಕದ ಪೆಟ್ರೋಟೆರರಿಸಂ ಅಂತ ಮಾತ್ರ ನೋಡೋದು. ಅಂಡ್ ದಿ ಬಿಗ್ಗೆಸ್ಟ್ ಟೆರರಿಸ್ಟ್ ಈಜ್ ಜಾರ್ಜ್ ಬುಷ್. ಅಂಡ್ ದಟೀಸ್ ದಿ ಟ್ರೂತ್. ಇವತ್ತು ಪ್ರಪಂಚದಲ್ಲಿ ಅತ್ಯಂತ ದೊಡ್ಡ ಭಯೋತ್ಪಾದಕ ಅಂದರೆ ಅಮೆರಿಕಾನೆ. ಇನ್ನು ಮಿಕ್ಕವರ್ಯಾರು ಭಯೋತ್ಪಾದಕರಲ್ಲವೇ ಅಲ್ಲ, ಅವರೆಲ್ಲ ಬೇರೆ ಬೇರೆ ರೂಪದಲ್ಲಿ ಅಮೆರಿಕಾದ ಭಯೋತ್ಪಾದನೆ ಯನ್ನ ವಿರೋಧ ಮಾಡ್ತಾ ಇರೋರು. ಅದರಲ್ಲಿ ಸದ್ದಾಂ ಕೂಡ ಒಬ್ಬರು. ಐ ವುಡ್ ಸೇ ಬಿನ್ ಲ್ಯಾಡೆನ್ ಆಲ್ಸೋ. ನಾನು ಒಂದು ರೀತಿ ಅವರ ಸ್ನೇಹಿತ. ಯಾಕೆಂದರೆ ಅವರು ಏನು ವಿರೋಧ ಮಾಡ್ತಾ ಇದಾರೊ ಅದನ್ನೇ ವಿರೋಧ ಮಾಡೋನು ನಾನು.

ಸಂ. ನೀವು ಮೀಟರ್ ಅಳವಡಿಕೆಯಂತಹ ಸ್ಥಳೀಯ ಸಮಸ್ಯೆ ಬಗ್ಗೆ ಚಳವಳಿ ಮಾಡ್ತೀರಿ. ಅದೇ ಕಾಲಕ್ಕೆ ಈ ಬಗೆಯ ಅಂತಾರಾಷ್ಟ್ರೀಯ ರಾಜಕೀಯವನ್ನು ಕೂಡ ವಿಶ್ಲೇಷಣೆ ಮಾಡ್ತೀರಿ. ಇವೆರಡಕ್ಕೂ ಇರೋ ಸಂಬಂಧವನ್ನ ರೈತರಿಗೆ ಒಂದು ರಾಜಕೀಯ ಪ್ರಜ್ಞೆಯಾಗಿ ಕೊಡೋ ವಿಷಯದಲ್ಲಿ ನಿಮ್ಮ ಅನುಭವ ಏನು?

ನಂ. ಕರ್ನಾಟಕದಲ್ಲಿ ಈ ಕೆಲಸ ಮಾಡ್ತಾ ಇರೋದು ರೈತ ಚಳವಳಿ ಒಂದೇ. ಇದರ ಬಗ್ಗೆ ಅಧ್ಯಯನ ಶಿಬಿರಗಳನ್ನ ಇಟ್ಕೊಂತಾ ಇರೋದು ರೈತ ಚಳವಳಿ ಒಂದೇ. ಮಿಕ್ಕ ಯಾವ ಸಂಘಟನೇನೂ ಈ ಕೆಲಸ ಮಾಡ್ತಾ ಇಲ್ಲ.

ಸಂ. ಅಲ್ಲ ರೈತರಿಗೆ ಇದನ್ನು ಕೊಡೋ ವಿಷಯದಲ್ಲಿರೋ ತೊಡಕುಗಳ ಬಗ್ಗೆ ಕೇಳಿದೆ....

ನಂ. ಜಾಗತೀಕರಣದ ಬಗ್ಗೆ ಅತ್ಯಂತ ಹೆಚ್ಚು ಮಾಹಿತಿ ಇರೋವಂಥವರು ಇವತ್ತಿಗೂ ಕರ್ನಾಟಕದ ರೈತರು ಅಂತ ಹೇಳಬಹುದು ತಾವು. ಪ್ರತಿಯೊಬ್ಬನಿಗೂ ಗೊತ್ತು ಏನಾಗ್ತಿದೆ, ಎಲ್ಲಿಂದ ಸಮಸ್ಯೆ ಬರ್‍ತಿದೆ, ಎಲ್ಲಿಂದ ಏನು ಬಂತು, ನನ್ನ ಮುಸುಕಿನ ಜೋಳ ಬೆಲೆ ಕಡಿಮೆ ಆಗಕೆ ಏನ್ ಕಾರಣ, ಯಾವ ದೇಶದಿಂದ ಎಷ್ಟು ಮುಸುಕಿನ ಜೋಳ ಬಂತು, ಯಾವ ರೇಟಿಗೆ ಬಂತು, ತಾಳೆಎಣ್ಣೆ ಯಾವ ರೇಟಿಗೆ ಬಂತು. ಇದು ನಮ್ಮ ದೇಶದ ಬುದ್ಧಿಜೀವಿಗಳಿಗಿಂತ ಹೆಚ್ಚಾಗಿ ರೈತ ಕಾರ್ಯಕರ್ತರಿಗೆ ಹೆಚ್ಚು ಮಾಹಿತಿ ಇದೆ. (ನಗು)

ಸಂ. ಈ ಜಾಗತೀಕರಣದ ಹೊತ್ತಲ್ಲೇ ಭಾರತದಲ್ಲಿ ಮತೀಯವಾದವು ತುಂಬ ಬಿರುಸಾಗಿ ಬೆಳೀತಿದೆ.

ನಂ. ದೇರ್ ಈಜ್ ನೋ ಡಿಫರೆನ್ಸ್ ಬಿಟ್ವೀನ್ ಹ್ಯಾಪೆನಡ್ ಇನ್ ಗುಜರಾತ್ ಅಂಡ್ ಅಫಘಾನಿಸ್ತಾನ್. ಭಾರತದ ಮೇಲ್ವರ್ಗಗಳು ಮತ್ತು ಅಂತರಾಷ್ಟ್ರೀಯ ಮೇಲ್ವರ್ಗಗಳು ಕೈಜೋಡಿಸಿರೋದು ಅಷ್ಟೆ ಜಾಗತೀಕರಣದಿಂದ ಈ ಎರಡು ವರ್ಗಗಳಿಗೆ ಮಾತ್ರ ಲಾಭ. ಸೋ ಅದಕ್ಕೆ ಅವರೇನೇನು ತಂತ್ರಗಳನ್ನ ಉಪಯೋಗಿಸಬೇಕೋ ಆ ತಂತ್ರಗಳನ್ನೆಲ್ಲ ಉಪಯೋಗಿಸ್ತಿದ್ದಾರೆ. ಈವನ್ ಬಾಬ್ರಿ ಮಸೀದಿ ಡಿಮಾಲಿಶ್ ಡಿಸೆಂಬರ್ ೬ನೇ ತಾರೀಖು ಅಂತ ನಿಗದಿ ಆಗಿದ್ದೂನೂ ವಾಷಿಂಗ್ ಟನ್‌ನಲ್ಲಿ, ಡಿಸೆಂಬರ್ ೬ರ ಕಾಲಕ್ಕೆ ಮುಖ್ಯವಾದ ಸಭೆ ಜಿನೇವಾದಲ್ಲಿ ನಡೀತಾ ಇತ್ತು. ದೇಶದ ಗಮನ ಆ ಕಡೆ ಹೋಗಬಾರದು, ಗಮನ ಬೇರೆ ಕಡೆ ಬರಬೇಕು ಅನ್ನೋ ದೃಷ್ಟಿಯಿಂದಾನೇ ಡಿಸೆಂಬರ್ ೬ ನಿಗದಿ ಮಾಡಿದುದ್ದು. ಅಂತಾರಾಷ್ಟ್ರೀಯವಾಗಿ ನಡೆಯೋವಂತಹ ಕುತಂತ್ರ ಗಳು ಇವೆಲ್ಲ. ಭಾರತದ ಮೇಲ್ವರ್ಗ ಹಾಗೂ ಈ ಅಂತಾರಾಷ್ಟ್ರೀಯ ಮೇಲ್ವರ್ಗಗಳ ನಡುವೆ ನಿಕಟವಾದ ಸಂಪರ್ಕ ಉಂಟು. ಯಾವ್ಯಾವ ದೇಶದಲ್ಲಿ ಯಾವ್ಯಾವ ಸ್ಟ್ರಾಟೆಜಿ ಉಪಯೋಗಿಸ ಬೇಕು? ಉದಾಹರಣೆಗೆ ಆಫ್ರಿಕಾ ದೇಶದಲ್ಲಿ ರೂವಾಂಡಾ ಬುರಂಡಿಗಳಲ್ಲಿ ಯಾವ ಸ್ಟ್ರಾಟೆಜಿ ಉಪಯೋಗಿಸಬೇಕು? ಅಲ್ಲಿ ಹೇಗೆ ಜನಾಂಗೀಯ ಕಲಹಗಳನ್ನು ಸೃಷ್ಟಿ ಮಾಡಬೇಕು. ಇದೂನು ಅಮೆರಿಕಾದ ತಜ್ಞರು ರೂಪಿಸೋವಂಥ ಕಾರ್ಯಕ್ರಮ. ಅದೇ ರೀತಿ ಭಾರತದಂಥ ದೇಶದಲ್ಲಿ ಯಾವ ರೀತಿ ಕೋಮುವಾದದ ಬೆಂಕಿ ಹಚ್ಚ ಬೇಕು? ಇದರ ಒಂದು ತಂತ್ರವನ್ನು ರೂಪಿಸೋರು ಅವರೇ. ಇದಕ್ಕೆ ತಯಾರಿ ಇರೋವಂಥ ಒಂದು ವರ್ಗ ಇದೆ ಭಾರತದಲ್ಲಿ. ಭಾರತದ ಜಾತಿಪದ್ಧತಿ ಯಿಂದ ಉದ್ಭವವಾಗಿರೋಂಥ ಆಲೋಚನೆಗಳು ಏನು ಇವೆ; ಅವನ್ನ ಸದ್ವಿನಿಯೋಗ ಪಡಿಸಿಕೊಳ್ಳೋವಂಥ ಮುಂದುವರಿದ ದೇಶಗಳನ್ನು ನಾನು ಅಂತಾರಾಷ್ಟ್ರೀಯ ಬ್ರಾಹ್ಮಣರು ಅಂತ ಕರೆಯೋದು.

ಸಂ. ಬೇವಿನ ಮೇಲೆ, ಅರಿಶಿನದ ಮೇಲೆ, ಅಮೆರಿಕದ ಕಂಪನಿಗಳು ಪೇಟೆಂಟ್ ಮಾಡಿಸಿದವು ಅನ್ನೋ ಮಾತನ್ನ ಕೇಳತೀವಿ. ಜನರು ನಮ್ಮದೇನನ್ನೂ ಯಾರೋ ಕದೀತಾ ಇದಾರೆ ಅನ್ನೋ ಸರಳ ಆತಂಕವನ್ನು ವ್ಯಕ್ತಪಡಿಸೋದನ್ನ ಕಾಣ್ತೀವಿ. ವಾಸ್ತವವಾಗಿ ಪೇಟೆಂಟ್ ವಿಷಯದಲ್ಲಿ ನಮ್ಮ ರೈತರಿಗೆ ಯಾವ ತರಹ ಅನ್ಯಾಯವಾಗತಾ ಇದೆ?

ನಂ. ನಿಮ್ಮಲ್ಲಿರೋವಂಥ ನೈಸರ್ಗಿಕ ಸಂಪತ್ತನ್ನು ನೀವೇ ಬಳಸಲಿಕ್ಕೆ ಆಗದಂಥ ವ್ಯವಸ್ಥೆ ತರೋದು ಪೇಟೆಂಟ್‌ನ ಉದ್ದೇಶ. ಉದಾ: ಬೇವು, ಅಮೆರಿಕಾದಲ್ಲಿ ಒಂದು ಕಂಪನಿ ನೀಮ್ ಪೇಟೆಂಟ್ ಯಾವ ರೀತಿ ಮಾಡಿದೆ ಅಂದರೆ, ಆ ಬೇವಿನ ಬೀಜದಿಂದ ಯಾವ್ಯಾವ ಪ್ರಾಸೆಸ್‌ನಿಂದ ಏನೇನು ಮಾಡಬಹುದು, ೪೦ ಡಿಗ್ರೀಸ್‌ನಲ್ಲಿ ಏನು ಮಾಡಬಹುದು. ೬೦ ಡಿಗ್ರೀಸ್‌ನಲ್ಲಿ ಏನು ಮಾಡಬಹುದು, ಎಲ್ಲಾ ಪ್ರಾಸೆಸನ್ನೂ ಪೇಟೆಂಟ್ ಮಾಡಿಬಿಟ್ಟಿದೆ. ಒರಿಜಿನಲ್ ಡಾಕುಮೆಂಟ್ ನನ್ನ ಕಡೆ ಇದೆ. ಅದರ ಆ ಪೇಟೆಂಟ್ ಚೌಕಟ್ಟಿಗೆ ನೀವು ಒಪ್ಪಿಗೆ ಕೊಟ್ಟರೆ, ನಿಮ್ಮಲ್ಲಿ ಎಷ್ಟೇ ಬೇವಿನಬೀಜ ಇರಲಿ, ಅದನ್ನ ತಗೊಂಡು ನೀವು ಪ್ರಾಸೆಸ್ ಮಾಡಕ್ಕೆ ಆಗಲ್ಲ, ಮಾಡಿದರೆ ದಂಡ ಕೊಡಬೇಕು. ಟ್ರೇಡ್ ರಿಲೇಟೆಡ್ ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್ ಅಗ್ರಿಮೆಂಟ್ ರುಜು ಹಾಕೋಕೆ ನಮ್ಮ ಸರಕಾರದವರು, ಇನ್ನೂ ಚರ್ಚೆ ಮಾಡ್ತಾ ಇದ್ದಾರೆ. ರುಜು ಹಾಕೋಕೆ ಅಂತಂದ್ರೆ, ರುಜು ಹಾಕಿದ ದೇಶದಲ್ಲಿ ಏನಾದರೂ ರಿಪಿಟೇಶನ್ಸ್ ಆಫ್ ದಿ ಸೇಮ್ ಪ್ರೊಸೆಸ್ ನಡೆದರೆ, ದಂಡ ಕೊಡಬೇಕು. ದಂಡ ಬಹಳ ದೊಡ್ಡ ಪ್ರಮಾಣದ್ದಾದ್ದರಿಂದ, ನಿಮ್ಮ ಸಂಪನ್ಮೂಲವನ್ನ ನೀವೇ ಬಳಸೋಕೆ ಆಗದೇ ಇರೋ ಸ್ಥಿತಿಗೆ ತಲುಪುತ್ತೀರಿ. ಈಗ ಬಿತ್ತನೆ ಬೀಜಗಳು ಪೇಟೆಂಟ್ ಆಗಿವೆ. ಜೆನಿಟಿಕಲಿ ಮಾಡಿಫೈಯ್ಡ್ ಅಂತ ಏನು ಹೇಳ್ತೀವಿ, ಈ ಕುಲಾಂತರಿಗಳಿಂದ ಬೇರೆ ತಳಿಗಳ ಪರಾಗ ಮಾಲಿನ್ಯದಿಂದ ಸೋಂಕು ತಗಲುತ್ತೆ. ಮೊನ್ನೆ ಒಂದು ಕೇಸಾಯಿತು ಕೆನಡಾ ದೇಶದಲ್ಲಿ, ಒಬ್ಬ ಆರ್ಗ್ಯಾನಿಕ್ ಫಾರ್ಮರ್. ಅವನು ಈ ಕಂಪನಿಯ ಬೀಜ ಉಪಯೋಗಿಸಿಲ್ಲ, ಆದರೆ ಪಕ್ಕದ ಜಮೀನಿನವನು ಆ ಬೀಜ

ಉಪಯೋಗಿಸಿದ್ದಾನೆ. ಅದು ಪರಾಗ ಮಾಲಿನ್ಯ ಆಗಿ ಇಲ್ಲಿರೋ ಗುಣಗಳು ಅವನ ಬೆಳೆಗೆ ಬಂದ್‌ಬಿಟ್ಟಿವೆ. ಮಾನ್ಸಾಂಟೋ ಕಂಪನಿ ಅವನ ಮೇಲೆ ಕೇಸ್ ಸಾಕ್ತು. ನೀನು ಕದ್ದಿದಿಯಾ ನಮ್ಮ ಬೀಜ ಅಂತ. ಕೋರ್ಟ್‌ನಲ್ಲಿ ಮಾನ್ಸಾಂಟೋ ಕಂಪನಿ ಪರ ತೀರ್ಮಾನ ಆಯಿತು. ಆ ರೈತ ಜುಲ್ಮಾನೆ ಕಟ್ಟಬೇಕಾಯಿತು. ಈಚೆಗೆ ನಡೆದಿದ್ದು ಇದು. ಸೋ, ಅಲ್ಲಿಗೇನಾಗುತ್ತೆ? ನಾವು ನಮ್ಮ ಸ್ವಂತ ತಳೀನ ನೀವೇ ಉಪಯೋಗಿಸೋಕಾಗದೇ ಇರೋದು, ಇದಕ್ಕಿಂತ ಅಪಾಯ ಬೇಕೆ? ಇನ್ನೊಂದು ಅಪಾಯ ಇದೆ. ಸೀ, ಬಿತ್ತನೆ ಬೀಜ ಮಾರೋವಾಗ ಟೆಕ್ನಾಲಜಿ ಫೀ ಅಂತ ಛಾರ್ಜ್ ಮಾಡ್ತಾರೆ. ಪೆರಾಯಲ್ಟಿ ಅಂತ ಜಾರ್ಜ್ ಮಾಡೋಲ್ಲ, ಈಗ ಮಾನ್ಸಾಂಟೋ ಕಂಪನಿ ಬಿಟಿ ಹತ್ತಿ, ೪೫೦ ಗ್ರಾಂಗೆ ೧೬೦೦ರೂಪಾಯಿ. ಯಾಕೆ ೧೬೦೦ ಅಂದರೆ, ಟೆಕ್ನಾಲಜೀ ಫೀ ಅಂತ ಸೇರಿಸಿದ್ದಾರೆ. ಇಟ್ಸ್ ಆಲ್‌ಮೋಸ್ಟ್ ಲಾಯಲ್ಟಿ ಟು ದ ಪೇಟೆಂಟ್. ಹಂಗಾಗಿ ಕೃಷಿ ದುಬಾರಿಯಾಗೋದು. ಇನ್ನೊಂದು ಕಡೆ ನಿಮ್ಮ ಬಿತ್ತನೆ ಬೀಜ ಬಳಸೋಕಾಗದೇ ಇರೋದು ಮತ್ತೊಂದು.

ಸಂ. ರೈತಸಂಘವು ಕರ್ನಾಟಕದ ಅನೇಕ ಬಹುರಾಷ್ಟ್ರೀಯ ಬೀಜಕಂಪನಿಗಳ ಮೇಲೆ ಆಕ್ರಮಣ ಮಾಡಿದೆ. ಬಹುರಾಷ್ಟ್ರೀಯ ಕಂಪನಿಗಳನ್ನ ಸಂಘ ತನ್ನ ಮುಖ್ಯ ಎದುರಾಳಿಯನ್ನಾಗಿ ಮಾಡಿಕೊಳ್ಳೋಕೆ ತರ್ಕ ಏನು?

ನಂ. ಒಂದು ದೇಶದ ಬಿತ್ತನೆ ಬೀಜದ ಮೇಲೆ ಮತ್ತೊಂದು ದೇಶದ ಕಂಪನಿ ಸಂಪೂರ್ಣ ಹತೋಟಿ ಸಾಧಿಸಿದರೆ, ಆ ದೇಶದ ಸ್ವಾತಂತ್ರ್ಯ ಉಳೀತು ಅಂತೀರಿ? ಅಂಡ್ ಸೀಡ್ ಈಸ್ ದ ಫಸ್ಟ್ ಲಿಂಕ್ ಇನ್ ದಿ ಫುಡ್‌ಚೈನ್. ಒಂದು ದೇಶದ ಆಹಾರ ವ್ಯವಸ್ಥೆನ ನಿಯಂತ್ರಣ ಮಾಡೋವಂಥ ಒಂದು ಸ್ಥಾನಕ್ಕೆ ಬಹುರಾಷ್ಟ್ರೀಯ ಕಂಪನಿಗಳು ಬಂದು ಕೂತರೆ, ಫುಡ್‌ಸಾವರನ್‌ಟಿ ಅಂತ ಏನಂತೀವಿ, ಆಹಾರ ಸಾರ್ವಭೌಮತ್ವ, ಅದು ಹೋಯಿತು. ಅದು ಹೋಯ್ತು ಅಂದರೆ ದೇಶದ ಸಾವರ್‌ನ್‌ಟಿ ಹೋಯಿತು ಅಂತ. ಅದು ಅಪಾಯ ಇರೋದು.

ಸಂ. ಈ ಫುಡ್‌ಸಾವರನ್‌ಟಿ ಜತೆಗೆ ಆಹಾರ ವೈವಿಧ್ಯವನ್ನು ಕೂಡ ಈ ಜಾಗತೀಕರಣವು ನಾಶಮಾಡ್ತಾ ಇರೋ ಹಾಗಿದೆ.

ನಂ. ಹೌದು, ಯಾವ ಪ್ರದೇಶದಲ್ಲಿ ಜೈವಿಕ ವೈವಿಧ್ಯತೆ ಬಯೋ ಡೈವರ್ಸಿಟಿ ಇದೆ, ಅಂಥ ದೇಶಗಳಲ್ಲಿ ಈ ಕಂಪನಿಗಳು ಹೆಚ್ಚು ಗಮನ ಕೊಟ್ಟು ಕೆಲಸ ಮಾಡ್ತಾವೆ. ಚಾರಿತ್ರಿಕ ಕಾರಣಕ್ಕೆ ಬಯೋಡೈವರ್ಸಿಟಿ ಇರೋದು ಗ್ಲೋಬಿನ ಕೆಳಭಾಗದಲ್ಲಿ ಮಾತ್ರ. ಅದಕ್ಕೆ ಕಾರಣ ಗ್ಲೋಬಿನ ಮೇಲ್ಭಾಗಕ್ಕೆ ಹಿಮಯುಗದಲ್ಲಿ ಬಯೋಡೈವರ್ಸಿಟಿ ಎಲ್ಲ ನಾಶವಾಯಿ ಹೋಯಿತು. ಸೋ, ಆಫ್ರಿಕಾ, ಏಶ್ಯಾ ಲ್ಯಾಟಿನ್ ಅಮೇರಿಕಾ ಇಲ್ಲೇ ಅವರ ಚಟುವಟಿಕೆ ನಡೀತಾ ಇರುತ್ತೆ. ಇಲ್ಲಿ ವಿರೋಧಗಳು ಈಗ ವ್ಯಕ್ತ ಆಗ್ತಾ ಇವೆ. ಉದಾಹರಣೆಗೆ ಮೆಕ್ಸಿಕೋದಲ್ಲಿ, ಅದು ಮುಸುಕಿನ ಜೋಳದ ತೌರು. ನಮ್ಮಲ್ಲಿ ಏನು ೧೬೦೦೦ ಭತ್ತದ ತಳಿಗಳು ಇವೆ, ಇನ್ನೂ ಹೆಚ್ಚಿತ್ತು. ಅದೇ ರೀತಿ ಒಂದೊಂದು ಪ್ರದೇಶದಲ್ಲೂ ಸಮೀಕ್ಷೆ ನಡೀತಾ ಇತ್ತು, ಮಲ್ಟಿನ್ಯಾಷನಲ್ ಕಂಪನಿಗಳ ಜೆನಿಟಿಕಲಿ ಮಾಡಿಫೈಡ್ ಸೀಡ್ಸ್‌ನಿಂದ. ಅದನ್ನು ರೈತರು ವಿರೋಧ ಮಾಡ್ತಾ ಇದ್ದಾರೆ. ಈ ವಿರೋಧ ಸಾಕಷ್ಟು ಯಶಸ್ವಿ ಆಗ್ತಾ ಇದೆ. ಇದು ಆಫ್ರಿಕಾ ದೇಶಗಳಲ್ಲೂ ಪ್ರಾರಂಭವಾಗಿದೆ. ಮೊನ್ನೆ ಮೊನ್ನೆ ಜಾಂಬಿಯಾ ದೇಶ, ಕ್ಷಾಮ ಬಂದಿದ್ದರೂನೂ, ಅಮೆರಿಕಾ ಜೆನಿಟಿಕಲಿ ಮಾಡಿಫೈಡ್ ಫುಡ್ ಕಳಿಸಿದಾಗ ರಿಜೆಕ್ಟ್ ಮಾಡ್ತು, ನಾವು ಉಪವಾಸ ಇರ್ತೀವಿ ಆ ವಿಷ ತಿನ್ನಲ್ಲ ಅಂತು.

ಸಂ. ಈ ಬೀಜವೈವಿಧ್ಯದ ಪರವಾಗಿ, ಆಹಾರ ವೈವಿಧ್ಯದ ಪರವಾಗಿ ಕೆಲಸಮಾಡೋ ಜನತೆಯ ವಿಜ್ಞಾನಿಗಳು ಯಾರಾದರೂ ಇದಾರಾ?

ನಂ. ಬಹಳ ಕಡಿಮೆ ಸಂಖ್ಯೆನಲ್ಲಿ ಇದ್ದಾರೆ. ಆದರೆ ರೈತರು ದೊಡ್ಡ ಸಂಖ್ಯೆನಲ್ಲಿ ಬೆಳೀತಿದ್ದಾರೆ. ನಮ್ಮ ಸ್ಥಳೀಯ ತಳಿಗಳನ್ನೇ ಉಪಯೋಗಿಸಿ ಅತ್ಯಂತ ಹೆಚ್ಚಿಗೆ ಉತ್ಪಾದನೆ ಮಾಡೋಕೆ ಪ್ರಯತ್ನ ಪಡ್ತಾ ಇರೋವಂಥ ಕೃಷಿಕರ ಸಂಖ್ಯೆ ದಿನೇ ದಿನೇ ಜಾಸ್ತಿ ಆಗ್ತಾ ಇದೆ. ಆದಕಾರಣ ನಮ್ಮ ದೃಷ್ಟಿನಲ್ಲಿ ಕೃಷಿಕರೇ ಮೊದಲನೇ ವಿಜ್ಞಾನಿಗಳು. ಅವರು ಸಾವಿರಾರು ವರ್ಷದಿಂದ ಪ್ರಯೋಗ ಮಾಡಿಕೊಂಡು ಬಂದಿರೋವಂಥ ವಿಜ್ಞಾನಿಗಳು. ಆ ಕಾರಣಾನೆ ಈವನ್ ಇನ್ ದಿ ಕನ್ವೆನ್‌ಶನಲ್ ಬಯಲಾಜಿಕಲ್ ಡೈವರ್ಸಿಟಿ, ಸಿಬಿಡಿ ಅಂತ ಏನ್ ಕರೀತೀವಿ ಅದು, ಟ್ರೆಡಿಶನಲ್ ನಾಲೆಜ್ ಸಿಸ್ಟಮ್ಸ್ ಆರ್ ನಾಟ್ ಇನ್‌ಫೀರಿಯರ್ ಟು ಮಾಡರ್ನ್ ಸೈಂಟಿಫಿಕ್ ಸಿಸ್ಟಮ್ಸ್, ದೇ ಶೈಡ್ ಬಿ ಗೀವನ್ ಅ್ಯನ್ ಈಕ್ವಲ್ ಸ್ಟೇಟಸ್. ನಮ್ಮ ಬೀಜಪದ್ಧತಿಯನ್ನು ನಮ್ಮ ಭಾಷೆಯನ್ನು ನಮ್ಮ ಸಂಸ್ಕೃತಿಯನ್ನು ಯಾರೋ ಹೊರಗಿನವರು ಬಂದು ಹಾಳುಮಾಡ್ತಾ ಇದ್ದಾರೆ ಅನ್ನೋ ಆತಂಕ, ಯಾವಾಗಲೂ ನಮ್ಮನ್ನ ರಕ್ಷಣಾತ್ಮಕ ಮನಸ್ಥಿತಿಯಲ್ಲೇ ಇಡುತ್ತೆ. ಇದು ಒಂದು ಬಗೆಯಲ್ಲಿ ನಮ್ಮ ಸಂಪ್ರದಾಯಗಳ ಬಗ್ಗೆ ಸ್ವವಿಮರ್ಶೆಯಿಲ್ಲದ ಸ್ಥಿತಿಗೆ ಹಾಗೂ ಆಧುನಿಕತೆಯನ್ನು ಕುರುಡಾಗಿ ವಿರೋಧಿಸುವ ಸ್ಥಿತಿಗೆ ಕರೆದುಕೊಂಡು ಹೋಗೋ ಸಾಧ್ಯತೆ ಇದೆ.

ನಂ. ಆಧುನಿಕತೆ ಅನ್ನೋದರ ಬಗ್ಗೆ ಸ್ಪಷ್ಟ ಕಲ್ಪನೆ ಬರಬೇಕು. ಈಗ ಏನು ಆಧುನಿಕತೆ ಅಂತೀವಿ, ಅದು ನಿಜವಾಗಲೂ ಆಧುನಿಕವೇ? ಉದಾಹರಣೆಗೆ, ಆಧುನಿಕ ಕೃಷಿ ಪದ್ಧತಿ. ಮೊದಲನೆ ಹಸಿರುಕ್ರಾಂತಿ ಅಂತ ಏನು ಕರೀತೀವಿ ಇದನ್ನ ಸುಮಾರು ೫೦ ವರ್ಷ ಬಳಸಿದೀವಿ. ಇದು ನಿಜವಾಗಲೂನೂ ಆಧುನಿಕ ಪದ್ಧತಿನೋ? ಇದು ನಿಸರ್ಗಕ್ಕೆ ವಿರೋಧವಾದಂಥ ಅತ್ಯಂತ ಅವೈಜ್ಞಾನಿಕವಾದ ಪದ್ಧತಿ ಅನ್ನೋದು ಸ್ಪಷ್ಟ ಆಗ್ತಾ ಇದೆ. ನಾವು ರಾಸಾಯನಿಕಗಳ ಆಧಾರದ ಮೇಲೆ ಹಸಿರುಕ್ರಾಂತಿ ಅನ್ನೋ ಹೆಸರಲ್ಲಿ ಕೃಷಿ ಮಾಡಿದೆವು. ಅದರಿಂದ ಏನೇನು ಪರಿಣಾಮಗಳು ಕೆಟ್ಟ ಪರಿಣಾಮಗಳು ಆದವು.? ಎಷ್ಟು ಪ್ರಮಾಣದಲ್ಲಿ ನಾವು ಮಣ್ಣಿನ ಫಲವತ್ತತೆಯನ್ನ ಹಾಳು ಮಾಡಿದೆವು? ಮಣ್ಣಿನಲ್ಲಿರೋ ಅಮೂಲ್ಯವಾಗಿರತಕ್ಕಂತಹ ಕ್ರಿಮಿಗಳನ್ನ ಹಾಳುಮಾಡಿದೆವು? ಪಕ್ಷಿಗಳ ನಾಶಮಾಡಿದೆವು, ದುಂಬಿಗಳನ್ನ ಹಾಳುಮಾಡಿದೆವು. ಚಿಟ್ಟೆಗಳನ್ನ ಹಾಳು ಮಾಡಿದೆವು. ಜೇನು ಹಾಳು ಮಾಡಿದೆವು. ಕೃಷಿಗೆ ಅತ್ಯಂತ ಅವಶ್ಯಕವಾದಂಥ ಕೀಟವೈವಿಧ್ಯತೆ, ಇನ್‌ಸೆಕ್ಟ್ ಡೈವರ್ಸಿಟಿ

ಹಾಳು ಮಾಡಿದೀವಿ. ಬಯೋಡೈವರ್ಸಿಟಿ ಹಾಳುಮಾಡಿದೀವಿ. ಸಾಯಿಲ್ ಫರ್ಟಿಲಿಟಿ ಹಾಳು ಮಾಡಿದೀವಿ. ಇದೆಲ್ಲ ಮನವರಿಕೆಯಾಗಿ, ಮತ್ತೆ ಇದ್ಯಾವುದೋ ಹಾಳಾಗದೇ ಇರೋವಂಥ ಪದ್ಧತಿ ಯಾವುದು ಅಂತ ಹುಡುಕಿ ಹುಡುಕಿ, ಈಗ ಮತ್ತೆ 'ಸಸ್ಟೈನಬಲ್ ಅಗ್ರಿಕಲ್ಚರ್' ಅಂದರೆ ಬೇರೆ ಏನೂ ಅಲ್ಲ, ನಮ್ಮ ದೇಶದಲ್ಲಿ ನಮ್ಮ ಪೂರ್ವಜರು ನಡೆಸಿಕೊಂಡು ಬಂದಂತಹ ಕೃಷೀನೆ!

ಸಂ. ಸಮಸ್ಯೆ ಇರೋದು ಇಲ್ಲೆ. 'ನಮ್ಮ ಪೂರ್ವಜರು' ನಡೆಸಿಕೊಂಡು ಬಂದಂಥದ್ದು ಅಂತ ರೈತರು ಹೇಳಿದರೆ ಒಂದು ಅರ್ಥ ಬರುತ್ತೆ. ಸಾಮಾಜಿಕವಾಗಿ ಸಂಪ್ರದಾಯವಾದಿಗಳು ಹೇಳುವಾಗ ಮತ್ತೊಂದರ್ಥ ಬರುತ್ತೆ. ಈಗ ಜಾಗತೀಕರಣದ ಹೊತ್ತಲ್ಲಿ ಈ ಎರಡನೇ ಸಾಧ್ಯತೆ-ಮೂಲಭೂತವಾದಿಗಳ ಕನ್ಸರ್ವೇಟಿವ್ ಆಟಿಟ್ಯೂಡ್ ಕೂಡ ಮೇಲಕ್ಕೆ ಏಳ್ತಾ ಇರೋದು. ಹೀಗಾಗಿ ಹಿಂದಕ್ಕೆ ಹೋಗೋದು ಯಾರು ಯಾವುದಕ್ಕಾಗಿ ಅನ್ನೋ ಪ್ರಶ್ನೇನ ಎಚ್ಚರದಿಂದ ಗಮನಿಸಬೇಕಾಗಿದೆ.

ನಂ. ನಿಜ, ಈಗ ನಮ್ಮದು ಅಂತ ನಾವು ಹೇಳೊದಕ್ಕೂ, ನಮ್ಮದು ಅಂತ ಮತೀಯ ಸಂಪ್ರದಾಯವಾದಿಗಳು ಹೇಳೋದಕ್ಕೂ ಭಾರಿ ವ್ಯತ್ಯಾಸ ಇದೆ. ಕನ್‌ಜರ್‌ವೇಟಿವ್ ಆಟಿಟ್ಯೂಡ್ ಅಂತ ಏನಂದಿರಿ. ಆ ಅಂಶ ನಾವು ಹೇಳೋದು ವೈಜ್ಞಾನಿಕಸತ್ಯದ ಆಧಾರದ ಮೇಲೆ. ಯಾಕೆಂದರೆ ಈ ಪ್ರಪಂಚ ಸಂಪೂರ್ಣ ವೈವಿಧ್ಯತೆಯಿಂದ ಕೂಡಿದೆ. ಅದರಲ್ಲೂ ವಿಶೇಷವಾಗಿ ಪ್ರಪಂಚದ ಕೃಷಿಪದ್ಧತಿಗಳು ಸಂಪೂರ್ಣ ವೈವಿಧ್ಯತೆಯಿಂದ ಕೂಡಿವೆ. ಇದಕ್ಕೆ ಕಾರಣ ಆಗ್ರೋ ಕ್ಲೈಮ್ಯಾಟಿಕ್ ಕಂಡಿಷನ್ಸ್ ಅಂತ ಏನು ಕರೀತೀವಿ, ಅವು ಒಂದೊಂದು ಪ್ರದೇಶದಲ್ಲಿ ಒಂದೊಂದು ತರಹ ಇರೋದು. ಹಂಗಾಗಿ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ಕೃಷಿ ಪದ್ಧತಿಗಳು ಇವೆ. ಸಾವಿರಾರು ವರ್ಷಗಳಿಂದ ಪರೀಕ್ಷೆಗೆ ಒಳಗಾಗಿರೋವು. ಸಸ್ಟೈನಬಲ್ ಪ್ಲಾನೆಟ್ ಹ್ಯಾಜ್ ಬೀನ್ ದೇರ್, ಬಿಕಾಸ್

ಆಫ್ ದೀಸ್ ಡೈವೋರ್ಸ್ಟ್ ಅಗ್ರಿಕಲ್ಚರ್ ಸಿಸ್ಟಮ್ಸ್. ಆಕಾರಣ ಮಾನೊಕಲ್ಚರ್‌ನಿಂದ ಪ್ಲಾನೆಟ್ ಹಾಳು ಮಾಡ್ತೀವಿ. ಮಾನೊ ಕಲ್ಚರ್ ಬಿಟ್ಟು, ಡೈವರ್ಸಿಟಿಗೆ ಇರೋವಂಥ ಒಂದು ಪದ್ಧತಿಗೆ ನಾವು ಬರಬೇಕು ಅಂತ ವೈಜ್ಞಾನಿಕವಾಗಿ ಹೇಳ್ತಾ ಇರೋ ಮಾತು. ಆದರೆ ಸ್ವದೇಶಿ ಸ್ವದೇಶಿ ಅಂತ ಸಂಪ್ರದಾಯವಾದಿಗಳು ಹೇಳೋ ಮಾತು ಇದೆಯಲ್ಲ ಅದು ಆಷಾಢಭೂತಿತನದ ಮಾತು.

ಸಂ. ಜಾಗತೀಕರಣವು ಏಕರೂಪೀ ಸಂಸ್ಕೃತಿಯನ್ನು ಹೇರುತ್ತೆ ಅಂತನ್ನೊ ಆತಂಕ ರೈತರು ಮಾಡೋವಾಗ, ಅದು ಬೀಜವೈವಿಧ್ಯವನ್ನ ಆಹಾರ ವೈವಿಧ್ಯವನ್ನ ರಕ್ಷಿಸಿಕೊಳ್ಳೋ ಕ್ರಿಯೆಯಾಗಿದೆ. ವಿಚಿತ್ರ ಅಂದರೆ, ನಮ್ಮ ಸಂಸ್ಕೃತಿಯಲ್ಲಿ ಜನಾಂಗಿಕ ವೈವಿಧ್ಯಗಳನ್ನು ಉಳಿಸಿಕೊಳ್ಳಬೇಕು ಅಂತ ಅನೇಕ ಎನ್‌ಜಿಓಗಳು ಕೆಲಸ ಮಾಡ್ತಾ ಇವೆ. ಜಾಗತೀಕರಣದ ಸಂದರ್ಭದಲ್ಲಿ ತುಂಬ ಕ್ರಿಯಾಶೀಲವಾಗಿರುವ ಈ ಎನ್‌ಜಿಓಗಳ ಪಾತ್ರವನ್ನ ನೀವು ಚಳವಳಿಗಾರರಾಗಿ ಹೇಗೆ ನೋಡುತ್ತೀರಿ?

ನಂ. ನಮ್ಮಲ್ಲಿರೋವಂಥ ಬಹುಪಾಲು ಸರಕಾರೇತರ ಸಂಸ್ಥೆಗಳು, ಬಹುರಾಷ್ಟ್ರೀಯ ಕಂಪನಿಗಳ ಅಥವಾ ಫೋರ್ಡ್ ರಾಕ್‌ಫೆಲರ್ ಮುಂತಾದ ವಿದೇಶಿ ಫೌಂಡೇಶನ್ಸ್‌ಗಳ ಏಜೆಂಟರಾಗಿ ಕೆಲಸ ಮಾಡ್ತಾ ಇವೆ. ಈ ಫೌಂಡೇಶನ್‌ಗಳು ಎಲ್ಲಾ ದೇಶದಲ್ಲೂ ದೊಡ್ಡ ಪ್ರಮಾಣದಲ್ಲಿವೆ. ಜೊತೆಗೆ ನೀವೇನು ಆಧುನಿಕತೆ ಅಂದಿರಿ, ಅದಕ್ಕೆ ಯಾವ ರೀತಿ ವೈಜ್ಞಾನಿಕವಾದ ಒಂದು ಅರ್ಥ ಕೊಡಬೇಕೋ, ಅದೇ ರೀತಿ ಕಲ್ಚರ್ ಅಂತನ್ನೊನೇದಿಕ್ಕೂ ಒಂದು ವೈಜ್ಞಾನಿಕ ಅರ್ಥ ಕೊಡಬೇಕಾಗುತ್ತೆ. ನಮ್ಮ ಕಲ್ಚರ್ ಅಂದರೆ ಏನದು? ಅವರು ಹೇಳೋದೆ ನಮ್ಮ ಕಲ್ಚರ್ರೋ ಅಥವಾ ಅದು ಬೇರೇನೇ ಇದೆಯೊ? ನಮ್ಮ ನಿಜವಾದ ಕಲ್ಚರ್ ಏನಿದೆ, ಅದನ್ನು ಉಳಿಸ್ಕೋಬೇಕು. ಅದನ್ನ ಉಳಿಸ್ಕೋಬೇಕು ಅನ್ನೋದರ ಹಿನ್ನೆಲೆಯಲ್ಲಿ ವೈಜ್ಞಾನಿಕ ಕಾರಣಗಳು ಇರಬೇಕು. ಇಂಡಿಯನ್ ಕಲ್ಚರ್ ಅಂತ ಮಾತಾಡಿದರೆ ಸ್ವದೇಶಿ ಜಾಗರಣ ಮಂಚ್‌ನ ಮನಸ್ಸಿನಲ್ಲಿ ಅದಕ್ಕೆ ಬೇರೆ ಅರ್ಥ ಇದೆ. ಈಗ ನಾನು ಇಂಡಿಯನ್ ಕಲ್ಚರ್ ಅಂದರೆ, ನನ್ನ ಮನಸಲ್ಲಿ ಅದಕ್ಕೆ ಸಂಪೂರ್ಣ ಬೇರೆ ಅರ್ಥ ಇದೆ. ನನ್ನ ಮನಸ್ಸು ಜಾನಪದದ ದಿಕ್ಕಲ್ಲಿ ಹೋಗ್ತದೆ. ಅದೇ ನಮ್ಮ ದೇಶದ ದುಡಿಯುವ ಜನರ ಸಂಸ್ಕೃತಿ.
(ಮುಗಿಯಿತು) □

ಸೂತ್ರ ಮರೆಯದ ಸೂತ್ರ



ತುಂಬು ಬಸುರಿಯ
ಬಯಕೆ ತೀರಿಸುವುದಿರಲಿ;
ಹೆರಿಗೆ ಸೂತಕವ
ಕಳೆದುಕೊಳ್ಳುವುದಕ್ಕೂ
ಎರಡು ಬೊಗಸೆ ನೀರು ಕೊಡಲಿಲ್ಲ.

ನನ್ನ ಬೇರಿಗೊಂದಿಷ್ಟು
ಸತ್ವತುಂಬಿ
ಬರಡು ನೆತ್ತಿಗೊಂದಿಷ್ಟು
ಎಣ್ಣೆಯೊತ್ತಿ
ಸತ್ತ ಸಂತಾನಗಳ ಸಂತಾಪಕ್ಕೆ
ಸಾಂತ್ವನ ಹೇಳಲಿಲ್ಲ.

ಸಿಕ್ಕಿದ್ದು ತಿಂದು ದಕ್ಕಿದ್ದು ಗಂಟಿಕ್ಕಿ
ಸಂದು ಸಂದುಗಳಲೆಲ್ಲ ಹಡೆದು
ಹಣ್ಣಾಗಿಸಿದ ತೆನೆಗೆ ತಕ್ಕ ಬೆಲೆ ಸಿಗಲಿಲ್ಲ
ಬೆತ್ತಲು ಮಾಡಿದರು ನನ್ನ-
ನಂಬಿದವರ.

ನೀ ಬಂದೆ ಮಾರಾಯ
ಪೂರ್ವ-ಪಶ್ಚಿಮದ ಆಯುಧಗಳ
ಹಿಡಿದು ಕಾವಲಾದೆ ನನಗೆ
ಹಸಿರು ಸೀರೆ ಉಡಿಸಿದೆ
ಉಡಿತುಂಬ ತುಂಬಿ ಸುಗ್ಗಿ ಫಲವ
ಆಗ ನನ್ನೊಡನೆ ಬೆತ್ತಲೆಯಾಟ ಆಡಿದವರು
ಹಸಿರೇ ಉಸಿರು ಎಂದು ಏದುಸಿರು ಬಿಟ್ಟರು.

ಮೋಡಗಳ ನಾಡಿ ಹಿಡಿದು
ಸಿಡಿಲ ಎದೆ ಬಡಿದು
ಮಿಂಚಿನ ಬೆಳಕಿನಲಿ
ಮಳೆಯ ಜೊತೆಮಾಡಿ
ನನ್ನೆದೆಯ ನಾಡಿನಲ್ಲಿ ತಂಪ ತಂದಿಟ್ಟೆ
ಉರಿದು ಹೋದರು
ಉರಿವ ನೂರು ಸೂರ್ಯರು
ನಿನ್ನುರಿವ ಚಾರ್ ಮಿನಾರಿನುರಿಯಲ್ಲಿ

ಹಾರುವಾಟವ ಕಲಿಸಿ
ನೂರಾರು ರೆಕ್ಕೆಗಳಿಗೆ
ಹಾರುತ್ತಾ ಹಾರುತ್ತಾ...
ರೆಕ್ಕೆ ಕಳೆದುಕೊಂಡೆ ನೀ ಉದಾರೀ-
ಕರಣವ ಬಗೆದು ತೋರಿಸಿದೆ
ನೂರು ಚೂರಿಗಳಿಂದ ನನ್ನ ಉದರ ಬಗೆವ ಜಾಗ-
ತೀಕರಣದ ಗುಟ್ಟು.

ನೇಗಿಲ ಕುಳದೊಡನೆ ಸಂಗವ ಮಾಡಿಸಿ
ನನ್ನ ತಗ್ಗುಗಳಲ್ಲಿ ಭರವಸೆಯ ಬೀಜ ಬಿತ್ತಿ
ನಯವಾಗಿ ಹರಗಿದ್ದೀಯೆ;
ಬಾ ನನ್ನೊಳಗೆ ಲಯವಾಗಿ ಅರಗಿಹೋಗು
ರಾತ್ರಿಯ ಹದಕ್ಕೆ ನಾಳೆ ನನ್ನೊಳಗೆ ಮೊಳೆವ
ಬೀಜಗಳ ಎಳೆಬೇರುಗಳಿಗೆ
ತಳದ ಗೊಬ್ಬರವಾಗು.

❍ ಎಂ. ಜಯಶಂಕರ

ದೃಷ್ಟಿಕೋನ

ಭಾರತೀಯ ಸಮಾಜದಲ್ಲಿ ಆಳವಾಗಿ ಬೇರೂರಿರುವ 'ಜಾತಿ' ಎಂಬ ಅನಿಷ್ಟದ ವಿನಾಶಕ್ಕಾಗಿ ಎಲ್ಲಾ ಜನಪರ, ಪ್ರಗತಿಪರ ಶಕ್ತಿಗಳು ನಿರಂತರವಾಗಿ ಹೋರಾಟ ನಡೆಸುತ್ತಿದ್ದರೂ ಅದು ಮತ್ತಷ್ಟು ಬಲಗೊಳ್ಳುತ್ತಿರುವುದು ನಮ್ಮ ಸಾಮಾಜಿಕ ಹಿನ್ನಡೆಯನ್ನು ತೋರಿಸುತ್ತದೆ. ಜಾತೀಯ ನೆಲೆಯಿಂದಲ್ಲದೆ ವರ್ಗ ಸಂಘರ್ಷದ ನೆಲೆಯಲ್ಲಿ ಜಾತಿ ವಿನಾಶದ ಹೋರಾಟ ರೂಪಿಸಿದ ಕೆಲ ಎಡಪಂಥೀಯ ಚಳವಳಿಗಳನ್ನು ಕೆಲವರು ಅನುಮಾನಿಸಿದ್ದಿದೆ. ಇಂಥಲ್ಲಿ ಎಡಪಂಥೀಯ ವಿಚಾರ ಧಾರೆಗಳ ಮೂಲಕವೂ ಜಾತಿ ವಿನಾಶ ಸಾಧ್ಯ ಎಂಬ ವಾದವನ್ನು ಇಲ್ಲಿ ಕಾಣಬಹುದು.

❍ ವಿ. ಶಂಕರ್

ಜಾತಿ ವಿನಾಶ: ಎಡಪಂಥೀಯ ನೋಟ

ಜಾತಿ ವಿನಾಶ ಎಂಬುದು ಜಾತಿಯನ್ನು ಗ್ರಹಿಸಿಕೊಳ್ಳುವುದರಿಂದಲೇ ಪ್ರಾರಂಭವಾಗಬೇಕು. 'ಎಲ್ಲಿಂದ ಪ್ರಾರಂಭಿಸಬೇಕು?' ಈ ಪ್ರಶ್ನೆಗೆ ಉತ್ತರ ನೀಡುವ ಮೂಲಕವೇ ಪ್ರಾರಂಭಿಸಬೇಕು. ದಲಿತರ ವಿಮೋಚನೆಗೆ ಕಟಬದ್ಧರಾಗಿದ್ದ ರ್‍ಯಾಡಿಕಲ್ ಡೆಮಾಕ್ರಟ್ ಅಂಬೇಡ್ಕರ್ ಅವರಿಂದಲೇ ಪ್ರಾರಂಭಿಸಲು ನಾನು ಇಚ್ಛಿಸುತ್ತೇನೆ. 'ಜಾತಿ ವಿನಾಶ' (Annihilation of Caste) ಎಂಬ ಅಂಬೇಡ್ಕರ್ ಅವರ ಪ್ರಸಿದ್ಧ ಸಂಶೋಧನಾ ಉಪನ್ಯಾಸದಲ್ಲಿ 'ಜಾತಿಯೆಂಬುದು ಮರೆಮಾಚಲ್ಪಟ್ಟ ಒಂದು ವರ್ಗ' ಎಂದು ಹೇಳಿದ್ದಾರೆ. ಇದು ಜಾತಿಯನ್ನು ವಿನಾಶ ಮಾಡುವುದರ ಕುರಿತು ಅಂಬೇಡ್ಕರ್ ಅವರ ಅತಿ ಅಮೂಲ್ಯವಾದ ಕೊಡುಗೆ. ಅಂಬೇಡ್ಕರ್ ನಂತರ ನಡೆದ ಜಾತಿ ಮತ್ತು ಜಾತಿ ವಿನಾಶದ ಕುರಿತ ಚರ್ಚೆಗಳು -ಅದರಲ್ಲೂ ವಿಶೇಷವಾಗಿ ಜಾತಿ ವಿರೋಧಿ ಚಳವಳಿಗಳ ಚರ್ಚೆಗಳು- ಧಾರ್ಮಿಕ ವಿವಾದ, ಮೀಸಲಾತಿಯ ವಿವಾದ ಮತ್ತು ಕಲ್ಯಾಣ ಪ್ರಭುತ್ವದ ಚರ್ಚೆಗಳಿಂದ ಪ್ರಬಲವಾಗಿದೆ. ಆದರೆ, ಅಂಬೇಡ್ಕರ್ ಅವರ ಅತಿ ಅಮೂಲ್ಯವಾದ ಕೊಡುಗೆಯನ್ನು ಗ್ರಹಿಸಿಕೊಳ್ಳುವುದರಲ್ಲಿ ವಿಫಲವಾಗಿವೆ.

ಜಾತಿ ವಿನಾಶದ ಸದುದ್ದೇಶದಿಂದ ಹಲವಾರು ತಂತ್ರೋಪಾಯಗಳನ್ನು ರೂಪಿಸಲಾಗುತ್ತಿದೆ. ಕೆಲವರು ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಬೋಧಿಸಿದರೆ, ಇನ್ನೂ ಕೆಲವರು ಬೌದ್ಧ ಧರ್ಮವನ್ನು ಎತ್ತಿ ಹಿಡಿಯುತ್ತಾರೆ. ಬಿ.ಎಸ್.ಪಿಯಂತಹ ಪಕ್ಷಗಳು ರಾಜಕೀಯ ಅಧಿಕಾರದ ಕುರ್ಚಿಗಳನ್ನು ಹೇಗಾದರೂ ಹಿಡಿಯುವುದನ್ನು ಬೋಧಿಸುತ್ತವೆ. ಆದರೆ, ಈ ಅಮಾನವೀಯ, ಶೋಷಣೆಯ ಜಾತಿ ವ್ಯವಸ್ಥೆಯ ಬೇರುಗಳನ್ನು ಗುರುತಿಸುವುದರಲ್ಲಿ ಅವರು ಯಶಸ್ವಿಯಾಗಲಿಲ್ಲ. ಅವರು ದಲಿತರನ್ನು ಸೆರೆ ಹಿಡಿದ ಅದೇ ವ್ಯವಸ್ಥೆಯೊಳಗೆ ಶರಣಾಗುತ್ತಿದ್ದಾರೆ ಅಥವಾ ಆ ವ್ಯವಸ್ಥೆಯೊಳಗೆ ಶಾಮೀಲಾಗುತ್ತಿದ್ದಾರೆ. ಇದೇ ವಾಸ್ತವತೆ. ಏಕೆಂದರೆ, ಅತಿ ಹೆಚ್ಚು ಜಾತಿ ವಿರೋಧಿ ಚಳವಳಿಗಳಿಗೆ ದೂರದೃಷ್ಟಿಯೇ ಇಲ್ಲ, ಪರ್ಯಾಯ ಸಾಮಾಜಿಕ -ಆರ್ಥಿಕ ಕಾರ್ಯಕ್ರಮವಿಲ್ಲ ಅಥವಾ ಜಾತಿ ವಿನಾಶದ ಗುರಿಯನ್ನು ಸಾಧಿಸುವ ಪರ್ಯಾಯ ಮಾದರಿಯ ರಾಜ್ಯಾಧಿಕಾರವಿಲ್ಲ.

ಅಂಬೇಡ್ಕರ್ ಅವರು 'ಜಾತಿ ವಿನಾಶ'ದ ಸಂಶೋಧನಾ ಲೇಖನವನ್ನು ಮಂಡಿಸಿದ ಸಮಯದಿಂದ ಇಂದಿನವರೆಗೆ ಬಹಳ ಚರ್ಚೆಗಳು ನಡೆದಿವೆ. ಅಂಬೇಡ್ಕರ್ ನಂತರದ ದಲಿತ ಚಳುವಳಿಯಲ್ಲಿ ಎರಡು ಪ್ರತ್ಯೇಕ ಪ್ರಬೇಧಗಳು ಬೆಳೆದು ದೇಶದ ಜಾತಿವಿರೋಧಿ ಚಳವಳಿಗಳ ಮರು ವ್ಯಾಖ್ಯಾನ ಮತ್ತು ಹೊಸ ಮಾರ್ಗದೆಡೆಗೆ ಪ್ರೇರೇಪಿಸಿ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ೭೦ರ ದಶಕದಲ್ಲಿ ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್‌ಗಳ ಉದ್ಭವ ಮತ್ತು ೮೦ ರ ದಶಕದಲ್ಲಿ ಬಹುಜನ ಸಮಾಜವಾದಿ ಪಕ್ಷಗಳ ಉದ್ಭವ ಎರಡು ಪ್ರತ್ಯೇಕ ಪ್ರಬೇಧಗಳಾಗಿ ಬೆಳೆದವು. ಅಂಬೇಡ್ಕರ್‌ವಾದದ ಕ್ರಾಂತಿಕಾರಿ ಮಾರ್ಗವನ್ನು ದಲಿತ್ ಪ್ಯಾಂಥರ್ಸ್ ಪ್ರತಿನಿಧಿಸಿದರೆ ಅಂಬೇಡ್ಕರ್‌ವಾದದ ತೀವ್ರ ಅವನತಿಯನ್ನು ಬಿ.ಎಸ್.ಪಿ.ಯು ಪ್ರತಿನಿಧಿಸುತ್ತದೆ. ಮತ್ತೊಂದು ವ್ಯತ್ಯಾಸವಾಗಿ ಗುಪ್ತವಾಗಿರುವ ಅಪ್ರಜಾತಾಂತ್ರಿಕ, ಶೋಷಣೀಯ ಬಂಡವಾಳದ ಪ್ರಜಾ ತಾಂತ್ರೀಕರಣವನ್ನು ಭೋಪಾಲ್ ಘೋಷಣೆಯು ಬೋಧಿಸುತ್ತದೆ.

ದಲಿತ್ ಪ್ಯಾಂಥರ್ಸ್-ಬಿ.ಎಸ್.ಪಿ.-ಭೋಪಾಲ್ ಘೋಷಣೆ

ಭೂ ಸುಧಾರಣೆ ಮತ್ತು ಇತರ ಆರ್ಥಿಕ ಚಟುವಟಿಕೆಗಳನ್ನು ಕೇಂದ್ರೀಕರಿಸಿದ ದಲಿತ ವಿಮೋಚನೆಯ ರ್‍ಯಾಡಿಕಲ್ ಕಾರ್ಯಕ್ರಮವನ್ನು ದಲಿತ್ ಪ್ಯಾಂಥರ್ಸ್ ಮುಂದಿಟ್ಟಿತು. ಮರಣಾವಸ್ಥೆಯಲ್ಲಿರುವ ದಲಿತ ಚಳವಳಿಯಲ್ಲಿ ಅದು ಕಿಡಿಯಾಗಿ ಹುಟ್ಟಿತು. ಅದು ದಲಿತ ಯುವ ಪೀಳಿಗೆಯ ಪ್ರತಿನಿಧಿಯಾಗಿ ಉದ್ಭವಿಸಿತು. ಆದರೆ ದುರದೃಷ್ಟವೇನೆಂದರೆ, ವ್ಯವಸ್ಥೆಯ ಪರವಾದ, ಯಥಾಸ್ಥಿತಿಯ ಸಂಘಟನೆಗಳ ಆಕ್ರಮಣವನ್ನು ತಡೆಯಲಾರದೆ ದಲಿತ್ ಪ್ಯಾಂಥರ್ಸ್ ಛಿದ್ರ ಛಿದ್ರವಾಯಿತು. ರ್‍ಯಾಡಿಕಲ್ ಕಾರ್ಯಕ್ರಮ ಮತ್ತು ಶೈಕ್ಷಣಿಕ ಚಟುವಟಿಕೆಗಳಿಂದಾಚೆ ಅದು ಸಾಗಲಿಕ್ಕಾಗಲಿಲ್ಲ.

ದಲಿತ್ ಪ್ಯಾಂಥರ್ಸ್‌ಗೆ ಸ್ವಲ್ಪ ಮಟ್ಟಿಗಾದರೂ ಹೋಲಿಸಲಾಗುವ ಮತ್ತೊಂದು ಸಂಘಟನೆಯು ಕರ್ನಾಟಕ ರಾಜ್ಯದ ದಲಿತ ಸಂಘರ್ಷ ಸಮಿತಿ. ಸಮಾಜದ ಬಂಡಾಯವಾಗಿ ಉದ್ಭವಿಸಿದ ಈ ಸಂಘಟನೆಯು ನಿಶ್ಚಿತವಾಗಿ ದಲಿತ ಸಮೂಹದ ನಡುವೆ ರಾಜಕೀಯ ಪ್ರಜ್ಞೆಯನ್ನು ಮೂಡಿಸಿತು. ಪ್ರತಿಭಟನಾ ಮತ್ತು ಪ್ರಚಾರಾಂದೋಲನ ಚಟುವಟಿಕೆಗಳಲ್ಲಿ ಪರಿಣತಿ ಹೊಂದಿತ್ತು. ಮತ್ತು ರಾಜ್ಯದಲ್ಲಿ ದಲಿತರಿಗೆ ಕೆಲವು ಸೌಲಭ್ಯಗಳನ್ನು ಪಡೆಯಲು ಸಂಘಟನೆಗೆ ಸಾಧ್ಯವಾಯಿತು. ಆದರೆ, ಡಿ.ಎಸ್.ಎಸ್. ಸಹ ಅದರ ಮೂಲ ಆಶಯವನ್ನು ಕಳೆದುಕೊಂಡು ಅವಕಾಶವಾದಿ ರಾಜಕೀಯಕ್ಕೆ ಬಲಿಪಶುವಾಯಿತು. ಮತ್ತು ಬೂರ್ಜ್ವಾ ರಾಜಕೀಯ ರಚನೆಗಳ ಬಾಲಂಗೋಚಿಯಾಗಿ ಬದಲಾಯಿತು. ಪರಿಣಾಮವೇನೆಂದರೆ, ವ್ಯವಸ್ಥೆಯಲ್ಲಿ ಮತ್ತು ಬೂರ್ಜ್ವಾ ರಾಜಕೀಯ ಪಕ್ಷಗಳಲ್ಲಿ ಕೆಲವು ದಲಿತ ನಾಯಕರು ಶಾಮೀಲಾದರು.

ಬಿ.ಎಸ್.ಪಿ.ಯು ದಲಿತರಿಗೆ ರಾಜಕೀಯ ಅಧಿಕಾರವನ್ನು ಒದಗಿಸಿದೆ ಎಂದು ಘೋಷಿಸಿದೆ. ದಲಿತ ಕ್ರಾಂತಿಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದ ಅಂಬೇಡ್ಕರ್‌ರನ್ನು ಮೀರಿದ ದಲಿತ ವಿಚಾರವಾದಿ ಎಂದು ಕಾನ್ಷೀರಾಮರನ್ನು ಪ್ರಶಂಸಿಸಲಾಗಿದೆ. ದುರದೃಷ್ಟವೇನೆಂದರೆ, ರಾಜಕೀಯ ಅಧಿಕಾರಕ್ಕಾಗಿ ಬ್ರಾಹ್ಮಣವಾದಿ ಶಕ್ತಿಗಳೊಂದಿಗೆ ಒಗ್ಗೂಡಿ ಕಾನ್ಷೀರಾಂ ಮತ್ತು ಬಿ.ಎಸ್.ಪಿ. ಯು ದಲಿತ ಚಳವಳಿಯ ಸಮಯ ಸಾಧಕತನದ ಶಿಖರವನ್ನೇ ಮುಟ್ಟಿತು. ಅಂಬೇಡ್ಕರ್ ಅವರಿಗೆ ರಾಜಕೀಯ ಅಧಿಕಾರವೆಂಬುದು ದಲಿತ ವಿಮೋಚನೆಯ ಸಾಧನವಾಗಿತ್ತು. ಆದರೆ, ಕಾನ್ಷೀರಾಂ ಅವರಿಗೆ ಅಧಿಕಾರಕ್ಕಾಗಿ ಅಧಿಕಾರವಾಗಿದೆ.

ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ. ಸರ್ಕಾರವು ಅಂಬೇಡ್ಕರ್ ಅವರ ಪ್ರತಿಮೆಗಳ ಅನುಷ್ಠಾನಗೊಳಿಸುವುದು ಮತ್ತು ಕೆಲವು ಜಿಲ್ಲೆಗಳಿಗೆ ಅಂಬೇಡ್ಕರ್ ಅವರ ಹೆಸರನ್ನು ನೀಡುವುದಕ್ಕಿಂತ ಹೆಚ್ಚಾಗಿ ಏನೂ ಮಾಡಲಿಲ್ಲ. ಅವರ ಅಧಿಕಾರದ ಅವಧಿಯಲ್ಲಿ ಅಭಿವೃದ್ಧಿಗಾಗಿ ೧೫,೦೦೦ ದಲಿತ ಗ್ರಾಮಗಳನ್ನು ಆಯ್ಕೆ ಮಾಡಿದರು. ನಂತರದ ಸರ್ಕಾರಗಳು ಆ ಕ್ರಮವನ್ನು ಹಿನ್ನಡೆಸಿದವು. ದಲಿತರಿಗೆ ಭೂಮಿಯನ್ನು ಮರು ಹಂಚಿಕೆ ಮಾಡುವ ಕಾರ್ಯಕ್ರಮವನ್ನು ಅಳವಡಿಸಲು ಬಿ.ಎಸ್.ಪಿ. ಯಾವುದೇ ಪ್ರಯತ್ನಗಳನ್ನು ಮಾಡಲಿಲ್ಲ. ಬದಲಾಗಿ, ಭಾರಿ ಜಮೀನುದಾರರ ಭೂಮಿಗಳಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ ಎಂಬ ನೀತಿಯನ್ನು ಅನುಸರಿಸಿತು. ಸರ್ಕಾರಿ ಭೂಮಿಗಳನ್ನು ಹಂಚುವುದಾಗಿ ವಾಗ್ದಾನ ಮಾಡಿದ್ದು ಸಹ ನಾಟಕೀಯವಾಗಿತ್ತು. ಪಕ್ಷದ 'ಬಹುಜನ' ಘೋಷಣೆಯನ್ನೂ ಸಹ 'ಸರ್ವಜನ'ಕ್ಕೆ ಬದಲಾಯಿಸಿತು. ಅದೇ ವೇಳೆಗೆ, ಬಿ.ಎಸ್.ಪಿ.ಯ ಏಳಿಗೆಯಿಂದ ಉತ್ತರ ಪ್ರದೇಶದಲ್ಲಿ ದಲಿತ ಸಮೂಹಗಳು ರಾಜಕೀಯವಾಗಿ ಜಾಗೃತಗೊಂಡವು ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಬಹಳ ಸಡಗರದಿಂದ ಭೋಪಾಲ್ ಘೋಷಣೆಯು ಹೊರಬಿದ್ದಿತು. ದಲಿತ ಉದಯೋನ್ಮುಖ ಉದ್ದಿಮೆದಾರರಿಗೆ ಶೇಕಡ ೩೦ ರಷ್ಟು ಸರ್ಕಾರಿ

ಆರ್ಡರ್‌ಗಳು ಮತ್ತು ಗುತ್ತಿಗೆಗಳನ್ನು ನೀಡಲಾಗುವುದು ಎಂದು ಮಧ್ಯ ಪ್ರದೇಶ ಸರ್ಕಾರವು ಘೋಷಿಸಿತು. ಆದರೆ, ಅಂತಿಮವಾಗಿ, ದಲಿತರಲ್ಲಿ ಉದ್ದಿಮೆದಾರರು ಮತ್ತು ವ್ಯಾಪಾರಿಗಳನ್ನು ಕಂಡು ಹಿಡಿದು ಈ ಸರ್ಕಾರಿ ಆರ್ಡರ್‌ಗಳನ್ನು ನೀಡಲು ಸಾಧ್ಯವಾಗಲಿಲ್ಲ. ಹಾಗೇನಾದರೂ ಅದು ಯಶಸ್ವಿಯಾಗಿದ್ದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇಷ್ಟು ದೊಡ್ಡ ಸೋಲನ್ನು ದಿಗ್ವಿಜಯಸಿಂಗ್ ಅನುಭವಿಸ ಬೇಕಾಗಿರಲಿಲ್ಲ. ಬದಲಾಗಿ, ಆದಿವಾಸಿಗಳು ಮತ್ತು ದಲಿತರಲ್ಲಿ ಕೆಲವು ಸಮೂಹಗಳು ಹಿಂದೂತ್ವ ಬಿ.ಜೆ.ಪಿ.ಯ ಹಿಂದೆ ನಡೆದರು. ಬಂಡವಾಳಗಳನ್ನು ಪ್ರಜಾತಾಂತ್ರಿಕಗೊಳಿಸುವ ಪ್ರಯತ್ನವೇ ಈ ಭೋಪಾಲ್ ಘೋಷಣೆ. ಆದರೆ ಬಂಡವಾಳಶಾಹಿಯ, ಅದರಲ್ಲೂ ಭಾರತದ ಬಂಡವಾಳ ಶಾಹಿಯ ಸಹಜ ಸ್ವಭಾವವು 'ಅಪ್ರಜಾತಾಂತ್ರಿಕವಾದದ್ದು' ಮತ್ತು ಭಾರತದ ಅರೆ ಊಳಿಗಮಾನ್ಯ ಸಮಾಜದ ಹಿನ್ನೆಲೆಯಲ್ಲಿ ಅದರದೇ ಆದ ಬಂಡವಾಳಶಾಹಿ ಉತ್ಪಾದನಾ ಶಕ್ತಿಗಳನ್ನು ಬೆಳೆಸಲು ಅಸಮರ್ಥವಾಗಿರುವುದನ್ನು ಈ ಘೋಷಣೆಯು ಗುರುತಿಸುವುದರಲ್ಲಿ ವಿಫಲವಾಗಿದೆ. ಬೆಳೆಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬೂರ್ಜ್ವಾಸಿಯು ಕ್ರಾಂತಿಕಾರಿಯಾಗಬೇಕಾದದ್ದು ಈ ಅರೆ ಊಳಿಗ ಮಾನ್ಯ ಪರಿಸ್ಥಿತಿಯಲ್ಲಿ ಊಳಿಗಮಾನ್ಯ ಶಕ್ತಿಗಳೊಂದಿಗೆ ಜತೆಗೂಡಿ ಪ್ರತಿಗಾಮಿ ವರ್ಗವಾಗಿ ಬದಲಾಗುತ್ತಿದೆ ಮತ್ತು ಯಥಾಸ್ಥಿತಿಯನ್ನು ಕಾಪಾಡಿಕೊಂಡು ಯಾವುದೇ ನಿಜವಾದ ಬದಲಾವಣೆಗಳನ್ನು ಸಾಧನೆ ಮಾಡುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಿದೆ.

ಅಂಬೇಡ್ಕರ್ ನಂತರದ ದಲಿತ ಚಳವಳಿಯಲ್ಲಿ ಹಲವಾರು ಪ್ರಭೇಧಗಳಿದ್ದರೂ ಇವೇ ಪ್ರಧಾನ ಪ್ರಭೇಧಗಳಾಗಿವೆ. ಸಾರಾಂಶವೇನೆಂದರೆ, ಪರ್ಯಾಯ ಸಾಮಾಜಿಕ ಆರ್ಥಿಕ ಕಾರ್ಯಕ್ರಮ, ಪರ್ಯಾಯ ಮಾದರಿಯ ರಾಜಕೀಯ ಅಧಿಕಾರವನ್ನು ಕಂಡುಕೊಳ್ಳುವ ಪ್ರಶ್ನೆಯಲ್ಲಿಯೇ ಸಮಸ್ಯೆ ಅಡಗಿದೆ.

ಮೀಸಲಾತಿ-ನಿವಾರಣೆಯೇ?

ಜಾತೀಯ ದಬ್ಬಾಳಿಕೆಗೆ ಶಿಕ್ಷಣ ಮತ್ತು ಮೀಸಲಾತಿಯೇ ನಿವಾರಣೆ ಎಂದು ಕೆಲವರು ಭಾವಿಸುತ್ತಾರೆ. ನಿಜ, ಮೀಸಲಾತಿಯಿಂದ ಕೆಲವು ದಲಿತರು, ಹಿಂದುಳಿದವರು ಸವಲತ್ತುಗಳನ್ನು ಪಡೆದು ಈ ಜಾತಿಗಳಿಂದ ಮಧ್ಯಮ ವರ್ಗವು ಸೃಷ್ಟಿಯಾಗಿದೆ. ನಾವು ಕಮ್ಯುನಿಷ್ಟರಾಗಿ ಜಾತಿ ಆಧಾರಿತ ಮೀಸಲಾತಿಗೆ ಬೆಂಬಲ ನೀಡಬೇಕು. ಮತ್ತು ಸವರ್ಣೀಯರು, ಇತರ ಜಾತಿಯವರು ಆರ್ಥಿಕ ಆಧಾರಿತ ಮೀಸಲಾತಿಯನ್ನು ಪರಿಚಯಿಸಲು ಮಾಡುವ ಎಲ್ಲಾ ಪ್ರಯತ್ನಗಳನ್ನು ವಿರೋಧಿಸಬೇಕು. ಅದೇ ವೇಳೆಗೆ ಈ ಎಲ್ಲಾ ಸವಲತ್ತುಗಳನ್ನು ಕಿತ್ತುಕೊಳ್ಳುವ ಮೇಲ್‌ಸ್ತರಗಳಲ್ಲಿ (ಕ್ರೀಮಿಲೇಯರ್) ಇರುವವರ ಬಗ್ಗೆಯೂ ಎಚ್ಚರವಹಿಸಬೇಕು. ಆದರೆ, ಜಾತಿ ಆಧಾರಿತ ದಬ್ಬಾಳಿಕೆಗೆ ಮೀಸಲಾತಿಯು ನಿವಾರಣೆ ಅಲ್ಲ ಎಂಬುದರ ಬಗ್ಗೆ ಸ್ಪಷ್ಟವಾಗಿರಬೇಕು. ಅದರಲ್ಲೂ ಸಾರ್ವಜನಿಕ ಉದ್ದಿಮೆಗಳು ನಿರ್ನಾಮವಾಗುತ್ತಿರುವ ಸಂದರ್ಭದಲ್ಲಿ, ಖಾಸಗಿ ಕ್ಷೇತ್ರವು ಪ್ರಬಲವಾಗುತ್ತಿರುವ ಸಂದರ್ಭದಲ್ಲಿ, ಮತ್ತು ಜಾಗತೀಕರಣ ಮತ್ತು ಉದಾರೀಕರಣದ ನೀತಿಗಳಿಂದ ಮೀಸಲಾತಿ ಅನಗತ್ಯವಾಗುತ್ತಿರುವ ಸಂದರ್ಭದಲ್ಲಿ, ಈ



ಪ್ರಭುತ್ವದ ರಚನೆಯಲ್ಲಿ ಮತ್ತು ಅದರ ಆಡಳಿತದಲ್ಲಿ ಬ್ರಾಹ್ಮಣವಾದದ ವಿರುದ್ಧದ ಯಾವುದೇ ಹೋರಾಟವು ವೈಚಾರಿಕ ಅಥವಾ ಸಾಮಾಜಿಕ ತಳಹದಿಗೆ ಸೀಮಿತವಾಗಿರದೆ ರಾಜ್ಯಾಧಿಕಾರದ ಚುಕ್ಕಾಣಿಯನ್ನು ಹಿಡಿಯುವುದರಲ್ಲಿಯೂ ಅಡಗಿದೆ. ಅಸ್ತಿತ್ವದಲ್ಲಿರುವ ರಾಜ್ಯಾಧಿಕಾರವನ್ನು ವಶಪಡಿಸಿಕೊಳ್ಳುವುದಷ್ಟೆ ಸಾಕಾಗುವುದಿಲ್ಲ. ಏಕೆಂದರೆ, ಅಸ್ತಿತ್ವದಲ್ಲಿರುವ ಪ್ರಭುತ್ವ ರಚನೆಗಳು ಬ್ರಾಹ್ಮಣೀಕರಣಗೊಂಡಿವೆ. ಆದ್ದರಿಂದ ಬದಲಿ ಮಾದರಿಯ ರಾಜಕೀಯ ಅಧಿಕಾರಕ್ಕಾಗಿ ನಾವು ಹೋರಾಡಬೇಕು.

ವಿಚಾರದಲ್ಲಿ ಬಹಳ ಸ್ಪಷ್ಟವಾಗಿರಬೇಕು. ನವ-ಉದಾರವಾದಿ ನೀತಿಗಳಿಂದ ಬಡ ಜನರಿಗೆ ಬಹಳ ಪೆಟ್ಟು ಬಿದ್ದಿದೆ. ಹಾಗಾಗಿ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿಯಿಂದ ಜಾತೀಯ ದಬ್ಬಾಳಿಕೆಯು ನಿರ್ಮೂಲವಾಗುವುದಿಲ್ಲ ಎಂಬುದು ಸ್ಪಷ್ಟವಾಗಿರಬೇಕು. ಹಾಗೆಯೇ, ನಿರುದ್ಯೋಗವನ್ನು ಹೆಚ್ಚಿಸುತ್ತಿರುವ ಮತ್ತು ಉದ್ಯೋಗಗಳನ್ನು ನಾಶ ಮಾಡುತ್ತಿರುವ ನವ-ಉದಾರವಾದಿ ನೀತಿಗಳನ್ನು ನಾವು ವಿರೋಧಿಸಬೇಕು.

ಬೌದ್ಧ ಧರ್ಮವು ಪರ್ಯಾಯವೇ?

ಅನೇಕ ಜನರು ಬೌದ್ಧ ಧರ್ಮವನ್ನು ಮತ್ತೊಂದು ಪರ್ಯಾಯವಾಗಿ ಪರಿಗಣಿಸುತ್ತಾರೆ. ಈ ಅಮಾನವೀಯ ಜಾತಿ ವ್ಯವಸ್ಥೆಯನ್ನು ಕೊನೆಗೊಳಿಸುವಂತಹ ಧರ್ಮವಾದರೆ ಬೌದ್ಧ ಧರ್ಮವೇಕೆ, ಯಾವ ಧರ್ಮವನ್ನಾದರೂ ಸ್ವೀಕರಿಸಬಹುದು. ಜಾತಿ ವ್ಯವಸ್ಥೆಯನ್ನು ಮತ್ತು ಜಾತೀಯ ದಬ್ಬಾಳಿಕೆಯನ್ನು ನಿರ್ಮೂಲನೆ ಮಾಡುವುದು ನಿಜವಾಗುವುದಾದರೆ ಕಮ್ಯೂನಿಸ್ಟರೇ ಈ ಪರ್ಯಾಯವನ್ನು ಮೊದಲಿಗೆ ಎತ್ತಿ ಹಿಡಿಯುತ್ತಾರೆ. ಆದರೆ, ಸಮಾಜ ಮತ್ತು ಧರ್ಮದ ವೈಜ್ಞಾನಿಕ ವಿಶ್ಲೇಷಣೆಯು ಇದಕ್ಕೆ ವ್ಯತಿರಿಕ್ತವಾಗಿದೆ. ಹಿಂದೂತ್ವಕ್ಕೆ ಬಂಡಾಯವಾಗಿ ಬೌದ್ಧ ಧರ್ಮವನ್ನು ಉಂಟು ಮಾಡಿದರು. ಹಿಂದೂತ್ವದ ಕೆಳಗಿರುವ ಬ್ರಾಹ್ಮಣೇತರ ಮೇಲ್ಜಾತಿಗಳು (ಕ್ಷತ್ರಿಯರು ಮತ್ತು ವೈಶ್ಯರು) ದಂಗೆಯೆದ್ದಾಗ ಬೌದ್ಧ ಧರ್ಮವು ಹುಟ್ಟಿತು. ಶೂದ್ರ ಜಾತಿಯವರಿಗೂ ಬೌದ್ಧ ಧರ್ಮಕ್ಕೂ ಯಾವುದೇ ಸಂಬಂಧವಿರಲಿಲ್ಲ. ಬುದ್ಧ ಧರ್ಮದಲ್ಲಿಯೂ ಭೌತಿಕವಾದದ ಎಳೆಗಳನ್ನು ಕಾಣಬಹುದು. ಆದರೂ, ಬೌದ್ಧ ಧರ್ಮದ ಅಂತಿಮ ಗುರಿಯು ಎಲ್ಲಾ ಪ್ರಾಪಂಚಿಕ ಸುಖವನ್ನು ಮತ್ತು ಯೋಗಕ್ಷೇಮವನ್ನು ತಿರಸ್ಕರಿಸಿ ಮೋಕ್ಷವನ್ನು ಸಾಧಿಸುವುದಾಗಿದೆ; ಎಲ್ಲಾ ಸಾಮಾಜಿಕ ಪಿಡುಗುಗಳಿಗೆ ಮೂಲ ಕಾರಣಗಳನ್ನು ವ್ಯಕ್ತಿಗಳ ಒಳಗೆ ಕಾಣುವುದಾಗಿದೆ; ಮಾನವನ ಸಂಕಷ್ಟಗಳಿಗೆ ಮೂಲ ಅವನೇ ಎಂದು ದೂಷಿಸುತ್ತದೆ. ಬಹುಶಃ 'ದುರಾಸೆ' ಮತ್ತು 'ರಕ್ತದಾಹ'ವಿರುವ ಶೋಷಕರಿಗೆ ಮೋಕ್ಷವನ್ನು ಬೋಧಿಸಬೇಕೇ ಹೊರತು ಊಟ, ಬಟ್ಟೆ ಆಶ್ರಯಕ್ಕಾಗಿ ಬಳಲುತ್ತಿರುವ ದಲಿತರು, ಬಡವರು ಮತ್ತು ಶ್ರಮಿಕ ಸಮೂಹಗಳಿಗಲ್ಲ. ಧರ್ಮವನ್ನು ವಿಮೋಚನೆಯ ಸಾಧನ ಎಂದು ವಿಶ್ಲೇಷಿಸುವ ಚರಿತ್ರೆಯೇ ಇಲ್ಲ. ಹೆಚ್ಚೆಂದರೆ, ಶೋಷಣೆಯ ತೀವ್ರತೆಯನ್ನು ಮತ್ತು ದಬ್ಬಾಳಿಕೆಯನ್ನು ಕಡಿಮೆಗೊಳಿಸಬಹುದು. ಆದರೆ ದಬ್ಬಾಳಿಕೆ, ಶೋಷಣೆಗಳನ್ನು ಧರ್ಮವು ಯಾವುದೇ ರೀತಿಯಲ್ಲಿಯೂ ಬಗೆಹರಿಸುವುದಿಲ್ಲ.

ನವ ಬ್ರಾಹ್ಮಣವಾದ ಮತ್ತು ಪ್ರಭುತ್ವ

ಬಂಡವಾಳಶಾಹಿ ಮತ್ತು ಬ್ರಾಹ್ಮಣವಾದವನ್ನು ಅವಳಿ ಶತ್ರುಗಳನ್ನಾಗಿ ಅಂಬೇಡ್ಕರ್ ಪರಿಗಣಿಸಿದರು. ಆದರೆ, ಈ ಎರಡನ್ನೂ ದಲಿತ ಚಳವಳಿಯು ಗ್ರಹಿಸಿಕೊಂಡಿಲ್ಲ. ನಿಜ, ಹಲವಾರು ಸಂದರ್ಭಗಳಲ್ಲಿ ಬ್ರಾಹ್ಮಣವಾದದ ವಿರುದ್ಧ ನಿರಂತರ ಸಮರವನ್ನು ದಲಿತ ಚಳವಳಿಯು ನಡೆಸಿದೆ. ಆದರೆ, ಅದರ ವಿವಿಧ ಬಣಗಳು ಕಾರಾಣಾಂತರಗಳಿಂದ ಅದರ ಶತ್ರುವಿನೊಂದಿಗೆ ಕೈ ಜೋಡಿಸುತ್ತಿವೆ. ಉದಾಹರಣೆಗೆ ಬಿ.ಎಸ್.ಪಿ.

ಪ್ರಭುತ್ವದ ರಚನೆಯಲ್ಲಿ ಮತ್ತು ಅದರ ಆಡಳಿತದಲ್ಲಿ ಬ್ರಾಹ್ಮಣವಾದದ ವಿರುದ್ಧದ ಯಾವುದೇ ಹೋರಾಟವು ವೈಚಾರಿಕ ಅಥವಾ ಸಾಮಾಜಿಕ ತಳಹದಿಗೆ ಸೀಮಿತವಾಗಿರದೆ ರಾಜ್ಯಾಧಿಕಾರದ ಚುಕ್ಕಾಣಿಯನ್ನು ಹಿಡಿಯುವುದರಲ್ಲಿಯೂ ಅಡಗಿದೆ. ಅಸ್ತಿತ್ವದಲ್ಲಿರುವ ರಾಜ್ಯಾಧಿಕಾರವನ್ನು ವಶಪಡಿಸಿಕೊಳ್ಳುವುದಷ್ಟೆ ಸಾಕಾಗುವುದಿಲ್ಲ. ಏಕೆಂದರೆ, ಅಸ್ತಿತ್ವದಲ್ಲಿರುವ ಪ್ರಭುತ್ವ ರಚನೆಗಳು ಬ್ರಾಹ್ಮಣೀಕರಣಗೊಂಡಿವೆ. ಆದ್ದರಿಂದ ಬದಲಿ ಮಾದರಿಯ ರಾಜಕೀಯ ಅಧಿಕಾರಕ್ಕಾಗಿ ನಾವು ಹೋರಾಡಬೇಕು. ಅಂದರೆ, ಆಳುವವರನ್ನು ನಾವು ಆಳಬೇಕು ಮತ್ತು ಸುಲಿಗೆಕೋರರನ್ನು ಸುಲಿಗೆಗೆ ಒಳಪಡಿಸಬೇಕು. ಇನ್ನೊಂದು ಅರ್ಥದಲ್ಲಿ ಈವತ್ತಿನ ಈ ಪ್ರಭುತ್ವದ ಅಧಿಕಾರ ತಲೆಕೆಳಗಾಗಬೇಕು. ಇಂತಹ ರಾಜ್ಯಾಧಿಕಾರ ಮಾತ್ರ ಜಾತಿಯನ್ನು ಸರ್ವನಾಶ ಮಾಡುತ್ತದೆ.

ಅಷ್ಟಲ್ಲದೆ, ಈಗ ಬ್ರಾಹ್ಮಣವಾದದ ಹೊಸ ಮುಖಗಳು ಕಾಣುತ್ತಿವೆ. ಬ್ರಾಹ್ಮಣವಾದದ ಹೊಸ ಅವತಾರವಾದ ನವ-ಬ್ರಾಹ್ಮಣವಾದದ ಉಡುಗೆಯನ್ನು ಮಧ್ಯಂತರ ಜಾತಿಗಳು ಉಟ್ಟುಕೊಂಡಿವೆ. ಬಹಳಷ್ಟು ರಾಜ್ಯಗಳಲ್ಲಿ ಬ್ರಾಹ್ಮಣವಾದಿ ವಿಚಾರಧಾರೆಯ ಆಧಿಪತ್ಯದ ನೆರಳಿನಲ್ಲಿಯೇ ಮಧ್ಯಂತರ ಜಾತಿಗಳು ರಾಜಕೀಯ ಅಧಿಕಾರವನ್ನು ವಶಪಡಿಸಿಕೊಂಡಿವೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಮಧ್ಯಂತರ

ಜಾತಿಗಳೇ ಕುಲಕ್‌ಗಳಾಗಿ ಪರಿವರ್ತಿತಗೊಳ್ಳುತ್ತಾ ಬಹುಭಾಗ ದಲಿತರೇ ಆಗಿರುವ ಗ್ರಾಮೀಣ ಕೃಷಿ ಕಾರ್ಮಿಕರ ವಿರೋಧಿಗಳಾಗಿರುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿದ್ದ ಬಹುಭಾಗ ಬ್ರಾಹ್ಮಣರು ನಗರ, ಕೈಗಾರಿಕಾ ಪ್ರದೇಶಗಳಿಗೆ ವಲಸೆ ಹೋಗಿ ಗ್ರಾಮೀಣ ಅಧಿಕಾರ ಕೇಂದ್ರ ಸ್ಥಾನದಿಂದ, ಭೂ ಒಡೆಯರ ಸ್ಥಾನದಿಂದ ಹೊರಬಿದ್ದಿದ್ದಾರೆ. ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಈ ಸ್ಥಾನಗಳನ್ನು ಕುಲಕ್‌ಗಳು-ಹೆಚ್ಚಾಗಿ ಮಧ್ಯಂತರ ಜಾತಿಯವರು, ಆಕ್ರಮಿಸಿಕೊಳ್ಳುತ್ತಿದ್ದಾರೆ. ಇದು ಹಸಿರು ಕ್ರಾಂತಿಯ ಕೃಪೆ. ಈ ಸಂದರ್ಭದಲ್ಲಿ ದಬ್ಬಾಳಿಕೆ ನಡೆಸುವ ಈ ಜಾತಿಗಳನ್ನೇ ದಲಿತರು ನೇರವಾಗಿ ಎದುರಿಸಬೇಕಾಗಿದೆ.

ಸಮಾಜದಲ್ಲಿ ಫ್ಯಾಸಿಸ್ಟ್ ಶಕ್ತಿಯಾಗಿ ಸಂಘ ಪರಿವಾರ ಉದ್ಭವಿಸಿದೆ. 'ಭಾರತೀಯತೆ'ಯ ಹೆಸರಿನಲ್ಲಿ ಸಂಘ ಪರಿವಾರವು ಈ ದೇಶದ ಪ್ರಗತಿಪರ ಆಶಯಗಳನ್ನು ಮತ್ತು ಅಂಬೇಡ್ಕರಿಂದ ಭಗತ್‌ಸಿಂಗ್‌ರವರೆಗೆ ಭಾರತ ಸಮಾಜದ ಪ್ರಗತಿಪರ ಸಂಪ್ರದಾಯಗಳನ್ನು ನುಂಗಿ ಹಾಕುತ್ತಿದೆ. 'ಹಿಂದೂತ್ವ'ದ ಹೆಸರಿನಲ್ಲಿ ದಲಿತರು, ಆದಿವಾಸಿಗಳು ಸೇರಿದಂತೆ ಪ್ರತಿಯೊಂದು ಜಾತಿಯನ್ನು ನುಂಗಿಹಾಕಲು ಸರ್ವ ಪ್ರಯತ್ನ ಮಾಡುತ್ತಿದೆ. ಮುಲಾಯಂ ಆಗಿರಲಿ, ಮಾಯಾವತಿಯಾಗಿರಲಿ ಅಥವಾ ಜಯಲಲಿತ ಆಗಿರಲಿ, ಕರುಣಾನಿಧಿ ಆಗಿರಲಿ ಅಥವಾ ದಲಿತರನ್ನು ಪ್ರತಿನಿಧಿಸುವವರಾಗಲಿ ಹೊಂದಾಣಿಕೆ ಮಾಡಲು ಅಡ್ಡಿಯಿಲ್ಲ. ಏಕೆಂದರೆ, ಹಿಂದೂ ರಾಷ್ಟ್ರದ ಗುರಿಯನ್ನು ಸಾಧಿಸಲು ಅಧಿಕಾರದಲ್ಲಿ ಉಳಿಯುವುದು ಒಂದೇ ಅವರ ಆಕಾಂಕ್ಷೆ. ಭಾರತದ ದುರಂತವೆಂದರೆ, ಚುನಾವಣಾ ಪ್ರಜಾಸತ್ತೆಯ ರಾಜಕೀಯದಲ್ಲಿ ಮಾತ್ರವೇ ಅಸ್ಪೃಶ್ಯರು ಇಲ್ಲ. ಪರಮ ಶತ್ರುಗಳೊಂದಿಗೆ ಕೈಗೂಡಿಸುತ್ತಾ ತಳಮಟ್ಟದ ಜನರ ಪ್ರತಿನಿಧಿಗಳೇ ಈ ಅನೈತಿಕ ಮೈತ್ರಿಕೂಟವನ್ನು ರಚಿಸುತ್ತಿರುವುದು ಬಹಳ ದುರಂತ.

ಅದು ಕೋಮುವಾದಿ ಫ್ಯಾಸಿಸಂ ಆಗಿರಲಿ ಅಥವಾ ಬ್ರಾಹ್ಮಣವಾದಿ ಫ್ಯಾಸಿಸಂ ಅಥವಾ ಸಾಮಾಜಿಕ ಫ್ಯಾಸಿಸಂ ಆಗಿರಲಿ ಈ ಸರ್ವಾಧಿಕಾರದ ವಿರುದ್ಧ ಪ್ರಜಾಸತ್ತಾತ್ಮಕ ಶಕ್ತಿಗಳು ಹೋರಾಡಬೇಕು. ಪ್ರಜಾಸತ್ತೆಗಾಗಿ ಮತ್ತು ಫ್ಯಾಸಿಸಂ ವಿರುದ್ಧದ ಹೋರಾಟಗಳಲ್ಲಿ ನಗರ ಮತ್ತು ಗ್ರಾಮೀಣ ಕಾರ್ಮಿಕ ವರ್ಗ (ಹೆಚ್ಚು ದಲಿತರನ್ನು ಒಳಗೊಂಡ)ವು ಭದ್ರಕೋಟೆಯಾಗಿರಬೇಕು.

ಈ ಹಿನ್ನೆಲೆಯಲ್ಲಿ ಜಾತಿ ಮತ್ತು ಜಾತಿ ವಿನಾಶದ ಪಾತ್ರದ ಕುರಿತು ವಿಶ್ಲೇಷಣೆ ಆಗಬೇಕು. ಈ ವಿಚಾರದಲ್ಲಿ ತೊಡಗುವಾಗ ದೇಶದಲ್ಲಿ ಎಡಪಂಥೀಯ ಚಳುವಳಿಯ ಆತ್ಮ ವಿಮರ್ಶೆ ಮಾಡುವುದು ಅತ್ಯಗತ್ಯ.

ಮಾರ್ಕ್ಸ್‌ವಾದವನ್ನು ಅರ್ಥಶಾಸ್ತ್ರಕ್ಕೆ ಇಳಿಮುಖವಾಗಿಸುವ ಧೋರಣೆ

ಕಮ್ಯುನಿಸ್ಟ್ ಚಳವಳಿಯು ತನ್ನ ಪ್ರಾರಂಭದ ಹಂತಗಳಲ್ಲಿ ಮಾರ್ಕ್ಸ್‌ವಾದವನ್ನು ಆರ್ಥಿಕ ದೃಷ್ಟಿಕೋನದ ಮಿತಿಗೆ ಇಳಿಸಿದ್ದು ನಿಜ. ಆದರೆ, ಆ ನಂತರ ಈ ನೆಲದಲ್ಲಿ ಚಿಗುರೊಡೆದ ನಕ್ಸಲ್ಬಾರಿ ಮತ್ತು ಎಂ.ಎಲ್ ಚಳವಳಿಗಳು ಕಮ್ಯುನಿಸ್ಟರು ಈ ಮಿತಿಗಳನ್ನು ಮೀರಿ ಇಲ್ಲಿನ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳನ್ನು ಸಮಗ್ರವಾಗಿ ನೋಡುವ, ಅರ್ಥಮಾಡಿಕೊಳ್ಳುವ ಮತ್ತು ತಿದ್ದುವ

> **ಈ ದೇಶದ ಪ್ರತಿಯೊಂದು ಜಾತಿಗಳ ಒಳಗಿರುವ ವರ್ಗದ ಭೇದಗಳನ್ನು ನಾವು ಅರ್ಥಮಾಡಿಕೊಳ್ಳದಿದ್ದರೆ ಜಾತಿ ವಿನಾಶದ ಹೋರಾಟದ ಹೆಸರಿನಲ್ಲಿ ನಾವು ಜಾತಿ ವ್ಯವಸ್ಥೆಯೊಳಗೆ ಕರಗಿ ಹೋಗುತ್ತೇವೆ. ಜಾತಿವಾದದ ಚೌಕಟ್ಟಿನಲ್ಲಿ ಜಾತಿ ವಿನಾಶದ ವಿರುದ್ಧ ಕೂಗಾಡುವುದರಿಂದ ಏನು ಪ್ರಯೋಜನವಿಲ್ಲ. ಸಂಘಪರಿವಾರ ಈ ಆಧುನಿಕ ಯುಗದಲ್ಲಿ ಹಿಂದುತ್ವದ ಪರವಾಗಿ ಆಂದೋಲನ ಕಟ್ಟುತ್ತಿರುವುದಾದರೂ ಯಾತಕ್ಕೆ? ಹಿಂದುತ್ವದ ಹೆಸರಿನಲ್ಲಿ ಈ ದೇಶದ ಆದಿವಾಸಿಗಳು ಮತ್ತು ದಲಿತರನ್ನು ಒಂದು ಕಡೆ ಹಾಗೂ ಬ್ರಾಹ್ಮಣರು ಮತ್ತು ಮೇಲ್ಜಾತಿಗಳನ್ನು ಒಂದು ಕಡೆ ಒಗ್ಗೂಡಿಸಿ ಕ್ರಿಶ್ಚಿಯನ್-ಮುಸ್ಲಿಂ ಅಲ್ಪಸಂಖ್ಯಾತರನ್ನು ಬಗ್ಗು ಬಡಿಯುವುದೇ ಇವರ ಉದ್ದೇಶವಾಗಿದೆ.**

ಕೆಲಸವನ್ನು ಮಾಡಿದ್ದವು. ಭಾರತದ ಎಲ್ಲಾ ಸಮಸ್ಯೆಗಳ ನಿರ್ಮೂಲನೆಗಾಗಿ ತಾತ್ವಿಕ ರಾಜಕೀಯ ಚೌಕಟ್ಟುಗಳನ್ನು ಕೂಡ ಈ ಚಳವಳಿಗಳು ಮಾಡಿದವು. ಇಲ್ಲಿಯ ಜಾತಿ ಸಮಸ್ಯೆಗಳಿಂದ ಹಿಡಿದು ಲಿಂಗ, ರಾಷ್ಟ್ರೀಯತೆಗಳವರೆಗೂ ವಿಸ್ತೃತವಾದ ತಾತ್ವಿಕ ಚೌಕಟ್ಟನ್ನು ನೀಡುವಲ್ಲಿ ಈ ಚಳವಳಿಗಳು ಯಶಸ್ವಿಯಾದವು. ಅಲ್ಲದೇ ಗಾಂಧಿಯ ಸಾಂಪ್ರದಾಯಿಕ ಬೂರ್ಜ್ವಾ ದೃಷ್ಟಿಕೋನದ ಎದುರು ಅಂಬೇಡ್ಕರರ ಕ್ರಾಂತಿಕಾರಕ ಪ್ರಜಾಸತ್ತಾತ್ಮಕ ದೃಷ್ಟಿಕೋನವನ್ನು ಕೂಡ ಕಮ್ಯುನಿಸ್ಟರು ಅರ್ಥಮಾಡಿಕೊಂಡರು. ಬಿಹಾರ ದಂತಹ ಅನೇಕ ರಾಜ್ಯಗಳಲ್ಲಿ ದಲಿತರ ಮತದಾನದ ಹಕ್ಕನ್ನು ಗಳಿಸಿಕೊಡಲು ಕೂಡ ಈ ದೇಶದ ಕಮುನಿಸ್ಟರು ಹೋರಾಡಬೇಕಾಯಿತು.

ಈ ದೇಶದ ಎಲ್ಲಾ ಜಾತಿಗಳು ಶೋಷಿತರನ್ನು ಒಗ್ಗೂಡಿಸಿ ಅವರ ಹೋರಾಟಕ್ಕೆ ವರ್ಗದ ರೂಪುಕೊಡಲು ನಾವು ಕಮ್ಯುನಿಸ್ಟರು ಪ್ರಯತ್ನಿಸುತ್ತಿದ್ದೇವೆ. ವರ್ಗವೆನ್ನುವುದು ಜಾಗತಿಕ ಕ್ಯಾಟಗರಿ. ಹಿಂದುಳಿದ ಅರೆ-ಊಳಿಗಮಾನ್ಯ ಅಥವಾ ಬಂಡವಾಳಶಾಹಿ ಪೂರ್ವ ಸಂಬಂಧಗಳಿರುವ ದೇಶಗಳಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಕಂಡು ಬರುವ ವರ್ಗಗಳನ್ನು ಹುಡುಕಾಡುವುದು ತಪ್ಪು. ನಾವು ಕನಸು ಕಾಣುವ ಹೊಸ ಪ್ರಜಾಸತ್ತಾತ್ಮಕ ಕ್ರಾಂತಿಯ ಬಹು ಮುಖ್ಯ ಪ್ರಶ್ನೆ ಜಾತಿ ವಿನಾಶವೇ ಆಗಿದೆ. ಏಕೆಂದರೆ, ಜಾತಿ ವಿನಾಶದ ಪ್ರಕ್ರಿಯೆ ವರ್ಗ ರೂಪ ಪಡೆಯುತ್ತದೆ ಹಾಗೂ ವರ್ಗ ಹೋರಾಟ ನೇರ ಮತ್ತು ವಿಸ್ತೃತವಾಗುತ್ತದೆ. ನಾವು ಎಲ್ಲಾ ಜಾತಿಯ ಶೋಷಿತರನ್ನು ವರ್ಗದ ಹಿನ್ನೆಲೆಯಲ್ಲಿ ಸಂಘಟಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆಯೇ ಪುನಃ ಜಾತಿ ಸಂಘಟನೆಗಳಿಂದಲ್ಲ.

ಆದ್ದರಿಂದ ನಾವು ಮಾರ್ಕ್ಸ್‌ವಾದವನ್ನು ಅರ್ಥಶಾಸ್ತ್ರವೆಂದು ಸಂಕುಚಿತವಾಗಿ ನೋಡಬೇಕಾಗಿಲ್ಲ. ಜಾತಿ, ಲಿಂಗ, ಇತ್ಯಾದಿ ಎಲ್ಲಾ ಸಮಸ್ಯೆಗಳ ನಿರ್ಮೂಲನೆಯು ಕೂಡ ಮಾರ್ಕ್ಸ್‌ವಾದದ ಗರ್ಭದಲ್ಲಿ ಅಡಗಿದೆ.

ಜಾತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಜಾತಿಯ ಒಳಗಿರುವ ವರ್ಗವನ್ನು ಅರ್ಥಮಾಡಿಕೊಳ್ಳುವುದು ಬಹು ಮುಖ್ಯ ಪ್ರಶ್ನೆ. ಇದನ್ನು ನಾವು ಅರ್ಥ ಮಾಡಿಕೊಳ್ಳದಿದ್ದರೆ ನಾವು ಜಾತಿ ವಿನಾಶದ ಪರಿಹಾರಗಳನ್ನು ತಾತ್ವಿಕ, ಧಾರ್ಮಿಕ, ಸಾಂಸ್ಕೃತಿಕ ಚೌಕಟ್ಟುಗಳಲ್ಲಿ ಬಡಿದಾಡುತ್ತಾ ಜಾತಿ ವ್ಯವಸ್ಥೆಯನ್ನು ಮತ್ತೆ ಬಿಗಿ ಮಾಡುತ್ತೇವೆ. ಯಾವುದೇ ಒಂದು ಸ್ಥಿತಿಯ ಹೊರ ರೂಪು ಮತ್ತು ಅಂತಃಸತ್ವಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬೇಕು. ಕಣ್ಣಿಗೆ ಕಾಣುವುದಷ್ಟೇ ಸತ್ಯವಲ್ಲ. ಕೆಲವೊಮ್ಮೆ ಕಣ್ಣಿಗೆ ಕಂಡದ್ದು ಸುಳ್ಳಾಗಬಹುದು. ಉದಾಹರಣೆಗೆ, ಸೂರ್ಯ ಭೂಮಿಯ ಸುತ್ತ ಸುತ್ತುವಂತೆ ಗೋಚರಿಸುತ್ತದೆ. ಆದರೆ, ಸತ್ಯವೇನೆಂದರೆ, ಭೂಮಿ ಸೂರ್ಯನ ಸುತ್ತ ಸುತ್ತುತ್ತಿದೆ. ಒಬ್ಬ ವಿಜ್ಞಾನಿ ಮಾತ್ರ ಇದನ್ನು ಅರ್ಥ ಮಾಡಿಕೊಂಡು ನಮಗೆ ತಿಳಿಸಬಲ್ಲ. ಈ ಮಾತು ಸಮಾಜ ವಿಜ್ಞಾನಕ್ಕೂ (Social Science) ಅನ್ವಯಿಸುತ್ತದೆ. ಹಾಗೆಯೇ ಜಾತಿಯು ಕೂಡ. ಇವು ನಮ್ಮ ಕಣ್ಣಿಗೆ ಜಾತಿಗಳಂತೆ ಕಂಡರೂ ಇದರ ಒಡಲಾಳದಲ್ಲಿರುವುದು ಮಾತ್ರ ವರ್ಗ. ಈ ದೃಷ್ಟಿಯಿಂದ ನಮ್ಮ ಸಾಮಾಜಿಕ ರಚನೆಯ ಮೂಲ ಧಾತು ವರ್ಗಗಳೇ ವಿನಃ ಜಾತಿಗಳಲ್ಲ.

ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಕಾಂ. ವಿನೋದ್ ಮಿಶ್ರಾರವರು ಈ ಕುರಿತು ಏನು ಹೇಳುತ್ತಿದ್ದರೆಂದರೆ: ಕೆಲವು ಚಾರಿತ್ರಿಕ ಸಂದರ್ಭಗಳಲ್ಲಿ ವರ್ಗಗಳು ಜಾತಿಗಳ ರೂಪದಲ್ಲಿ, ಇನ್ನೂ ಕೆಲವು ಸಂದರ್ಭಗಳಲ್ಲಿ ಜಾತಿ ಮತ್ತು ವರ್ಗಗಳೆರಡು ಪರಸ್ಪರ ಬೆಸೆದುಕೊಂಡಿರುತ್ತವೆ ಅಥವಾ ವಿರುದ್ಧ ದಿಕ್ಕಿನಲ್ಲಿರುತ್ತವೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಜಾತಿಗಳು ವಿಘಟನೆಗೊಂಡು ವರ್ಗ ರೂಪು ಪಡೆಯುತ್ತವೆ. ಆದ್ದರಿಂದ ಅವರು ಜಾತಿ ಮತ್ತು ವರ್ಗಗಳೆರಡನ್ನು ಮಿಶ್ರಗೊಳಿಸದೆ ಈ ನೆಲದಲ್ಲಿ ಮಾರ್ಕ್ಸ್‌ವಾದವನ್ನು ಜೀವಂತಗೊಳಿಸಿದರು. ಇದು ಮಾರ್ಕ್ಸ್‌ವಾದಕ್ಕೆ ಕಾಂ. ಮಿಶ್ರಾರವರು ನೀಡಿದ ದೊಡ್ಡ ಕೊಡುಗೆ.

ಜಾತಿವಾದ ಮತ್ತು ಅದರ ಮಿತಿಗಳು

ಈ ದೇಶದ ಪ್ರತಿಯೊಂದು ಜಾತಿಗಳ ಒಳಗಿರುವ ವರ್ಗದ ಭೇದಗಳನ್ನು ನಾವು ಅರ್ಥಮಾಡಿಕೊಳ್ಳದಿದ್ದರೆ ಜಾತಿ ವಿನಾಶದ ಹೋರಾಟದ ಹೆಸರಿನಲ್ಲಿ ನಾವು ಜಾತಿ ವ್ಯವಸ್ಥೆಯೊಳಗೆ ಕರಗಿ ಹೋಗುತ್ತೇವೆ. ಜಾತಿವಾದದ ಚೌಕಟ್ಟಿನಲ್ಲಿ ಜಾತಿ ವಿನಾಶದ ವಿರುದ್ಧ ಕೂಗಾಡುವುದರಿಂದ ಏನು ಪ್ರಯೋಜನವಿಲ್ಲ. ಸಂಘ ಪರಿವಾರ ಈ ಆಧುನಿಕ ಯುಗದಲ್ಲಿ ಹಿಂದುತ್ವದ ಪರವಾಗಿ ಆಂದೋಲನ ಕಟ್ಟುತ್ತಿರುವುದಾದರೂ ಯಾತಕ್ಕೆ? ಹಿಂದುತ್ವದ ಹೆಸರಿನಲ್ಲಿ ಈ ದೇಶದ ಆದಿವಾಸಿಗಳು ಮತ್ತು ದಲಿತರನ್ನು ಒಂದು ಕಡೆ ಹಾಗೂ ಬ್ರಾಹ್ಮಣರು ಮತ್ತು ಮೇಲ್ಜಾತಿಗಳನ್ನು ಒಂದು ಕಡೆ ಒಗ್ಗೂಡಿಸಿ ಕ್ರಿಶ್ಚಿಯನ್-ಮುಸ್ಲಿಂ ಅಲ್ಪಸಂಖ್ಯಾತರನ್ನು ಬಗ್ಗು ಬಡಿಯುವುದೇ ಇವರ ಉದ್ದೇಶವಾಗಿದೆ. ಇವರ ಮೂಲ ಉದ್ದೇಶ ಹಿಂದೂ ಧರ್ಮವನ್ನು ಕಟ್ಟುವುದಲ್ಲ, ರಾಜಕೀಯ ಅಧಿಕಾರವನ್ನು ಗಳಿಸಿ ಉಳಿಸಿಕೊಳ್ಳುವುದು. ಇವರಿಗೆ ರಾಜಕೀಯ ಅಧಿಕಾರವು ಯಾಕೆ ಬೇಕೆಂದರೆ ಉಳ್ಳವರ ಆಸಕ್ತಿಗಳನ್ನು ಕಾಪಾಡುವುದಕ್ಕಾಗಿ, ಹಿಂದುತ್ವ ಪ್ರತಿಪಾದಿಸುವ ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕಾಗಿ. ಈ ಕಾರಣಕ್ಕಾಗಿಯೇ ಇವರು ಬಾಬ್ರಿ

ಕ್ರಾಂತಿ ಎನ್ನುವುದು ಹಿಂಸೆಗೆ ಸಂಬಂಧಪಟ್ಟ ಪ್ರಕ್ರಿಯೆಯಲ್ಲ. ಕ್ರಾಂತಿ ಎನ್ನುವುದು ಬಡಜನತೆಯ ಬದುಕಿನಲ್ಲಿ ತರಬೇಕಾದ ಒಂದು ಕ್ರಾಂತಿಕಾರಿ ಬದಲಾವಣೆ. ಹಾಗೆಯೇ, ಸಾಮಾಜಿಕ, ರಾಜಕೀಯ ಚೌಕಟ್ಟಿನೊಳಗೆ-ಅದು ಹಿಂಸಾತ್ಮಕವಾಗಿರಲಿ ಅಥವಾ ಇನ್ನೊಂದಿರಲಿ, ಸಮಗ್ರ ಬದಲಾವಣೆ. ನಾವು ಕಮ್ಯುನಿಸ್ಟರು ಮೂಲಭೂತವಾಗಿ ಶಾಂತಿಪ್ರಿಯರು. ಆದರೂ ನಮ್ಮ ರಾಜಿರಹಿತ, ವಿರೋಚಿತ ಹೋರಾಟದ ಪ್ರಕ್ರಿಯೆಯಲ್ಲಿ ಈ ವ್ಯವಸ್ಥೆ, ಪ್ರಭುತ್ವ ನಮ್ಮನ್ನು ಅನಿವಾರ್ಯವಾಗಿ ಹಿಂಸೆಗೆ ದೂಡುತ್ತದೆ. ಹಾಗಾಗಿ ಶೋಷಿತ ಸಮುದಾಯದ ವಿಮೋಚನೆಗಾಗಿ ಕಟಿಬದ್ಧರಾಗಿರುವ ನಾವು ಪ್ರಭುತ್ವದ ಹಿಂಸೆಗೆ ಹೆದರಿ ಹಿಂಜರಿಯಲು ಸಾಧ್ಯವಿಲ್ಲ. ಹಿಂಸೆ ಒಮ್ಮೊಮ್ಮೆ ಅನಿವಾರ್ಯವಾಗುತ್ತದೆ.

ಮಸೀದಿ ಒಡೆಸುತ್ತಾರೆ, ಗುಜರಾತ್‌ನಲ್ಲಿ ಬರ್ಬರ ಹತ್ಯಾಕಾಂಡ ನಡೆಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಎಲ್ಲಾ ಅವಮಾನಿತ ಜಾತಿಗಳು ಜಾತಿ ಭೇದಗಳನ್ನು ಮರೆತು ವಿಚ್ಛಿದ್ರಕಾರಿ ಪ್ರಕ್ರಿಯೆಯಲ್ಲಿ ತೊಡಗುತ್ತವೆ. ಈ ದೃಷ್ಟಿಯಿಂದ ಸಂಘ ಪರಿವಾರವು ಎಲ್ಲಾ ಸಂದರ್ಭಗಳಲ್ಲಿ ಹೀಗೆ ನಡೆದುಕೊಳ್ಳುವುದು ಸಾಧ್ಯವಿಲ್ಲ. ಅಂತಹ ಸಂದರ್ಭಗಳಲ್ಲಿ ಅವರು ಹಿಂದುತ್ವವನ್ನು ಸಾರ್ವತ್ರೀಕರಿಸಲು ನೀರು, ರಸ್ತೆ, ವಿದ್ಯುತ್ ಮುಂತಾದ ಸಮಸ್ಯೆಗಳಿಗೆ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತಾರೆ ಮತ್ತು ಮುಸ್ಲಿಂ ವ್ಯಾಪಾರಿಗಳು ಅಥವಾ ಗಿರವಿದಾರರ ಶೋಷಣೆಯತ್ತ ಕೈತೋರಿಸಿ ಮುಸ್ಲಿಮರ ವಿರುದ್ಧ ಇವರನ್ನು ಎತ್ತಿ ಕಟ್ಟುತ್ತಾರೆ. ಸ್ಥಳೀಯ ಬಡಜನತೆ ಇಂತಹ ಗಿರವಿದಾರರು ಮತ್ತು ಸಣ್ಣ ವರ್ತಕರ ಬಗ್ಗೆ ಅಸಾಧ್ಯ, ಸಿಟ್ಟು ಇಟ್ಟುಕೊಂಡಿರುತ್ತಾರೆ. ಮತ್ತು ಈ ಅದುಮಿಟ್ಟುಕೊಂಡ ಸಿಟ್ಟನ್ನು ಸಂಘ ಪರಿವಾರ ಉಪಯೋಗಿಸಿಕೊಂಡು ಗುಜರಾತ್‌ನಂತಹ ಹತ್ಯಾಕಾಂಡಗಳಿಗೆ ಬಳಸಿಕೊಳ್ಳುತ್ತದೆ. ಇಂತಹ ಸಂದರ್ಭಗಳಲ್ಲಿ, ಶೋಷಣೆಗೆ ಒಳಪಟ್ಟ ಬಡಜನತೆಯನ್ನು ಬಳಸಿಕೊಂಡು ಅವರಿಗೆ ಹಣ ಆಯುಧಗಳನ್ನು ನೀಡಿ ಗಲಭೆಗಳನ್ನೆಬ್ಬಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಜಾತಿಯನ್ನು ಸಾಂಸ್ಥೀಕರಿಸಿದ, ಬಡಜನತೆಯ ವಿರುದ್ಧ ಆರ್ಥಿಕ ನೀತಿಗಳನ್ನು ರೂಪಿಸುವ, ಸಾಮ್ರಾಜ್ಯಶಾಹಿ ಎದುರು ಬೆನ್ನು ಬಗ್ಗಿಸಿ ನಿಲ್ಲುವ ಹಿಂದೂ ಮತಾಂಧತೆಯು ಶೋಷಿತರ ಬದುಕಿನೊಂದಿಗೆ ಚೆಲ್ಲಾಟ ವಾಡುತ್ತದೆ. ಇದೇ ಹತ್ಯಾಕಾಂಡದ ಸಮಾಜ ವಿಜ್ಞಾನ.

ಇನ್ನೊಂದು ದೃಷ್ಟಿಯಲ್ಲಿ, ಬಡಜನತೆಯನ್ನು ಸಂಘಟಿಸಲು ಜಾತಿಯನ್ನು ಆಯುಧವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಆಯಾಯ ಜನಾಂಗದ ಸ್ಥಾಪಿತ ಹಿತಾಸಕ್ತಿಗಳು ಜಾತಿಯನ್ನು ಮತ್ತು ಆಯಾಯ ಜಾತಿಯ ಜನರನ್ನು ತಮ್ಮ ತಮ್ಮ ಹಿತಾಸಕ್ತಿಗಳಿಗೆ ಬಳಸಿಕೊಂಡು ಶೋಷಕರೊಂದಿಗೆ ಕೈಗೂಡಿಸುತ್ತಾರೆ.

ಮೇಲ್ಜಾತಿಯ ದೌರ್ಜನ್ಯದ ಎದುರು ಹೋರಾಟದ ಪರಂಪರೆಯಿಂದ ಬಂದ ಅನೇಕ ಗಂಭೀರ ಮತ್ತು ನಂಬಲರ್ಹ ಹೋರಾಟಗಾರರು ಕೂಡ ಇಂದು ಸ್ಥಗಿತಕೊಂಡಿದ್ದಾರೆ. ಇಂತಹವರಿಂದ ರಾಜ್ಯಾಧಿಕಾರವನ್ನು ಗಳಿಸಿಕೊಳ್ಳುವುದು ಸಾಧ್ಯವಿಲ್ಲ ಅಥವಾ ಜಾತಿ ವಿನಾಶವನ್ನು ಮಾಡಲಾಗುವುದಿಲ್ಲ. ಹೆಚ್ಚೆಂದರೆ, ಇಂತಹ ಶಕ್ತಿ ಶೋಷಕರ ಶೋಷಣೆಗೆ ಪರೋಕ್ಷವಾಗಿ ಸಹಾಯ ಮಾಡುತ್ತದೆ. ಹೀಗೆ ಹೇಳುವುದರ ಮೂಲಕ ಜಾತಿ ವಿರೋಧಿ ಹೋರಾಟಗಳ ಸಾಧ್ಯಾಸಾಧ್ಯತೆಗಳನ್ನು ನಾನು ಅಲ್ಲಗಳೆಯುತ್ತಿಲ್ಲ. ಕನಿಷ್ಠ ನಗರಗಳಲ್ಲಾದರೂ ಜಾತಿ ದೌರ್ಜನ್ಯ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದಾದರೆ ಅದಕ್ಕೆ ಜಾತಿ ವಿರೋಧಿ ಹೋರಾಟಗಳೇ ಮುಖ್ಯ ಕಾರಣ.

ಪರ್ಯಾಯ ಮಾದರಿಯ ರಾಜ್ಯಾಧಿಕಾರ

ಈ ದೃಷ್ಟಿಕೋನದಿಂದ ಮಾತಾಡುವುದಾದರೆ ನಾವು ಕಮ್ಯುನಿಸ್ಟರು ಎಲ್ಲಾ ಜಾತಿಯ ಶೋಷಕರನ್ನು ಸಂಘಟಿಸಿ ಅವರ ಮಧ್ಯೆ ಜಾತಿ ವಿನಾಶದ ಕಾರ್ಯಕ್ರಮವನ್ನು ಪ್ರಧಾನ ಕಾರ್ಯಕ್ರಮವನ್ನಾಗಿ ಇಡುತ್ತೇವೆ. ಜಾತಿ ವಿನಾಶ ಎನ್ನುವುದು ಜಾತಿಗಳ ಒಳಿತಿಗಾಗಿ ರೂಪಿಸಲ್ಪಡುವ ಒಂದು ಕಾರ್ಯಕ್ರಮವಷ್ಟೇ ಅಲ್ಲ, ಇದು ಶೋಷಿತ ಸಮುದಾಯದ ಆಳ್ವಿಕೆಯನ್ನು ರೂಪಿಸುವಲ್ಲಿ ಒಂದು ಪ್ರಧಾನವಾದ ಪ್ರಕ್ರಿಯೆ ಕೂಡ. ಏಕೆಂದರೆ, ವರ್ಗ ಸಂಘಟನೆಯನ್ನು ಮಾಡುವಲ್ಲಿ ಜಾತಿ ಒಂದು ದೊಡ್ಡ ಕಂಟಕವಾಗಿ ಪರಿಣಮಿಸಿದೆ. ಯಾವುದೇ ಕ್ರಾಂತಿಯ ಸಾಫಲ್ಯದಲ್ಲಿ ಜಾತಿ ವಿನಾಶ ಪ್ರಧಾನ ಪಾತ್ರವಹಿಸುತ್ತದೆ. ಏಕೆಂದರೆ, ಅಂಬೇಡ್ಕರರು ಹೇಳುವಂತೆ ಜಾತಿ ಎನ್ನುವುದು ಮರೆಮಾಚಲ್ಪಟ್ಟ ಒಂದು ವರ್ಗವೇ ಆಗಿದೆ. ಜಾತಿಯನ್ನು ಮರೆಮಾಚಲ್ಪಟ್ಟ ಈ ರೂಪವನ್ನು ಕಿತ್ತೊಗೆದು ನಾವು ವರ್ಗ ಸಂಘರ್ಷಕ್ಕೆ ಅಣಿಯಾಗಬೇಕು. ಈ ದೃಷ್ಟಿಯಿಂದ ಜಾತಿ ವಿನಾಶ ಎನ್ನುವುದು ದುಡಿಯುವ ಜನತೆಯ ಹೋರಾಟದ ಒಂದು ಬಹು ಮುಖ್ಯ ಕಾರ್ಯಕ್ರಮವಾಗಿದೆ. ಕ್ರಾಂತಿಕಾರಿ ವರ್ಗಗಳ ಸರ್ವಾಧಿಕಾರ ಎಂದು ಹೇಳುವಾಗಲೆಲ್ಲಾ ನಾವು ಅರ್ಥ ಮಾಡಿಕೊಳ್ಳುವುದು ದುಡಿಯುವ ಮತ್ತು ಮಧ್ಯಮ ವರ್ಗದ ಜನತೆಯ ರಾಜ್ಯಾಧಿಕಾರವನ್ನು - ಜಾತಿ ಪರಿಭಾಷೆಯಲ್ಲಿ ಹೇಳುವುದಾದರೆ ಅದನ್ನು ನಾವು ದಲಿತರು ಮತ್ತು ಶೂದ್ರರ ಸರ್ವಾಧಿಕಾರ ಎಂದು.

ರಾಜಕೀಯ ಆಳ್ವಿಕೆ - ಪಾರ್ಲಿಮೆಂಟ್ ವ್ಯವಸ್ಥೆಯಾಗಿರಲಿ ಅಥವಾ ಇನ್ನೊಂದಿರಲಿ, ಕಮ್ಯುನಿಸ್ಟರಿಗೆ ಮುಖ್ಯವಾಗುವುದಿಲ್ಲ. ಏಕೆಂದರೆ, ನಾವು ನಿಜವಾದ ಪ್ರಜಾತಂತ್ರವಾದಿಗಳು. ಈ ದೇಶದ ಮಧ್ಯಮ ವರ್ಗ ಮತ್ತು ದುಡಿಯುವ ವರ್ಗಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಮಾದರಿಯ ರಾಜ್ಯಾಧಿಕಾರ ಕಟ್ಟುತ್ತೇವೆ. ಇಂದು ನಮ್ಮಲ್ಲಿ ಮತದಾನದ ಮೂಲಕ ಹೊರಹೊಮ್ಮುವ ಪಾರ್ಲಿಮೆಂಟರಿ ವ್ಯವಸ್ಥೆಯಿದೆ. ಈ ವ್ಯವಸ್ಥೆ ಇಂದು ಶ್ರೀಮಂತರ, ಭೂ ಮಾಲೀಕರ ಮತ್ತು ಸಾಮ್ರಾಜ್ಯಶಾಹಿಗಳ ಸರ್ವಾಧಿಕಾರವಾಗಿದೆ. ಇನ್ನೊಂದು ರೀತಿಯಲ್ಲಿ ಪಾರ್ಲಿಮೆಂಟರಿ ಪ್ರಜಾ ತಂತ್ರವಾದ ವರ್ಗದ ಆಳ್ವಿಕೆಯ ಆಯುಧವಾಗಿದೆ. ಹಾಗೆ ನೋಡಿದರೆ ಪ್ರಭುತ್ವ ಎನ್ನುವುದು ಒಂದು ವರ್ಗ ಮತ್ತೊಂದು ವರ್ಗವನ್ನು ತುಳಿಯುವ ಸಾಧನವಾಗಿದೆ. ಹೀಗಾಗಿ ಪ್ರಭುತ್ವ ಇರುವವರೆಗೂ ಶೋಷಣೆ ಇರುತ್ತದೆ. ಶೋಷಣೆ ಇಲ್ಲವಾದಲ್ಲಿ ಮಿಲಿಟರಿಗಾಗಿ ಕೋಟ್ಯಾಂತರ ನುಂಗಿ ಹಾಕುವ ಪ್ರಭುತ್ವವೇ ಇರುವುದಿಲ್ಲ. ಹೀಗಾಗಿ ಇದೇ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ದಬ್ಬಾಳಿಕೆಗೂ ಬಳಸಲಾಗುತ್ತಿದೆ. ಈ ದೃಷ್ಟಿಯಿಂದ ಕಮ್ಯುನಿಸ್ಟರು ಪ್ರಜಾತಾಂತ್ರಿಕವಾದಿಗಳೇ ವಿನಃ ಸರ್ವಾಧಿಕಾರಿಗಳಲ್ಲ. ನಾವು ಕಮ್ಯೂನಿಸ್ಟರು ಬಯಸುವ ರಾಜ್ಯಾಧಿಕಾರ ಇಂತಹದು. ಕಮ್ಯುನಿಸ್ಟ್ ಕಾರ್ಯಕ್ರಮಗಳಲ್ಲಿ ಜಾತಿ ವಿನಾಶ ನವ ಪ್ರಜಾಸತ್ತಾತ್ಮಕ ಕ್ರಾಂತಿಯ ಪ್ರಮುಖ ಕರ್ತವ್ಯವಾಗಿರುತ್ತದೆ.

ಈ ಸಂದರ್ಭದಲ್ಲಿ ನಾನು ಮತ್ತೊಂದು ಅಂಶವನ್ನು ಸ್ಪಷ್ಟಪಡಿಸಬೇಕು. ಕ್ರಾಂತಿ ಎನ್ನುವುದು ಹಿಂಸೆಗೆ ಸಂಬಂಧಪಟ್ಟ ಪ್ರಕ್ರಿಯೆಯಲ್ಲ, ಕ್ರಾಂತಿ ಎನ್ನುವುದು ಬಡಜನತೆಯ ಬದುಕಿನಲ್ಲಿ ತರಬೇಕಾದ ಒಂದು ಕ್ರಾಂತಿಕಾರಿ ಬದಲಾವಣೆ, ಹಾಗೆಯೇ, ಸಾಮಾಜಿಕ ರಾಜಕೀಯ ಚೌಕಟ್ಟಿನೊಳಗೆ- ಅದು ಹಿಂಸಾತ್ಮಕವಾಗಿರಲಿ ಅಥವಾ ಇನ್ನೊಂದಿರಲಿ, ಸಮಗ್ರ ಬದಲಾವಣೆ. ನಾವು ಕಮ್ಯುನಿಸ್ಟರು ಮೂಲಭೂತವಾಗಿ ಶಾಂತಿಪ್ರಿಯರು. ಆದರೂ ನಮ್ಮ ರಾಜಿರಹಿತ, ವಿರೋಚಿತ ಹೋರಾಟದ ಪ್ರಕ್ರಿಯೆಯಲ್ಲಿ ಈ ವ್ಯವಸ್ಥೆ, ಪ್ರಭುತ್ವ ನಮ್ಮನ್ನು ಅನಿವಾರ್ಯವಾಗಿ ಹಿಂಸೆಗೆ ದೂಡುತ್ತದೆ. ಹಾಗಾಗಿ, ಶೋಷಿತ ಸಮುದಾಯದ ವಿಮೋಚನೆಗಾಗಿ ಕಟಿಬದ್ಧರಾಗಿರುವ ನಾವು ಪ್ರಭುತ್ವದ ಹಿಂಸೆಗೆ ಹೆದರಿ ಹಿಂಜರಿಯಲು ಸಾಧ್ಯವಿಲ್ಲ. ಹಿಂಸೆ ಒಮ್ಮೊಮ್ಮೆ ಅನಿವಾರ್ಯವಾಗುತ್ತದೆ.

ಹೀಗಾಗಿ ದುಡಿಯುವ ಮತ್ತು ಶೋಷಿತ ಸಮುದಾಯಗಳ ಕ್ರಾಂತಿಕಾರಿ ಸಂಘಟನೆಗಳೇ ಪ್ರಭುತ್ವ ಮತ್ತು ಮತಾಂಧ ಶಕ್ತಿಗಳಿಗೆ ನಡುಕ ಹುಟ್ಟಿಸುತ್ತದೆ. ಈ ಕಾರಣಕ್ಕಾಗಿಯೇ ಸಂಘ ಪರಿವಾರದ ಕಣ್ಣಲ್ಲಿ ನಾವು ಕಮ್ಯುನಿಸ್ಟರು ಪ್ರಥಮ ಶತ್ರುವಾಗಿ ಕಾಣುತ್ತಿದ್ದೇವೆ. ಅತ್ಯಂತ ದುಃಖದ ಸಂಗತಿ ಏನೆಂದರೆ, ಈವತ್ತಿನ ಬಹಳಷ್ಟು ಪ್ರಗತಿಪರ ದಲಿತ ಸಂಘಟನೆಗಳ ಕಣ್ಣಿಗೆ ನಾವು ಶತ್ರುಗಳಾಗಿ ಕಾಣುತ್ತಿದ್ದೇವೆ.

ಜಾತಿ ವಿನಾಶ

ಸಮಾಜದ ಶ್ರಮ ವಿಭಜನೆಯ ಪ್ರಕ್ರಿಯೆಯಲ್ಲಿ ಜಾತಿ ಸಂರಚನೆ ರೂಪುಗೊಂಡಿದೆ. ಆದರೆ, ಇಲ್ಲಿಯ ಶ್ರಮ ವಿಭಜನೆ ದಬ್ಬಾಳಿಕೆಯ ಮೂಲಕ ರೂಪಿಸಿದ್ದು. ಕೀಳು ಕೆಲಸಗಳು ಮತ್ತು ಮಲ ಹೊರುವ ಪದ್ಧತಿಯನ್ನು ಒಂದು ವರ್ಗದ ಜನತೆಯ ಮೇಲೆ ಹೇರಲಾಯಿತು. ಪಾಶ್ಚಿಮಾತ್ಯ ದೇಶಗಳಲ್ಲಿದ್ದಂತೆ ಇಲ್ಲಿಯ ಜಾತಿ ಪದ್ಧತಿ ಉತ್ಪಾದನಾ ಸಂಬಂಧಗಳ ಮೇಲೆ

ರೂಪುಗೊಂಡದ್ದಲ್ಲ. ಸಂಕ್ಷಿಪ್ತಗೊಳಿಸಿ ಹೇಳುವುದಾದರೆ ಮಿಗುತಾಯ ಮೌಲ್ಯದ ಸೃಷ್ಟಿ ಜಾತಿ ಆಧಾರಿತ ಅಮಾನವೀಯ ಶೋಷಣೆಗೆ ಮಾರ್ಗವಾಯಿತು. ಈವತ್ತು ಜಾತಿಗಳು ಶೋಷಣೆಯ ಮತ್ತೊಂದು ರೂಪವಾಗಿವೆ. ಜಾತಿ ಸಂರಚನೆಯ ಆಧಾರದ ಮೇಲೆ ಉತ್ಪಾದನೆ ಮತ್ತು ಹಂಚಿಕೆ ರೂಪುಗೊಂಡಾಗ ಜಾತಿ ಮತ್ತು ವರ್ಗಗಳು ಒಂದೇ ಆಗಿದ್ದು ಈ ಹಂತದಲ್ಲಿ ಇವೆರಡನ್ನು ಬೇರ್ಪಡಿಸಿ ನೋಡುವುದು ಸಾಧ್ಯವಿಲ್ಲ. ಈ ಜಾತಿ ಸಂರಚನೆ ಕಾಲಾಂತರದಲ್ಲಿ ಗಟ್ಟಿಯಾಗ ತೊಡಗಿತು. ಆ ನಂತರ ಪುರೋಹಿತ ಶಾಹಿಗಳು ಈ ಜಾತಿ ಸಂರಚನೆಗೊಂದು ಧಾರ್ಮಿಕ ಲೇಪನ ನೀಡಿದರು.

ಈ ನಂತರ ಶ್ರೇಣಿ ಮತ್ತು ಅಂತಸ್ತುಗಳು ಜಾತಿಗಳಿಗೆ ಅಂಟಿಕೊಂಡವು. ಸ್ವಯಂ ಪರಿಪೂರ್ಣ ಹಳ್ಳಿಗಳು ಕೇಂದ್ರೀಕೃತ ಆಳ್ವಿಕೆಯ ಅಡಿಯಲ್ಲಿ ಸಿಕ್ಕಿಕೊಂಡವು. ಹೀಗಾಗಿ ಜಾತಿಗಳೊಳಗೆ ಚಲನಶೀಲತೆ ಇಲ್ಲವಾಯಿತು. ಜಾತಿ ಸಂರಚನೆ ಶ್ರೇಣಿ ಮತ್ತು ಅಂತಸ್ತುಗಳ ಒಂದು ಬದಲಾಯಿಸಲಾಗದ ಪದ್ಧತಿಯಾಗಿ ಉಳಿದುಕೊಂಡದ್ದು ಹೀಗೆ.

ಬ್ರಿಟೀಷರ ಆಗಮನದ ನಂತರ ಪ್ರಾರಂಭಗೊಂಡ ಕೈಗಾರೀಕರಣದ ಪ್ರಕ್ರಿಯೆಯಲ್ಲಿ ಜಾತಿಗಳಿಗೆ ಚಲನಶೀಲತೆ ಬಂತು. ಕೈಗಾರೀಕರಣದ ಈ ಪ್ರಕ್ರಿಯೆ ಜಾತಿ ಸಂರಚನೆಯೊಳಗೆ ಅಸಾಧ್ಯ ವೈರುಧ್ಯಗಳನ್ನು ಉಂಟು ಮಾಡಿತು. ಭೂ ಹಂಚಿಕೆ, ವ್ಯಾಪಾರ ಮತ್ತು ವಾಣಿಜ್ಯ ಬೆಳೆಗಳು ಮತ್ತು ಈ ಹಿನ್ನೆಲೆಯಲ್ಲಿ ಅಭಿವೃದ್ಧಿಗೊಂಡ ಸರಕು ಸಂಬಂಧಗಳು ಹಳ್ಳಿಗಳನ್ನು ಛಿದ್ರಗೊಳಿಸಿ ನಗರಗಳನ್ನು ಉಂಟುಮಾಡಿದವು. ಭೂಮಿ ಸರಕಾಯಿತು. ವೇತನ ಆಧಾರಿತ ಸಂಬಂಧಗಳು ಕಾಣಿಸಿಕೊಳ್ಳಲಾರಂಭಿದವು. ಅಸಂಖ್ಯ ವೃತ್ತಿಗಳು ಸೃಷ್ಟಿಯಾದವು ಮತ್ತು ಈ ಹೊಸ ವೃತ್ತಿಗಳು ಹೊಸ ಜಾತಿಗಳನ್ನು ಸೃಷ್ಟಿಸಲಿಲ್ಲ. ಜನ ಹಳ್ಳಿಯ ದಮನಕಾರಿ ದುಡಿಮೆಯಿಂದ ತಪ್ಪಿಸಿಕೊಂಡು ನಗರಗಳಿಗೆ ಪ್ರವೇಶಿಸಲಾರಂಭಿಸಿದರು.

ಹೀಗಾಗಿ ಸಮಾಜದಲ್ಲಿ ಒಂದು ಮಟ್ಟದ ಜಾತಿಯ ಹಿಡಿತಗಳು ಸಡಿಲಗೊಂಡವು. ಹಾಗೆಯೇ ವಸಾಹತು ಸೈನ್ಯ, ಟೀ ಪ್ಲಾಂಟೇಶನ್ ಇತ್ಯಾದಿ ಅನೇಕ ರಂಗಗಳಲ್ಲಿ ಉದ್ಯೋಗ ಅವಕಾಶಗಳು ಅವಮಾನಿತ ಜಾತಿಗಳಿಗೆ ದೊರಕಿದವು. ಇವೆಲ್ಲಕ್ಕಿಂತ ಮುಖ್ಯವಾದದ್ದು ಬ್ರಿಟೀಷರು ಜಾರಿಗೆ ತಂದ ಆಧುನಿಕ ಶಿಕ್ಷಣ ಪದ್ಧತಿ. ಈ ಮೂಲಕ ಅವಮಾನಿತ ಜಾತಿಗಳಿಗೆ ಶಿಕ್ಷಣ ದೊರಕಲಾರಂಭಿಸಿತು. ಕೈಗಾರಿಕೆ, ರೈಲ್ವೆ ಮತ್ತು ದೊಡ್ಡ ನಗರಗಳ ಅಭಿವೃದ್ಧಿ ಜಾತಿ ವ್ಯವಸ್ಥೆಗೆ ಸವಾಲಾಗಿ ನಿಂತಿತು. ಅದು ಅಲ್ಲದೆ ಆಗ ತಾನೆ ಬೆಳೆಯುತ್ತಿದ್ದ ಬಂಡವಾಳ ಶಾಹಿ ಪದ್ಧತಿಯು ಜಾತಿ ಮತ್ತು ಅದಕ್ಕೆ ಅಂಟಿಕೊಂಡಿದ್ದ ಉದ್ಯೋಗಗಳ ಮೇಲೆ ಭಾರಿ ಪರಿಣಾಮ ಬೀರಿತು.

ಈ ನಂತರ ಬ್ರಾಹ್ಮಣರು ಕೈಗಾರಿಕಾ ಪ್ರದೇಶಗಳಿಗೆ ವಲಸೆ ಹೋಗತೊಡಗಿದರು. ಬ್ರಾಹ್ಮಣರ ಒಂದು ಭಾಗ ಕೈಗಾರಿಕೋದ್ಯಮಿಗಳಾದರೆ ಮತ್ತೊಂದು ಬಹುಸಂಖ್ಯಾತ ಭಾಗ ಕಾರ್ಖಾನೆಗಳಲ್ಲಿ ಕಾರ್ಮಿಕರಾಗತೊಡಗಿದರು. ಈ ಪ್ರಕ್ರಿಯೆ ಬ್ರಾಹ್ಮಣರ ನಂತರದ ಸಾಮಾಜಿಕ ಶ್ರೇಣಿಯಲ್ಲಿದ್ದ ಮೇಲ್ಜಾತಿಗಳು ಹಳ್ಳಿಗಳಲ್ಲಿ ಬ್ರಾಹ್ಮಣರ ಸ್ಥಾನಗಳನ್ನು ಆಕ್ರಮಿಸಿಕೊಂಡರು. ಹೀಗಾಗಿ ಜಾತಿ ಮತ್ತು ವರ್ಗಗಳ ಸಂಬಂಧ ಸಂಕೀರ್ಣ ಸ್ವರೂಪ ಪಡೆಯಿತು.

> **ಶ್ರಮವಿಭಜನೆಯ ಆಧಾರದ ಮೇಲೆ ರೂಪುಗೊಂಡ ಜಾತಿ ಪದ್ಧತಿ, ದೌರ್ಜನ್ಯದ ಸಾಧನವಾಗಿದ್ದ ಜಾತಿಪದ್ಧತಿ, ಮೇಲುಕೀಳುಗಳ ಧಾತುವಾಗಿದ್ದ ಜಾತಿಪದ್ಧತಿ ಬಂಡವಾಳಶಾಹಿ ಅಭಿವೃದ್ಧಿಯ ಈ ಹಂತದಲ್ಲಿ ನಾಶವಾಗತೊಡಗಿತ್ತು. ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗಿಗೆ ಭಾರಿ ಆಘಾತ ನೀಡಿದ್ದು ನಗರೀಕರಣ, ಮತ್ತು ಬಂಡವಾಳವೇ ಆಗಿದೆ. ಉದಾ: ಅಂಬೇಡ್ಕರರಂತಹ ಒಬ್ಬ ಕ್ರಾಂತಿಕಾರಿ ಸುಧಾರಣಾವಾದಿಗೂ ಸಾಧ್ಯವಾಗದಿದ್ದ ತಲೆಯ ಮೇಲೆ ಮಲಹೋರುವ ಅಮಾನವೀಯ ಪದ್ಧತಿಯನ್ನು ಹೋಗಲಾಡಿಸಲು 'ಆಧುನಿಕ ಅರ್ಬನ್ ಪ್ಲಾನಿಂಗ್ ಮತ್ತು ಸುಯೇಜ್ ಸಿಸ್ಟಮ್' ಬರಬೇಕಾಗಿತ್ತು.**

ಆನಂತರ ರೂಪುಗೊಂಡ ಉತ್ಪಾದನಾ ಸಂಬಂಧಗಳು ತಿಳಿಗೊಂಡದ್ದು ಬಂಡವಾಳ ಶಾಹಿ ಅಭ್ಯುದಯದ ಹಂತದಲ್ಲಿ.

ಈ ನಂತರ ಶ್ರಮವಿಭಜನೆಯ ಆಧಾರದ ಮೇಲೆ ರೂಪುಗೊಂಡ ಜಾತಿ ಪದ್ಧತಿ, ದೌರ್ಜನ್ಯದ ಸಾಧನವಾಗಿದ್ದ ಜಾತಿಪದ್ಧತಿ, ಮೇಲುಕೀಳುಗಳ ಧಾತುವಾಗಿದ್ದ ಜಾತಿಪದ್ಧತಿ ಬಂಡವಾಳಶಾಹಿ ಅಭಿವೃದ್ಧಿಯ ಈ ಹಂತದಲ್ಲಿ ನಾಶವಾಗತೊಡಗಿತ್ತು. ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗಿಗೆ ಭಾರಿ ಆಘಾತ ನೀಡಿದ್ದು ನಗರೀಕರಣ, ಮತ್ತು ಬಂಡವಾಳವೇ ಆಗಿದೆ. ಉದಾ: ಅಂಬೇಡ್ಕರರಂತಹ ಒಬ್ಬ ಕ್ರಾಂತಿಕಾರಿ ಸುಧಾರಣಾವಾದಿಗೂ ಸಾಧ್ಯವಾಗದಿದ್ದ ತಲೆಯ ಮೇಲೆ ಮಲಹೋರುವ ಅಮಾನವೀಯ ಪದ್ಧತಿಯನ್ನು ಹೋಗಲಾಡಿಸಲು 'ಆಧುನಿಕ ಅರ್ಬನ್ ಪ್ಲಾನಿಂಗ್ ಮತ್ತು ಸುಯೇಜ್ ಸಿಸ್ಟಮ್' ಬರಬೇಕಾಗಿತ್ತು. ಮಂಡ್ಯ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ಇವತ್ತಿಗೂ ಕೂಡ ದಲಿತರಿಗೆ ಪ್ರತ್ಯೇಕ ಲೋಟಗಳನ್ನು ಇಡಲಾಗಿದೆ. 'ಯೂಸ್ ಥ್ರೋ ಪ್ಲಾಸ್ಟಿಕ್' ಲೋಟಗಳು ಬಂದ ನಂತರ ಈ ಅಮಾನವೀಯ ಪದ್ಧತಿ ಇಂದು ಕ್ರಮೇಣ ಕಾಣೆಯಾಗುತ್ತಿದೆ.

ಹಳ್ಳಿಗಳಲ್ಲಿ ಕಾಣುವಂತಹ ಅಸ್ಪೃಶ್ಯತೆ ಆಚರಣೆಗಳು ಇಂದು ನಗರಗಳಲಿ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗಿವೆ. ಊಳಿಗಮಾನ್ಯ ಸಮಾಜದಿಂದ ಬಂಡವಾಳಶಾಹಿ ಸಮಾಜದತ್ತ ರೂಪಾಂತರಗೊಳ್ಳುವ ಈ ಪ್ರಕ್ರಿಯೆ ತನಗೆ ತಾನೇ ಅನೇಕ ಸಾಮಾಜಿಕ ಬದಲಾವಣೆಗಳನ್ನು ಮಾಡಿದೆ. ಉತ್ಪಾದನೆ ಮತ್ತು ಉತ್ಪಾದನಾ ಸಂಬಂಧಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳು, ಬರುವಾಗಲೆಲ್ಲಾ ಹಳೆಯ ಸಾಮಾಜಿಕ ಪದ್ದತಿಗಳು ತನಗೆ ತಾನೆ ನಾಶವಾಗಿ ಹೊಸ ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುತ್ತದೆ. ಆದರೆ ನಮ್ಮ ದೇಶದ ಮಟ್ಟಿಗಂತು ಬಂಡವಾಳಶಾಹಿ ಶಕ್ತಿಗಳು ಇಲ್ಲಿಯ ಊಳಿಗ ಮಾನ್ಯ ಶಕ್ತಿಗಳೊಂದಿಗೆ ಕೈಜೋಡಿಸಿ ನಿರೀಕ್ಷಿಸಿದ ಮಟ್ಟದಲ್ಲಿ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆ ತರಲು ಸಾದ್ಯವಾಗಲಿಲ್ಲ. ಯಾವುದೇ ಅರೆಊಳಿಗ ಮಾನ್ಯ, ಅರೆ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಜಾತಿ ಅಸ್ಪೃಶ್ಯತೆ ಮುಂತಾದ ಹಳೆಯ ಸಾಮಾಜಿಕ ಸಂರಚನೆಗಳು ಹೊಸ ಸಂದರ್ಭದಲ್ಲಿಯೂ ಹೊಸ ರೂಪ ಪಡೆದುಕೊಳ್ಳುತ್ತಿವೆ.

ಬಂಡವಾಳದ ಅಭಿವೃದ್ಧಿ ಹಂತದಲ್ಲಿ ಎಲ್ಲಾ ಹಳೆಯ ಸಾಮಾಜಿಕ ಸಂರಚನೆಗಳು ಪತನಗೊಂಡು ಹೊಸ ಸಾಮಾಜಿಕ ವ್ಯವಸ್ಥೆ ಸೃಷ್ಟಿಯಾಗಬೇಕಿತ್ತು, ಆದರೆ ಇದು ಇಲ್ಲಿ ಸಾಧ್ಯವಾಗುತ್ತಿಲ್ಲ. ಯಾಕೆಂದರೆ ನಮ್ಮ ಆಧುನಿಕ ಬಂಡವಾಳ ಶಾಹಿ ವ್ಯವಸ್ಥೆ ಅರೆ ಊಳಿಗಮಾನ್ಯ ವ್ಯವಸ್ಥೆಯೊಂದಿಗೆ ಕೈ ಜೋಡಿಸಿದೆ.

ಮುಲಾಯಂ. ಲಾಲು, ದೇವೇಗೌಡ, ಜಯಲಲಿತಾ, ಚಂದ್ರಬಾಬು ನಾಯಿಡು ಮುಂತಾದವರು ಪ್ರತಿನಿಧಿಸಿರುವ ಮೌಲ್ಯಗಳು ಇವೇ. ಹೀಗಾಗಿ ಇವರೆಲ್ಲರ ವಿರುದ್ದ ಇಂದು ನಾವು ಹೋರಾಟ ಮಾಡಬೇಕಿದೆ. ಈ ಸಂದರ್ಭದಲ್ಲಿ ಕ್ರಾಂತಿಕಾರಿ ಸಾಮಾಜಿಕ ಆರ್ಥಿಕ ಕಾರ್ಯಕ್ರಮ ಏನಾಗಬೇಕೆಂದರೆ ಭೂಮಿ ಮರುವಿತರಣೆಯಾಗಬೇಕು, ಭೂ ಒಡೆತನದ ಮಿತಿಯನ್ನು ೫ ಎಕರೆಗೆ ಇಳಿಸುವುದು, ಕೂಲಿಹೆಚ್ಚಳ, ಉದ್ಯೋಗ ಮತ್ತು ಸಾಮಾಜಿಕ ಆತ್ಮಾಭಿಮಾನ ಇವೆಲ್ಲವೂ ಸಾಧ್ಯವಾಗಬೇಕು. ಸಂಕ್ಷಿಪ್ತಗೊಳಿಸಿ ಹೇಳುವುದಾದರೆ, ಭೂಮಿ, ಕೂಲಿ, ಸಾಮಾಜಿಕ, ಆತ್ಮಾಭಿಮಾನ ಮತ್ತು ರಾಜಕೀಯ ವಿಮೋಚನೆ ನಮ್ಮ ಗುರಿ.

ಜಾತಿವಿನಾಶಕ್ಕಾಗಿ ಎಲ್ಲಾ ಜಾತಿಯ ಬಡವರನ್ನು ಸಂಘಟಿಸುವ ಕಮ್ಯುನಿಸ್ಟ್ ಪಕ್ಷಗಳು ಜಾತಿವಿನಾಶದ ಕಾರಣಕ್ಕಾಗಿ ಮೇಲ್ಜಾತಿಯ ವಿರುದ್ಧವೂ ಹೋರಾಡಲಿ.

ಸಿ.ಪಿ.ಐ (ಎಂ.ಎಲ್) ಲಿಬರೇಷನ್ ಈ ಉದ್ದೇಶಕ್ಕಾಗಿ ದೊಡ್ಡ ಹೆಜ್ಜೆಯನ್ನೆ ಇರಿಸಿದೆ. ಬಿಹಾರದಲ್ಲಂತು ಜಾತಿ ವಿನಾಶ ಕಾರ್ಯಕ್ರಮವನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ಯಲಾಗಿದೆ. ದಲಿತರ ಮತದಾನದ ಅವಕಾಶಕ್ಕಾಗಿ ನಮ್ಮ ಪಕ್ಷ ಬಂದೂಕು ಹಿಡಿಯುವ ಹಂತಕ್ಕೂ ಹೋಗಿದೆ. ದಲಿತರಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಿದೆ. ದಲಿತರೇ ಪ್ರಧಾನವಾಗಿರುವ ನಮ್ಮ ಪಕ್ಷ ಮತ್ತೊಂದು ದಲಿತ ಚಳವಳಿಯಲ್ಲದಿದ್ದರೂ, ದಲಿತ ಚಳವಳಿಯ ಮಿತಿಗಳನ್ನು ಮೀರಿ ಜಾತಿವಿನಾಶ ಕಾರ್ಯಕ್ರಮವನ್ನು ಹೊಸ ಎತ್ತರಕ್ಕೆ ಕೊಂಡೊಯ್ದಿದೆ.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಇವತ್ತು ಪ್ರತಿಗಾಮಿ ಜಾತಿ ಪದ್ಧತಿಯ ಉಳಿವಿಗಾಗಿ ಭದ್ರಕೋಟೆಯಾಗಿದೆ. ಈ ಪದ್ಧತಿ ಇವತ್ತಿಗೂ ಜಾತಿಯನ್ನು ಪೋಷಿಸಿ ಬೆಳೆಸುತ್ತಿದೆ. ಇದೊಂದು ಜಾತಿ ರಾಜಕೀಯ. ಹಾಗಾಗಿ ಜಾತಿವಿನಾಶಕ್ಕಾಗಿ ಹೋರಾಡುತ್ತಿರುವ ನಾವು ಈ ಬೂರ್ಜ್ವಾ ಪಾರ್ಟಿಗಳ ವಿರುದ್ದವೂ ಹೋರಾಡಬೇಕಿದೆ. ಅಷ್ಟು ಮಾತ್ರವಲ್ಲ ಸುಲಿಗೆಕೋರರು ಸುಲಿಗೆಗೆ ಒಳಗಾಗಬೇಕು. ಆಳುವ ವರ್ಗ ನಾವಾಗಬೇಕು. ಇದು ಸಾಧ್ಯವಾಗುವುದು ನವ ಪ್ರಜಾ ಸತ್ತಾತ್ಮಕ ಕ್ರಾಂತಿಯಲ್ಲಿ. ಇಲ್ಲಿ ನವ ಪ್ರಜಾಸತ್ತಾತ್ಮಕ ಕ್ರಾಂತಿಗೆ ಯಾವುದೇ ಪರ್ಯಾಯವಿಲ್ಲ. ಒಟ್ಟಾರೆ ಹೇಳುವುದಾದರೆ ಪರ್ಯಾಯ ಸಾಮಾಜಿಕ, ಆರ್ಥಿಕ ಕಾರ್ಯಕ್ರಮ ಮತ್ತು ಪರ್ಯಾಯ ಮಾದರಿ ರಾಜ್ಯಾಧಿಕಾರಕ್ಕಾಗಿ ಹೋರಾಡದೆ ಜಾತಿ ವಿನಾಶ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ನಾವು ದಲಿತ ಸಂಘಟನೆಗಳೊಂದಿಗೆ ಸಂವಾದಕ್ಕೆ ಸಿದ್ಧವಿದ್ದೇವೆ ಮತ್ತು ಸಂಯುಕ್ತ ಹೋರಾಟಕ್ಕೆ ಸಿದ್ಧವಿದ್ದೇವೆ.

(ಫೆಬ್ರವರಿ ೧೫, ೨೦೦೪ರಂದು ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾರ್ಕ್ಸಿಸ್ಟ್ ಸ್ಟಡೀಸ್ (ಐ.ಐ.ಎಂ.ಎಸ್), ದಲಿತ್ ಕ್ರಿಶ್ಚಿಯನ್ ಫೋರಮ್ ಮತ್ತು ಪ್ರಗತಿಪರ ಪ್ರಜಾತಾಂತ್ರಿಕ ವೇದಿಕೆಯು ನಡೆಸಿದ ವಿಚಾರ ಸಂಕಿರಣದಲ್ಲಿ ಸಿ.ಪಿ.ಐ.ಎಮ್.ಎಲ್. ಲಿಬರೇಷನ್ ಪಕ್ಷದ ಕೇಂದ್ರ ಸಮಿತಿ ಸದಸ್ಯ ವಿ. ಶಂಕರ್‌ರವರು ಮಂಡಿಸಿದ ಲೇಖನ.) □

ಮಗ್ಗಿ ಬತ್ತದಾ ಸಾ?

ಎಚ್.ಎಲ್ ಕೇಶವಮೂರ್ತಿ

ಮಂತ್ರಿ ಮಾದೇಗೌಡರಿಗೆ ಅಗ್ನಿ ಪರೀಕ್ಷೆ, ಚುನಾವಣೆ ಎದುರು ನಿಂತಿತ್ತು.

ಹಣ ಇತ್ತು ಅಧಿಕಾರ ಇತ್ತು ಆದರೆ ಜನ ಬೆಂಬಲ?

ಇದುವರೆವಿಗೂ ಅದನ್ನು ಪರೀಕ್ಷಿಸಿದ್ದಿಲ್ಲ. ಅವರು ಎದುರಿಸಿದ್ದು ಪರೋಕ್ಷ ಚುನಾವಣೆಗಳನ್ನ ನೇರ ಚುನಾವಣೆ ಯನ್ನಲ್ಲ ಅದೂ ನಗರದಲ್ಲಿ. ಅಲ್ಲಿನ ಚುನಾವಣೆಯ ಖದರ್ರೇ ಬೇರೆ. ಅಲ್ಲಿನ ವರಸೆಗಳೆಲ್ಲ ಅವರಿಗೆ ಕರಗತ.

ನಗರದ ಒಂದು ಚುನಾವಣೆ. ಅಭ್ಯರ್ಥಿ ಕೆ.ಸಿ. ಬೋರೇಗೌಡ ವಾರ್ಡಿನಲ್ಲಿ ಚಿರಪರಿಚಿತ. ಕಷ್ಟ ಅಂತ ಬಂದವರಿಗೆ ಸಹಾಯ ಮಾಡ್ತಾನೂ ಇದ್ದ. ಇಂತಹ ಬೋರೇಗೌಡನೆಂಬ ಬೋರೇಗೌಡ ಮತ ಯಾಚಿಸಲು ಹಿಂಬಾಲಕರ ಸಂಗಡ ಮನೆ ಮನೆ ಅಲೆದ.

'ನೀನೂ ನಿಂತಿದೀಯಾ ಅಣ್ಣ' ಅಂದರು ಪರಿಚಿತರು.

ಕರಪತ್ರ ನೀಡಿದ. ಓದಿದರು.

'ಇದು ನಿಂದೇನಾ ಅಣ್ಣಾ' ಅಂತ ಆಶ್ಚರ್ಯ ವ್ಯಕ್ತಪಡಿಸಿದರು.

ಪ್ರಮಾದ ನಡೆದು ಹೋಗಿತ್ತು.

ಅವನು ಜನರಿಗೆ ಪರಿಚಯ ಇದ್ದದ್ದು 'ಬಾಂಬ್ ಬೋರ' ಅಂತ. ಕರಪತ್ರದಲ್ಲಿ ಕೆ.ಸಿ. ಬೋರೇಗೌಡ ಅಂತ ಇತ್ತು! ಆ ಬಾಂಬ್ ಬೋರನೇ ಈ ಕೆ.ಸಿ.ಬೋರೇಗೌಡ ಅಂತ ಅವರಿಗೇನು ಗೊತ್ತು?

ಬಾಂಬ್ ಬೋರ ತಕ್ಷಣವೇ ಕಾರ್ಯಪ್ರವೃತ್ತನಾದ. ಪ್ರಚಾರ ಸಾಮಗ್ರಿಗಳಲ್ಲಿ ರಾರಾಜಿಸಿದ: 'ಕೆ.ಸಿ. ಬೋರೇಗೌಡ ಉರುಫ್ ಬಾಂಬ್ ಬೋರ!'

ಉರುಫ್ ಹೆಸರುಗಳೇ ಅಭ್ಯರ್ಥಿಗಳ ನೈಜ ಪರಿಚಯ ಮಾಡಿಸೋದು!

ಇಂತಹದ್ದೇನಿದ್ದರೂ ನಗರಗಳಿಗೆ ಸೀಮಿತ. ಗ್ರಾಮಾಂತರ ಪ್ರದೇಶದಲ್ಲಿ ಉರುಫ್ ಗಿರುಫ್ ನಡೆಯುವುದಿಲ್ಲ, ಗೌಡರಿಗೆ ಅರಿವಿತ್ತು. ಉರುಫ್ ಪಟಾಲಂಗಳನ್ನೆಲ್ಲ ದೂರ ಇಟ್ಟು ಚುನಾವಣಾ ಕಣಕ್ಕೆ ಧುಮುಕಿದ್ದರು.

ಮುಸ್ಸಂಜೆಯ ಸಮಯ. ಚುನಾವಣಾ ಪ್ರಚಾರಕ್ಕೆ ಒಬ್ಬರೇ ಹೊರಟರು. ಅವರ ರೀತಿಯೇ ಹಾಗೆ. ಯಾರ ಮೇಲೂ ನಂಬಿಕೆ ಇಲ್ಲ, ಜೊತೆಯಲ್ಲಿದ್ದವರೇ ತನ್ನ ಮತಗಳಿಗೆ ಕನ್ನ ಹಾಕಿಯಾರು ಎಂಬ ಆತಂಕ. ಕಾರನ್ನೂ ಅವರೇ ಓಡಿಸುತ್ತಿದ್ದರು. ಚಾಲಕ ತಮ್ಮ ಬಳಿ ವ್ಯವಹಾರಗಳನ್ನು ಎದುರಾಳಿಗೆ ತಿಳಿಸಿಯಾನು ಎಂಬ ಗುಮಾನಿ.

ಇಂತಹ ಗೌಡರಾದ ಗೌಡರು ನಮ್ಮ ಗ್ರಾಮಕ್ಕೆ ಬಂದರು. ನಾವು ಕೆಲವು ಗೆಳೆಯರು ಊರ ಮುಂದಲ ಅರಳಿ ಕಟ್ಟೆಯ ಮೇಲೆ ಕುಳಿತಿದ್ದೊ, ಗೌಡರು ಬಂದದ್ದನ್ನು ಗಮನಿಸಿದ್ದೊ, ಅವರು ಬಂದಿರುವ ಕಾರ್ಯದ ಸುಳಿವು ಸಿಕ್ಕಿತ್ತು. ಮಂತ್ರಿ ಆದರೇನು, ಚುನಾವಣೆಯ ಸಮಯ ಅಲ್ಲವೆ, ಅವನೇ ಹತ್ತಿರಕ್ಕೆ ಬರಲಿ ಎಂದು ಧಿಮಾಕಿನಿಂದ ಕುಳಿತೇ ಇದ್ದವು. ಗೌಡರೇ ಕಾರಿನಿಂದ ಇಳಿದು ಬಂದರು. ಕಷ್ಟ ಸುಖ ವಿಚಾರಿಸಿದರು. ನಾವೆಲ್ಲರೂ ಪದವೀಧರ ನಿರುದ್ಯೋಗಿಗಳು ಎಂದು ತಿಳಿದು 'ತ್ಚು ತ್ಚು' ಅಂತ ಪರಿತಪಿಸಿದರು. 'ಕ್ರಿಮಿನಲ್ ವೇಸ್ಟ್' ಅಂತ ಪೇಚಾಡಿಕೊಂಡರು. 'ಮೊದಲೇ ತಿಳಿಸಬಾರದಾಗಿತ್ತೆ ನಾನೇನ್ ದೂರದವನ' ಅಂತ ನೊಂದು ಕೊಂಡರು. 'ನನಗೆ ನೂರಾರು ಜನರ ಪರಿಚಯ ಇದೆ, ಲಾಜಾದಲ್ಲಿ ನಿಮ್ಮ ಕೆಲಸ ಆಗ್ತಿತ್ತು ಎಂತಹ ಕೆಲಸ ಮಾಡಿಕೊಂಡಿರಿ' ಅಂತ ದುಃಖಪೂರಿತ ದನಿಯಲ್ಲಿ ಹೇಳಿದರು. 'ಈ ಚುನಾವಣೆ ಒಂದು ಮುಗೀಲಿ. ನಿಮಗೆಲ್ಲರಿಗೂ ಕೆಲಸ ಕೊಡುಸ್ತೀನಿ' ಅಂತ ಆಶ್ವಾಸನೆ ನೀಡಿದರು.

ನಾವು ದಿಗ್ಮೂಢರಾದೆವು. ಇಂತಹ ಪುಣ್ಯಾತ್ಮನನ್ನು ಇದುವರೆವಿಗೆ ನೋಡಲಿಲ್ಲವಲ್ಲ ಅಂತ ನಮ್ಮನ್ನು ನಾವೇ ಹಳಿದು ಕೊಂಡೆವು. ನಮ್ಮ ಮೂರ್ಖತನಕ್ಕಾಗಿ ಮರುಗಿದೆವು. ದೈವೀ ಸ್ವರೂಪಿ ಗೌಡರನ್ನು ಗೆಲ್ಲಿಸಲು ಪಣ ತೊಟ್ಟೆವು.

ನಮ್ಮ ಶ್ರಮ ಫಲ ಕೊಟ್ಟಿತು. ಚುನಾವಣೆಯಲ್ಲಿ ಮಂತ್ರಿ ಮಾದೇಗೌಡರು ಅದ್ಭುತ ಜಯಗಳಿಸಿದರು.

ಉದ್ಯೋಗದ ಕನಸು ತುಂಬಿಕೊಂಡ ನಾವು ಗೌಡರ ಮನೆಯ ಬಳಿ, ಅವರು ಊರಿನಲ್ಲಿ ಇರುವ ವಿಷಯ ತಿಳಿದು, ಹೋದೆವು. ಗೌಡರ ದರ್ಬಾರು ನಡೆಯುತ್ತಿತ್ತು. ಆಸ್ಥಾನ ವಿದೂಷಕರು ಅವರ ಮಾತಿಗೆ ತಲೆ ಒಗೆಯುತ್ತಾ ಭಯ, ಭಕ್ತಿ, ಗೌರವಗಳಿಂದ ಕುಳಿತಿದ್ದರು. ಅಂಜುತ್ತಾ ಅಳುಕುತ್ತಾ ಆಸ್ಥಾನ ಪ್ರವೇಶಿಸಿದೆವು.

' ಓ ಬನ್ರಪ್ಪಾ ಬನ್ನಿ' ಆತ್ಮೀಯ ದನಿಯಲ್ಲಿ, ಉಲ್ಲಾಸದಲ್ಲಿದ್ದ ಗೌಡರು, ಸ್ವಾಗತಿಸಿ 'ಏನು ಬಂದ್ರಲ್ಲ?' ಎಂದು ಕೇಳಿದರು.

'ಅದೇಸಾ ಕೆಲ್ಸ'

'ಹುಂ ಕೆಲ್ಸಾನ ಕೊಡ್ಸಾನ, ಕೊಡ್ಸಾನ. ನನಗೇನು ನೂರಾರು ಜನ ಗೊತ್ತವ್ರೆ'.

'ನಿಮ್ಗೆ ಗೊತ್ತಿಲ್ದೆ ಏನ್ಸಾ' ಎಂದು ಒಬ್ಬ ಆಸ್ಥಾನ ವಿದೂಷಕ ತಲೆ ಹಾಕಿದ.

'ಕೊಡುಸ್ತಿನಿ, ಆದರೆ ನನ್ನದೊಂದು ಕಂಡಿಷನ್ನು'

'........?'

'ನಾನೊಂದು ಪ್ರಶ್ನೆ ಕೇಳ್ತಿನಿ, ಸುಲಭದ್ದು, ಉತ್ತರ ಹೇಳ್ತೀರ?'

'ಕೇಳಿಸಾ'

'ಹದಿನೇಳೆಂಟ್ಲ ಎಷ್ಟೇಳಿ'

ಭೂಮಿಗಿಳಿದು ಹೋದೊ. ಗಣಿತದ ಸಹವಾಸ ಬಿಟ್ಟು ಎಷ್ಟೋ ವರ್ಷ ಆಗಿತ್ತು. ಕ್ಯಾಲ್‌ಕ್ಯುಲೇಟರ್ ಬಂದು ಇರೋ ಮಗ್ಗೀನೂ ಮರೆಸಿತು. ಮತ್ತೆ ಈಗ ಮಗ್ಗಿ! ತಲೆ ತಗ್ಗಿಸಿದೊ.

'ನೋಡ್ರಪ್ಪ ಈ ಮಗ್ಗೀನೆ ಬರಾಕಿಲ್ಲ ಅಂತಾವೆ. ಇಂತಹ ದಡ್ಡರಿಗೆ ಕೆಲಸ ಕೊಡಿಸಿದರೆ ನನ್ನ ಮರ್ಯಾದೆ ಏನಾಗಬೇಕು ನೀವೇ ಹೇಳಿ' ಎನ್ನುತ್ತಾ ತಮ್ಮ ಆಸ್ಥಾನ ವಿದೂಷಕರ ಕಡೆ ಗೊಮ್ಮೆ ವಿಷಾದ ದೃಷ್ಟಿ ಬೀರಿದಾಗ ಅವರೆಲ್ಲ 'ಡಿಗ್ರಿ ಕೊಸ್ದಿದೀವಿ ಅಂತೀರಾ ಅದೂ ಗೊತ್ತಿಲ್ಲವೇನರ್ಲಿ' ಎನ್ನುವಂತೆ ನಮ್ಮ ಕಡೆ ತಿರಸ್ಕಾರ ದೃಷ್ಟಿ ಬೀರಿ 'ಇಂತವ್ಕೆ ಯಾರು ಕೆಲಸ ಕೊಟ್ಟಾರು ಸಾ ನೀವೂ ಸರಿಯೆ' ಎಂದು ಕೌಲೆ ಬಸವನ ಅವತಾರವೆತ್ತಿದ್ದರು. ನಾಚಿಕೆ, ಅವಮಾನದಿಂದ ನಾವೆಲ್ಲ ಕುಗ್ಗಿ ಹೋದೆವು.

ಇದು ನಡೆದು ಮೂರು ತಿಂಗಳಿಗೆ ಜಿಲ್ಲಾ ಪಂಚಾಯತಿ ಚುನಾವಣೆ ಬಂದಿತು. ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಸಂಪೂರ್ಣ ಹೊಣೆಯನ್ನು ಮಂತ್ರಿ ಮಾದೇಗೌಡರು ಹೊತ್ತಿದ್ದರು. ನಮ್ಮ ಊರಿಗೆ, ಮತ ಯಾಚಿಸಲು, ಅವರ ಸವಾರಿ ಭಾಜಾ ಬಜೆಂತ್ರಿಯೊಂದಿಗೆ ಬಿತ್ತೈಸಿತು. ನಮಗಾದ ಅವಮಾನದ ಕಾವು ಇನ್ನೂ ಆರಿರಲಿಲ್ಲ. ಊರ ಬಾಗಿಲಿನಲ್ಲಿಯೇ ಗೌಡರ ದಿಬ್ಬಣಕ್ಕೆ ತಡೆಒಡ್ಡಿದೊ.

'ಬಿಡಿಬಿಡಿ ಜಾಗ ಬಿಡಿ. ರಸ್ತೆ ಅಡ್ಡಯಾಕೆ ನಿಂತಿದ್ದೀರಿ' ಮೋಟಾಳುಗಳು ಮಂತ್ರಿ ಮಹೋದಯರಿಗೆ ದಾರಿ ಬಿಡಿಸಲು ಮುಂದಾದರು.

'ಮಂತ್ರಿಗಳಿಗೆ ನಮ್ಮದೊಂದು ಪ್ರಶ್ನೆ ಇದೆ. ಅದಕ್ಕೆ ಉತ್ತರ ಹೇಳಲಿ ದಾರಿ ಬಿಡ್ತೀವಿ'

'ಏನ್ರಪ್ಪ ನಿಮ್ಮ ಪ್ರಶ್ನೆ' ಮಂತ್ರಿಗಳ ಮಾತು.

'ಉತ್ತರ ಹೇಳ್ತೀರ ಸಾ?'

'ಹೂಂ ಕೇಳಿ'

'ಹದಿನೇಳೆಂಟ್ಲ ಎಷ್ಟು?'

ಗುರುವಿಗೇ ತಿರುಮಂತ್ರ ಹಾಕಿ ಆಗಿತ್ತು!

ಮಂತ್ರಿ ಮಾದೇಗೌಡರು ಮಂಗ ಆದರು! □

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಸಾಮಾಜಿಕ ಕ್ರಾಂತಿಯಾಗಿ ಸಾಮ್ರಾಜ್ಯಶಾಹಿ

ಹೀಗೇಕೆ ಯೋಚಿಸಬಾರದು? ಲಾರ್ಡ್ ಮೆಕಾಲೆಯನ್ನು ಭಾರತದ ಪ್ರಜಾಪ್ರಭುತ್ವದ ಜನಕನೆಂದು ವರ್ಣ ರಾಷ್ಟ್ರೀಯ ವಾದಿಗಳು ಒಪ್ಪುವರೇ? ಭಾರತದ ಪೀನಲ್‌ಕೋಡ್ (ದಂಡ ಸಂಹಿತೆ) ಅನ್ನು ಅಳಿಸಿ, ಭಾರತದ ಪ್ರಜಾಸತ್ತಾತ್ಮಕ ನಕಾಶೆಯನ್ನು ತಯಾರಿಸಬಲ್ಲೀರಾ? ಅಥವಾ ವರ್ಣ ರಾಷ್ಟ್ರೀಯ ವಾದಿಗಳು ಭಾರತದ ರಾಷ್ಟ್ರೀಯವಾದಕ್ಕೆ ಲಾರ್ಡ್ ಮೆಕಾಲೆಯನ್ನು ಮೂಲ ಪಿತನೆಂದು ಎಂದಾದರೂ ಒಪ್ಪಿದ್ದಾರೆಯೇ? ಇಂಗ್ಲಿಷ್ ಶಿಕ್ಷಣ ವ್ಯವಸ್ಥೆಯನ್ನು ಅಳಿಸಿ ಬಿಟ್ಟು ವೈಜ್ಞಾನಿಕ ಮನೋಧರ್ಮದಲ್ಲಿ ಭಾರತೀಯ ರಾಷ್ಟ್ರೀಯತೆಯ ಚರಿತ್ರೆಯನ್ನು ಕಟ್ಟಿ! ಸುಮಾರು ೨೦ ಮಂದಿ ಕಾಂಗ್ರೆಸ್ಸಿನ ಮೊದಲ ಅಧ್ಯಕ್ಷರುಗಳು ಇಂಗ್ಲಿಷ್ ಶಿಕ್ಷಣ ಪಡೆದವರು. ಅವರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ಇಂಗ್ಲೆಂಡಿನಿಂದ ಪದವಿ ಪಡೆದವರು ಮತ್ತು ಅವರೇ ಭಾರತೀಯ ರಾಷ್ಟ್ರೀಯತೆಯ ಕಿಚ್ಚನ್ನು ಹಚ್ಚಿದವರು.

ಅಥವಾ ಬ್ರಿಟಿಷ್ ಸಾಮ್ರಾಜ್ಯವು ಭಾರತವೆಂಬ 'ರಾಷ್ಟ್ರ-ಪ್ರಭುತ್ವ'ದ ಮುತ್ತಾತ ಎಂಬುದನ್ನು ಎಂದಾದರೂ ವರ್ಣ ರಾಷ್ಟ್ರೀಯವಾದಿಗಳು ಒಪ್ಪುವರೇ? ಭಾರತೀಯ ರೈಲ್ವೆ, ಅಂಚೆ ಮತ್ತು ತಂತಿ, ಜಿಲ್ಲಾ ಪ್ರಾಂತ್ಯಗಳನ್ನು, ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆ ಮತ್ತು ಸೈನ್ಯವನ್ನು ಅಳಿಸಿ ಭಾರತವೆಂಬ 'ರಾಷ್ಟ್ರ-ಪ್ರಭುತ್ವ'ವನ್ನು ಕಟ್ಟಬಹುದೇ? ಈ ರಾಷ್ಟ್ರೀಯವಾದಿಗಳೆಂದೂ ವಾಸ್ಕೋಡಿಗಾಮನನ್ನು, ನಾಗರಿಕತೆಯ ದೂತನಾಗಿ, ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದನೆಂದೂ, ಒಪ್ಪುವುದಿಲ್ಲ, ಹಾಗಾಗಿ ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡರಲ್ಲವೇ? ಭಾರತದಲ್ಲಿ ಬ್ರಿಟಿಷ್ ಇರುವಿಕೆಯನ್ನು ಅಳಿಸಿ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಶಾಪದಿಂದ ಮುಕ್ತರಾದ ಆಫ್ಘನಿಸ್ಥಾನ ಮತ್ತು ನೇಪಾಳಗಳೊಂದಿಗೆ ಹೋಲಿಸಿ ಭಾರತದ ಚಿತ್ರವನ್ನು ರೂಪಿಸಿ, 'ಬ್ರಿಟಿಷ್'ನ್ನು ಅಳಿಸಿ ಬಿಟ್ಟಲ್ಲಿ ಪ್ರಸ್ತುತ ಇರುವ ಪ್ರಾಂತ್ಯಗಳಿಗಿಂತಲೂ ಹೆಚ್ಚಿನ ರಾಷ್ಟ್ರ-ಪ್ರಭುತ್ವಗಳು ಭಾರತದಲ್ಲಿ ಇರುತ್ತಿದ್ದವೇನೋ!

ವರ್ತಮಾನದಲ್ಲಿ ಈ ರಾಷ್ಟ್ರೀಯವಾದಿಗಳು 'ಮಾಂಬಾ' (ಉಗ್ರವಾದ)ನಲ್ಲಿ ಬ್ಯುಜಿಯಾಗಿಬಿಟ್ಟು ಒಂದು ನಮ್ರ ಸವಾಲನ್ನು ಸ್ವೀಕರಿಸಿಲಾರದು; ತೆಲಾಂಗಣ ಏಕೆ ಹಿಂದುಳಿದಿದೆ? ಮತ್ತು ತೀರಪ್ರದೇಶ ಚಾರಿತ್ರಿಕವಾಗಿ ಬರಗಾಲ ಪ್ರದೇಶವೆಂದು ಖ್ಯಾತಿ ಪಡೆದಿದ್ದು ಈಗ ಶ್ರೀಮಂತ ಪ್ರದೇಶವಾಗಿದೆ ಏಕೆ? ಬೃಹತ್ ಗೋದಾವರಿಯನ್ನು ಪಳಗಿಸಿದ ಸರ್ ಅರ್ಥರ್ ಕಾಟನ್‌ರನ್ನು ಅಳಿಸಿಬಿಡಿ ಮತ್ತು ಆಂಧ್ರಾ ತೀರಪ್ರದೇಶವನ್ನು ಊಹಿಸಲಾದೀತೆ? ಅಥವಾ ಒಂದು ತೌಲನಿಕ ಅಭಿವೃದ್ಧಿಯ ಪ್ರಾದೇಶಿಕ ಚಿತ್ರಣವನ್ನು, ರಾಜ-ಮಹಾರಾಣಿಯರ ಆಳ್ವಿಕೆಯ ಪ್ರದೇಶಗಳು ಮತ್ತು ನೇರ ಬ್ರಿಟಿಷ್ ಆಡಳಿತಕ್ಕೊಳಪಟ್ಟ ಪ್ರದೇಶಗಳನ್ನಿಟ್ಟುಕೊಂಡು ತಯಾರಿಸಬಹುದೇ? ರಾಜಸ್ಥಾನ ಮತ್ತು ಮಧ್ಯಪ್ರದೇಶದ ಬಹುತೇಕ ಪ್ರದೇಶಗಳು ಉಳಿದ ಉತ್ತರ ಭಾರತಕ್ಕೆ ಹೋಲಿಸಿದ್ದಲ್ಲಿ ಬಹಳಷ್ಟು ಹಿಂದುಳಿದಿವೆ ಏಕೆ? ಸತ್ಯ ಸಂಗತಿಯೆಂದರೆ ಆಧುನಿಕ ರಾಷ್ಟ್ರಕ್ಕೆ ಬೇಕಾದ ಮೂಲ ಸೌಕರ್ಯಗಳಾದ ನೀರಾವರಿ, ಸಂಪರ್ಕ ವ್ಯವಸ್ಥೆ ಶೈಕ್ಷಣಿಕ ವ್ಯವಸ್ಥೆ ರಸ್ತೆಗಳು ಮತ್ತು ರೈಲ್ವೆ ಮಾರ್ಗಗಳನ್ನು ನಿರ್ಮಿಸುತ್ತಿದ್ದರೆ ರಾಜಕುಮಾರರು, ರಾಣಿಯರು, ನಿಜಾಮರು ಮತ್ತು ನವಾಬರು ಅರಮನೆಗಳು ಮತ್ತು ಕೋಟೆಗಳನ್ನು ಕಟ್ಟುವಲ್ಲಿ ಮಗ್ನರಾಗಿದ್ದರು!

ಭಾರತದಲ್ಲಿ ಇತಿಹಾಸ ಬರೆಯುವುದೆಂದರೆ ಅದೊಂದು ಶುದ್ಧ ರಾಷ್ಟ್ರೀಯ ತುರುಕೆಯಷ್ಟೆ ಅಲ್ಲಿ ಹಿಂದುತ್ವದ ಆತ್ಮರತಿಯಿದ್ದು ಭಾರತವೆನ್ನುವ ಚಿನ್ನದಹಕ್ಕಿಯನ್ನು ವಸಾಹತುಶಾಹಿ ದೋಚಿತ್ತಲ್ಲದೆ, ಗಂಗಾ ಬಯಲಿನಲ್ಲಿ ಹರಿಯುತ್ತಿದ್ದ ಸ್ವೀಡನ್ ಬೆಣ್ಣೆ ಚೀಸ್ ಮತ್ತು ಹಾಲನ್ನು ಅಪಹರಿಸಿತ್ತೆಂದು ಚಿತ್ರಿಸಿರುವುದನ್ನು ಕಾಣುತ್ತೇವೆ. ಬ್ರಿಟಿಷರೆಷ್ಟು ದೋಚಿದರೆಂಬುದನ್ನು ರೋಗಪೀಡಿತವಾಗಿದ್ದ ಈ ನಾಗರಿಕತೆಗೆ ಅವರೆಷ್ಟು ಕೊಡುಗೆ ನೀಡಿದ್ದರೆಂಬುದರೊಡನೆ ಹೋಲಿಸಿ ನಾವ್ಯಾಕೆ ಒಂದು ಪ್ರಾಮಾಣಿಕ ಮೌಲ್ಯ ಮಾಪನ ಮಾಡಬಾರದು? ಇಂದು ಒಬ್ಬ ವಿದ್ಯುತ್ ನಿರ್ವಾಹಕ ೫೦/-ರೂಗೆ ಒಂದು ಸ್ವಿಚ್ ಹಾಕಲು ತೆಗೆದುಕೊಳ್ಳಬಹುದು. ಬೃಹತ್ ದೇಶಕ್ಕೆ ಅಗತ್ಯವಾದ ವಿದ್ಯುತ್ ಶಕ್ತಿಯ ತಯಾರಿಕೆ ಮತ್ತು ಹಂಚಿಕೆ ಹಾಗೂ ಅದಕ್ಕೆ ಬೇಕಾದ ಮಾನವಶಕ್ತಿ ಮೂಲ ಸೌಕರ್ಯ ಎಷ್ಟು ಬೇಕು ಎಂಬುದರೊಡನೆ ಹೋಲಿಸಿ. ಬ್ರಿಟೀಷರ ನಾಗರಿಕಗೊಳಿಸುವ ಪ್ರಯತ್ನಗಳಿಗೆ ಬೆಲೆ ಕಟ್ಟಲಾದೀತೆ? ಅಂತಿಮವಾಗಿ ಸಾಮ್ರಾಜ್ಯಶಾಹಿ ಮರುಹುಟ್ಟು ವಿದ್ಯಮಾನಕ್ಕೆ ಕಾರಣೀಭೂತವಾಗಿಲ್ಲವೇ?

ಮಾನವ ಪ್ರಯತ್ನವೆಂದರೆ ಅದೆಲ್ಲಾ ಲಾಭವೇ. ಹಾಗೆಯೇ ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರಕ್ಕಾಗಿ ಮತ್ತು ಲಾಭಕ್ಕಾಗಿ ಬಂತು. ಯಾವಾಗ ಅವರು ಅದನ್ನು ಕಂಡುಕೊಂಡರೋ, ಭಾರತವೂ ಸಹ ನಾಗರಿಕಗೊಂಡಿತು. ಕಂಪನಿಯೂ ಅಧಿಕ ಲಾಭವನ್ನು ಗಳಿಸಿತು. ಈ ಪ್ರಕ್ರಿಯೆಯಲ್ಲಿ ನಾಗರಿಕಗೊಳ್ಳುತ್ತಿರುವ ಭಾರತೀಯ ಪ್ರಮುಖ ಗಮನವೆಲ್ಲಾ ವೈಜ್ಞಾನಿಕ ಮನೋಧರ್ಮವನ್ನು ಬಿತ್ತಲು, ತಾರ್ಕಿಕ ಆಲೋಚನೆ, ಕೈಗಾರೀಕರಣ ಮುಂತಾದವುಗಳತ್ತ ಹರಿಡಿತು. ಆಧುನಿಕ ರಾಷ್ಟ್ರ ವ್ಯವಸ್ಥೆಯಿಲ್ಲದೆ, ಲಿಬರಲ್ ಪ್ರಜಾಸತ್ತಾತ್ಮಕ ವ್ಯವಸ್ಥೆ ಇಲ್ಲದೇ ಹೋಗಿದ್ದಲ್ಲಿ ಭಾರತವು ಬ್ರಿಟಿಷರಿಗೆ ಬಂಜರು ಭೂಮಿಯಾಗಿರುತ್ತಿತ್ತಷ್ಟೆ ಆದ್ದರಿಂದ ಭಾರತ ಆಕ್ರಮಣಕ್ಕೆ ಮಾಡಿಟ್ಟ ಜಾಗವನ್ನೆಬಹುದೇನೋ. ಆಗಸ್ಟ್ ೮, ೧೮೫೩ರಲ್ಲಿ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್‌ನ ಲೇಖನವೊಂದರಲ್ಲಿ ಕಾರ್ಲ್‌ಮಾರ್ಕ್ಸ್ ಈ ರೀತಿ ವಾದಿಸಿದ್ದ: ಪ್ರಶ್ನೆಯೇನೆಂದರೆ ಭಾರತವನ್ನು ಆಕ್ರಮಿಸಲು ಬ್ರಿಟಿಷರಿಗೆ ಹಕ್ಕಿತ್ತೊ ಇಲ್ಲವೋ ಎನ್ನುವುದಾಗಿರದೆ, ಟರ್ಕಿಯವರಿಂದ, ಪರ್ಶಿಯನ್ನರಿಂದ ರಷ್ಯಾದವರಿಂದ ಭಾರತ ಆಕ್ರಮಣಕ್ಕೊಳಗಾಗುವುದನ್ನು ನಾವು ಒಪ್ಪಬಹುದೇ ಎಂದು'. ಭಾರತವು ಆಕ್ರಮಣಕ್ಕೊಳಗಾಗುವ ಹಣೆಬರಹವನ್ನು ಜಾತಿ ವ್ಯವಸ್ಥೆಯಿಂದಾಗಿ ನಿರ್ಧಾರವಾಗಿತ್ತೆಂದು ಮಾರ್ಕ್ಸ್ ಹೇಳುತ್ತಾನೆ.

ಭಾರತವನ್ನು ನಾಗರಿಕಗೊಳಿಸುವ ಪ್ರಕ್ರಿಯೆಯಲ್ಲಿ ಮತ್ತು ಆಧುನಿಕತೆಯ ಬೀಜ ಬಿತ್ತುವ ಮೂಲಕ ಬ್ರಿಟಿಷರು ಒಂದು ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದರಲ್ಲವೇ. ಜೂನ್ ೨೫, ೧೮೫೩ ನ್ಯೂಯಾರ್ಕ್ ಟ್ರಿಬ್ಯುನಲ್ ಲೇಖನ 'ಭಾರತದಲ್ಲಿ ಬ್ರಿಟಿಷರ ಆಳ್ವಿಕೆ'ದಲ್ಲಿ ಮಾರ್ಕ್ಸ್ ಘೋಷಿಸುವುದೇನೆಂದರೆ, 'ಹಿಂದೂಸ್ಥಾನದಲ್ಲಿ ಒಂದು ಸಾಮಾಜಿಕ ಕ್ರಾಂತಿಗೆ ಇಂಗ್ಲೆಂಡ್ ಕಾರಣವಾಗುತ್ತಿದೆ ನಿಜ.ಆದರದರಲ್ಲಿ ನಿಷ್ಕೃಷ್ಟ ಹಿತಾಸಕ್ತಿಗಳಿದ್ದು, ಅನುಷ್ಠಾನಗೊಳಿಸಿದ ರೀತಿಯು ದಡ್ಡತನದಿಂದ

> ಲಾರ್ಡ್ ಮೆಕಾಲೆಯನ್ನು ಭಾರತದ ಪ್ರಜಾಪ್ರಭುತ್ವದ ಜನಕನೆಂದು ವರ್ಣ ರಾಷ್ಟ್ರೀಯ ವಾದಿಗಳು ಒಪ್ಪುವರೇ? ಅಥವಾ ವರ್ಣ ರಾಷ್ಟ್ರೀಯ ವಾದಿಗಳು ಭಾರತದ ರಾಷ್ಟ್ರೀಯವಾದಕ್ಕೆ ಲಾರ್ಡ್ ಮೆಕಾಲೆಯನ್ನು ಮೂಲ ಪಿತನೆಂದು ಎಂದಾದರೂ ಒಪ್ಪಿದ್ದಾರೆಯೇ? ಇಂಗ್ಲಿಷ್ ಶಿಕ್ಷಣ ವ್ಯವಸ್ಥೆಯನ್ನು ಅಳಿಸಿ ಬಿಟ್ಟು ವೈಜ್ಞಾನಿಕ ಮನೋಧರ್ಮದಲ್ಲಿ ಭಾರತೀಯ ರಾಷ್ಟ್ರೀಯತೆಯ ಚರಿತ್ರೆಯನ್ನು ಕಟ್ಟಿ! ಸುಮಾರು ೨೦ ಮಂದಿ ಕಾಂಗ್ರೆಸ್ಸಿನ ಮೊದಲ ಅಧ್ಯಕ್ಷರುಗಳು ಇಂಗ್ಲಿಷ್ ಶಿಕ್ಷಣ ಪಡೆದವರು. ಅವರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ಇಂಗ್ಲೆಂಡಿನಿಂದ ಪದವಿ ಪಡೆದವರು ಮತ್ತು ಅವರೇ ಭಾರತೀಯ ರಾಷ್ಟ್ರೀಯತೆಯ ಕಿಚ್ಚನ್ನು ಹಚ್ಚಿದವರು.

ಅನುವಾದ: ಡಿದಾಚಿ

ಕೂಡಿತ್ತು ನಿಜ. ಆದರೆ ಅದು ಪ್ರಶ್ನೆಯಲ್ಲ. ಪ್ರಶ್ನೆ ಯೆಂದರೆ ಏಶಿಯಾದ ಸಾಮಾಜಿಕ ರಾಷ್ಟ್ರದಲ್ಲಿ ಮೂಲಭೂತ ಕ್ರಾಂತಿಯೊಂದಾಗದೆ ಮಾನವ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲಾದೀತೆ? ಅದಿಲ್ಲದೆ ಇಂಗ್ಲೆಂಡ್‌ನ ಯಾವುದೇ ಅಪರಾಧವಾದರೂ ಸರಿ, ಚರಿತ್ರೆಯಲ್ಲಿ ಆ ಕ್ರಾಂತಿಯನ್ನು ತರುವ ಸುಪ್ತವಾದ ಸಾಧನವಲ್ಲದೆ ಬೇರೇನೂ ಅಲ್ಲ.'

ರಾಷ್ಟ್ರೀಯತೆ ಮತ್ತು ಸತ್ಯ ಒಂದಾಗಿರಲು ಸಾಧ್ಯವಿಲ್ಲ. ಸಾಮ್ರಾಜ್ಯಶಾಹಿಯೆನ್ನುವುದು ಸರ್ವನಾಶ, ಲೂಟಿ ಎಂದಲ್ಲಿ ಅರ್ಧಸತ್ಯವಾದೀತು. ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ದೂರುವ ಮೂಲಕ ವರ್ಣವ್ಯವಸ್ಥೆಯ ಅಹಂನಷ್ಟೇ ಭಾರತೀಯರು ಬೆಳೆಸುತ್ತಾರೆ. ಬ್ರಿಟಿಷರು ಭಾರತವನ್ನು ಆಕ್ರಮಿಸದಿದ್ದಲ್ಲಿ, ವರ್ಣ ಜ್ಞಾನವು ತನ್ನ ಅಪನಂಬಿಕೆಯಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಮೆಟ್ರೊ ರೈಲನ್ನು ಸ್ಥಾಪಿಸುತ್ತಿತ್ತು. ರೈಟ್ ಸಹೋದರರು ದರ್ಭಂಗಾದಲ್ಲಿ ಕಾಣಿಸಿಕೊಳ್ಳುತ್ತಿದ್ದರು ಮತ್ತು ಮೆಹಬೂಬ್ ನಗರದಲ್ಲಿ ಐನ್‌ಸ್ಟೀನ್ ಕಾಣುತ್ತಿದ್ದ! ಈ ಆತ್ಮಪ್ರತ್ಯಯವೇ ಮುಂಬಾಯಿಯಲ್ಲಿ ಸೇರಿದ್ದವರಲ್ಲಿ ಕಾಣುತ್ತಿದ್ದದ್ದು. ಬ್ರಿಟಿಷರು ಭಾರತವನ್ನು ಹಿಡಿತಕ್ಕೆ ತೆಗೆದುಕೊಂಡದ್ದೇನೂ ಸಂಚಾಗಿರಲಿಲ್ಲ, ಹಾಗಂತ ಇಂಡಿಯಾ ಇದ್ದೂ ಇರಲಿಲ್ಲ. ಅಡೋಲ್ಫ್ ಹಿಟ್ಲರ್‌ನಿಂದ ತೊಂದರೆಗೊಳಪಟ್ಟ ಬ್ರೌನ್‌ನ ಭಾರದಿಂದ ನಲುಗಿದ ಬ್ರಿಟಿಷರು ಭಾರತವನ್ನು ಬಿಡಲೇಬೇಕಾದ ಪ್ರಸಂಗ ಉಂಟಾಗಿ, ಅನಾಗರಿಕ ವರ್ಣ ವ್ಯವಸ್ಥೆಯನ್ನು ಸಂಪೂರ್ಣ ನಾಗರಿಕಗೊಳಿಸದೇ ಹೋದರು. ಆ ಕಾರ್ಯವನ್ನು ಮೈಕ್ರೋಸಾಫ್ಟ್ ಸಾಮ್ರಾಜ್ಯವಾದ ಕೈಗೆತ್ತಿಕೊಳ್ಳಬಹುದೇ?

ಸಾಮ್ರಾಜ್ಯಶಾಹಿಯ ಕಾಲ್ತುಳಿತಕ್ಕೆ ಮುಚ್ಚಿಕೊಂಡ ಮನಸ್ಸುಗಳು

ಮುಂಬಯಿಯಲ್ಲಿ ರಾಷ್ಟ್ರೀಯವಾದಿಗಳು ಸಾಮ್ರಾಜ್ಯಶಾಹಿಯನ್ನು ತತ್ವವೆಂದು ಚಿತ್ರಿಸಲು ಬ್ಯುಸಿಯಾಗಿದ್ದರೆ, ಸಾಮ್ರಾಜ್ಯಶಾಹಿಗಳು ಡೆಲ್ಲಿಯಲ್ಲಿ ಒಂದು ರೀತಿಯ ಜನಾಂದೋಲನವನ್ನು ಸೃಷ್ಟಿಸಿದ್ದರು. ಗಂಡಸರು, ಹೆಂಗಸರು, ಯುವಜನ ಹಾಗೂ ಎಲ್ಲ ವಯಸ್ಸಿನವರೆನ್ನದೆ ಕವಿದ ಹಿಮ ಮತ್ತು ಕಚ್ಚುವ ಚಳಿಯನ್ನು ಭೇದಿಸುತ್ತಾ, ಅದೃಷ್ಟದ ಕಾಲನ್ನು ಹಿಡಿಯಲು ಮುನ್ನುಗ್ಗುತ್ತಿದ್ದರು. ಮಾರನೆಯ ದಿನವೇ ದೂರದರ್ಶನದ ಚಾನಲ್ ಘಟನೆಯನ್ನು ಬಿಂಬಿಸಿತ್ತು. ಇತರರು ಅವರನ್ನು ಅನುಸರಿಸಿ ರಾಜಧಾನಿಯಲ್ಲಿ ಏರ್ಪಟ್ಟ 'ಆಟೋ-ಎಕ್ಸ್ಪೊ' ಪ್ರದರ್ಶನದ ನೋಟವನ್ನು ಪಡೆಯಲು ಹಾತೊರೆಯುತ್ತಿದ್ದರು. ಬೃಹತ್ ಆಟೋ ಉದ್ಯಮಿಗಳು ತಮ್ಮ ಇತ್ತೀಚಿನ ಕಾರು, ಮೋಬೈಕ್ ಮಾದರಿಗಳನ್ನು ಪ್ರದರ್ಶಿಸಿದ್ದರು. ಆದರೆ ಡೆಲ್ಲಿಯಲ್ಲಿ ಈ ಜನಜಂಗುಳಿಯ ಆಂದೋಲನಕ್ಕೆ ಅದೊಂದೇ ಕಾರಣವಾಗಿರಲಿಲ್ಲ, ಅದೆಲ್ಲವೂ ಕಾಲುಗಳಿಗಾಗಿ, ಕಾನ್‌ಕರ್ಡ್ ಕಾರುಗಳಿಗಿಂತ ವೇಗವಾಗಿ ಸುದ್ದಿಯೊಂದು ಹರಡಿತು.

ಸಾಮ್ರಾಜ್ಯಶಾಹಿ ಹಿನ್ನೆಲೆಯ ಅನೇಕ ಆಟೋಕಂಪೆನಿಗಳು ಡೆಲ್ಲಿಯ ಸಾರ್ವಜನಿಕ ಅಥವಾ ಕಾನ್ವೆಂಟ್ ಸ್ಕೂಲ್‌ಗಳನ್ನು, ಯುವಮನಸ್ಸುಗಳನ್ನು ತಮ್ಮ ಉತ್ಪಾದನೆಯನ್ನು ಪ್ರಚಾರ ಮಾಡಲು ಸೆರೆಹಿಡಿದಿತ್ತು. ಹುಡುಗಿಯರು ಸಿದ್ಧಮಾದರಿಗಳಲ್ಲದಿದ್ದರೂ ಎದೆಗಾರಿಕೆಯುಳ್ಳವರೆಂದು ಯಾರಿಗೂ ಭಾಸವಾಗುತ್ತಿತ್ತು. ಸಾಮ್ರಾಜ್ಯಶಾಹಿಗಳ ಹುನ್ನಾರಕ್ಕೆ ತಕ್ಕಂತೆ ಅವರೆಲ್ಲ ಸಣ್ಣ ಸ್ಕರ್ಟ್‌ಗಳನ್ನು ಧರಿಸಿದ್ದು ಇತ್ತೀಚಿನ ಹಿಂದಿ

ಕೃತಿ: ವೆಂಕಟಾಚಲ

ಸಾಮ್ರಾಜ್ಯಶಾಹಿಗಳ ಸಂಚು ಡೆಲ್ಲಿಯ ಮುಗ್ಧ ಹುಡುಗಿಯರನ್ನು ದಡ್ಡರನ್ನಾಗಿಸಿತು. ಅವರೆಲ್ಲ ತಮ್ಮ ಕಾಲುಗಳನ್ನು ನಿರ್ಭಿಡೆಯಿಂದ ತೆರೆದು ತೋರಿದರು. ಅವರೆಲ್ಲ ಈ ಕ್ರಿಯೆಯಲ್ಲಿ ಹೆಮ್ಮೆ ಪಟ್ಟಂತಿತ್ತು. ಇದೆಲ್ಲ ಪಾಶ್ಚಾತ್ಯ ಸಂಸ್ಕೃತಿಯ ಸಂಕೇತ ವಷ್ಟೇ. ಭಾರತೀಯ ಮನೋಧರ್ಮವನ್ನು ಒಮ್ಮೆ ನೋಡಿ. ವರ್ಣಮಹಿಳೆಯು ಎಂದೂ ಅಷ್ಟೊಂದನ್ನು ತೆರೆಯಲು ಬಲಾತ್ಕಾರ ಅಥವಾ ಪ್ರಚೋದನೆಗೆ ಒಳಪಟ್ಟಿರಲಿಲ್ಲ. ನಿಜವೆಂದರೆ ಪೌರತ್ವವಿಲ್ಲದವರೂ ನಿರ್ದಿಷ್ಟವಾಗಿ ಅಸ್ಪೃಶ್ಯರು. ಆದರೆ ದೇಹಗಳನ್ನು ಬೆತ್ತಲೆ ಮಾಡಿಕೊಳ್ಳುತ್ತಿದ್ದರಷ್ಟೇ. ಅದೂ ಅವರ ಸಮ್ಮತಿಗೆ (ಇಚ್ಛೆಗೆ) ವಿರೋಧವಾಗಿ. ಆದರೆ ಸಾಮ್ರಾಜ್ಯಶಾಹಿಗಳು ಸಮ್ಮತಿಯನ್ನು ಸಹ ತಯಾರಿಸುತ್ತಾರೆ. ಇಂಗ್ಲಿಷ್ ಶಿಕ್ಷಿತ ಪೋಷಕರು ಸಾಂಸ್ಕೃತಿಕವಾಗಿ ಕಲುಷಿತಗೊಂಡು ತಮ್ಮ ಮಕ್ಕಳನ್ನು ಅಂಥ ಪ್ರದರ್ಶನಕ್ಕೆ ಸಮ್ಮತಿಸುತ್ತಾರೆ. ಗೌರವವಿಲ್ಲದ ಇವರಿಗೆ ಭಾರತೀಯ ಸಂಸ್ಕೃತಿಯೆಂದರೆ ಸನಾತನಿ, ಮಡುಗಟ್ಟಿದ ಸಂಗತಿಯಷ್ಟೆ

ಹಾಡುಗಳೊಂದಿಗೆ ಜನರತ್ತ ಕೈಬೀಸಿದರು. ಇಂಗ್ಲಿಷ್ ಮಾತನಾಡುವ ಮಾದರಿಗಳು ಹಿಂದಿಗೆ ಮಾನವೀಯ ಮುಖವೊಂದನ್ನು ತೊಡಿಸಿದ್ದರು. ಡಬ್ಲ್ಯೂಎಸ್‌ಎಫ್ ಕೊನೆಗೊಂಡ ಜನವರಿ ೨೨ರಂದು ಏಷ್ಯಾದ ಅತೀ ದೊಡ್ಡ 'ಆಟೋ-ಎಕ್ಸ್ಪೊ' ಪ್ರದರ್ಶನವು ಡೆಲ್ಲಿಯಲ್ಲೂ ಕೊನೆಗೊಳ್ಳುವುದಿತ್ತು. ಸಂಘಟಕರು ಪ್ರವೇಶ ಶುಲ್ಕವನ್ನು ರೂ. ೩೦೦ಕ್ಕೆ ಏರಿಸಿದ್ದರೂ ಸಹ ಬೃಹತ್ ಜನಜಂಗುಳಿ ಟಿಕೆಟ್‌ಗಳನ್ನು ಖರೀದಿಸಲು ಹವಣಿಸಿತ್ತು. ವ್ಹೀಲ್‌ಚೇರ್‌ನಲ್ಲಿ ವೃದ್ಧರಿಗೆ ಸ್ವಲ್ಪ ಅವಕಾಶವನ್ನು ಒದಗಿಸಲಾಗಿತ್ತು. ಪ್ರವೇಶದ್ವಾರದಲ್ಲಂತೂ ನಂಬಿಕೆಗೂ ಮೀರಿದ ಗೊತ್ತುಗುರಿಯಿಲ್ಲದ ಜನ ಸಾಲುಗಟ್ಟಿ ನಿಂತಿರುವುದನ್ನು ಕಾಣಬಹುದಿತ್ತು. ಇಂಥದ್ದು ಯಾವುದೇ ಜನಾಂದೋಲನದಲ್ಲಿ ಆಗುವುದಷ್ಟೇ. ದೊಡ್ಡ ಗುರಿಗಾಗಿ ತ್ಯಾಗವನ್ನು ಮಾಡಲಾಗುತ್ತದೆ.

ಒಮ್ಮೆ ಒಳ ಹೋದ ಮೇಲೆ ನಿರ್ದೇಶಿತ ಕ್ಷಿಪಣಿಗಳಂತೆ ಪ್ರೇಕ್ಷಕರು ಹಾಲ್‌ನಂಬರ್ ೭ಕ್ಕೆ ನಿರ್ದಿಷ್ಟವಾಗಿ ಮುಗಿಬಿದ್ದರು. ಅಲ್ಲಿ ಟಾಟಾರವರು ತಮ್ಮ ದೈತ್ಯ ಟ್ರಕ್ಕೊಂದನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ನಂಬಲಸಾಧ್ಯವಾದ ಇಂದ್ರಿಯಗಳಿಗೂ ಆಘಾತವೆನ್ನುವಂಥ ಆ ಯಂತ್ರಸೋಜಿಗವನ್ನು ಪ್ರೇಕ್ಷಕರು ನೋಡಲು ಬಯಸಿದ್ದರು. ಒಂದು ಟ್ರಕ್ ಅವರನ್ನು ಹೀಗೆ ದೃಷ್ಟಿಸುತ್ತದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಕಣ್ಣಿಂದ ಮುಡಿಪಿನವರೆಗೆ ಅವರೆಲ್ಲ ನೈಜ ಮಾನವರಾಗಿ ಪ್ರಯತ್ನಿಸಿದ್ದರು. ಹಾಲ್ ನಂಬರ್ ೭ ಇಂಥ ಪ್ರಸಿದ್ಧಿಯನ್ನು ಪಡೆಯಲು ಕಾರಣವೆಂದರೆ, ಉಡುಪುಗಳು ಸಾಮರ್ಥ್ಯಕ್ಕಿಂತ ಸಣ್ಣದಾಗಿತ್ತು. ಹಾಗಾಗಿ ಕಮ್ಮಿಬೆಲೆಯಲ್ಲಿ ಎಲ್ಲರಿಗೂ ಎಟುಕುವಂತಿತ್ತು.

ಪ್ರವೀಣ್ ತೊಗಾಡಿಯಾರಂಥವರು ಇಲ್ಲಿ ಅಪಹಾಸ್ಯಕ್ಕೊಳಗಾಗಿದ್ದರು. ಸಾಮ್ರಾಜ್ಯಶಾಹಿಯು ಲೂಟಿ ಮಾಡುವ ಉದ್ದೇಶ ಹೊಂದಿದ್ದ ತನ್ನ ಗುರಿಗಳನ್ನು ಮುಟ್ಟಲು ಸಂಚು ನಡೆಸಿತ್ತು. ಸ್ಪಷ್ಟ ಸಂಗತಿಯೆಂದರೆ ಸಾಮ್ರಾಜ್ಯಶಾಹಿಗಳು ಮೊದಲು ಸಂಸ್ಕೃತಿಗೆ ವಿಷ ಹಾಕುತ್ತಾರೆ. ನಂತರ ಎಲ್ಲವೂ ಅನುಕರಣೀಯವಾಗುತ್ತದೆ. ಉದಾಹರಣೆಗೆ ಕೌಟಿಲ್ಯ ಎಂದಾದರೂ ವಿಮಾ ಉದ್ಯಮದ ಬಗ್ಗೆ ಮಾತನಾಡಿದ್ದನೇ? ಜೀವದ ಬಗ್ಗೆ ಸಂಶಯ ತಾಳಿದ ಬ್ರಿಟಿಷರಿಂದಲೇ ಆದದ್ದು ಹಾಗೂ ಈ ಕಾರಣದಿಂದಾಗಿಯೇ ಜೀವವಿಮೆ ಬಂದಿದ್ದು. ಎಷ್ಟು ಮಂದಿ ಭಾರತೀಯರು ವಿಮೆ ಮಾಡಿಸಿ ಸತ್ತರು, ಎಷ್ಟು ಮಂದಿ ಭಾರತೀಯ ಹಡಗುಗಳು ವಿಮೆ ಮಾಡಿಸಿ ಆಳದ ಸಾಗರದಲ್ಲಿ ಮುಳುಗಿದವು ಎಂಬುದರ ಬಗ್ಗೆ ಯಾರಿಗೂ ಅಂಕಿ ಅಂಶ ಗೊತ್ತಿಲ್ಲ. ಈ ವಿಮಾ ಉದ್ಯಮವಿಲ್ಲದಿದ್ದಲ್ಲಿ ಭಾರತವು ಬ್ಲೇರ್ ಏನನ್ನು ಕೇಳುತ್ತಿದ್ದಾರೆಂಬುದರತ್ತ ಕ್ಷಣ ನೋಡಿ: 'ಭಾರತ ತನ್ನ ವಿಮಾ ಉದ್ಯಮವನ್ನು ಮುಕ್ತವಾಗಿಸಲಿ' ಸಾಮ್ರಾಜ್ಯಶಾಹಿಗಳ ಈ ಸಂಚು ಕ್ರಿಯಾ ಶೀಲವಾಯಿತು. ಅನೇಕ ಭಾರತೀಯರು, ಉದ್ಯಮಗಳನ್ನೊಳಗೊಂಡಂತೆ ವಿಮಾ ಪಾಲಿಸಿಗೆ ನುಗ್ಗುತ್ತಾರೆ. ಸಾಮ್ರಾಜ್ಯಶಾಹಿಗಳು ಭಾರತವನ್ನು ಮತ್ತಷ್ಟು ಸುಲಿಯುತ್ತಾರೆ.

ಸಾಮ್ರಾಜ್ಯಶಾಹಿಗಳ ಸಂಚು ಡೆಲ್ಲಿಯ ಮುಗ್ಧ ಹುಡುಗಿಯರನ್ನು ದಡ್ಡರನ್ನಾಗಿಸಿತು. ಅವರೆಲ್ಲ ತಮ್ಮ ಕಾಲುಗಳನ್ನು ನಿರ್ಭಿಡೆಯಿಂದ ತೆರೆದು ತೋರಿದರು. ಅವರೆಲ್ಲ ಈ ಕ್ರಿಯೆಯಲ್ಲಿ ಹೆಮ್ಮೆ

(೪೪ನೇ ಪುಟಕ್ಕೆ)

ಒಳಸ್ಫೋಟ

ದೇಶದ ಯುವ ಸಮುದಾಯವನ್ನು ಅಮಲಿನಂತೆ ಕ್ರಿಕೆಟ್ ಹಾಗೂ ಪೆಪ್ಸಿ ಕೋಲಾಗಳು ಆವರಿಸಿದ್ದರೆ ಮಧ್ಯಮ ವರ್ಗವನ್ನು, 'ದೇವರು' ಹಿಡಿದುಕೊಂಡಿದೆ. ಸದ್ಯ ಎಲ್ಲೆಲ್ಲೂ ಸಾಮಾಜಿಕ ಸಮಸ್ಯೆಗಳಿಗಿಂತಲೂ ಹೆಚ್ಚು ಚರ್ಚಿಸಲ್ಪಡುತ್ತಿರುವುದು ಕ್ರಿಕೆಟ್ ಒಂದೇ. ಕ್ರಿಕೆಟ್ ಎಂಬುದನ್ನು ಕ್ರೀಡೆಯಾಗಿ ಭಾವಿಸದೆ ಅದನ್ನೊಂದು ಜೂಜಿನಂತೆ ಪರಿಗಣಿಸಿರುವುದು ಈ ಸಮೂಹ ಸನ್ನಿಗೆ ಕಾರಣವಾಗಿದೆ. ಒಂದೆಡೆ ಪೆಪ್ಸಿ,ಕೋಲಾ, ಕ್ರಿಕೆಟ್‌ಗಳು ದೇಶದ ಯುವಸಮುದಾಯವನ್ನು ಮಾನಸಿಕ ವಿಕಲ್ಪಕ್ಕೀಳಿಸುತ್ತಿದ್ದರೆ ಇನ್ನೊಂದೆಡೆ ಗುಡಿಗೋಪುರ, ಚರ್ಚು, ಮಸೀದಿಗಳು ಜನತೆಯನ್ನು ದಿಕ್ಕು ತಪ್ಪಿಸುತ್ತಿವೆ.

❍ ಎಂ. ವೆಂಕಟಸ್ವಾಮಿ



ಕ್ರಿಕೆಟ್, ಕೋಲಾ, ದೇವಾಲಯ

ಮೇಲು ನೋಟಕ್ಕೆ ಕ್ರಿಕೆಟ್, ಕೋಲಾ, ದೇವಾಲಯಗಳ ನಡುವೆ, ಯಾವುದೇ ಸಂಬಂಧ ಇರುವಂತೆ ತೋರುವುದಿಲ್ಲ. ಆದರೆ ಈ ಮೂರು ವಿಷಯಗಳು ಇಂದಿನ ಯುವ ಪೀಳಿಗೆಯನ್ನು ಅಧೋಗತಿಗೆ ಇಳಿಸಿವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಹೌದು ! ಇದು ಅಕ್ಷರಶಃ ನಿಜ. ಇದಕ್ಕೆಲ್ಲ ಕಾರಣ ರಾಜಕಾರಣಿಗಳು, ಬಹುರಾಷ್ಟ್ರೀಯ ಕಂಪನಿಗಳು, ಮತೀಯವಾದಿಗಳು, ಟಿವಿ ಮಾಧ್ಯಮಗಳು, ಸಿನಿಮಾ ನಟರು, ರೂಪದರ್ಶಿಗಳು ಮತ್ತು ಕ್ರಿಕೆಟ್ ಆಟಗಾರರು.

ಬಹುರಾಷ್ಟ್ರೀಯ ಕಂಪನಿಗಳು ಒಂದು ಕಡೆ ಕ್ರಿಕೆಟ್, ಕೋಕಾ ಕೋಲಾ ಇನ್ನಿತರ ತಂಪು ಪಾನೀಯಗಳ ಅಫೀಮನ್ನು ಯುವ ಜನರ ತಲೆಗೆ ಏರಿಸಿದ್ದರೆ, ಇನ್ನೊಂದು ಕಡೆ ಹಿಂದು, ಮುಸ್ಲಿಮ್, ಕ್ರೈಸ್ತ ಮತೀಯವಾದಿಗಳು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ರಾತ್ರೋರಾತ್ರಿ ರಸ್ತೆ, ಬೀದಿ, ಊರು, ಗಲ್ಲಿ, ಪಾರ್ಕು, ಕಛೇರಿ, ಶಾಲೆ, ಕಾಲೇಜುಗಳ ಆವರಣಗಳಲ್ಲಿ ಗುಡಿ ಮಸೀದಿ ಇಗರ್ಜಿಗಳನ್ನು ನಿರ್ಮಿಸುತ್ತ ಜನರ ನಡುವೆ ಮತೀಯವಾದವನ್ನು ವಿಷದ ಮರಗಳಂತೆ ಬೆಳೆಸುತ್ತಿದ್ದಾರೆ.

ಕ್ರಿಕೆಟ್ ಎಂಬ ಪರದೇಶಿ ಆಟ ಇಂದು ಇಡೀ ದೇಶವನ್ನೆ ವಿಷ ಸರ್ಪದಂತೆ ವ್ಯಾಪಿಸಿಕೊಂಡು ಬಿಟ್ಟಿದೆ. ಐಎಎಸ್ ಅಧಿಕಾರಿಗಳು, ನ್ಯಾಯವಾದಿಗಳು, ಸಿನಿಮಾ ನಟರು, ರಾಜಕಾರಣಿಗಳು, ಬಡವರು, ಶ್ರೀಮಂತರು, ಮಕ್ಕಳು, ಮಹಿಳೆಯರು, ಅಬಾಲ, ವೃದ್ಧರು ಎಲ್ಲರೂ ಕ್ರಿಕೆಟ್ ಪ್ರಿಯರೆ. ಮನೆ, ಕಛೇರಿ, ಅಂಗಡಿ, ಬಸ್ಸು ರೈಲು, ವಿಮಾನ ನಿಲ್ದಾಣಗಳು..... ಎಲ್ಲಿ ನೋಡಿದರೂ ಕ್ರಿಕೆಟಾಯಣವೆ. ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ ಎಲ್ಲಾ ಬೂಟಾಟಿಕೆ ಪದಾರ್ಥಗಳು ಕ್ರಿಕೆಟ್ ಆಟದ ಜೊತೆಗೆ ಪ್ರದರ್ಶಿತಗೊಳ್ಳುತ್ತವೆ. ಒಂದು ರೀತಿಯಲ್ಲಿ ಕ್ರಿಕೆಟ್ ಆಟ ಬಹುರಾಷ್ಟ್ರೀಯ ಕಂಪನಿಗಳ ಅಂತರರಾಷ್ಟ್ರೀಯ ಜೂಜಿನ ಅಡ್ಡೆಯಾಗಿ ನಿರ್ಮಾಣವಾಗಿದೆ. ಕ್ರಿಕೆಟ್‌ನಿಂದ ಮನೆಗಳಲ್ಲಿ, ಕಛೇರಿಗಳಲ್ಲಿ ಬೀದಿಗಳಲ್ಲಿ ಜಗಳ ಮತ್ತು ಜೂಜು ಒಟ್ಟಿಗೇ ನಡೆಯುತ್ತಿದೆ. ಮುಂದೊಂದು ದಿನ ದೇಶ ದೇಶಗಳ ನಡುವೆ ಯುದ್ಧಗಳು ನಡೆದರೂ ಆಶ್ಚರ್ಯ ಪಡಬೇಕಾಗಿಲ್ಲ.

ಇಡೀ ದಿನ ಜನರು ತಮ್ಮ ಕೆಲಸಗಳನ್ನೆಲ್ಲ ಬಿಟ್ಟು ಬೆಳಿಗ್ಗೆಯಿಂದ ರಾತ್ರಿಯವರೆಗೆ ಕ್ರಿಕೆಟ್ ನೋಡುವುದರಿಂದ ದೇಶದಲ್ಲಿ ಎಷ್ಟು ವಿದ್ಯುತ್ ಪೋಲಾಗಬಹುದು? ಎಷ್ಟು ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಗೆ ಚಕ್ಕರ್ ಹೊಡೆಯಬಹುದು? ಕಛೇರಿ ಕಾರ್ಖಾನೆಗಳು ಎಷ್ಟು ನಷ್ಟ ಅನುಭವಿಸಬಹುದು ? ಲೆಕ್ಕ ಹಾಕಿ ನೋಡಿದರೆ ಗಾಬರಿಯಾಗುತ್ತದೆ. ಈ ದೇಶ ನೂರಾರು ವರ್ಷಗಳಿಂದ ಹಿಂದುಳಿಯುತ್ತ ಬಂದಿರುವುದಕ್ಕೆ ಇಂತಹ ಜೂಜಾಟಗಳೆ ಕಾರಣ ಎನ್ನುವುದು ಸತ್ಯ ಸಂಗತಿಯಾಗಿದೆ.

ಕೆಲವು ಜನಾಂಗಗಳು ನೇಗಿಲು ಮುಟ್ಟದೆ ಮಣ್ಣಿನ ಬಗ್ಗೆ ಅಸಹ್ಯ ತೋರಿಸುತ್ತ, ಹೊಲದಲ್ಲಿ ಬೆವರು ಸುರಿಸದೆ ಶತಮಾನಗಳಿಂದಲೂ ಗುಡಿಗಳಲ್ಲಿ ಸೇರಿಕೊಂಡು ಮಣ ಮಣ ಮಂತ್ರಗಳನ್ನು ಹೇಳುತ್ತ ದೇಶಕ್ಕೆ ಮೋಸ ಮಾಡುತ್ತಿದ್ದರೆ ಇನ್ನಷ್ಟು ಜನಾಂಗಗಳು ಮೋಸದ ವ್ಯಾಪಾರವೆ ತಮ್ಮ ಕಾಯಕವೆಂದು ದುಡಿಯುವವರ ಬೆವರು ಶಕ್ತಿಯನ್ನು ಗುಡ್ಡೆ ಹಾಕಿಕೊಳ್ಳುತ್ತ ಆಗಾಧವಾಗಿ ಬೆಳೆದು ನಿಂತಿವೆ. ಇವರಿಗೆಲ್ಲ ಕ್ರಿಕೆಟ್ ನೋಡುತ್ತಾ, ಕೋಕೋಕೋಲಾ ಕುಡಿಯುತ್ತ ಗುಡಿಗಳನ್ನು ಕಟ್ಟಲು ಚಂದಾ ನೀಡುವುದೆಂದರೆ ಎಲ್ಲಿಲ್ಲದ ಉತ್ಸಾಹ.

ನಮ್ಮ ದೇಶದ ಒಳಕ್ಕೆ ಜಾಗತೀಕರಣವೆಂಬ ಭೂತ ನುಸುಳಿ ಕುಳಿತು ನಾಲ್ಕಾರು ಶತಮಾನಗಳೇ ಕಳೆದುಹೋಗಿವೆ. ಬ್ರಿಟಿಷರು, ಡಚ್ಚರು, ಪ್ರೆಂಚರು, ಪೋರ್ಚುಗೀಸರು ಎಲ್ಲರೂ ಈ ದೇಶವನ್ನು ದೋಚಿದವರೆ. ಅವರೆಲ್ಲ ಈ ದೇಶವನ್ನು ದೋಚುವಾಗ ಸಹಾಯಕ್ಕೆ ನಿಂತವರೂ ನಮ್ಮ ದೇಶದ ಮೇಲ್ವರ್ಗದವರೆ. ಅದು ಅಂದಿನಿಂದ ಬೆಳೆಯುತ್ತಾ ಬಂದು ಈಗ ಜಾಗತೀಕರಣವೆಂಬ ರೂಪವನ್ನು ಪಡೆದುಕೊಂಡಿದೆ. ಈ ಮೇಲ್ವರ್ಗದ ಜನ ಎಲ್ಲಾ ದೇಶಗಳಲ್ಲೂ ಹರಡಿಕೊಂಡು ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಆಯಕಟ್ಟು ಸ್ಥಳಗಳಲ್ಲಿ ನುಸುಳಿ ಕುಳಿತುಬಿಟ್ಟಿದ್ದಾರೆ. ವಿಜ್ಞಾನ, ತಂತ್ರಜ್ಞಾನ, ವ್ಯಾಪಾರ, ಕಂಪ್ಯೂಟರ್, ಟಿವಿ ಮಾಧ್ಯಮಗಳನ್ನು ಸುತ್ತುವರಿದು ಬಿಟ್ಟಿದ್ದಾರೆ. ಜೊತೆಗೆ ಎಲ್ಲೆಲ್ಲೂ ದೇವಾಲಯಗಳನ್ನು ಕಟ್ಟಿಸುತ್ತಿದ್ದಾರೆ.

ಜಾಗತೀಕರಣದ ಅಮಲು ದೂರದರ್ಶನ, ಕಂಪ್ಯೂಟರ್, ಇಂಟರ್‌ನೆಟ್ ಮತ್ತು ಮೊಬೈಲ್‌ಗಳ ಮೂಲಕ ಹಳ್ಳಿ ಹಳ್ಳಿಗಳನ್ನೂ ವ್ಯಾಪಿಸಿಕೊಂಡುಬಿಟ್ಟಿದೆ. ಬಹುರಾಷ್ಟ್ರೀಯ ಕಂಪನಿಗಳು ದೂರದರ್ಶನದ ಮೂಲಕ ತಿಪ್ಪೆಗೆ ಎಸೆಯುವ ಎಲ್ಲಾ ವಸ್ತು, ಪದಾರ್ಥಗಳನ್ನು ನಗ್ನ ರೂಪದರ್ಶಿಯರ ಮೂಲಕ ಪ್ರದರ್ಶಿಸುತ್ತ ಇಡೀ ದೇಶವನ್ನೇ ಕೊಳ್ಳೆ

ಹೊಡೆಯುತ್ತಿದ್ದಾರೆ. ನಮ್ಮ ಕೆರೆ ಬಾವಿಯ ನೀರನ್ನು ನಮ್ಮ ಯುವಕ ಯುವತಿಯರಿಂದಲೇ ಬಾಟ್ಲಿಂಗ್ ಮಾಡಿಸಿ ನಮಗೇ ಮಾರುತ್ತಿದ್ದಾರೆ. ನಮ್ಮ ಹುಣಸೇಹಣ್ಣು, ಬಸುಮತಿ, ಭತ್ತ ಮಾವು, ಬೇವು ಅವರ ಪೇಟೆಂಟ್ ಎಂಬ ಮೋಸದ ಬಲೆಗೆ ಸಿಲುಕಿ ನಮ್ಮಿಂದ ದೂರವಾಗುತ್ತಿವೆ. ನಮ್ಮ ರೈತ ಹಸು ಎಮ್ಮೆಗಳಿಗೆ ಹುಲ್ಲು ಹಾಕಿ ಪೋಷಿಸಿ ಕಷ್ಟ ಪಟ್ಟು ಹಿಂಡುವ ಹಾಲಿನ ಬೆಲೆಗಿಂತ ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ ಮಿನರೆಲ್ ವಾಟರ್‌ಅನ್ನು ಹೆಚ್ಚು ಬೆಲೆಗೆ ಕೊಂಡು ಕುಡಿಯುವ ಮಟ್ಟಕ್ಕೆ ನಾವು ಮುಂದುವರಿದುಬಿಟ್ಟಿದ್ದೇವೆ.

ಇದರ ಜೊತೆಗೆ ಕುಡಿಯಲು ನೀರು, ತಿನ್ನಲು ಹಿಟ್ಟು, ತೊಡಲು ಬಟ್ಟೆ ಇಲ್ಲದ ಹಳ್ಳಿಯ ಚಿಣ್ಣರು ಎಲ್ಲಾ ದೇಶೀಯ ಆಟಗಳನ್ನು ಬಿಟ್ಟು ಕೈಗೆ ಸಿಕ್ಕಿದ ಕಲ್ಲು, ಕೋಲುಗಳನ್ನು ಬಾಲು ಬ್ಯಾಟ್ ಮಾಡಿಕೊಂಡು ಕ್ರಿಕೆಟ್ ಆಡಲು ಶುರು ಹಚ್ಚಿಕೊಂಡಿದ್ದಾರೆ. ಹಳ್ಳಿಯ ಮಕ್ಕಳು, ಮಹಿಳೆಯರು, ವೃದ್ಧರು, ದೂರದರ್ಶನದ ಮುಂದೆ ಕುಳಿತು 'ಆ ಫೋರ್.... ಆ ಸಿಕ್ಸರ್... ಎಲ್‌ಬಿಡಬ್ಲ್ಯೂ...ಬೋಲ್ಡ್ ನನ್ನ ಮಗ... ಅಂಪೈರ್ ಔಟ್ ಕೊಟ್ಟುಬಿಟ್ಟ..... ಇಂಡಿಯಾಗೆ ಮೋಸ ಮಾಡಿಬಿಟ್ಟ' ಎಂದು ಅಂಗಲಾಚುತ್ತಿದ್ದಾರೆ. ಅದೇ ಭಾರತ ಪಾಕಿಸ್ತಾನದ ಗಡಿಗಳಲ್ಲಿ ನೂರಾರು ಯೋಧರು, ಅಮಾಯಕರು, ಸತ್ತರೆ ಅದು ಸುದ್ದಿಯಾಗುವುದೇ ಇಲ್ಲ ಆದರೆ ಸಚಿನ್, ದ್ರಾವಿಡ್ ಔಟ್ ಆಗುವುದು ಮಾತ್ರ ಟಿವಿ ಪತ್ರಿಕೆಗಳ ಮೂಲಕ ಜನರ ನಡುವೆ ದೊಡ್ಡಸುದ್ದಿಯಾಗುತ್ತದೆ. ಇವರಿಗೆಲ್ಲ ಏನಾಗುತ್ತಿದೆ ಈ ದೇಶ ಎತ್ತ ಸಾಗುತ್ತಿದೆ, ಎನ್ನುವುದನ್ನು ಈಗ ಎಲ್ಲರೂ ಗಂಭೀರವಾಗಿ ಯೋಚಿಸಬೇಕಿದೆ. ಇನ್ನು ಇಷ್ಟೆಲ್ಲ ಅಭಿಮಾನದಿಂದ ಪ್ರಾಣವೇ ಬಾಯಿಗೆ ಬಂದಂತೆ ಬೆಕ್ಕಸಬೆರಗಾಗಿ ಕ್ರಿಕೆಟ್ ನೋಡುವ ಅಭಿಮಾನಿಗಳ ಮುಂದೆ ನಮ್ಮ ಕ್ರಿಕೆಟ್ ಆಟಗಾರರು ಮೇಲು ನೋಟಕ್ಕೆ ದೇಶಕ್ಕೆ ಪ್ರಾಣವನ್ನೇ ಕೊಟ್ಟಂತೆ ನಾಟಕವಾಡಿದರೂ ಒಳಗೊಳಗೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು ಮಾನ ಮರ್ಯಾದೆ ಎಲ್ಲವನ್ನೂ ಹಣಕ್ಕಾಗಿ ಅಡವಿಟ್ಟು ಬಿಡುತ್ತಾರೆ. ಇವರಿಗೆ ಕ್ರಿಕೆಟ್‌ನಿಂದ, ಕಂಪನಿಗಳಿಂದ ದೊರಕುವ ಹಣ ಸಾಕಾಗುವುದಿಲ್ಲವೆ?

ಈ ಕ್ರಿಕೆಟ್ ಕಲಿಗಳು ದೇಶದ ಅಭಿವೃದ್ಧಿಗೆ ಎಂದಾದರೂ ಒಂದು ಚುಕ್ಕಾಸು ಬಿಚ್ಚಿದ್ದಾರೆಯೆ..? ಇವರ ನಡುವೆ ಬ್ಯಾಡ್‌ಮಿಂಟನ್ ಪಟು ಗೋಪಿಚಂದ್ ತಂಪು ಪಾನೀಯಗಳ ಜಾಹೀರಾತಿನಲ್ಲಿ ನಾನು ಕಾಣಿಸಿಕೊಳ್ಳುವುದಿಲ್ಲವೆಂದು, ಅವುಗಳನ್ನು ಕುಡಿಯುವುದರಿಂದ ಯುವ ಪೀಳಿಗೆ ತೊಂದರೆಗೊಳಗಾಗುತ್ತದೆ ಎಂದು ಹೇಳಿ ಮಾನವತೆ ಮೆರೆದರು. ಈ ಗೋಪಿಚಂದ್‌ನಂಥವರೇ ನಮ್ಮ ನಡುವಿನ ನಿಜವಾದ ಹೀರೋಗಳು.

ಕ್ರಿಕೆಟ್ ಆಟಗಾರರನ್ನು, ಸಿನಿಮಾ ನಟರನ್ನು ನಮ್ಮ ಯುವ ಜನತೆ ಕೋಲಾ ಮಾಡಲ್‌ಗಳೆಂದು ತಿಳಿದುಕೊಂಡಿರುವುದು ಈ ದೇಶದ ದುರಂತವಾಗಿದೆ. ಕ್ರಿಕೆಟ್ ಎಂಬ ಕಲಿಯುಗದ ಜೂಜಿನ ಮೂಲಕ ದೇಶವನ್ನೇ ದೋಚುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು, ರಾಜಕಾರಣಿಗಳು, ಸಿನಿಮಾ ನಟರು, ಕ್ರಿಕೆಟ್ ಆಟಗಾರರು ದೇಶವನ್ನು ನರಕವನ್ನಾಗಿ ಮಾರ್ಪಡಿಸುತ್ತಿದ್ದಾರೆ. ನಮ್ಮ ದೇಶ ಪ್ರಪಂಚದ ಕಣ್ಣಲ್ಲಿ ಈಗಾಗಲೆ ಏಯ್ಡ್ಸ್, ಮಧುಮೇಹ, ರಕ್ತದೊತ್ತಡ, ಭಿಕ್ಷುಕರು

ಕೋಕೊ ಕೋಲಾ ಮತ್ತಿತರ ಬಹುರಾಷ್ಟ್ರೀಯ ಕಂಪನಿಗಳು ಪ್ರಪಂಚದಾದ್ಯಂತ ಯುವ ಪೀಳಿಗೆಯನ್ನು ಯಾವ ಪರಿ ಹದಗೆಡಿಸಿಬಿಟ್ಟಿವೆಯೆಂದರೆ ಯುವ ಜನತೆ ಈಗ ಅವರ ಪೋಷಕರು ಮತ್ತು ಅಧ್ಯಾಪಕರ ಮಾತುಗಳನ್ನು ಕೇಳುವ ಪರಿಸ್ಥಿತಿಯಲ್ಲಿಲ್ಲ, ಯುವ ಪೀಳಿಗೆ ಎಲ್ಲಾ ರೀತಿಯಲ್ಲೂ ಪ್ರಪಂಚದಾದ್ಯಂತ ಎಕ್ಕುಟ್ಟಿ ಹೋಗಿದೆ. ನಾನು ಇತ್ತೀಚೆಗೆ ದೆಹಲಿಯಿಂದ ಸಿಮ್ಲಾಗೆ ಬಸ್ಸಿನಲ್ಲಿ ಹೋಗುತ್ತಿದ್ದಾಗ ಬುಡಕಟ್ಟು ಜನಾಂಗಕ್ಕೆ ಸೇರಿದ ಯುವ ದಂಪತಿಗಳಿಬ್ಬರು ಅದೇ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು. ಅವರು ಒಳ್ಳೆ ಬಟ್ಟೆಗಳನ್ನೂ ಸಹ ಧರಿಸಿರಲಿಲ್ಲ, ಆದರೆ ತಮ್ಮ ಪುಟ್ಟ ಮಗುವನ್ನು ಮಡಿಲಿನಲ್ಲಿ ಕೂರಿಸಿಕೊಂಡು ಪ್ರೀತಿಯಿಂದ ಕೋಕಾ ಕೋಲಾ ಕುಡಿಸುತ್ತಿದ್ದರು. ಬಸ್ಸಿನ ಹೊರಗೆ 'ಕೇವಲ ಹತ್ತು ರೂಪಾಯಿಗಳಿಗೆ ಒಂದು ಕಿಲೋ ಆ್ಯಪಲ್..... ಆ್ಯಪಲ್' ಎಂದು ಕೂಗುತ್ತಿದ್ದ ಹುಡುಗನ ಕಡೆಗೆ ಅವರು ಕಣ್ಣೆತ್ತಿಯೂ ನೋಡಲಿಲ್ಲ.

ಮತ್ತು ಅಂಧರ ದೊಡ್ಡ ನರಕವಾಗಿದೆ. ನಿರುದ್ಯೋಗ ಬಡತನ ನಿರಕ್ಷರಸ್ಥರ ದೊಡ್ಡ ದೇಶ ಎನ್ನುವ ಪಟ್ಟವನ್ನು ಯಾವಾಗಲೊ ಪಡೆದುಕೊಂಡು ಬಿಟ್ಟಿದೆ.

ಇನ್ನು ಕೋಕೋ ಕೋಲಾ ಇನ್ನಿತರ ತಂಪು ಪಾನಿಯಗಳ ಬಗ್ಗೆ ಹೇಳಬೇಕೆಂದರೆ ಕೇವಲ ಬೂಟಾಟಿಕೆಯಿಂದಲೇ ಯಾವ ಬಂಡವಾಳವೂ ಇಲ್ಲದೆ ಪ್ರಪಂಚದಾದ್ಯಂತ ಯುವ ಜನತೆಯನ್ನು ಹೇಗೆ ದಾರಿ ತಪ್ಪಿಸಬಹುದು ಮತ್ತು ಹಣವನ್ನು ಹೇಗೆ ಕೊಳ್ಳೆ ಹೊಡೆಯಬಹುದು ಎನ್ನುವುದಕ್ಕೆ ಇದು ಒಳ್ಳೆಯ ಉದಾಹರಣೆಯಾಗಿದೆ. ಅದರ ಇನ್ನೊಂದು ಮುಖವೆ ಮಿನರಲ್ ವಾಟರ್ ಎಂಬ ಮಾಯಾಜಾಲ. ಒಂದು ಸಭೆಯಲ್ಲಿ ನಾನು ಮಿನರಲ್ ವಾಟರ್ ಬಗ್ಗೆ ಮಾತನಾಡಿದಾಗ ಅಲ್ಲಿದ್ದ ಏಜೆಂಟ್ ಒಬ್ಬ ನನ್ನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿವೆ'ಏನ್ ಸರ್.. ಮಿನರಲ್ ವಾಟರ್ ಬಗ್ಗೆ ಅಷ್ಟೊಂದು ಸಲೀಸಾಗಿ ಮಾತನಾಡಿಬಿಟ್ರಿ..? ನಾವು ನೀರ್ನ ಆಪ್ಟಿಯಮ್, ಝೀರೊ ಬ್ಯಾಕ್ಟೀರಿಯಾಗೆ ತರಲು ಎಷ್ಟೊಂದು ಕಷ್ಟ ಪಡ್ತೀವಿ ಅನ್ನೋದು ನಿಮ್ಗೆ ಗೊತ್ತ..?' ಎಂದು ನನ್ನ ಮೇಲೆ ಹರಿಹಾಯ್ದುಬಿಟ್ಟ

ಪ್ರಸ್ತುತ ನಗರ ಪಟ್ಟಣಗಳಲ್ಲಿ ವಾಸಿಸುವ ಮಧ್ಯಮವರ್ಗದ ಜನರೂ ಸಹ ಅಪರೂಪಕ್ಕೆ ತಮ್ಮ ಹಳ್ಳಿಗಳ ಕಡೆಗೆ ಹೋದರೆ ಮಿನರಲ್ ಬಾಟಲುಗಳ ಜೊತೆಗೆ ಹೋಗುತ್ತಾರೆ. ಆಗ ಇಡೀ ಹಳ್ಳಿಯೇ ಅವರ ಕಡೆಗೆ ನೋಡಿ ಗುಟುಕರಿಸುತ್ತದೆ. ಇಷ್ಟಕ್ಕೂ ಈ ಮಿನರಲ್ ವಾಟರ್ ಯಾವಾಗ ಬಾಟ್ಲಿಗೆ ತುಂಬಿದ್ದು....? ಅದಕ್ಕೆ ನಿಜವಾಗಿ ಬೀಳುವ ಖರ್ಚೆಷ್ಟು? ಆ ನೀರು ನಿಜವಾಗಿಯೂ ಕುಡಿಯಲು ಯೋಗ್ಯವೇ? ಎನ್ನುವುದನ್ನು ಯಾರೂ ಯೋಚಿಸುತ್ತಿಲ್ಲ.

ಈ ಕೋಕೊ ಕೋಲಾ ಮತ್ತಿತರ ಬಹುರಾಷ್ಟ್ರೀಯ ಕಂಪನಿಗಳು ಪ್ರಪಂಚದಾದ್ಯಂತ ಯುವ ಪೀಳಿಗೆಯನ್ನು ಯಾವ ಪರಿ ಹದಗೆಡಿಸಿಬಿಟ್ಟಿವೆಯೆಂದರೆ ಯುವ ಜನತೆ ಈಗ ಅವರ ಪೋಷಕರು ಮತ್ತು ಅಧ್ಯಾಪಕರ ಮಾತುಗಳನ್ನು ಕೇಳುವ ಪರಿಸ್ಥಿತಿಯಲ್ಲಿಲ್ಲ, ಯುವ ಪೀಳಿಗೆ ಎಲ್ಲಾ ರೀತಿಯಲ್ಲೂ ಪ್ರಪಂಚದಾದ್ಯಂತ ಎಕ್ಕುಟ್ಟಿ ಹೋಗಿದೆ.

ನಾನು ಇತ್ತೀಚೆಗೆ ದೆಹಲಿಯಿಂದ ಸಿಮ್ಲಾಗೆ ಬಸ್ಸಿನಲ್ಲಿ ಹೋಗುತ್ತಿದ್ದಾಗ ಬುಡಕಟ್ಟು ಜನಾಂಗಕ್ಕೆ ಸೇರಿದ ಯುವ ದಂಪತಿಗಳಿಬ್ಬರು ಅದೇ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು. ಅವರು ಒಳ್ಳೆ ಬಟ್ಟೆಗಳನ್ನೂ ಸಹ ಧರಿಸಿರಲಿಲ್ಲ, ಆದರೆ ತಮ್ಮ ಪುಟ್ಟಮಗುವನ್ನು ಮಡಿಲಿನಲ್ಲಿ ಕೂರಿಸಿಕೊಂಡು ಪ್ರೀತಿಯಿಂದ ಕೋಕಾ ಕೋಲಾ ಕುಡಿಸುತ್ತಿದ್ದರು. ಬಸ್ಸಿನ ಹೊರಗೆ ಕೇವಲ 'ಹತ್ತು ರೂಪಾಯಿಗಳಿಗೆ ಒಂದು ಕಿಲೋ ಆ್ಯಪಲ್..... ಆ್ಯಪಲ್' ಎಂದು ಕೂಗುತ್ತಿದ್ದ ಹುಡುಗನ ಕಡೆಗೆ ಅವರು ಕಣ್ಣೆತ್ತಿಯೂ ನೋಡಲಿಲ್ಲ.

ಇನ್ನೊಂದು ಸಲ ನಾನು ಬೆಂಗಳೂರಿನಿಂದ ರಾಯಚೂರಿಗೆ ಪ್ರಯಾಣ ಮಾಡುತ್ತಿದ್ದಾಗ ತುಮಕೂರಿನ ಆಚೆಗೆ ರಾತ್ರಿ ಹನ್ನೊಂದು ಗಂಟೆಗೆ ಊಟ ತಿಂಡಿಗೆಂದು ಬಸ್ಸನ್ನು ನಿಲ್ಲಿಸಲಾಯಿತು. ಎಲ್ಲರೂ ಊಟ ತಿಂಡಿಗಳನ್ನು ತಿನ್ನುತ್ತಿದ್ದರೆ ಒಬ್ಬ ಯುವಕ ಒಂದು ಮೇಜಿನ ಮುಂದೆ ಕುಳಿತುಕೊಂಡು ಒಂದು ಕೈಯಲ್ಲಿ ಉದ್ದವಾದ ಕೋಕ್ ಬಾಟಲ್ ಅನ್ನು ಹಿಡಿದುಕೊಂಡು, ಇನ್ನೊಂದು ಕೈಯಲ್ಲಿ ದೊಡ್ಡದಾದ ಚಾಕ್‌ಲೇಟನ್ನು ನಂಜಿಕೊಳ್ಳುತ್ತಿದ್ದ. ಬಹುಶಃ ಅವನ ಅಂದಿನ ಊಟ ಅದೇ ಇರಬೇಕು. ಬರಕ್ಕೆ ಹೆಸರಾದ ರಾಯಚೂರು ಜಿಲ್ಲೆಯಲ್ಲಿ ಒಬ್ಬ ವಿದ್ಯಾರ್ಥಿ ಒಂದು ರಾತ್ರಿ ಎರಡು ಲೀಟರುಗಳ ಮೂರು ಕೋಕೊ ಕೋಲಾ ಬಾಟಲುಗಳನ್ನು ರಾತ್ರಿಯಲ್ಲಿ ಕುಡಿದು ಬೆಳಗ್ಗೆ ಸತ್ತು ಹೋಗಿದ್ದನಂತೆ. ಬಹುಶಃ ಅವನ ಹೊಟ್ಟೆಯಲ್ಲಿ ಗ್ಯಾಸ್ ತುಂಬಿಕೊಂಡು ಹೃದಯಾಘಾತಕ್ಕೆ ಒಳಗಾಗಿರಬೇಕೆಂದು ಗೆಳೆಯರು ಹೇಳಿದ್ದರು.

ಈ ತಂಪು ಪಾನೀಯಗಳಲ್ಲಿ ಒಂದಂಶ ಸಕ್ಕರೆ, ಕೃತಕ ಬಣ್ಣಗಳು, ಕೃತಕ ರಾಸಾಯನಿಕ ವಸ್ತುಗಳು ಮತ್ತು ಹೇರಳ ಕಾರ್ಬನ್ ಮಾನೋಕ್ಸೈಡ್ ಇರುತ್ತದೆ. ಇದು ಮನುಷ್ಯನ ದೇಹಕ್ಕೆ ಅತ್ಯಂತ ಅಪಾಯಕಾರಿ. ಆದರೆ ಇದೆ ಕಾರ್ಬನ್ ಮಾನೋಕ್ಸೈಡ್ ಎಲ್ಲಾ ತಂಪು ಪಾನೀಯಗಳ ಜೀವಾಳ. ತಂಪು ಪಾನೀಯಗಳ ಬಗ್ಗೆ ವಿಜ್ಞಾನಿಗಳು ಮತ್ತು ವೈದ್ಯರು ನಡೆಸಿದ ಸಂಶೋಧನೆಗಳ ಪರಿಣಾಮದಿಂದ ಕುಡಿಯುವವರ ದೇಹ ಮತ್ತು ಮನಸ್ಸಿನ ಮೇಲೆ ಏನೆಲ್ಲ ಪರಿಣಾಮಗಳು ಬೀಳುತ್ತವೆ ಎನ್ನುವುದರ ಬಗ್ಗೆ ವಿವರವಾಗಿ ಪ್ರಪಂಚದಾದ್ಯಂತ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಆದರೆ ಯುವ ಪೀಳಿಗೆಗೆ ಅದ್ಯಾವುದೂ ಕಾಣಿಸುವುದೇ ಇಲ್ಲ. ನಗ್ನ ರೂಪದರ್ಶಿಗಳು, ಸಿನಿಮಾ ನಟರು, ಕ್ರಿಕೆಟ್, ಆಟಗಾರರು, ದೂರದರ್ಶನದ ಮೂಲಕ ಇದನ್ನೆಲ್ಲ ಎಷ್ಟೊಂದು ಪರಿಣಾಮವಾಗಿ ತೋರಿಸುತ್ತಾರೆಂದರೆ ಅದೊಂದು ನಶೆಯಾಗಿ ಏರಿದೆ. ಕುಡಿತ, ಮಾದಕ ವಸ್ತುಗಳ ಸೇವನೆಯಂತೆ ಈ ತಂಪು ಪಾನೀಯಗಳ ಸೇವನೆ ಅವರ ಚಿತ್ತವನ್ನೇ ಕೆಡಿಸಿಬಿಟ್ಟಿದೆ.

(೪೬ನೇ ಪುಟಕ್ಕೆ)

ಜಿಜ್ಞಾಸೆ

ಶೋಷಿತರ ಸಾಮಾಜಿಕ ಅಸಮಾನತೆಯಷ್ಟೆ ಮುಖ್ಯ ಸಮಸ್ಯೆಯಾದ ಆರ್ಥಿಕ ಅಸಮಾನತೆಯನ್ನು ಅಂಬೇಡ್ಕರ್ ಮಾರ್ಕ್ಸ್‌ನ ಚಿಂತನೆಗಳಲ್ಲಿ ಹುಡುಕಿದರೆ ತಮ್ಮ ವೈಚಾರಿಕ ಆಲೋಚನೆಗಳಿಗೆ ಬುದ್ಧನತ್ತ ಮುಖ ಮಾಡುತ್ತಾರೆ. ಈ ನೆಲೆಯಲ್ಲಿ ನೋಡಿದಾಗ ಬುದ್ಧ ಹಾಗೂ ಮಾರ್ಕ್ಸ್ ಇಬ್ಬರ ದಾರಿಗಳು ಬೇರೆಯವೇ ಬಿಂದುಗಳಿಂದ ಆರಂಭಗೊಂಡರೂ ಅವು ಒಟ್ಟಿಗೇ ಮುಟ್ಟುವುದು ನೊಂದ ಸಮುದಾಯಗಳನ್ನು ಸಂತೈಸುವ ಒಂದೇ ಬಿಂದುವಿನಲ್ಲಿ ಎಂಬುದು ಅರಿವಾಗುತ್ತದೆ. ತಮ್ಮ ತಾತ್ವಿಕ ತಿಳುವಳಿಕೆಗಾಗಿ ಬುದ್ಧನನ್ನು ಆಶ್ರಯಿಸಿದ್ದ ಅಂಬೇಡ್ಕರ್ ತಮ್ಮ ಸಮುದಾಯಗಳ ಹೋರಾಟಗಳಿಗೆ ಮಾರ್ಕ್ಸ್‌ನ ಚಿಂತನೆಯನ್ನು ತರಲು ಯತ್ನಿಸಿದರು.

❍ ಶ್ರೀಶ ಉಡುಪ

ಅಂಬೇಡ್ಕರರನ್ನು ಬದುಕಿನುದ್ದಕ್ಕೂ ಹೆಚ್ಚು ಕಾಡಿದವರು ಬುದ್ಧ ಮತ್ತು ಮಾರ್ಕ್ಸ್ ಎಂದು ನನ್ನ ತಿಳುವಳಿಕೆ. ಪ್ರಾಯಶಃ ಅವರ ಒಳಹೊರಗು ಇವರೀರ್ವರಿಂದಲೇ ಆವರಿಸಿಕೊಂಡಿತ್ತು. ಅವರ ಅಂತರಂಗದ ಅಲೆಗಳನ್ನು ಬುದ್ಧ ಸಂವೇದಿಸುತ್ತಿದ್ದ. ಮಾರ್ಕ್ಸ್ ಅವರನ್ನು ಹೊರಗಿನಿಂದ ಚುಚ್ಚಿ ಕ್ರಿಯಾಶೀಲತೆಯನ್ನು ಪ್ರೇರೇಪಿಸುವ ಸೂಜಿಗಲ್ಲಾಗಿದ್ದ. ಸಮಾಜದಲ್ಲಿ ಕೆಡುಕುಗಳಿಗೆ ಉತ್ತರ ಹುಡುಕುತ್ತಿದ್ದ ಅಂಬೇಡ್ಕರ್ ಇವರಿಬ್ಬರನ್ನೂ ತೌಲನಿಕವಾಗಿ ಅಧ್ಯಯಿಸಿದ್ದಾರೆ. ಇಂದು ಕೆಲವು ಕಡೆ ಬಿಂಬಿಸಲಾಗುತ್ತಿರುವಂತೆ ಅವರೆಂದೂ ಮಾರ್ಕ್ಸ್‌ವಾದವನ್ನು ನಿರಾಕರಿಸಿರಲಿಲ್ಲ. ಹೀಗೆ ಹೇಳಿದರೆ ಅಂಬೇಡ್ಕರ್ ಮಠಾಧಿಪತಿಗಳಿಗೆ, ಕೆಲವು ಸ್ವಘೋಷಿತ ನಾಯಕರುಗಳ ಕಣ್ಣು ಕೆಂಪಾಗಬಹುದು. ಇದಕ್ಕೆ ಕಾರಣವನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿಲ್ಲ.

ಬುದ್ಧ ಮತ್ತು ಮಾರ್ಕ್ಸ್‌ರನ್ನು ಪರಸ್ಪರ ನಾಯಕ-ಖಳ ನಾಯಕರಾಗಿ ಕಾಣುತ್ತಿರುವವರು, ಅಂಬೇಡ್ಕರ್ ಮಾರ್ಕ್ಸ್‌ವಾದವನ್ನು ದ್ವೇಷಿಸುತ್ತಿದ್ದರೆಂದು ಘೋಷಿಸಿಕೊಳ್ಳುತ್ತಿರುವವರು, ತಮ್ಮನ್ನು ನಿಯಂತ್ರಿಸುವ ಲಾಲಸೆಗಳನ್ನು ಬದಿಗಿಟ್ಟು ಸ್ವಲ್ಪ ಯೋಚಿಸಬೇಕು. ದುರ್ಬಲ ವರ್ಗದ ಹಿತಕ್ಕಾಗಿಯೇ ಚಿಂತಿಸಿದ ಇಬ್ಬರ ಚಿಂತನೆಗಳು ಪರಸ್ಪರ ವಿರೋಧವಾಗಿರಲು ಸಾಧ್ಯವೇ ಎಂದು. ಹೀಗೆ ಮಾಡುವಾಗ ಅವರಿದ್ದ ಕಾಲವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ನಂತರವಷ್ಟೇ ಅಂಬೇಡ್ಕರ್, ಬುದ್ಧ ಮತ್ತು ಮಾರ್ಕ್ಸ್‌ರ ಕುರಿತಾದ ಟೀಕಾತ್ಮಕ ವಿಶ್ಲೇಷಣೆಯನ್ನು ನೋಡಬೇಕು.

ಅಂಬೇಡ್ಕರ್ ಕಂಡಂತೆ: ಮಾರ್ಕ್ಸ್ ಮತ್ತು ಬುದ್ಧ

ಭಾರತದಲ್ಲಿ ಸುಮಾರು ೧೯೨೦ರ ನಂತರ ಮೂರು ಚಳವಳಿಗಳನ್ನು ಇತಿಹಾಸ ದಾಖಲಿಸುತ್ತದೆ. ಒಂದು ಮಹಾತ್ಮ ಗಾಂಧೀಜಿಯ ನೇತೃತ್ವದ ಕಾಂಗ್ರೆಸ್‌ನ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಚಳವಳಿ. ಎರಡನೆಯದಾಗಿ ಅಂಬೇಡ್ಕರ್ ನೇತೃತ್ವದ ದಲಿತ-ಸಾಮಾಜಿಕ ಚಳವಳಿ ಮತ್ತು ಮೂರನೆಯದಾಗಿ ಕಮ್ಯುನಿಷ್ಟರ ಸಮತಾವಾದಿ ಚಳವಳಿ. ಈ ಮೂರು ಚಳವಳಿಗಳ ಅರ್ಥ, ಸ್ವರೂಪ ಮತ್ತು ವ್ಯಾಪ್ತಿಗಳನ್ನು ಗ್ರಹಿಸಿದರೆ ಅಂಬೇಡ್ಕರರ ಟೀಕಾತ್ಮಕ ವಿಶ್ಲೇಷಣೆಯ ಮೇಲಿನ ಇಂದಿನ ಭಿನ್ನ ವ್ಯಾಖ್ಯಾನ ಅರ್ಥ ಕಳೆದುಕೊಳ್ಳುತ್ತದೆ.

ಅಸ್ಪೃಶ್ಯತೆಯನ್ನೇ ಈ ಮೂರು ಚಳವಳಿಗಳ ದೃಷ್ಟಿ ಕೋನದಲ್ಲಿ ನೋಡೋಣ. ಗಾಂಧೀಜಿ ಯಾವತ್ತೂ ಪ್ರತಿಪಾದಿಸಿರುವುದು ಅಸ್ಪೃಶ್ಯತೆಯ ನಿವಾರಣೆ ಇತರರ ಕರ್ತವ್ಯ-ಅಂದರೆ ಸವರ್ಣೀಯರ ಕರ್ತವ್ಯ ಎಂದು. ಏಕೆಂದರೆ ಸವರ್ಣೀಯರೇ ಅಸ್ಪೃಶ್ಯತೆಯನ್ನು ಆಚರಣೆಗೆ ತಂದ ಮೇಲೆ ಅವರೇ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಇಲ್ಲಿ ಗಾಂಧೀಜಿಯವರದು ಎಂದಿನಂತೆಯೇ ಸೌಮ್ಯ ಮತ್ತು ಮಾನಸಿಕ ಬದಲಾವಣೆಗೆ ಒತ್ತು ನೀಡುವ ನಿಲುವು. ಅಸ್ಪೃಶ್ಯತೆಯ ನಿವಾರಣೆ ಗಾಂಧೀಜಿಗೆ ಪ್ರತಿಯೊಬ್ಬ ಹಿಂದೂವೂ ಪಾಲಿಸಲೇಬೇಕಾದ ವ್ರತವಾಗಿ ಕಾಣುತ್ತದೆ.

ಅವರದೇ ಮಾತಿನಲಿ; 'ಅಸ್ವಾದ ವ್ರತದಂತೆ ಇದೂ ಒಂದು ವ್ರತ...ಅಸ್ಪೃಶ್ಯತೆಯನ್ನು ಆಚರಿಸುವ ಧರ್ಮ ಒಂದು ಧರ್ಮವಲ್ಲ, ಅದು ಅಧರ್ಮ, ನಾಶಯೋಗ್ಯ...ಅಸ್ಪೃಶ್ಯತೆ ಹಿಂದೂ ಧರ್ಮದ ಅಂಗ ವಲ್ಲ, ಅದರೊಳಗೆ ಸೇರಿಕೊಂಡಿರುವ ಹಳಸು, ಕಳಂಕ, ಪಾಪ. ಅದನ್ನು ತೊಳೆದು ಹಾಕಬೇಕಾಗಿರುವುದು ಪ್ರತಿ ಯೊಬ್ಬ ಹಿಂದೂವಿನ ಪರಮ ಕರ್ತವ್ಯ ಎಂದು ಪ್ರಕಟಿಸುತ್ತಿದ್ದೇನೆ..ಅದಕ್ಕಾಗಿ ಪ್ರಾಯಶ್ಚಿತ್ತವೆಂದು ಸೇವಾಭಾವದಿಂದ ಅವರನ್ನು ಸ್ಪರ್ಶಿಸಿ, ಅದರಿಂದ ತಾನು ಪವಿತ್ರನಾದೆನೆಂದು ತಿಳಿದು ಅವರ ದುಃಖವನ್ನು ದೂರಮಾಡ ಬೇಕು.. ಅವರನ್ನು ತನ್ನವರೆಂದು ಕಂಡರೆ ಸಾಲದು, ತನ್ನಂತೆಯೇ ಕಾಣಬೇಕು'. (ಯರವಾಡಾ ಮಂದಿರದಿಂದ, ಪ. ೧೬೦-೧೬೧, ಆಯ್ದ ಕೃತಿಗಳು, ನಂ. ೩)

ಅಂಬೇಡ್ಕರ್ ಪ್ರತಿಪಾದಿಸಿರುವುದು ಅಸ್ಪೃಶ್ಯತಾ ನಿವಾರಣೆ, ಅಸ್ಪೃಶ್ಯರೆಂದು ಶೋಷಿಸಲ್ಪಟ್ಟ ಜನಾಂಗದ ಹಕ್ಕು ಎಂದು. ನಮ್ಮ ಹಕ್ಕನ್ನು ಇತರರು ಕೊಡಬೇಕೆಂದು ಕಾಯಬೇಕಾಗಿಲ್ಲ; ಹೋರಾಡಿ ಕಸಿದುಕೊಳ್ಳಬೇಕು; ಏಕೆಂದರೆ ಅದು ನಮ್ಮ ಹಕ್ಕು. ಗಾಂಧೀಜಿ ಸವರ್ಣೀಯರನ್ನು ಗಮನದಲ್ಲಿರಿಸಿ ಅಸ್ಪೃಶ್ಯತೆಯನ್ನು ವ್ಯಾಖ್ಯಾನಿಸಿದರೆ, ಅಂಬೇಡ್ಕರ್ ದಲಿತ ವರ್ಗವನ್ನು ಕಣ್ಣೆದುರು ನಿಲ್ಲಿಸಿಕೊಂಡಿದ್ದಾರೆ. ಅಸ್ಪೃಶ್ಯತೆಯ ವ್ಯವಸ್ಥೆಯನ್ನು ಕಿತ್ತು ಬಿಸುಟು ದಲಿತರು ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗಬೇಕು ಎಂಬುದು ಅಂಬೇಡ್ಕರರ ಆಶಯ. 'ನನಗೊಂದು ತಾಯಿ ನಾಡಿಲ್ಲ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ, ನಮ್ಮನ್ನು ಅತ್ಯಂತ ಕೀಳಾಗಿ ಕಾಣುವ ಈ ನಾಡನ್ನು ನನ್ನ ನಾಡೆಂದು, ಈ ಧರ್ಮವನ್ನು ನನ್ನ ಧರ್ಮವೆಂದು ಹೇಗೆ ಕರೆಯಲಿ? ಹೇಗೆ ಭಾವಿಸಲಿ? ಈ ವಿಷಯದಲ್ಲಿ ನನ್ನನ್ನು ದೇಶದ್ರೋಹಿಯೆಂದು ಕರೆಯುವುದಾದರೆ ಅದಕ್ಕೆ ನನ್ನ ವಿಷಾದವಿಲ್ಲ, ನಾನು ದೇಶದ್ರೋಹಿ ಎನ್ನುವುದಾದರೆ ಅದಕ್ಕೆ ಕಾರಣ ಈ ನಾಡು. ತುಳಿತಕ್ಕೊಳಗಾದ ನನ್ನ ಜನಕ್ಕೆ ಮಾನವೀಯ ಹಕ್ಕುಗಳನ್ನು ದೊರಕಿಸುವ ಹೋರಾಟದಲ್ಲಿ ದೇಶದ ಹಿತಕ್ಕೆ ತೊಂದರೆ ಎನ್ನುವುದಾದರೆ ಅದನ್ನು ದ್ರೋಹವೆಂದು ನಾನೆಂದೂ ಪರಿಗಣಿಸುವುದಿಲ್ಲ'. ಇದು ೧೯೩೧ರ ಆಗಸ್ಟ್ ೧೪ರಂದು ಅಂಬೇಡ್ಕರ್ ಗಾಂಧೀಜಿಗೆ ಹೇಳಿದ ಮಾತು. ಗಾಂಧೀಜಿಯವರದು ಸಮಚಿತ್ತ ಭಾವದಲ್ಲೂ ನೋವಿನಿಂದ ಪ್ರಕಟಗೊಂಡ ಮಾತುಗಳಾದರೆ ಇವು ಶತಶತಮಾನಗಳ ಕಾಲ ಮಡುಗಟ್ಟಿದ್ದ ಅವಮಾನ, ನೋವುಗಳು ಹೊರಹೊಮ್ಮಿದ ಆಕ್ರೋಶಿತ ನುಡಿಗಳು ಎಂಬುದನ್ನು ಇಲ್ಲಿ ಗಮನಿಸಿಕೊಳ್ಳಬೇಕು.

ಆದರೆ ಮಾರ್ಕ್ಸ್‌ವಾದ ಸಮಸ್ಯೆಯನ್ನು ಈ ಎರಡೂ ನೆಲೆಗಳಲ್ಲಿ ಪರಿಶೀಲಿಸುತ್ತದೆ. ಶೋಷಕರು ಹೇಗೆ ಮತ್ತು ಯಾಕಾಗಿ ಶೋಷಿಸುತ್ತಿದ್ದಾರೆ; ಶೋಷಿತರು ಹೇಗೆ ಮತ್ತು ಯಾಕಾಗಿ ಶೋಷಿಸಲ್ಪಡುತ್ತಿದ್ದಾರೆ; ಆದಾಗ್ಯೂ ಇವರ ನಡುವಿರುವ ಪೂರಕತೆ, ಅಂತರ್‌ಸಂಬಂಧಗಳೇನು ಎನ್ನುವುದರ ಚಿತ್ರಣವನ್ನು ಸಿದ್ಧಪಡಿಸಿಕೊಂಡಾಗ ಸಮಸ್ಯೆಯ ಸ್ವರೂಪ ಸ್ಪಷ್ಟವಾಗುತ್ತದೆ. ಇದು ಏಕೆ ಸಾಧ್ಯವಾಗುತ್ತದೆಯೆಂದರೆ ಮಾರ್ಕ್ಸ್‌ವಾದ ಮೂಲಭೂತವಾಗಿ ಹೊಂದಿರುವುದು ಆರ್ಥಿಕ ದೃಷ್ಟಿಕೋನವನ್ನು. ಅರ್ಥ ವ್ಯವಸ್ಥೆ ಯಾವತ್ತೂ ಏಕಮುಖಿಯಾಗಿರಲು ಸಾಧ್ಯವಿಲ್ಲ, ಅಂದರೆ ಅಲ್ಲಿ ಉತ್ಪಾದಕರಿದ್ದಲ್ಲಿ ಗ್ರಾಹಕರೂ ಇರುತ್ತಾರೆ; ಬೇಡಿಕೆ ಇದ್ದಲ್ಲಿ ಪೂರೈಕೆಯೂ ಇರುತ್ತದೆ; ಲಾಭ ನಷ್ಟ ಗಳೂ ಇವೆ. ಇಲ್ಲಿ ಸಮಸ್ಯೆಯ ತೀವ್ರತೆಯನ್ನು ತಿಳಿಯಲು ಅಂಕಿ ಅಂಶಗಳೂ ನೆರವಾಗುತ್ತವೆ. ಹೀಗಾಗಿ ಎರಡೂ ನೆಲೆಗಳಲ್ಲಿ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ಮಾರ್ಕ್ಸ್‌ವಾದಕ್ಕೆ ಸಾಧ್ಯ. ಆದರೆ ಅದನ್ನು ಸಾಧ್ಯವಾಗಿಸಿದ ಆರ್ಥಿಕ ದೃಷ್ಟಿಕೋನವೇ ಅದರ ಮಿತಿಯೂ ಹೌದು. ಹಾಗೆಂದು ಈ ಮಿತಿಯನ್ನು ಹೊಂದಿರದ ಅಂಬೇಡ್ಕರರ, ಗಾಂಧೀಜಿಯವರ ಚಿಂತನೆಗಳಿಗೆ ಬೇರೆಯೇ ಆದ ಮಿತಿಯಿದೆ. ಅಲ್ಲಿ ಸಮಸ್ಯೆಯನ್ನು ಎರಡೂ ನೆಲೆಗಳಲ್ಲಿ ನಿಂತು ನಿಟ್ಟಿಸುವುದು ಸಾಧ್ಯವಿಲ್ಲ. ಹಾಗಾಗಿ ಇಲ್ಲಿ ಯಾವುದರ ಮೌಲೀಕರಣದ ಅಗತ್ಯವೂ ಇಲ್ಲ.

ಆದಾಗ್ಯೂ ಮಾರ್ಕ್ಸ್‌ವಾದ ಸಮಸ್ಯೆಗೆ ಪರಿಹಾರವಾಗಿ ಆಧರಿಸಿರುವುದು ಅಂಬೇಡ್ಕರರಂತೆಯೇ ದುರ್ಬಲ ವರ್ಗವನ್ನೇ. ಮಾರ್ಕ್ಸ್ ಪ್ರಥಮ ಅಂತರರಾಷ್ಟ್ರೀಯದಲ್ಲಿ ಘೋಷಿಸಿರುವುದು Workers of all Countries, Unite!ಎಂದೇ. ಹಾಗೇ ಕಮ್ಯೂನಿಸ್ಟ್ ಮ್ಯಾನಿಫೆಸ್ಟೋದ ಕೊನೆಯ ಮೂರು ವಾಕ್ಯಗಳು–Let the ruling classes tremble at a communistic revolution. The protetarious have nothing to lose but their chains. They have a world to win.

ಬುದ್ಧ ಸ್ಥಾಪಿಸಿದ ಸರ್ವಾಧಿಕರವಿಲ್ಲದ ಕಮ್ಯುನಿಸ್ಟ್ ಅಲ್ಪ ಪ್ರಮಾಣದ್ದಾಗಿರಬಹುದು. ಆದರೆ ಅದು ಸರ್ವಾಧಿಕಾರದ ಅಭಾವದಲ್ಲಿ ಸ್ಥಾಪಿತಗೊಂಡ ಕಮ್ಯುನಿಸಂ ಆಗಿತ್ತು. ಈ ಪವಾಡವನ್ನು ಲೆನಿನ್ ಮಾಡಲಾಗಲಿಲ್ಲ ಎಂಬ ಅಂಬೇಡ್ಕರರ ಮಾತು ಕಮ್ಯುನಿಸಂಅನ್ನು ನಿರಾಕರಿಸಿಲ್ಲ. ಅಂಬೇಡ್ಕರ್ ಮಾರ್ಕ್ಸ್‌ವಾದದ ವಿರೋಧಿಯೆಂದು ತಿಳಿದುಕೊಂಡಿರುವವರು ೧೯೪೭ರ ಮಾರ್ಚ್‌ನಲ್ಲಿ ಭಾರತೀಯ ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸಿದ ಪತ್ರವನ್ನು ಗಮನಿಸಿರಬೇಕು.

ಭಾರತಕ್ಕೆ ಕಮ್ಯುನಿಸಂ ತೀರಾ ಅನಿವಾರ್ಯ. ಅದಿಲ್ಲದಿದ್ದರೆ ಖಾಸಗಿ ಸಂಸ್ಥೆಗಳು ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸಿ ಪರಸ್ಪರ ದ್ವೇಷಕ್ಕೆ ಎಡೆಮಾಡಿಕೊಡುತ್ತವೆ. ಮಾರ್ಕ್ಸ್‌ವಾದವೊಂದೇ ನಮಗೆ ಮದ್ದು..ಭೂಮಿ ರಾಷ್ಟ್ರೀಕರಣವಾಗಬೇಕು. ನಮ್ಮ ಆದ್ಯತೆ ಸಾಮೂಹಿಕ ವ್ಯವಸಾಯ ಕ್ಷೇತ್ರಗಳತ್ತ ಇರಬೇಕು. ಸಂಸದೀಯ ಪ್ರಜಾಪ್ರಭುತ್ವದ ಮುಖಾಂತರವೇ ಕಮ್ಯುನಿಸ್ಟ್ ಸಮಾಜ ಸ್ಥಾಪನೆಯಾಗಬೇಕು.

ಅಂಬೇಡ್ಕರ್ ದುಂಡುಮೇಜಿನ ಪರಿಷತ್ತಿನಲ್ಲಿ ಹೇಳಿದ ವಿಚಾರಗಳತ್ತಲೂ ದೃಷ್ಟಿ ಹಾಯಿಸಬೇಕು: 'ಭಾರತದಲ್ಲಿ ಬಂಡವಾಳಶಾಹಿಗಳು ಶ್ರಮಿಕ ವರ್ಗವನ್ನು ಶೋಷಿಸುತ್ತಿದ್ದಾರೆ. ಭೂಮಾಲೀಕ ಜಮೀನ್ದಾರರು ಬಡ ಕೃಷಿ ಕೂಲಿ ಗಳನ್ನು ಹಿಂಡುತ್ತಿದ್ದಾರೆ. ಮೇಲ್ವರ್ಗ ದಲಿತರಿಗೆ ಅಸಹನೀಯವಾಗಿ ಹಿಂಸಿಸುತ್ತಿದೆ'. ಇಲ್ಲಿ ಸ್ಪಷ್ಟವಾಗಿ ಕಂಡು ಬರುವ ವರ್ಗಪ್ರಜ್ಞೆ ಮಾರ್ಕ್ಸ್‌ನತ್ತ ಅಂಬೇಡ್ಕರರ ವಿರೋಧವನ್ನು ತೋರಿಸುತ್ತದ 'ಯೇನು? ಅಂಬೇಡ್ಕರ್ ಅತಿರೇಕವನ್ನು ವಿರೋಧಿಸಿದ್ದು ನಿಜ. ಆದರೆ ಮಾರ್ಕ್ಸ್ ದ್ವಂದ್ವಮಾನ ಭೌತವಾದದ ಮೂಲಕ ಹೇಳಿದ್ದೇನು? ಯಾವುದೇ ಒಂದು ವ್ಯವಸ್ಥೆ ಶಾಶ್ವತವೆಂದೇ?

ಈ ಪ್ರಚಲಿತ ಬದುಕಿನಲ್ಲಿ ಹುಟ್ಟಿಕೊಳ್ಳುವ ಮಾನಸಿಕ ವಿಭ್ರಮಣೆಗಳನ್ನು ಹದ್ದುಬಸ್ತಿಗೆ ತರುವುದಕ್ಕೆ ತಕ್ಕುದಾದಂತಹ ಹೊಸ ನೀತಿಸೂತ್ರಗಳನ್ನು ನಾನು ಬೋಧಿಸುತ್ತೇನೆ' ಎಂಬುದಾಗಿ ಬುದ್ಧ ಹೇಳಿದ್ದ. 'ಹೃದಯದ ಪ್ರಮಿತತ್ವವನ್ನು ಸಾಧಿಸುವುದೇ ನನ್ನ ಉದ್ದೇಶ' ಎಂದಾತ ಹೇಳಿಕೊಂಡಿದ್ದಾನೆ. ಅಂದರೆ ಬುದ್ಧ ಸ್ಥಾಪಿತ ನೀತಿಸೂತ್ರಗಳ ಭ್ರಾಮಕ ಜಗತ್ತನ್ನು ಮತ್ತು ಅದರ ಹೃದಯ ರಾಹಿತ್ಯವನ್ನು ಗಮನಿಸಿದ್ದಾನೆ ಮತ್ತು ಅವುಗಳನ್ನು ತೊಡೆದು ಹಾಕುವತ್ತ ಸಾಗಿದೆ ಆವರ ಪ್ರಯತ್ನ. ಆತನ ಮೂಲ ಪ್ರಶ್ನೆಯಾದ ದುಃಖದ ಕಾರಣಕ್ಕೆ ವ್ಯವಸ್ಥೆಯಲ್ಲಿ ಪರಿಹಾರ ಸಿಕ್ಕಿಲ್ಲ. ಮತ್ತು ಅದು ದುಃಖವನ್ನು ಭ್ರಾಮಕ ಮುಸುಕಿನಲ್ಲಿ ಮರೆಯಾಗಿಸಿತ್ತು. ಮಾರ್ಕ್ಸ್ ಈ ಸ್ಥಾಪಿತ ನೀತಿ ಸೂತ್ರಗಳನ್ನು ಅರ್ಥಾತ್ ಧರ್ಮ(ಮತ)ವನ್ನು ಹೃದಯ ಶೂನ್ಯ ಜಗತ್ತಿನ ಹೃದಯವೆಂದಿದ್ದಾನೆ; ಭ್ರಮೆಯಲ್ಲಿ ಮುಳುಗಿಸಿ ಬಿಡುವ ಅಫೀಮೆಂದಿದ್ದಾನೆ. ಜನರ ಭ್ರಾಮಕ ಸಂತೋಷವೆಂಬ ಅರ್ಥದಲ್ಲಿ ಧರ್ಮವನ್ನು ತೊಡೆದುಹಾಕುವುದು ಅವರ ನಿಜವಾದ ಸಂತೋಷ ಪ್ರಾಪ್ತಿಗೆ ಅಗತ್ಯ. ಪರಿಸ್ಥಿತಿಯ ಬಗ್ಗೆ ಇರುವ ಭರವಸೆಯನ್ನು ಕಳೆದುಕೊಳ್ಳಬೇಕು ಎಂದು ಒತ್ತಾಯಿಸುವುದರ ಅರ್ಥ ಭ್ರಮೆಯ ಅಗತ್ಯವಿರುವಂತಹ ಪರಿಸ್ಥಿತಿ ಯನ್ನು ತ್ಯಜಿಸಬೇಕೆಂಬ ಒತ್ತಾಯವೇ ಆಗಿದೆ; ಇದರ ಅರ್ಥ ಇಷ್ಟೇ. ಯಾವ ಪರಿಸ್ಥಿತಿಯಲ್ಲಿ ನೈಜ ದುಃಖ ಮರೆಯಲು (ಅಥವಾ ಮರೆಸಲು) ಭ್ರಾಮಕ ಸುಖದ ಅವಶ್ಯಕತೆ ಇರುತ್ತದೋ ಅಂಥ ಪರಿಸ್ಥಿತಿಯನ್ನೇ ಕೊನೆಗಾಣಿಸಬೇಕು.

ಚಾರಿತ್ರಿಕ ಸಂದರ್ಭದಲ್ಲಿ ನೋಡಿದರೆ ಇಂತಹ ಹೇಳಿಕೆಯನ್ನು ಮುಂದಿಡಲು ಬುದ್ಧನಿಗೆ ಆ ಕಾಲಕ್ಕೆ ಸಾಧ್ಯವಿರಲಿಲ್ಲ. ಆತನಿಗಿದ್ದ ಇನ್ನೊಂದು ಪರ್ಯಾಯವೆಂದರೆ ಕಾಲಕ್ಕೆ ಸರಿಹೊಂದುವಂತಹ, ಅಸಮಾನತೆಯನ್ನು ಸಾಧ್ಯವಾದಷ್ಟು ಕನಿಷ್ಠವಾಗಿಸುವಂತಹ ಭ್ರಮೆಯೊಂದನ್ನು ಸೃಷ್ಟಿಸುವುದಾಗಿತ್ತು.

ಇವತ್ತು ಅಂಬೇಡ್ಕರ್ ತತ್ವಕ್ಕಿಂತ ಪ್ರತಿಮೆಗಳೇ ಮುಖ್ಯವಾಗುತ್ತಿವೆ. ಸ್ವಾಭಿಮಾನಶೂನ್ಯರು ಪ್ರತಿಮೆಗಳಿಗೆ ಸ್ವಾಭಿಮಾನ-ಅವಮಾನಗಳನ್ನು ಆರೋಪಿಸುತ್ತಿದ್ದಾರೆ. ಅಂತರರಾಷ್ಟ್ರೀಯ ಪುರೋಹಿತಶಾಹಿ, ವೈದಿಕ ಪುರೋಹಿತಶಾಹಿಗಳೊಡನೆ ಬೌದ್ಧಧರ್ಮದ ಪುರೋಹಿತಶಾಹಿಯೂ ಸ್ಥಾಪನೆಗೊಳ್ಳುತ್ತಿದೆ. ವೈದಿಕ ಧರ್ಮ, ಬೌದ್ಧಧರ್ಮಗಳನ್ನು ಜೊತೆಗಿಟ್ಟು ನೋಡಲಾಗುತ್ತಿದೆ. ಬಾಹ್ಯಾಚರಣೆ, ಢಂಬಾಚಾರಗಳೇ ಪ್ರಮುಖವಾಗುತ್ತಿವೆ. ದೇವರನ್ನು ತನ್ನ ಧರ್ಮದಿಂದ ಹೊರಗೋಡಿಸಿದ ಬುದ್ಧನೇ ಇಂದು 'ಭಗವಾನ್' ಆಗುತ್ತಿದ್ದಾನೆ. ಚಾದರ್ ಚಳವಳಿಯ ಸಮಯದಲ್ಲಿ 'ಮನುಸ್ಮೃತಿ'ಯನ್ನು ಸುಟ್ಟುಹಾಕಿದ ಅಂಬೇಡ್ಕರ್ 'ಆಧುನಿಕ ಮನು'ವೆನಿಸಿಕೊಂಡಿದ್ದಾರೆ. ಕೋಮುವಾದಿ ಫ್ಯಾಸಿಸ್ಟ್ ವಿಷ ಏರುತ್ತಿರುವಾಗ ಎಲ್ಲ ಒಗ್ಗೂಡಬೇಕಾಗಿದೆ.

ಆರ್ಥಿಕ, ರಾಜಕೀಯ ವಿಚಾರಗಳಲ್ಲಿ ಅಂಬೇಡ್ಕರ್ ಮಾರ್ಕ್ಸ್‌ವಾದಿ ಒಲವನ್ನು ಹೊಂದಿದ್ದರೂ ಧರ್ಮದ ಅಸ್ತಿತ್ವವನ್ನು ಅವರು ತಿರಸ್ಕರಿಸಿರಲಿಲ್ಲ ಎಂಬುದು ಗಮನಾರ್ಹ. ಅವರು ಆರಿಸಿಕೊಂಡದ್ದು ಮೂಲದಲ್ಲಿ ಗರಿಷ್ಠ ಸಮಾನತೆಯನ್ನು ಆಶಯವಾಗಿಸಿಕೊಂಡ ಬೌದ್ಧ ಧರ್ಮವನ್ನು. ೧೯೪೮ರಲ್ಲಿ ದಲಿತರ ಮತಾಂತರವನ್ನು ವಿರೋಧಿಸಿದ್ದ ಅದೇ ಅಂಬೇಡ್ಕರ್ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ್ದು ವಿಷಾದ ಸೂಚಕ ಕ್ರಿಯೆ ಎಂದು ನನ್ನ ಎಣಿಕೆ. ಅವರೇನೂ ಉತ್ಸಾಹಿಯಾಗಿ ಮತಾಂತರ ಗೊಂಡದ್ದಲ್ಲ. ಒಂದು ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೆಂಬ ದಟ್ಟ ಆಕಾಂಕ್ಷೆಯಿಂದ ಮೊದಲುಗೊಂಡ ಪ್ರಯತ್ನ ವಿಫಲಾಂತ್ಯವನ್ನು ತಲುಪಿದ ಕಾರಣ ಕೈಗೊಂಡ ಹತಾಶ ಕ್ರಮವದು. ಅವರ ಅತ್ಯಂತ ಆಪ್ತ ಗಣತಂತ್ರ ವ್ಯವಸ್ಥೆ ಕೂಡ ಸುಧಾರಣೆ ತರಲು ವಿಫಲವಾದುದು ಅವರಿಗೆ ಭ್ರಮನಿರಸನ ಉಂಟು ಮಾಡಿರಬೇಕು. ವ್ಯವಸ್ಥೆಯ ಜಡತೆಯಿಂದ ರೋಸಿ ಹೋಗಿ ಯಾವುದನ್ನು ಸುಧಾರಿಸಬೇಕೆಂದಿದ್ದರೋ ಆ ವ್ಯವಸ್ಥೆ ಯನ್ನೇ ಕಟ್ಟಕಡೆಯ ಪ್ರಯತ್ನವೂ ವಿಫಲವಾದಾಗ ತಿರಸ್ಕರಿಸಿ ಬಿಡುವ ನಿರ್ಧಾರವದು. ಮಾರ್ಕ್ಸ್‌ವಾದ ಮತ್ತು ಮತಾಂತರ ಒಟ್ಟಿಗೆ ಸಾಗುವುದಿಲ್ಲವಾದರೂ ಆ ಸಂದರ್ಭದಲ್ಲಿ ಸ್ವತಂತ್ರ ಭಾರತದ ಸರಕಾರದ ದಮನಕಾರಿ ನೀತಿಯಿಂದ ಉಂಟಾದ ಎಡಪಂಥೀಯ ಚಟುವಟಿಕೆ, ಚಳವಳಿಯ ತೀವ್ರತೆಯ ಅಭಾವವನ್ನು ಗಮನಿಸಿಕೊಳ್ಳಬೇಕು. ಎಡಪಂಥೀಯ ಪ್ರಜ್ಞೆ ದೇಶದಲ್ಲಿ ಜಾಗೃತವಾಗಿದ್ದರೆ ಅಂಬೇಡ್ಕರರಿಗೆ ನೈತಿಕ ಆಧಾರ ಶಕ್ತಿಯಾದರೂ ದೊರೆಯುತ್ತಿತ್ತು.

ಅಂಬೇಡ್ಕರರ ಮತಾಂತರವನ್ನೇ ಫ್ರೇಮ್ ಹಾಕಿ, ಆದರ್ಶಗೊಳಿಸಿ ಜನಪ್ರಿಯಗೊಳಿಸುತ್ತಿರುವವರಲ್ಲಿ ನನ್ನದೊಂದು ಪ್ರಶ್ನೆಯಿದೆ: ಇವತ್ತು ಅಂಬೇಡ್ಕರ್ ಐತಿಹಾಸಿಕ ವ್ಯಕ್ತಿಯಾಗಿರುವುದು ತತ್ವ-ಸುಧಾರಣೆಗಳಿಗಾಗಿಯೋ ಅಥವಾ ಬೌದ್ಧರಾಗಿ ಮತಾಂತರಗೊಂಡಿದ್ದಕ್ಕೋ? □

ಅಂಬೇಡ್ಕರ್ ತತ್ವಕ್ಕಿಂತ ಪ್ರತಿಮೆಗಳೇ ಮುಖ್ಯವಾಗುತ್ತಿವೆ. ಸ್ವಾಭಿಮಾನ ಶೂನ್ಯರು ಪ್ರತಿಮೆಗಳಿಗೆ ಸ್ವಾಭಿಮಾನ-ಅವಮಾನಗಳನ್ನು ಆರೋಪಿಸುತ್ತಿದ್ದಾರೆ. ಅಂತರರಾಷ್ಟ್ರೀಯ ಪುರೋಹಿತಶಾಹಿ, ವೈದಿಕ ಪುರೋಹಿತಶಾಹಿಗಳೊಡನೆ ಬೌದ್ಧಧರ್ಮದ ಪುರೋಹಿತಶಾಹಿಯೂ ಸ್ಥಾಪನೆಗೊಳ್ಳುತ್ತಿದೆ. ವೈದಿಕ ಧರ್ಮ, ಬೌದ್ಧಧರ್ಮಗಳನ್ನು ಜೊತೆಗಿಟ್ಟು ನೋಡ ಲಾಗುತ್ತಿದೆ. ಬಾಹ್ಯಾಚರಣೆ, ಢಂಬಾಚಾರಗಳೇ ಪ್ರಮುಖವಾಗುತ್ತಿವೆ. ದೇವರನ್ನು ತನ್ನ ಧರ್ಮದಿಂದ ಹೊರ ಗೋಡಿಸಿದ ಬುದ್ಧನೇ ಇಂದು 'ಭಗವಾನ್' ಆಗುತ್ತಿದ್ದಾನೆ. ಚಾದರ್ ಚಳವಳಿಯ ಸಮಯದಲ್ಲಿ 'ಮನುಸ್ಮೃತಿ' ಯನ್ನು ಸುಟ್ಟುಹಾಕಿದ ಅಂಬೇಡ್ಕರ್ 'ಆಧುನಿಕ ಮನು' ವೆನಿಸಿಕೊಂಡಿದ್ದಾರೆ. ಇವತ್ತು ಅಂಬೇಡ್ಕರ್ ಐತಿಹಾಸಿಕ ವ್ಯಕ್ತಿಯಾಗಿರುವುದು ತತ್ವ-ಸುಧಾರಣೆಗಳಿಗಾಗಿಯೋ ಅಥವಾ ಬೌದ್ಧರಾಗಿ ಮತಾಂತರಗೊಂಡಿದ್ದಕ್ಕೋ?

ಶೋಷಿತರ ಹೋರಾಟದ ರೂವಾರಿ

ನೋಟ

ತಮ್ಮ ಬದುಕಿನುದ್ದಕ್ಕೂ ಎಲ್ಲಾ ಶೋಷಿತ, ನೊಂದ ಸಮುದಾಯಗಳ ಪರವಾದ ಧ್ವನಿ ಎತ್ತಿದವರು ಅಂಬೇಡ್ಕರ್. ಅಸ್ಪೃಶ್ಯರಿಗೆ ಸಾರ್ವಜನಿಕ ಕೆರೆಯ ನೀರು ಬಳಕೆಯಿಂದ ಹಿಡಿದು ಪ್ರತ್ಯೇಕ ಮತದಾನದ ಹಕ್ಕುಗಳ ಅನುಷ್ಠಾನಕ್ಕಾಗಿ ಅವರು ರೂಪಿಸಿದ ಹೋರಾಟಗಳು ಅವಿಸ್ಮರಣೀಯ. ಇಷ್ಟೆಲ್ಲ ಹೋರಾಟಗಳಾದರೂ ಅಸ್ಪೃಶ್ಯರ ಬದುಕಿನಲ್ಲಿ ಕೆಲ ಬದಲಾವಣೆಗಳನ್ನು ಬಿಟ್ಟರೆ ಬೇರೆ ಯಾವ ಉನ್ನತಿಯೂ ಸಾಧ್ಯವಾಗಿಲ್ಲ. ಜಾತೀಯತೆ, ಅಸ್ಪೃಶ್ಯತೆಗಳನ್ನು ಪುಷ್ಟೀಕರಿಸುವ ಹಿಂದೂ ಧರ್ಮಕ್ಕೆ ವಿರುದ್ಧವಾಗಿ ಬುದ್ಧನ ಧರ್ಮ ದಲಿತರ ಆತ್ಮೋನ್ನತಿಗೆ ದಾರಿ ಎಂದು ಅವರು ತೋರಿಸಿಕೊಟ್ಟರು.

○ ಡಾ॥ ಚಂದ್ರಮಾ ಎಸ್. ಕಣಗಲಿ

'ಇಷ್ಟು ವರ್ಷಗಳಾದರೂ (ಸ್ವಾತಂತ್ರ್ಯಕ್ಕೆ) ಅಸ್ಪೃಶ್ಯತೆ ಇನ್ನೂ ಹೋಗಲಿಲ್ಲವಲ್ಲ' ಎನ್ನುವ ಮಾತಿಗೆ ಸಾಮಾನ್ಯವಾಗಿ ಕೇಳಿಬರುವ ಉತ್ತರ, 'ಎಲ್ಲಿದೆ ಅಸ್ಪೃಶ್ಯತೆ ? ಎಲ್ಲರೂ ಅಕ್ಕಪಕ್ಕದಲ್ಲಿ ಕುಳಿತು ಪ್ರಯಾಣಿಸುತ್ತಾರೆ, ಹೋಟೆಲುಗಳಲ್ಲಿ ಜೊತೆಗೆ ಕಂಡು ಬರುತ್ತಾರೆ, ಸಭೆ ಸಮಾರಂಭಗಳಲ್ಲಿ ಬೆರೆಯುತ್ತಾರೆ.'

ನಿಜ, ನಮ್ಮ ಸಂವಿಧಾನದ ೧೭ನೇ ವಿಧಿ ಅಸ್ಪೃಶ್ಯತಾಚರಣೆಯನ್ನು ನಿಷೇಧಿಸುತ್ತದೆ. ಶಿಕ್ಷಣ ಪ್ರಸಾರ, ಪಟ್ಟಣಗಳು ಬೆಳೆಯುವುದು-ಇವು ಕೂಡ ಅಸ್ಪೃಶ್ಯತೆಯ ಆಚರಣೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿವೆ. ಆದ್ದರಿಂದ ಪಟ್ಟಣ ಪ್ರದೇಶಗಳಲ್ಲಿ ಹಾಗೂ ವಿದ್ಯಾವಂತ ಜನಸಂಖ್ಯೆ ಜಾಸ್ತಿ ಇರುವಲ್ಲಿ ಮೇಲಿನ ಉತ್ತರ ಸರಿ ಎನಿಸುತ್ತದೆ. ಆದರಿದು ಮೇಲ್ಮೈ ಸತ್ಯ. ಆಸ್ಪತ್ರೆಯಲ್ಲಿನ ವೈದ್ಯಾಧಿಕಾರಿಗಳು, ಸರಕಾರಿ ಕಛೇರಿಯಲ್ಲಿನ ಅಧಿಕಾರಿಗಳೆಲ್ಲ (ಹೆಚ್ಚಿನ ಪ್ರತಿಶತ) ಮೇಲ್ಜಾತಿಗೆ ಸೇರಿದವರು; ಕಟ್ಟಾ ಜಾತಿವಾದಿಗಳು; ವೈಯಕ್ತಿಕ ಜೀವನದಲ್ಲಿ ಅಸ್ಪೃಶ್ಯತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂಥವರು.

ಎರಡೂವರೆ ಸಾವಿರ ವರ್ಷಗಳಿಂದ ಭಾರತದಲ್ಲಿ ಆಚರಣೆಯಲ್ಲಿರುವ ಜಾತಿಯತೆಯ ಒಂದು ಅವಿಭಾಜ್ಯ ಅಂಗ-ಅಸ್ಪೃಶ್ಯತೆ. ಸಾಮಾಜಿಕ ವಿಭಜನೆಯನ್ನು ಸಮರ್ಥಿಸಿಕೊಳ್ಳುವವರೆಲ್ಲ ವರ್ಣಾಶ್ರಮಗಳನ್ನು ಒಪ್ಪಿಕೊಂಡವರು. ಜಗತ್ತಿನ ಎಲ್ಲಾ ದೇಶಗಳಲ್ಲೂ ಸಾಮಾಜಿಕ ವಿಭಜನೆ ಇದೇ ಅದು . ಇರುವಂಥದೇ; ಆಡಳಿತ ನಡೆಸುವ ವರ್ಗ, ದೇಶ ರಕ್ಷಣೆ ಮಾಡುವ ವರ್ಗ, ವ್ಯಾಪಾರ ವ್ಯವಹಾರ ನಡೆಸುವ ವರ್ಗ, ಪುರೋಹಿತ ವರ್ಗ ಮತ್ತು ಇವರಿಗಾಗೆಲ್ಲ ಕೆಲಸ ಮಾಡುವ ಸೇವಕ ವರ್ಗದ ಜನರೆಲ್ಲ ಇರುತ್ತಾರೆ. ಆದರೆ ಭಾರತವನ್ನುಳಿದು ಮಿಕ್ಕೆಲ್ಲ ದೇಶಗಳಲ್ಲಿ ಸಾಮಾಜಿಕ ಸಾಮರಸ್ಯ ಇದೆ. ಮನುಷ್ಯನನ್ನು ಮನುಷ್ಯನನ್ನಾಗಿ ಗುರುತಿಸುವ ಪರಿಸರ ಇದೆ. ಒಬ್ಬನನ್ನು ಆತನ ಬುದ್ಧಿಶಕ್ತಿ, ವ್ಯಕ್ತಿತ್ವಗಳ ತಳಹದಿಯ ಮೇಲೆ ಅಳೆಯುವ ಗುರುತಿಸುವಿಕೆ ಇದೆ; ಇಂದು ಒಂದು ವರ್ಗಕ್ಕೆ ಸೇರಿದವನು ತನ್ನ ಸಾಮರ್ಥ್ಯ ಅಥವಾ ಅಸಮರ್ಥತೆಯಿಂದ ನಾಳೆ ಇನ್ನೊಂದು ವರ್ಗಕ್ಕೆ ಸೇರುವ ಸಾಧ್ಯತೆ ಇದೆ. ಆತ ಯಾವ ಪಕ್ಷ, ವರ್ಗ, ಧರ್ಮಕ್ಕೂ ಸೇರುವ ಸ್ವಾತಂತ್ರ್ಯವಿದೆ.

ಆದರೆ ಭಾರತದಲ್ಲಿ ಸಾಮಾಜಿಕ ವಿಭಜನೆ ವರ್ಣಾಶ್ರಮದ ಅಂಗವಾದ ಜಾತೀಯತೆಯ ತಳಹದಿಯ ಮೇಲೆ ನಿಂತಿರುವುದರಿಂದ ಸಾಮಾಜಿಕ ಸಾಮರಸ್ಯ ವಿರಳ. ಇಲ್ಲಿ ಮನುಷ್ಯ ಆತನ ಜಾತಿಯಿಂದ ಗುರುತಿಸಲ್ಪಡುತ್ತಾನೆ. ಜಾತಿಗೆ ತಕ್ಕ ಪರಿಸರ ಪಡೆಯುತ್ತಾನೆ. ಸಂಸ್ಕೃತಿ, ಸಂಸ್ಕಾರಗಳು ಜಾತಿ, ಪರಿಸರದ ಪರಿಣಾಮ. ಮನುಷ್ಯ ಪರಿಸರದ ಕೂಸು. ಪರಿಸರ ಆತನ ಮೇಲೆ ಅಪಾರ ಪ್ರಭಾವವನ್ನು ಬೀರುತ್ತದೆ. ಈ ನಿಟ್ಟಿನಲ್ಲಿ ಅಸ್ಪೃಶ್ಯರ ಬದುಕನ್ನು ಅವಲೋಕಿಸಿದಾಗ ಮೊದಲು ಕಂಡು ಬರುವುದು ಅವರಿರುವ ಪರಿಸರ. ಹಳ್ಳಿಗಳ ದೇಶವಾದ ಭಾರತದಲ್ಲಿ ಅವರು ವಾಸಿಸುವುದು ಊರ ಹೊರಗಿನ ಕೇರಿಗಳಲ್ಲಿ. ಅವರ ಬದುಕು ಬಡತನ, ಮೌಢ್ಯ, ಮೂಢ ನಂಬಿಕೆಗಳ ಆಗರ. ಒಬ್ಬ ಉಚ್ಚ ಜಾತಿಯವನಿಗೂ, ಕೀಳೆನಿಸುವ ಅಸ್ಪೃಶ್ಯನಿಗೂ ಇರುವ ಭೇದ ಅವರಿಬ್ಬರೂ ಬದುಕುವ ಪರಿಸರದ ಪ್ರಭಾವ ಹಾಗೂ ಅದರ ಪ್ರತಿಫಲ. ಗುಜರಾತ್, ಅಸ್ಸಾಂ, ಕಾಶ್ಮೀರ, ಪಂಜಾಬ್, ಕೇರಳ, ಮಹಾರಾಷ್ಟ್ರ ಕರ್ನಾಟಕ ಇನ್ನಾವುದೇ ರಾಜ್ಯಗಳಲ್ಲಿ ಕಂಡುಬರುವ ಸಾವಿರಾರು ಹಳ್ಳಿಗಳಲ್ಲಿ ಕೇರಿಗಳಿವೆ. ಸುಮಾರು ಪ್ರತಿಶತ ಇಪ್ಪತ್ತರಷ್ಟು ಜನಸಂಖ್ಯೆ ಕೇರಿಗಳಲ್ಲಿ ವಾಸಿಸುವ ಅಸ್ಪೃಶ್ಯರದಾಗಿದೆ. ನೈರ್ಮಲ್ಯದ ಬಗ್ಗೆ ಮೂಢರಾದ ಇವರು ವಾಸಿಸುವ ಪರಿಸರ ರೋಗಗಳ ಆಗರ.

ಕೀಳೆನಿಸುವ, ಕನಿಷ್ಠ ವರಮಾನದ ಉದ್ಯೋಗ-ದುಡಿಮೆಗಳೇ ಇವರ ಬದುಕಿಗೆ ಆಧಾರ. ಭಾರತಾದ್ಯಂತ ಆಚರಣೆಯಲ್ಲಿರುವ ಅಸ್ಪೃಶ್ಯತಾಚರಣೆಗೆ ಗುರಿಯಾಗಿರುವ ಈ ಜನರಿಗೆ ಇಂದಿಗೂ ಗುಡಿ-ಮಠಗಳಲ್ಲಿ ಪ್ರವೇಶ ನಿಷಿದ್ಧ. ಅವರಿಗೆ ಪ್ರೀತಿ-ವಿಶ್ವಾಸ ಆದರ ತೋರಿಸುವವರಿಲ್ಲ. ತಳವಾರಿಕೆ ಕೆಲಸ ಮಾಡುವ, ತಮಟೆ ಹೊಡೆಯುವ, ಕಸ ಗುಡಿಸುವ, ಚಪ್ಪಲಿ ಹೊಲೆಯುವ, ಹೆಣ ಹೊರುವ, ಸತ್ತ ದನ ಎಳೆದೊಯ್ಯುವ, ಅದರ ಚರ್ಮ ಹದ ಮಾಡುವ, ಮಲ ತೊಳೆಯುವ, ಕಳೆ ಕೀಳುವ ಕೀಳು ಕೆಲಸಗಳನ್ನು ಪರಂಪರಾಗತವಾಗಿ ಮಾಡುತ್ತ ಕೇರಿಗಳಲ್ಲಿ ಬದುಕುವ ಈ ಜನ ಉನ್ನತಿ ಕಾಣುವುದೆಂತು? ಉದ್ಧಾರವಾಗುವುದು ಹೇಗೆ? ಇವರು ಕೊಳಚೆಯ ಪರಿಸರದಿಂದ ಹೊರಬಂದು ಇತರ ಮನುಷ್ಯರಂತೆ ಬದುಕುವುದು ಹೇಗೆ ? ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕುವ, ಉತ್ತರಗಳನ್ನು ಕೊಡುವ ಪ್ರಯತ್ನಗಳಲ್ಲೇ ಭಾರತ ರತ್ನ ಬಾಬಾ ಸಾಹೇಬ ಡಾ. ಅಂಬೇಡ್ಕರ್ ಅವರು ತಮ್ಮ ಉಸಿರಿರುವವರೆಗೂ ಶ್ರಮಿಸಿದರು.

ಸಾಮಾಜಿಕ ಚಳವಳಿಗಳ ನೇತೃತ್ವ ವಹಿಸಿ ಅಸ್ಪೃಶ್ಯರಿಗೆ ಸಾಮಾಜಿಕ ಸಮಾನತೆ ತಂದುಕೊಡಲು ಹೋರಾಡಿದರು ಬಾಬಾ ಸಾಹೇಬರು. ಕಾಳಾರಾಂ ದೇವಾಲಯ ಪ್ರವೇಶಕ್ಕಾಗಿ ಚಳವಳಿ; ಮಹಾಟ್ ನದಿ ನೀರಿಗಾಗಿ, ಕುಡಿಯುವ ನೀರಿನ ಹಕ್ಕು ದೊರಕಿಸಲು ಅವರು ನಡೆಸಿದ ಚಳವಳಿಗಳು ಕೆಲ ದೃಷ್ಟಾಂತಗಳು; ಅವು ಭಾರತದ ಇತಿಹಾಸದಲ್ಲಿ ಮಾನವೀಯತೆಗಾಗಿ, ಸಮಾನ ಹಕ್ಕುಗಳಿಗಾಗಿ ನಡೆದ ಚಳವಳಿಗಳಲ್ಲಿ ಕಾಣುವ ಮೈಲಿಗಲ್ಲುಗಳು. ರಾಜಕೀಯವಾಗಿ ಬಾಬಾ ಸಾಹೇಬರು ನಡೆಸಿದ ಹೋರಾಟಗಳು ಅವಿಸ್ಮರಣೀಯ. ದಲಿತರಿಗಾಗಿ ಪ್ರತ್ಯೇಕ ಮತದಾನದ ಹಕ್ಕು ದೊರಕಿಸಲು ನಡೆದ ಹೋರಾಟ, ಗಾಂಧೀಜಿಯವರೊಂದಿಗೆ ಅವರು ಮಾಡಿಕೊಂಡ 'ಪೂನಾ ಒಪ್ಪಂದ' ಜ್ವಲಂತ ಇತಿಹಾಸ ಇಂದಿಗೂ ಅತ್ಯಂತ ಪ್ರಸ್ತುತ . ಕೊನೆಯದಾಗಿ, ಜಗತ್ತಿನಾದ್ಯಂತ ಅತಿ ದೊಡ್ಡ ಡೆಮಾಕ್ರಸಿಯಾದ ಭಾರತದ ಸಂವಿಧಾನ ಕರ್ತೃ ಅಂಬೇಡ್ಕರ್ ಎನ್ನುವುದು ಸರ್ವವಿದಿತ; ಭಾರತೀಯರಿಗೆ ಹೆಮ್ಮೆಯ, ಸಂತೋಷದ ವಿಷಯ. ಅವರ ಪರಿಶ್ರಮದಿಂದ, ಆಗ್ರಹದಿಂದ, ಹೋರಾಟದಿಂದ ಅವುಗಳ ಪ್ರತಿಫಲದ ರೂಪದಲ್ಲಿ, ಅವುಗಳ ಪರಿಣಾಮವಾಗಿ ಇಂದು ಲಕ್ಷಾಂತರ ಜನ ಅಸ್ಪೃಶ್ಯರು ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಶೋಷಣೆಗೊಳಗಾದ, ತುಳಿತಕ್ಕೊಳಗಾದ ಸಾವಿರಾರು ಜನ ವಿದ್ಯೆ ಉದ್ಯೋಗ ಪಡೆದು ಮುಂದೆ ಬರುತ್ತಿದ್ದಾರೆ.

ಮೇಲ್ಜಾತಿಯವರು ತಮ್ಮ ಸಾಮಾಜಿಕ ಸ್ಥಾನಮಾನದಿಂದ, ಆರ್ಥಿಕ ಬಲದಿಂದ ಶಿಕ್ಷಣ-ಸಂಸ್ಕೃತಿ ಪಡೆಯುತ್ತಾರೆ; ಉನ್ನತ ಪದವಿ ಪಡೆಯುತ್ತಾರೆ; ಉನ್ನತ ಹುದ್ದೆಗಳನ್ನು ದೊರಕಿಸಿಕೊಳ್ಳುತ್ತಾರೆ. ಆದರೆ 'ಬ್ರೈನ್ ಡ್ರೇನ್' ಆಗುತ್ತಿರುವ ಇಂದಿನ ನಮ್ಮ ದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿಯೋ, ಉದ್ಯೋಗಕ್ಕಾಗಿಯೋ ಹೊರದೇಶಗಳಿಗೆ ಹೋಗುವವರು ತಮ್ಮ ಉನ್ನತ ಸಂಸ್ಕೃತಿ-ಸಂಸ್ಕಾರ ಉಳಿಸಿಕೊಳ್ಳುತ್ತಾರೆಯೇ? ಆರ್ಥಿಕ ಉನ್ನತಿಯೇ ನಿಜವಾದ ಉನ್ನತಿಯೇ? ಇಂಥ ಉನ್ನತಿ ಬರಿಯ ಬಾಹ್ಯ ಲೌಕಿಕತೆಯಿಂದ ಮಾತ್ರ ಬರುವಂಥದ್ದು. ಆದ್ದರಿಂದ ಉನ್ನತ ವರ್ಗಕ್ಕೆ ಸೇರಿದವರೆಂದರೆ ಒಂದರ್ಥದಲ್ಲಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಅದರ ಪರಿಣಾಮವಾಗಿ ಸಾಮಾಜಿಕವಾಗಿ ಉನ್ನತ ಸ್ತರದಲ್ಲಿರುವವರು. ಈ

ದಶಕಗಳು ಗತಿಸಿಹೋದರೂ, ಸರಕಾರಗಳು ಉರುಳಿ ಹೋದರೂ, ಅಸ್ಪೃಶ್ಯರ ಬದುಕು ಸಾಮಾಜಿಕವಾಗಿ ಇನ್ನೂ ಕೆಳಮಟ್ಟದಲ್ಲಿದೆ. ಊರ ಹೊರಗಿನ ಕೇರಿಗಳು ಬೆಳೆಯುತ್ತಿವೆ. ರಾಜಕೀಯಕ್ಕಾಗಿ, ಇನ್ನಿತರ ಸ್ವಾರ್ಥ ಸಾಧನೆಗಾಗಿ ಆ ಕೇರಿಗಳನ್ನು ಒಡೆದು ವಿಭಜಿಸಲಾಗುತ್ತಿದೆ. ಅವರವರಲ್ಲೇ ವೈಷಮ್ಯ, ಈರ್ಷೆ, ವೈರತ್ವ ಬೆಳೆಸಲಾಗುತ್ತಿದೆ. ಶತಮಾನದಿಂದ ಅಂಧಕಾರದಲ್ಲಿರುವ ಈ ಜನರು ಅತ್ಯಂತ ಸಣ್ಣ ಅಮಿಷ ತೋರಿಸಿದರೂ ಅದಕ್ಕೊಳಗಾದರೆ ಆಶ್ಚರ್ಯವಿಲ್ಲ. ಜಗತ್ತು ಮುಂದೋಡುತ್ತಿರುವಾಗ ಈಗ ಕಣ್ತೆರೆದು ಆ ಬೆಡಗಿನ, ಬೆಳಕಿನ ಜಗತ್ತನ್ನು ನೋಡುತ್ತಿರುವ ಈ ಇಪ್ಪತ್ತು ಕೋಟಿ ಜನರಿಗೆ ಮಾರ್ಗದರ್ಶನವೀಯುವ, ದಾರಿ ತೋರುವ ಅಂಬೇಡ್ಕರ್ ಬೆಳಕು ಆರಿಹೋಗಿದೆ. ಆದರೆ ಆ 'ಚೈತನ್ಯ ಭೂಮಿ', ಆ ದೀಪ ಹಿಂದೆ ಬಿಟ್ಟು ಹೋಗಿರುವ ನುಡಿಗಳ, ನೆನಪಿನ ಹೊಂಬೆಳಕು ಇನ್ನೂ ಯಾವಾಗಲೂ, ಅರಸುವವರಿಗೆ ಸನ್ಮಾರ್ಗ ತೋರಿಸುತ್ತದೆ. ಅಸ್ಪೃಶ್ಯರ ಆತ್ಮೋನ್ನತಿಗೆ ದಾರಿದೀಪವಾಗಿದೆ.

ವಿಭಾಗಕ್ಕೆ ಡಾ.ಅಂಬೇಡ್ಕರ್‌ರ ಶತಪ್ರಯತ್ನಗಳ ಫಲವಾಗಿ ಹಲವಾರು ಕೆಳಜಾತಿಯವರೂ ಸೇರಿರುತ್ತಾರೆ. ಆದರೆ ಇವರೆಲ್ಲರೂ ನಿಜವಾಗಿ ಉಚ್ಚವರ್ಗಕ್ಕೆ, ಉನ್ನತ ವರ್ಗಕ್ಕೆ ಸೇರಿದಂತೆ ಅರ್ಥವೇ? ಅದೆಷ್ಟು ಜನ ವಿದ್ಯಾವಂತರೆನ್ನಿಸಿ ಕೊಂಡವರು, ಆರ್ಥಿಕ ಉನ್ನತಿ ಹೊಂದಿದವರು ನೈತಿಕ ಪತನಕ್ಕೊಳಗಾಗಿಲ್ಲ? ಅದೆಷ್ಟು ಜನ ಸಾಮಾಜಿಕವಾಗಿ ಉನ್ನತ ಸ್ಥಾನಮಾನದಲ್ಲಿರುವವರು ಚರಿತ್ರಹೀನರಾಗಿಲ್ಲ? ಧರ್ಮಾಂಧ ರಾಗಿಲ್ಲ? ಅಧರ್ಮೀಯರಾಗಿಲ್ಲ? ಆರ್ಥಿಕ ಬಲದಿಂದ ಎಷ್ಟು ಜನ ಅನ್ಯಾಯವೆಸಗಿಲ್ಲ ? ಆರ್ಥಿಕ, ಸಾಮಾಜಿಕ ಉನ್ನತಿ ನಿಜವಾದ ಅರ್ಥದಲ್ಲಿ 'ಉನ್ನತಿ' ಯೇ ಅಲ್ಲ. ಬಡವರೂ 'ಉನ್ನತ' ವರ್ಗಕ್ಕೆ ಸೇರಬಹುದು. ಕೀಳು ಜಾತಿಯವರೂ, ಅಸ್ಪೃಶ್ಯರೂ ನಿಜವಾದ ಅರ್ಥದಲ್ಲಿ 'ಉನ್ನತ' ವರ್ಗಕ್ಕೆ ಸೇರಿದ ಉಚ್ಚ ಜನ ಇರುವ ಸಾಧ್ಯತೆ ಇಲ್ಲದೇನಿಲ್ಲ. ನೈತಿಕ, ಧಾರ್ಮಿಕ ಉನ್ನತಿಯೇ ನಿಜವಾದ ಉನ್ನತಿ. ಅದುವೇ 'ಆತ್ಮೋನ್ನತಿ'.

ನೈತಿಕ, ಧಾರ್ಮಿಕ ಉನ್ನತಿಯ ಪರಿಕಲ್ಪನೆಯನ್ನು ಎಲ್ಲಾ ಧರ್ಮಗಳೂ ಮಾಡಿಕೊಡುತ್ತವೆ. ಎಲ್ಲಾ ಧರ್ಮಗಳೂ ಸಾರುತ್ತವೆ. ನೈತಿಕ ತಳಹದಿಯ ಮೇಲೆಯೇ ಎಲ್ಲಾ ಧರ್ಮಗಳೂ ಸ್ಥಾಪನೆಗೊಂಡಿವೆ. ಎಲ್ಲಾ ಧರ್ಮಗಳ ಮೂಲತತ್ವಗಳೂ ಒಂದೇ. ಭಗವಾನ್ ಬುದ್ಧನ ಪಂಚಶೀಲಗಳನ್ನೇ ಬಸವಣ್ಣ 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ......' ಎಂದು ಸಾರಿದ. ಇದನ್ನೇ ಬೇರೆ ಬೇರೆ ಧರ್ಮಗಳು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಸಾರುತ್ತವೆ. ಭೌಗೋಳಿಕ, ಭಾಷಿಕ, ವರ್ಣ ವ್ಯತ್ಯಾಸಗಳಿದ್ದರೂ ಮಾನವ ಜನಾಂಗ ಒಂದು. ಜಗತ್ತಿನಾದ್ಯಂತ ಹಲವು ಧರ್ಮಗಳನ್ನು ಜನ ಆಚರಿಸಿದರೂ ನಿಜವಾದ ಧರ್ಮಾಚರಣೆ ಪ್ರತಿಯೊಬ್ಬರೂ ತಮ್ಮ ಧರ್ಮ ತತ್ವಗಳನ್ನು ಆಚರಿಸುವುದೇ ಆಗಿದೆ. ಆದರೆ ಎಷ್ಟು ಜನ ತಮ್ಮ ಧರ್ಮದ ತತ್ವಗಳನ್ನು ಪ್ರತಿದಿನದ ತಮ್ಮ ಬುದಕಿನಲ್ಲಿ ಪಾಲಿಸುತ್ತಾರೆ ? ಹಬ್ಬಗಳ ಅರ್ಥಹೀನ ಆಚರಣೆ, ಆಡಂಬರಕ್ಕೆ ಪ್ರಾಧಾನ್ಯತೆ ಕೊಡುವವರೇ ಎಲ್ಲರೂ. ಧರ್ಮವನ್ನು, ತತ್ವಗಳನ್ನು ಸಾರುವವರು, ಪ್ರಸಾರ ಮಾಡುವವರು ಕೂಡಿ ಎಷ್ಟೋ ಬಾರಿ ಅವುಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವುದಿಲ್ಲ.

ಅನೇಕ ಧರ್ಮಗಳನ್ನು ಅಧ್ಯಯನ ಮಾಡಿದ ಬಾಬಾ ಸಾಹೇಬರು ತಮ್ಮ ಆತ್ಮೋನ್ನತಿಯನ್ನು ಬೌದ್ಧ ಧರ್ಮ ಪಾಲನೆಯಲ್ಲಿ ಕಂಡುಕೊಂಡರು. ಬುದ್ಧನ ಪಂಚಶೀಲಗಳನ್ನು ಪಾಲಿಸುವವನು- ಉಳ್ಳವನಿರಲಿ, ಬಡವನೇ ಆಗಿರಲಿ, ವಿದ್ಯಾವಂತನಿರಲಿ-ಅಶಿಕ್ಷಿತನಿರಲಿ-ಆತನೇ ಧನ್ಯ. ಆತನೇ ಉಚ್ಚ. ಲೌಕಿಕ ಸುಖ ಸಂಪತ್ತು ದೊರಕಲಿ ಬಿಡಲಿ, ಅವುಗಳನ್ನೇ ಬೆನ್ನು ಹತ್ತಿ ಅರಸುತ್ತ ಬದುಕು ವ್ಯರ್ಥಗೊಳಿಸದೆ ಬಾಳುವವನೇ, ಧರ್ಮಪಾಲನೆ ಮಾಡುವವನೇ ನಿಜವಾದ ಅರ್ಥದಲ್ಲಿ 'ಉಚ್ಚ ವರ್ಗ'ಕ್ಕೆ ಸೇರಿದವನು. ಆತ್ಮೋನ್ನತಿ ಹೊಂದಿದವನು. ಬದುಕಿನ ೬೦-೭೦ ವರ್ಷಗಳಲ್ಲಿ ಅರಿವಾದ ನಂತರದ ಕೆಲವು ವರ್ಷಗಳಲ್ಲಾದರೂ ನೈತಿಕ ಉನ್ನತಿ ಹೊಂದಿ, ಧರ್ಮದ ತತ್ವಗಳನ್ನು ಆಚರಣೆಯಲ್ಲಿ ತಂದವನೇ ನಿಜವಾದ 'ಉನ್ನತಿ' ಹೊಂದಿದವನು. ಡಾ. ಅಂಬೇಡ್ಕರ್ ಈ ಉನ್ನತ ವರ್ಗಕ್ಕೆ ಸೇರಿದವರು. ಜನರಿಗಾಗಿಯೂ ಇದನ್ನೇ ಬಯಸಿದರು.

ಲಕ್ಷೋಪಲಕ್ಷ ಜನ ಬಾಬಾಸಾಹೇಬರೊಟ್ಟಿಗೆ ನಾಗಪುರದಲ್ಲಿ ಅಕ್ಟೋಬರ್ ೧೪, ೧೯೫೬ರಂದು ಬೌದ್ಧ ಧರ್ಮ ಸ್ವೀಕರಿಸಿದರು. ಇಂದಿಗೂ ಆ 'ಚೈತ್ಯ ಭೂಮಿ' ಅಸ್ಪೃಶ್ಯರಿಗೆ ಸ್ಫೂರ್ತಿ ನೀಡುತ್ತದೆ. ಅವರಿಗೆ ಆತ್ಮೋನ್ನತಿಯ ಮಾರ್ಗ ತೋರಿಸುತ್ತದೆ.

ದಶಕಗಳು ಗತಿಸಿಹೋದರೂ, ಸರಕಾರಗಳು ಉರುಳಿ ಹೋದರೂ, ಅಸ್ಪೃಶ್ಯರ ಬದುಕು ಸಾಮಾಜಿಕವಾಗಿ ಇನ್ನೂ ಕೆಳಮಟ್ಟದಲ್ಲಿದೆ. ಊರ ಹೊರಗಿನ ಕೇರಿಗಳು ಬೆಳೆಯುತ್ತಿವೆ. ರಾಜಕೀಯಕ್ಕಾಗಿ, ಇನ್ನಿತರ ಸ್ವಾರ್ಥ ಸಾಧನೆಗಾಗಿ ಆ ಕೇರಿಗಳನ್ನು ಒಡೆದು ವಿಭಜಿಸಲಾಗುತ್ತಿದೆ. ಅವರವರಲ್ಲೇ ವೈಷಮ್ಯ, ಈರ್ಷೆ, ವೈರತ್ವ ಬೆಳೆಸಲಾಗುತ್ತಿದೆ. ಶತಮಾನದಿಂದ ಅಂಧಕಾರದಲ್ಲಿರುವ ಈ ಜನರು ಅತ್ಯಂತ ಸಣ್ಣ ಅಮಿಷ ತೋರಿಸಿದರೂ ಅದಕ್ಕೊಳಗಾದರೆ ಆಶ್ಚರ್ಯವಿಲ್ಲ. ಜಗತ್ತು ಮುಂದೋಡುತ್ತಿರುವಾಗ ಈಗ ಕಣ್ತೆರೆದು ಆ ಬೆಡಗಿನ, ಬೆಳಕಿನ ಜಗತ್ತನ್ನು ನೋಡುತ್ತಿರುವ ಈ ಇಪ್ಪತ್ತು ಕೋಟಿ ಜನರಿಗೆ ಮಾರ್ಗದರ್ಶನವೀಯುವ, ದಾರಿ ತೋರುವ ಅಂಬೇಡ್ಕರ್ ಬೆಳಕು ಆರಿಹೋಗಿದೆ. ಆದರೆ ಆ 'ಚೈತನ್ಯ ಭೂಮಿ', ಆ ದೀಪ ಹಿಂದೆ ಬಿಟ್ಟು ಹೋಗಿರುವ ನುಡಿಗಳ, ನೆನಪಿನ ಹೊಂಬೆಳಕು ಇನ್ನೂ ಯಾವಾಗಲೂ, ಅರಸುವವರಿಗೆ ಸನ್ಮಾರ್ಗ ತೋರಿಸುತ್ತದೆ. ಅಸ್ಪೃಶ್ಯರ ಆತ್ಮೋನ್ನತಿಗೆ ದಾರಿದೀಪವಾಗಿದೆ. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಸಾಮಾಜಿಕ ಕ್ರಾಂತಿಯಾಗಿ ಸಾಮ್ರಾಜ್ಯಶಾಹಿ

(೩೭ನೇ ಪುಟದಿಂದ)
ಪಟ್ಟಂತಿತ್ತು, ಇದೆಲ್ಲ ಪಾಶ್ಚಾತ್ಯ ಸಂಸ್ಕೃತಿಯ ಸಂಕೇತವಷ್ಟೇ. ಭಾರತೀಯ ಮನೋಧರ್ಮವನ್ನು ಒಮ್ಮೆ ನೋಡಿ. ವರ್ಣಮಹಿಳೆಯು ಎಂದೂ ಅಷ್ಟೊಂದನ್ನು ತೆರೆಯಲು ಬಲಾತ್ಕಾರ ಅಥವಾ ಪ್ರಚೋದನೆಗೆ ಒಳಪಟ್ಟರಲಿಲ್ಲ, ನಿಜವೆಂದರೆ ಪೌರತ್ವವಿಲ್ಲದವರೂ ನಿರ್ದಿಷ್ಟವಾಗಿ ಅಸ್ಪೃಶ್ಯರು. ಆದರೆ ದೇಹಗಳನ್ನು ಬೆತ್ತಲೆ ಮಾಡಿಕೊಳ್ಳುತ್ತಿದ್ದ ರಷ್ಟೇ. ಅದು ಅವರ ಸಮ್ಮತಿಗೆ (ಇಚ್ಛೆಗೆ) ವಿರೋಧವಾಗಿ. ಆದರೆ ಸಾಮ್ರಾಜ್ಯಶಾಹಿಗಳು ಸಮ್ಮತಿಯನ್ನು ಸಹ ತಯಾರಿಸುತ್ತಾರೆ. ಇಂಗ್ಲಿಷ್ ಶಿಕ್ಷಿತ ಪೋಷಕರು ಸಾಂಸ್ಕೃತಿಕವಾಗಿ ಕಲುಷಿತಗೊಂಡು ತಮ್ಮ ಮಕ್ಕಳನ್ನು ಅಂಥ ಪ್ರದರ್ಶನಕ್ಕೆ ಸಮ್ಮತಿಸುತ್ತಾರೆ. ಗೌರವವಿಲ್ಲದ ಇವರಿಗೆ ಭಾರತೀಯ ಸಂಸ್ಕೃತಿಯೆಂದರೆ ಸನಾತನಿ, ಮಡುಗಟ್ಟಿದ ಸಂಗತಿಯಷ್ಟೇ.

ಸಾಮ್ರಾಜ್ಯಶಾಹಿ ಅಭಿವೃದ್ಧಿಗೊಂಡ ಸಮಾಜಗಳನ್ನು ಮೊದಲು ಸಂಸ್ಕೃತಿಗಳನ್ನು ನಾಶಮಾಡುತ್ತದೆ. ಅವರು ತಮ್ಮ ತಯಾರಿಕೆಗಳಿಗೆ ಸೂಕ್ತವಾದ ವಾತಾವರಣವನ್ನು ಸೃಷ್ಟಿಸುತ್ತಾರೆ ಮತ್ತು ಸರಳಮನಸ್ಸಿನ ಪ್ರಜೆಗಳನ್ನು ಗ್ರಾಹಕರನ್ನಾಗಿ ಪರಿವರ್ತಿಸುತ್ತಾರೆ. ಅರೆನಗ್ನ ಮಹಿಳೆಯರು ಈ ಗ್ರಾಹಕ ಪ್ರವೃತ್ತಿಯ ಬಲಿಪಶುಗಳಷ್ಟೇ. ಅವರೆಲ್ಲ ಬಾಟಲಿ ನೀರು ಇಷ್ಟಪಟ್ಟು ಕೋಕ್, ಪೆಪ್ಸಿಗಳಿಗೆ ಮಾರುಹೋಗುತ್ತಾರೆ. ಈ ಬಾಟಲಿ ಪೇಯಗಳಿಗೆ ಮುಗಿಬಿದ್ದ ಅವರು ಭಾರತೀಯ ಹತ್ತಿ ಉದ್ಯಮಕ್ಕೆ ಬೆನ್ನೆಲುಬಾದ ಟಿಸ್ಯೂ ಪೇಪರ್ ನ್ಯಾಪ್‌ಕಿನ್‌ಗಳನ್ನು ಕೊಳ್ಳುತ್ತಾರೆ. ಇದು ಸಾಮ್ರಾಜ್ಯಶಾಹಿಗಳ ಟಿಸ್ಯೂ ಪೇಪರ್ ಉದ್ಯಮವನ್ನು ಮತ್ತಷ್ಟು ಪ್ರಚೋದಿಸುತ್ತದೆ. ಈ ಗ್ರಾಹಕವರ್ಗವು ತದನಂತರ ಇ-ಮೇಲ್‌ನ ಮೂಲಕ ಸುದ್ದಿಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಇದು ಕಂಪ್ಯೂಟರ್ ಮೈಕ್ರೊಸಾಫ್ಟ್ ಉದ್ಯಮಗಳಿಗೆ ಶಕ್ತಿಯನ್ನು ಕೊಡುತ್ತದೆ. ಈ ಗ್ರಾಹಕ ಪ್ರವೃತ್ತಿಯ ಭಾರತೀಯರು ಹಾರಲು ಇಷ್ಟಪಡುವುದರಿಂದ ಬೋಯಿಂಗ್, ಏರ್‌ಬಸ್ ಉದ್ಯಮಗಳು ಮತ್ತಷ್ಟು ಬೆಳೆಯಲು ಬೆಂಬಲ ನೀಡುತ್ತಾರೆ.

ಈ ಸಾಮ್ರಾಜ್ಯಶಾಹಿಗಳು ಹುನ್ನಾರದಿಂದಾಗಿ ತಮ್ಮ ಮನೆಗಳಲ್ಲಿ ಅಥವಾ ಅಲ್ಮೆರಾಗಳಲ್ಲಿ ಬಚ್ಚಿಟ್ಟ ಭಾರತೀಯರ ಹಣ ವಿನಿಮಯಕ್ಕೆ ಬಂದು ಮಾರುಕಟ್ಟೆ ಕೈಕಾರೀಕರಣ, ನಗರೀಕರಣವನ್ನು ವಿಸ್ತರಿಸಲು ಕಾರಣವಾಗುತ್ತದೆ. ಕೈಗಾರೀಕರಣ ಮತ್ತು ನಗರೀಕರಣಗಳು ಸಾಮ್ರಾಜ್ಯಶಾಹಿಗಳ ಒಂದು ತಂತ್ರವಷ್ಟೇ. ಸಂಪೂರ್ಣ ಕೈಗಾರೀಕರಣಗೊಂಡ, ನಗರೀಕರಣಗೊಂಡ ಭಾರತವೆಂದರೆ ಭಾರತೀಯ ಸಂಸ್ಕೃತಿಯಲ್ಲದೆಂದರ್ಥವಷ್ಟೇ. ಹಿಂದೂ ಧರ್ಮವು ಕೂಡಾ ಕ್ರೈಸ್ತ ಧರ್ಮದೀಕ್ಷೆಯಷ್ಟು ಸಾಮಾಜಿಕ ವ್ಯವಸ್ಥೆಯಲ್ಲಿ ಬಿಕ್ಕಟ್ಟಿಗೆ ಕಾರಣವಾಗುತ್ತದೆ. ನಿಜವಾಗಿಯೂ ಪೂರ್ಣ ಕೈಗಾರೀಕರಣಗೊಂಡ, ನಗರೀಕರಣಗೊಂಡ ಭಾರತದಲ್ಲಿ ವರ್ಣವ್ಯವಸ್ಥೆಯ ಸಮಾಜವು ಕ್ಷೀಣವಾಗಿ ಹಿಂದೂ ಧರ್ಮವನ್ನು ಸಹ ನಾಶಗೊಳಿಸುವಂತಾಗುತ್ತದೆ. ಈ ವರ್ಣ, ಜಾತಿ ಭೇದಗಳಿಲ್ಲದ ಹಿಂದೂ ಧರ್ಮವೇನಾದರೂ ಇದೆಯಾ! ಭಾರತವು ಒಂದು ಮುಚ್ಚಿದ ಸಮಾಜ. ಅದರೊಳಗೆ ಶಾಂತಿ ಮತ್ತು ಸೋದರತ್ವದ ನಿಯಮಗಳು ಇದ್ದರೂ ಸಹ, ಸಾಮ್ರಾಜ್ಯಶಾಹಿಗಳು, ಕಾರ್ಲ್‌ಮಾರ್ಕ್ಸ್‌ನ್ನೊಳಗೊಂಡಂತೆ, 'ಭಾರತೀಯರನ್ನು ಮುಚ್ಚಿದ ಮನೆ'ಗಳೆಂದೂ ದೂರುತ್ತಾರೆ. ಭಾರತೀಯ ಸಮಾಜದ ಮೇಲೆ ದೇಶಿ ಕಾಲುಗಳನ್ನು ಉಪಯೋಗಿಸಿ ಸಾಮ್ರಾಜ್ಯಶಾಹಿಗಳು ಸವಾರಿ ಮಾಡುತ್ತಿದ್ದರೆ, ಡೆಲ್ಲಿಯ ಅಧಿಕೃತ ರಾಷ್ಟ್ರೀಯವಾದಿಗಳು ಜಯಘೋಷ ಮಾಡುತ್ತಿದ್ದು ಮುಂಬಯಿಯಲ್ಲಿ ಡಬ್ಲ್ಯೂಎಸ್‌ಎಫ್‌ನ ಅನಧಿಕೃತ ರಾಷ್ಟ್ರೀಯವಾದಿಗಳು ಸಿಂಧು ರಾಷ್ಟ್ರದ ಬಾವುಟವನ್ನು ಹಾರಿಬಿಟ್ಟಿದ್ದರು. □

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ.

* ಯಾವುದೇ ಜ್ವರ ಮಲೇರಿಯ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
* ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
* ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
* ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
* ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
* ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
* ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
* ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
* ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿ ವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
* ಹರಿಯದೇ ನಿಂತ ನೀರು-ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ-ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ

ಹೊಸ ಪುಸ್ತಕ

ಬುದ್ಧ ಹೇಳಿದ ಕಥೆ

ಲೇ. ಎಸ್ ಮಾಲತಿ

ಬೆಲೆ: ರೂ ೨೫/-

ಬುದ್ಧನ ಜಾತಕ ಕಥೆಯೊಂದನ್ನು ಆಧರಿಸಿ ಬರೆದ ನಾಟಕವೂ ಸೇರಿದಂತೆ ಒಟ್ಟು ಮೂರು ನಾಟಕಗಳನ್ನು ಕೃತಿಯು ಒಳಗೊಂಡಿದೆ. ಮಕ್ಕಳಿಗಾಗಿಯೇ ರಚಿಸಲಾಗಿರುವ ಈ ನಾಟಕಗಳಲ್ಲಿ ಸರಳ ಪ್ರಾಸಗಳನ್ನೊಳಗೊಂಡ ಕೆಲ ಹಾಡುಗಳಿವೆ. ಈಗಾಗಲೇ ವಿವಿಧೆಡೆ ಪ್ರಸಾರಗೊಂಡು, ಪ್ರದರ್ಶನಗೊಂಡಿರುವ ಇಲ್ಲಿನ ನಾಟಕಗಳು ಮಕ್ಕಳಲ್ಲಿರುವ ಪ್ರತಿಭೆ, ಜ್ಞಾನದ ಮಟ್ಟವನ್ನು ಹೆಚ್ಚಿಸಲು ಪೂರಕವಾಗಿವೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು-೫೬೦ ೦೦೧



ನನ್ನ ಕನಸಿನ ಭಾರತ

ಲೇ. ಅಹ್ಮದ್ ಅನ್ವರ್

ಬೆಲೆ: ರೂ. ೩೫/-

ಪ್ರಚಲಿತ ಭಾರತದಲ್ಲಿ ತಾಂಡವವಾಡುತ್ತಿರುವ ಅನೇಕ ಸಮಸ್ಯೆಗಳನ್ನು ಕಂಡು ರೋಸಿ ಹೋಗಿ ಅವುಗಳನ್ನು ಸಾಹಿತ್ಯಾಭಿವ್ಯಕ್ತಿಯಾಗಿ ಕಂಡರಿಸಿದಾಗ ಹುಟ್ಟಿಕೊಂಡ ಲೇಖನಗಳು ಈ ಕೃತಿಯಲ್ಲಿವೆ. ಕೇವಲ ಸಾಮಾಜಿಕ ಸಮಸ್ಯೆಗಳ ಬಗ್ಗೆಯೇ ಅಲ್ಲದೆ ಇತರೆ ವಿಚಾರಗಳ ಕುರಿತೂ ಬರೆದಿರುವುದು ಪುಸ್ತಕವನ್ನು ಸರಳವಾಗಿ ಓದಿಸಿಕೊಂಡು ಹೋಗುತ್ತದೆ.

ಪ್ರಕಾಶಕರು : ವಿಚಾರ ಪ್ರಕಾಶನ
ಹೆಪ್ಪಿ ಹೋಮ್ ಅಪಾರ್ಟ್‌ಮೆಂಟ್ಸ್,
ಬಿ-ವಿ ಂಗ್, ನಂ.೩೬, ೩ನೇ ಮಹಡಿ,
ಆರ್ಯಸ ಮಾಜ ರಸ್ತೆ, ಬಲ್ಮಠ,
ಮಂಗಳೂರು - ೫೭೫ ೦೦೩.

ಹರಿಯುವ ನದಿಗೆ ಮೈಯೆಲ್ಲ ಕಾಲು

ಲೇ. ಜಂಬಣ್ಣ ಅಮರಚಿಂತ

ಬೆಲೆ: ರೂ. ೮೦/-

ಕಳೆದ ಹಲವು ವರ್ಷಗಳಿಂದ ಕಾವ್ಯ ಕೃಷಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿರುವ ಬಂಡಾಯ ಸಂವೇದನೆಯ ಕವಿ ಜಂಬಣ್ಣ ಅಮರಚಿಂತ ಅವರ ಒಟ್ಟು ೪೭ ಕವಿತೆಗಳು ಇಲ್ಲಿವೆ. ಅಮರಚಿಂತ ಅವರದು ಅದೇ ಬಂಡಾಯ ಕಾವಿನ ಮೊನಚು ದನಿ. ಸಾಮಾಜಿಕ ಅಸಮಾನತೆಯ, ದೀನ, ದಾರಿದ್ರ್ಯ ಕುರಿತು ಒಡ ಮೂಡುವ ಸಾಲುಗಳು; ತಾತ್ವಿಕತೆಯನ್ನು ಮೂಡಿಸಲೆತ್ನಿಸುವ ಗಜಲ್‌ನ ಸಾಲುಗಳು, ಕಥನ ಕವನಗಳು, ಹಾಡುಗಳು ಗಮನ ಸೆಳೆಯುತ್ತವೆ.

ಪ್ರಕಾಶಕರು: ನಾಗಶ್ರೀ ಪ್ರಕಾಶನ.
ಬೆಂಗಳೂರು.

ಬಿಸಿಲ್ಗುದುರೆ ಬೆನ್ನೇರಿ

ಲೇ. ಭಗತರಾಜ ನಿಜಾಮಕಾರ

ಬೆಲೆ: ರೂ.೮೦/-

ಹೈದಾರಬಾದ ಕರ್ನಾಟಕದ ಕವಿ ಭಗತ ರಾಜ ನಿಜಾಮಕಾರರ ಎರಡನೇ ಕವನ ಸಂಕಲನ. ಬಂಡಾಯ ಸಾಹಿತ್ಯದ ಪ್ರಖರತೆಯಲ್ಲಿ ತಮ್ಮ ಕವಿತೆಗಳನ್ನು ಗುರುತಿಸಿಕೊಂಡ ಕವಿಯ ಈ ಕೃತಿಯಲ್ಲಿಯೂ ಸಹಜ ವಾಗಿಯೇ ಬಂಡಾಯ ಪ್ರಜ್ಞೆಯ ಸಾಲುಗಳಿವೆ. ಬಂಡಾಯವೆಂದ ಮಾತ್ರಕ್ಕೆ ಸುಡು ಸುಡು ಪದ್ಯಗಳು ಮಾತ್ರವೆಂದೇನಲ್ಲ, ಪ್ರೀತಿ, ಶಿಶಿರ, ಮುಂಗಾರು ಮತ್ತಿತರ ಪ್ರಕೃತಿ ಸಂಬಂಧಿ ಕವಿತೆಗಳ ಮೂಲಕವೂ ಆ ಕವಿಯ ವೈವಿಧ್ಯಮಯತೆ ವ್ಯಕ್ತವಾಗಿದೆ.

ಪ್ರಕಾಶಕರು : ನಾಗಶ್ರೀ ಪ್ರಕಾಶನ, ಬೆಂಗಳೂರು.



ಇಮ್ಮಾವು

ಲೇ. ಪ್ರೊ. ಶಿವರಾಮಯ್ಯ

ಬೆಲೆ: ರೂ. ೧೦೦/-

ತಮ್ಮ ಸ್ಪಷ್ಟ ವೈಚಾರಿಕ ಚಿಂತನೆಗಳಿಗೆ ಹೆಸರಾದ ಪ್ರೊ. ಶಿವರಾಮಯ್ಯ ಅವರ ೧೪ ವಿಮರ್ಶಾ ಲೇಖನಗಳನ್ನೊಳಗೊಂಡ ಕೃತಿ. ಕನ್ನಡ ನೆಲದ ದೇಸಿ ಸಂವೇದನೆಯನ್ನು ರೂಪಿಸಲೆತ್ನಿಸಿದ ಪಂಪ, ಕುಮಾರವ್ಯಾಸ, ದೇವಚಂದ್ರ, ಕುವೆಂಪು ಅವರುಗಳ ಸಾಹಿತ್ಯದ ಕುರಿತ ಚರ್ಚೆಗಳು ಇಲ್ಲಿವೆ. ಕನ್ನಡ ಜಾನಪದ ಸಾಹಿತ್ಯದಲ್ಲಿ 'ವೈಭವೀಕರಣಕ್ಕೊಳಗಾಗಿರುವ' 'ಕೆರೆಗೆಹಾರ' ಕಥಾನಕವನ್ನು ದಲಿತ ಮೌಲ್ಯದ ಹೈಜಾಕೀಕರಣವೆಂದು ಲೇಖಕರು ವಿಶ್ಲೇಷಿಸಿದ್ದಾರೆ.

ಪ್ರಕಾಶಕರು : ಪುಸ್ತಕ ಪ್ರಪಂಚ,
ನಂ.೬೬೧/ಎ, ೪ನೇ ಮುಖ್ಯರಸ್ತೆ,
ಪೈಪ್‌ಲೈನ್, ಬೆಂಗಳೂರು-೫೬೦ ೦೫೦



ಒಂದು ಬೊಗಸೆ ಧ್ಯಾನ

ಲೇ. ಸಂಕುಲ ಜೀವ

ಬೆಲೆ:ರೂ.೫೦/-

ಈಗಾಗಲೇ ಸಾಹಿತ್ಯದ ವಲಯದಲ್ಲಿ ಕವಿಯಾಗಿ ತಮ್ಮನ್ನು ಗುರುತಿಸಿಕೊಂಡಿರುವ ಸಂಕುಲಜೀವ (ಡಾ.ಸಂಜೀವ ಕುಲಕರ್ಣಿ) ಅವರ ಈ ಕೃತಿ ಧ್ಯಾನದ ವಿವಿಧ ಮುಖಗಳನ್ನು ನಿರೂಪಿಸುವ ಚಿಂತನ ಬರಹಗಳ ಸಂಕಲನವಾಗಿದೆ. ಧ್ಯಾನದ ಕುರಿತು ಹಲವು ಕಿರುಪದ್ಯಗಳನ್ನು ಒಳಗೊಂಡಿರುವ ಈ ಸಂಕಲನದಲ್ಲಿ ಲೇಖಕರು ಗದ್ಯದ ಮೂಲಕವೂ ಧ್ಯಾನದ ಬಗ್ಗೆ ತಮ್ಮ ವಿಚಾರಗಳನ್ನು ತೆರೆದಿಟ್ಟಿದ್ದಾರೆ. 'ಝೆನ್'ತತ್ವದ ಸಾಲುಗಳ ಮಾದರಿಯಲ್ಲಿರುವ ಇಲ್ಲಿನ ಕೆಲವು ಬರಹಗಳು ತಟ್ಟನೆ ಗಮನ ಸೆಳೆಯುತ್ತವೆ. ಲೇಖಕರದೇ ಅಭಿಪ್ರಾಯದಂತೆ 'ಧ್ಯಾನದ ಖರ್ಚು ಹಕ್ಕಿಗಳ ಇಂಚರದಷ್ಟು' ಎಂಬಷ್ಟೇ ಸರಳವಾದ ಕೃತಿ.

ಪ್ರಕಾಶಕರು : ಆತ್ಮದೀಪ ಪ್ರಕಾಶನ,
ಧಾರವಾಡ -೫೮೦೦೦೭

Statement about ownership and other particulars about newspaper

FORM IV

1.	Place of Publication	:	Bangalore
2.	Periodicity of its publication	:	Monthly
3.	Printer's Name	:	**S.R. Govindu**
	Nationality		Indian
	Address		No. 63, Anjananagar, Vishwaneedam Post, Bangalore-560 091
4.	Publisher's Name	:	**S.R. Govindu**
	Nationality		Indian
	Address		No. 63, Anjananagar, Vishwaneedam Post, Bangalore-560 091
5.	Editor's Name	:	**Indudhara Honnapura**
	Nationality		Indian
	Address		No. 402, 1st main, 2nd Block, HBR Layout, Bangalore-560 043
6.	Name and address of individuals who own the newspaper and partners and shareholders holding more than one per cent of the total capital	:	Spoorthidhama, No. 63, Anjananagar, Vishwaneedam Post, Bangalore - 560 091 (Sole proprietors)

I, **S.R. Govindu,** hereby declare that the particulars given above are true to the best of my knowledge and belief.

Date: 28-02-2004

Sd/-
S.R. Govindu
Publisher

ಮೂರು ವಚನಗಳು

ಮಾನವ ಜನ್ಮ ದೊಡ್ಡದಲ್ಲ, ಮಾನವತೆ ದೊಡ್ಡದು
ಧರ್ಮದೊಡ್ಡದಲ್ಲ, ದಯೆದೊಡ್ಡದು
ಕೈಲಾಸ ದೊಡ್ಡದಲ್ಲ, ಕಾಯಕ ದೊಡ್ಡದು
ವಿದ್ಯೆ ದೊಡ್ಡದಲ್ಲ, ಅನುಭವ ದೊಡ್ಡದು
ಬಸವಪ್ರಿಯ ಮುರುಘರಾಜೇಂದ್ರ ಪ್ರಭುವೆ
ನೀ ದೊಡ್ಡವಲ್ಲ, ನಿನ್ನನ್ನರಿವ ಮನ ದೊಡ್ಡದು

*

ಹೆಣ್ಣು ಹುಟ್ಟಿದರೆ ಪೀಡೆ ಹುಟ್ಟಿತೆಂಬರು
ಗಂಡು ಹುಟ್ಟಿದರೆ ಪೇಡ ಹಂಚುವರು
ಹೆಣ್ಣು ಹುಟ್ಟಲು ಹೊರೆ ಎನ್ನುವರು
ಗಂಡು ಹುಟ್ಟಲು ದೊರೆಯೆಂದು ಭಾವಿಸುವರು
ಬಸವಪ್ರಿಯ ಮುರುಘರಾಜೇಂದ್ರ ಪ್ರಭುವೆ
ಹೆಣ್ಣಿಲ್ಲದೆ ಗಂಡು ಬಂದದ್ದಾದರೂ ಹೇಗೆ ಹೇಳಾ?

*

ಕುಡಿಯಬೇಡ ಜೂಜಾಡಬೇಡ
ಸೇದಬೇಡ ಗುಟ್ಕಾ ಹಾಕಬೇಡ
ವ್ಯಭಿಚಾರಬೇಡ ಲಂಚಕೆ ಕೈಯೊಡ್ಡಬೇಡ
ವರದಕ್ಷಿಣೆಬೇಡ ದ್ವೇಷಾಸೂಯೆ ಸಾಧಿಸಬೇಡ
ಬಸವಪ್ರಿಯ ಮುರುಘರಾಜೇಂದ್ರ ಪ್ರಭುವೆ
ಇದುವೆ ಶುದ್ಧಿ; ಜೀವನ ಸಿದ್ಧಿ ನೋಡಾ!

-ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು

ಕ್ರಿಕೆಟ್, ಕೋಲಾ, ದೇವಾಲಯ

(೩೯ನೇ ಪುಟದಿಂದ)

ಈ ತಂಪು ಪಾನೀಯಗಳನ್ನು ಕುಡಿಯುವವರು ಅನೇಕ ರೀತಿಯ ಮಾನಸಿಕ ಒತ್ತಡಗಳಿಂದ ನರಳುತ್ತಿದ್ದಾರೆ. ಯುವಕರಿಗೆ ಪೋಷಕರು ಮತ್ತು ಅಧ್ಯಾಪಕರ ಮಾತುಗಳೂ ಸಿನಿಮಾದಲ್ಲಿನ ಖಳನಾಯಕರ ಮಾತುಗಳಂತೆ ಕಾಣುತ್ತಿದ್ದು ,ಪ್ರೀತಿ ಪ್ರೇಮ ಎನ್ನುವ ಹುಚ್ಚಿನ ಜೊತೆಗೆ ಅನೇಕ ಕೆಟ್ಟ ಚಾಳಿಗಳಿಗೆ ಅವರು ಸೆಳೆತಗೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಯುವ ಪೀಳಿಗೆ ಮನೋರೋಗಿಗಳಾಗಿ ಹಿಂದೆಂದಿಗಿಂತ ಇಂದು ಅತ್ಯಂತ ದುಃಸ್ಥಿತಿಯಲ್ಲಿದೆ. ಇದಕ್ಕೆಲ್ಲ ಕಾರಣ ಜಾಗತೀಕರಣ ಎನ್ನೋಣವೆ....! ಬಹುರಾಷ್ಟ್ರೀಯ ಕಂಪನಿಗಳ ದುರಾಲೋಚನೆ? ಎನ್ನೋಣವೆ. ನಮ್ಮ ಸಿನಿಮಾ ನಟರು, ರಾಜಕಾರಣಿಗಳು, ಕ್ರಿಕೆಟ್ ಆಟಗಾರರ ದುಡ್ಡಿನ ಆಮಿಷ ಎನ್ನೋಣವೆ...?

ಈಗ ದೇವಾಲಯಗಳ ಕಡೆಗೆ ಬರೋಣ. ಮತೀಯವಾದಿಗಳು ದೇವಾಲಯ, ಚರ್ಚು, ಮಸೀದಿಗಳನ್ನು, ಬೀದಿ, ಗಲ್ಲಿ, ರಸ್ತೆ, ಪಾರ್ಕ್ ಕಛೇರಿ, ಕಾಲೇಜು ಎಲ್ಲೆಲ್ಲೂ ರಾತ್ರೋರಾತ್ರಿ ನಿರ್ಮಿಸುತ್ತಿದ್ದಾರೆ. ಶುಕ್ರವಾರದ ದಿನ ಯಾವುದೇ ಕಛೇರಿಗೆ ಹೋದರೂ ಆ ದಿನ ಪೂಜೆಗಳು ಮಾತ್ರ ನಡೆಯುತ್ತಿರುತ್ತವೆ. ಬ್ಯಾಂಕುಗಳಲ್ಲಿ ಯಾವಾಗಲು ಗಾಯತ್ರಿ ಮಂತ್ರಗಳು ಮೊಳಗುತ್ತಿರುತ್ತವೆ. ಇವೆಲ್ಲವೂ ನಷ್ಟವನ್ನು ಅನುಭವಿಸುತ್ತ ದಿವಾಳಿ ಎದ್ದುಹೋಗುತ್ತಿವೆ. ಮತೀಯವಾದಿಗಳ ಅಟ್ಟಹಾಸ ಎಲ್ಲಿಯ ತನಕ ಹೋಗಿದೆ ಎಂದರೆ ಇತ್ತೀಚೆಗೆ ದೇಶವೆ ತಲೆತಗ್ಗಿಸುವಂತಹ ಘಟನೆಗಳು ಗುಜರಾತ್ ರಾಜ್ಯದಲ್ಲಿ ನಡೆದು ಹೋದವು. ಅದರ ಎಳೆಗಳನ್ನು ನಾವು ಕೆದಕುತ್ತಾ ಹೋದರೆ ಅದು ಅಯೋಧ್ಯೆಯಲ್ಲಿ ನೆಲಸಮವಾದ ಬಾಬ್ರಿ ಮಸೀದಿಗೆ ನಮ್ಮನ್ನು ಕೊಂಡೊಯ್ಯುತ್ತದೆ. ಇನ್ನೂ ಮುಂದೆ ಸಾಗಿದರೆ ಮಹಾತ್ಮಗಾಂಧಿ ಬಲಿಯಾಗಿದ್ದು ಇಂತಹ ಘಟನೆಯ ಹಿನ್ನಲೆಯಿಂದಲೇ. ಮನುಷ್ಯ ಮನುಷ್ಯನಾಗದೆ ಮತೀಯ ಮೃಗವಾಗಿ ಬೆಳೆಯುತ್ತ ಹೋಗುತ್ತಿದ್ದಾನೆ. ಇದಕ್ಕೆ ಯಾವ ಧರ್ಮವೂ ಹೊರತಲ್ಲ,

ಅಮೆರಿಕಾದ ದೊಡ್ಡಣ್ಣ ಈ ದಿನ ತಾನು ಹೇಳಿದ್ದೇ ಮಾತು, ನಡೆದದ್ದೇ ದಾರಿಯಾಗಿದೆ, ಎಣ್ಣೆಗಾಗಿ ಇಡೀ ಅರೆಬಿಯನ್ ದೇಶಗಳನ್ನೇ ಛಿದ್ರವಾಗಿಸಿಬಿಟ್ಟಿತು. ಒಂದು ದೇಶದ ಒಳಗೆ ನುಗ್ಗಿ ಆ ದೇಶದವರನ್ನೇ ಸಾಯಿಸಿ ಸೆರೆ ಹಿಡಿದು ಗಲ್ಲಿಗೇರಿಸುವುದೆಂದರೆ ನಾವು ಯಾವ ಕಾಲದಲ್ಲಿದ್ದೇವೆ ಎನ್ನುವುದರ ಗುಮಾನಿ ಬರುತ್ತದೆ. ಜೊತೆಗೆ ಎಲ್ಲರನ್ನೂ ಹದ್ದುಬಸ್ತಿನಲ್ಲಿಡಲು ಅಮೆರಿಕಾದ ಕೈಯಲ್ಲಿ ಆಧುನಿಕ ತಂತ್ರಜ್ಞಾನದ ಮಿಸ್ಸೈಲ್, ರ್‍ಯಾಕೆಟ್, ರಾಡಾರು, ಬಾಂಬ್‌ಗಳು ಇವೆ.

ದೇಶದ ಬಹುಸಂಖ್ಯಾತ ಜನರು ಹೊಟ್ಟೆಗೆ ಹಿಟ್ಟಿಲ್ಲದೆ ಕುಡಿಯಲು ನೀರಿಲ್ಲದೆ ಪರದಾಡುತ್ತಿದ್ದರೂ, ಅವರೆಲ್ಲ ಕ್ರಿಕೆಟ್ ನೋಡುತ್ತ ತಂಪು ಪಾನೀಯ ಕುಡಿಯುವ ಭಾಗ್ಯವನ್ನು ನಮ್ಮ ದೇಶ ಈಗ ಒದಗಿಸಿಕೊಟ್ಟಿದೆ. ಜೊತೆಗೆ ಎಲ್ಲೆಲ್ಲೂ ದೇವಾಲಯಗಳನ್ನು ನಿರ್ಮಿಸುತ್ತ ಆಧ್ಯಾತ್ಮಿಕತೆಯ ಕಡೆಗೆ ದೇಶವನ್ನು ಕೊಂಡೊಯ್ಯಲಾಗುತ್ತಿದೆ. ಇದರಿಂದ ದೇಶದ ಬಹುಸಂಖ್ಯಾತ ಜನರಿಗೆ ಲಾಭವಿದೆಯೋ ಇಲ್ಲವೋ ಆದರೆ ಬಹುರಾಷ್ಟ್ರೀಯ ಕಂಪನಿಗಳಿಗೆ, ಕ್ರಿಕೆಟ್ ಆಟಗಾರರಿಗೆ, ರಾಜಕಾರಣಿಗಳಿಗೆ, ವ್ಯಾಪಾರಿಗಳಿಗೆ ದೇವಾಲಯಗಳಲ್ಲಿ ಮಣಮಣ ಮಂತ್ರಗಳನ್ನು ಉದುರಿಸುವವರಿಗೆ ಮಾತ್ರ ಐಷರಾಮ, ವೈಭೋಗ ಜೀವನ ಒದಗಿಬಂದಿದೆ. □

ಝೆನ್ ಅವಲೋಕನ ಕಥೆ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



ಸ-ಕಾಲ

ಗುರು ಇಕ್ಕ್ಯು, ಇನ್ನೂ ಬಾಲಕನಾಗಿದ್ದಾಗಲೇ ಭಾರಿ ಬುದ್ಧಿವಂತ ಎನ್ನಿಸಿಕೊಂಡಿದ್ದ. ಒಮ್ಮೆ ಆತ, ಅಚಾತುರ್ಯದಿಂದ ತನ್ನ ಗುರುವಿನ ಚಾ-ಬಟ್ಟಲನ್ನು ಒಡೆದು ಹಾಕಿದ. ಅದು, ಗುರುವಿಗೆ ವಂಶಪಾರಂಪರ್ಯವಾಗಿ ದೊರಕಿದ್ದ ಅಮೂಲ್ಯವಾದ ಬಟ್ಟಲು. ಇದರಿಂದ ಇಕ್ಕ್ಯು ತನ್ನಲ್ಲೇ ಕ್ಷೋಭೆಗೊಂಡ. ಏನು ಮಾಡುವುದೆಂದು ತೋಚದೆ ದಿಙ್ಮೂಢನಾಗಿ ಕೂತಿದ್ದ ಹೊತ್ತಿನಲ್ಲೇ, ಆ ಕಡೆಯಿಂದ ಗುರು ಬರುತ್ತಿರುವ ಸಪ್ಪಳ ಕೇಳಿಸಿತು. ತತ್‌ಕ್ಷಣವೇ ಆತ, ಆ ಬಟ್ಟಲಿನ ಚೂರುಗಳನ್ನು ತನ್ನ ವಸ್ತ್ರದಲ್ಲಿ ಅಡಗಿಸಿಕೊಂಡ.

ಗುರು ಬರುತ್ತಿರುವಂತೆ 'ಗುರುವೇ, ವಸ್ತುಗಳು ಯಾಕೆ ನಾಶಹೊಂದುತ್ತವೆ?' ಎಂದು ಆತನನ್ನು ಪ್ರಶ್ನೆ ಮಾಡಿದ.

'ವಸ್ತುಗಳು ನಾಶವಾಗುವುದು ತೀರ ಸಹಜವಾದದ್ದಪ್ಪಾ. ವಸ್ತು ನಾಶವಾಗುತ್ತದೆ ಮತ್ತು ಅದರಲ್ಲಿ ಬೆರೆತುಕೊಂಡ ಮೂಲದ್ರವ್ಯಗಳು ವಿಕೀರ್ಣಗೊಂಡು ತಮ್ಮ ಸ್ವರೂಪಕ್ಕೆ ಮರಳಿಕೊಳ್ಳುತ್ತವೆ. ಇದು ನಿಸರ್ಗಧರ್ಮ. ಕಾಲ ಬಂದಿತೆಂದರೆ, ಯಾವ ವಸ್ತುವಾದರೂ ಸರಿ, ಯಾವ ವ್ಯಕ್ತಿಯಾದರೂ ಸರಿ--ಹೋಗಲೇಬೇಕು' ಎಂದ, ಗುರು.

ಬಾಲಕ ಇಕ್ಕ್ಯು, ಈಗ ಬಟ್ಟಲಿನ ಚೂರುಗಳನ್ನು ಹೊರಕ್ಕೆ ತೆಗೆದಿಟ್ಟ ಹೇಳಿದ--'ಗುರುವೇ, ನಿಮ್ಮ ಬಟ್ಟಲಿಗೆ ಕಾಲ ಬಂದಿತು'.

ಒಡಪು-ದಂಡ

ಗುರು ಬಸೊ, ಒಬ್ಬ ಭಿಕ್ಷುವಿಗೆ ಹೀಗೆ ಹೇಳಿದ-

'ನೀನು ದಂಡ ಇಟ್ಟುಕೊಂಡದ್ದನ್ನು ಕಂಡೆನಾದರೆ, ನಿನಗೆ ನಾನು ದಂಡವನ್ನು ಕೊಡುತ್ತೇನೆ. ನೀನು ದಂಡವನ್ನು ಇಟ್ಟುಕೊಂಡಿಲ್ಲ ಎನ್ನುವುದನ್ನು ಕಂಡೆನಾದರೆ, ನಿನ್ನಿಂದ ನಾನು ದಂಡವನ್ನು ಕಸಿದುಕೊಳ್ಳುತ್ತೇನೆ.'

ಚಾ ತೆಗೆದುಕೋ

ಒಬ್ಬ ಭಿಕ್ಷು, ಅದೇ ಮೊದಲು ಆ ವಿಹಾರಕ್ಕೆ ಬಂದಿದ್ದ. ಗುರು ಜೊಶು ಆತನನ್ನು ಕರೆದು, 'ಅಯ್ಯಾ' ಹಿಂದೆ ಯವಾಗಲಾದರೂ ನಾನು ನಿನ್ನನ್ನು ಇಲ್ಲಿ ಕಂಡಿದ್ದುಂಟಾ?' ಅಂತ ಕೇಳಿದ.

'ಇಲ್ಲ ಸ್ವಾಮಿ. ತಾವು ಈ ಮೊದಲು ನನ್ನನ್ನು ಇಲ್ಲಿ ಕಂಡದ್ದಿಲ್ಲ', ಎಂದ ಆ ಭಿಕ್ಷು.

'ಹಾಗಾದರೆ, ಒಂದು ಲೋಟ ಚಾ ತೆಗೆದುಕೊ' ಎಂದ, ಜೊಶು.

ಅನಂತರ ಜೊಶು, ಇನ್ನೊಬ್ಬ ಭಿಕ್ಷುವಿನ ಕಡೆ ತಿರುಗಿ, 'ಅಯ್ಯಾ, ಹಿಂದೆ ಯಾವಾಗಲಾದರೂ ನಾನು ಇಲ್ಲಿ ನಿನ್ನನ್ನು ಕಂಡದ್ದುಂಟೋ?' ಎಂದು ಪ್ರಶ್ನಿಸಿದ.

'ಹೌದು ಸ್ವಾಮಿ. ಕಂಡಿದ್ದೀರಲ್ಲ' ಎಂದು ಆತ.

'ಹಾಗಾದರೆ, ಒಂದು ಲೋಟ ಚಾ ತೆಗೆದುಕೋ' ಎಂದು ಜೊಶು.

ಇದನ್ನೆಲ್ಲ ನೋಡುತ್ತ ನಿಂತಿದ್ದ ವಿಹಾರದ ಪಾರಪತ್ಯದಾರನಿಗೆ ಅರ್ಥವಾಗಲಿಲ್ಲ. ಆಮೇಲೆ, ಆತ ಜೊಶುವನ್ನು ಕೇಳಿದ -'ನಿಮ್ಮ ಪ್ರಶ್ನೆಗೆ ಇಲ್ಲ ಅಂತ ಉತ್ತರಿಸಿದವನಿಗೂ ಚಾ ತೆಗೆದುಕೊ ಎಂದಿರಿ, ಹೌದು ಎಂದವನಿಗೂ ಚಾ ತೆಗೆದುಕೋ ಎಂದಿರಿ- ಯಾಕೆ, ನನಗೆ ಅರ್ಥವಾಗಲಿಲ್ಲ' ಅಂದ.

ಜೊಶು ಗುಡುಗಿದ--

'ಪಾರುಪತ್ಯಗಾರ, ನೀನು ಇಲ್ಲೇ ಇದ್ದೀಯಾ?'

'ಹೌದಲ್ಲ ಸ್ವಾಮಿ' ಎಂದ ಆತ.

'ಹಾಗಾದರೆ, ಒಂದು ಲೋಟ ಚಾ ತೆಗೆದುಕೊ' ಎಂದು ಜೊಶು.

ದೋಚಿದ ತೋಚಿದ ಗುರು

ಶಿಚಿರಿ ಎಂಬ ಹೆಸರಿನ ವಿದ್ಯಾರ್ಥಿ, ಒಬ್ಬನೇ ಸೂತ್ರಗಳನ್ನು ಪಠಿಸಿಕೊಳ್ಳುತ್ತ ಕೂತಿದ್ದ. ರಾತ್ರಿಯಾಗಿತ್ತು. ಆಗ, ಯಾವನೋ ಒಬ್ಬ ಡಕಾಯಿತ ಗೊತ್ತಾಗದ ಹಾಗೆ ಈತನ ಕೋಣೆಯೊಳಕ್ಕೆ ಪ್ರವೇಶಿಸಿ, ಹಿಂಭಾಗದಿಂದ ಬಂದು ಬೆನ್ನಿಗೆ ಚೂರಿಯಿಟ್ಟು 'ಎಲ್ಲಿ ನಿನ್ನ ಹತ್ತಿರ ಎಷ್ಟು ಹಣವಿದೆ. ಕೊಡು' ಎಂದ. 'ಅಕೊ, ಅಲ್ಲಿ ಪೆಟ್ಟಿಗೆಯಲ್ಲಿದೆ ತೆಗೆದುಕೊ' ಎಂದು ಹೇಳಿ ಶಿಚಿರಿ ತನ್ನ ಪಠಣವನ್ನು ಮುಂದುವರಿಸಿದ.

ಡಕಾಯಿತ ಪೆಟ್ಟಿಗೆಯಿಂದ ಹಣವನ್ನು ದೋಚಿಕೊಂಡು ಹೊರಟಾಗ, ಶಿಚಿರಿಗೆ ಏನೋ ನೆನಪಾಯಿತು. ಡಕಾಯಿತನನ್ನು ಕರೆದು, 'ನೋಡಪ್ಪಾ, ನಾನು ತೆರಿಗೆ ಕೊಡಬೇಕಾದ್ದಿದೆ. ನಾಳೆ ವಸೂಲಿಗೆ ಬರುತ್ತಾರೆ. ಅದಕ್ಕಾಗಿ ಸ್ವಲ್ಪ ಅಲ್ಲೇ ಇಟ್ಟು ಹೋಗು' ಎಂದ. ಡಕಾಯಿತ ಅದೇ ಪ್ರಕಾರ ಸ್ವಲ್ಪ ಹಣವನ್ನು ಪುನಃ ಪೆಟ್ಟಿಗೆಯಲ್ಲೇ ಹಾಕಿಟ್ಟ; ಹೊರಡಲು ಸಿದ್ಧನಾದ.

'ದಾನ ಕೊಟ್ಟವರಿಗೆ ಕೃತಜ್ಞತೆ ಹೇಳಬೇಕಾದ್ದು ಕರ್ತವ್ಯವಲ್ಲವೇನಪ್ಪ? ನೀನು ನನಗೆ ಕೃತಜ್ಞತೆ ಹೇಳಲೇ ಇಲ್ಲವಲ್ಲ' ಎಂದು, ಶಿಚಿರಿ. ಡಕಾಯಿತನಿಗೆ ಹೌದೆನಿಸಿ, ಕೃತಜ್ಞತೆ ಹೇಳಿದ. ಹೊರಟು ಹೋದ.

ಕೆಲವು ದಿನಗಳ ಅನಂತರ ಡಕಾಯಿತ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದ. ಆಗ ಆತ, ತಾನು ಮಾಡಿದ ಎಲ್ಲ ಕಳ್ಳತನಗಳನ್ನೂ ತಾನೇ ಹೇಳಿ ಒಪ್ಪಿಕೊಂಡ ಶಿಚಿರಿಯ ಹಣ ಕದ್ದು ಒಯ್ದದ್ದನ್ನೂ ಹೇಳಿಕೊಂಡ. ಅಧಿಕಾರಿಗಳು ಆತನನನ್ನು ಶಿಚಿರಿಯ ಹತ್ತಿರ ಕರೆದು ತಂದರು. ಆಗಲೆ ಶಿಚಿರಿ, 'ಆತನಿಗೆ ನಾನು ಸ್ವಲ್ಪ ಹಣವನ್ನು ದಾನವಾಗಿ ಕೊಟ್ಟಿದ್ದೆ. ಅದಕ್ಕೆ ಪ್ರತಿಯಾಗಿ ಆತ ನನಗೆ ಕೃತಜ್ಞತೆ ಅರ್ಪಿಸಿ ಹೋಗಿದ್ದ. ಅಲ್ಲಿಗೆ ಅದು ಮುಗಿಯಿತು. ಆತ ಕದ್ದಿಲ್ಲ' ಎಂದು ಸಾಕ್ಷಿ ಹೇಳಿದ.

ಉಳಿದ ಕಳವುಗಳಿಗಾಗಿ ಡಕಾಯಿತ, ಕೆಲವು ವರ್ಷ ಸೆರೆಮನೆಯಲ್ಲಿ ಕಳೆಯಬೇಕಾಯಿತು. ಶಿಕ್ಷೆ ಅನುಭವಿಸಿ ಹೊರಬಂದ ತಕ್ಷಣವೇ ಆತ, ಹುಡುಕಿಕೊಂಡು ಶಿಚಿರಿಯ ಹತ್ತಿರಕ್ಕೆ ಬಂದ. 'ನೀನು ನನ್ನ ಗುರುವಾಗು' ಎಂದು ಬಾಗಿ ಬೇಡಿಕೊಂಡ.

ಚಂದ್ರಮನ ಬಿಂಬವಿಲ್ಲ

ಚಿಯೆನೊ ಎಂಬ ಒಬ್ಬ ಭಿಕ್ಷುಣಿ, ಅನೇಕ ವರ್ಷಗಳ ಕಾಲ ಸತತ ಸಾಧನೆ ಮಾಡಿದಾಗ್ಯೂ ಆಕೆಗೆ ಜ್ಞಾನೋದಯವಾಗಲೇ ಇಲ್ಲ. ಒಂದು ಬೆಳದಿಂಗಳ ರಾತ್ರಿ, ಆಕೆ ಹಳೆದಾದ ಕೊಡದಲ್ಲಿ ನೀರು ತುಂಬಿ ಒಯ್ಯುತ್ತಿದ್ದಳು. ಕೊಡದ ನೀರಿನಲ್ಲಿ ತುಂಬು ಚಂದ್ರನ ಬಿಂಬ ಮೂಡಿಕೊಂಡಿತ್ತು. ಭಿಕ್ಷುಣಿ ಅದನ್ನೇ ಗಮನಿಸುತ್ತಿದ್ದಳು. ಅಷ್ಟರಲ್ಲಿ ಕೊಡವನ್ನು ತೂಗಿಕೊಂಡಿದ್ದ ಬಿದಿರುಕೋಲು ಮುರಿದು, ಕೊಡ ನೆಲಕ್ಕೆ ಅಪ್ಪಳಿಸಿತು. ನೀರು ಚೆಲ್ಲಿಹೋಯಿತು. ಚಂದ್ರಬಿಂಬ ಮಾಯವಾಯಿತು. ಚಿಯೊನೊಗೆ ಜ್ಞಾನೋದಯವಾಯ್ತು. ಆಗ ಆಕೆ, ಹೀಗೊಂದು ಕವಿತೆ ರಚಿಸಿದಳು-



ಬೊಂಬು ಸಾಕಷ್ಟು ಗಟ್ಟಿಯಿಲ್ಲ
ಹಾಗಿದ್ದರೂ ಅದು ಮುರಿಯುವುದಿಲ್ಲ
ಎಂದು ಆಶಿಸುತ್ತ-ಹಾಗೂ ಹೀಗೂ
ಕೊಡವ ಬಾಳಿಸಲು ಯತ್ನಿಸಿದೆ.
ತಟ್ಟನೆ ತಳವೆ ಕುಸಿದಿತ್ತು-ಮತ್ತೆ
ನೀರಿಲ್ಲ, ಚಂದ್ರಮನ ಬಿಂಬವಿಲ್ಲ
ಕೈತುಂಬ ತುಂಬಿದೆ ಶೂನ್ಯ. ಅದೆ ಎಲ್ಲ ಎಲ್ಲಾ

ವಿಶ್ಲೇಷಣೆ

ಮೀಸಲಾತಿಯ ಮೂಲಕ ನೌಕರಿ ಪಡೆದು ಆರ್ಥಿಕವಾಗಿ ಸಬಲೀಕರಣಗೊಂಡ ದಲಿತರು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ತಾವೇ ಒಂದು ಪ್ರತ್ಯೇಕ ವರ್ಗವಾಗಿ ರೂಪುಗೊಂಡು, ತಮ್ಮ ಸಮುದಾಯದವರಿಂದ ದೂರವಾಗಿ ದ್ವೀಪದಂತೆ ಬಾಳುತ್ತಿರುವುದು ಅಂಬೇಡ್ಕರ್ ಆಶಯಕ್ಕೆ ವಿರುದ್ಧವಾಗಿ ಬೇರೆಲ್ಲಿಗೋ ತಲುಪಿದಂತಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಬಲಿಷ್ಠವಾಗಿ ಬೆಳೆದಿರುವ ಈ ವರ್ಗ ಅಂಬೇಡ್ಕರ್ ವಿರೋಧಿಸಿದ್ದ ಎಲ್ಲಾ ಅಂಧಶ್ರದ್ಧೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಮಾಜದ ಇತರೆ ವರ್ಗಗಳಂತೆಯೇ ಆಗಿಹೋಗಿರುವುದರ ಬಗ್ಗೆ ಇಲ್ಲಿ ಆತಂಕ ವ್ಯಕ್ತವಾಗಿದೆ.

❍ ರಘುನಾಥ ಬೇಡಚವಳ್ಳಿ

ದಲಿತ ನೌಕರರಿಂದ ಅಂಬೇಡ್ಕರ್ ನಿರೀಕ್ಷಿಸಿದ್ದೇನು?

ಬಡತನ ನೋವುಗಳಿಂದಲೇ ಬೆಳೆದ ಮೊದಲ ತಲೆಮಾರು ವಿದ್ಯಾವಂತರಾಗಿ ಮೀಸಲಾತಿಯ ಮೂಲಕ ಅಧಿಕಾರ ಪಡೆದವರು, ಪ್ರತಿಯೊಬ್ಬ ದಲಿತ ಅಧಿಕಾರಿಯೂ ತನ್ನ ಸುತ್ತಮುತ್ತಲಿನ ಜನರಿಗೆ ಶಿಕ್ಷಣ ಪ್ರಜ್ಞೆ ಮೂಡಿಸಬೇಕು. ವಿದ್ಯಾವಂತರನ್ನು ನಿರ್ಮಿಸಬೇಕು. ಆ ಮೂಲಕ ಅವರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ವಿಚಾರವಂತರನ್ನಾಗಿಸಬೇಕು. ಅದರೊಟ್ಟಿಗೆ ರಾಜಕೀಯ ಅಧಿಕಾರವನ್ನು ಪಡೆಯಲು ಹೋರಾಡಬೇಕು ಎಂಬುದೆ ಅಂಬೇಡ್ಕರ್‌ರವರ ಆಶಯವಾಗಿತ್ತು.

ಆದರೆ ಇಂದು ದಲಿತರು ನೌಕರಿ ಮೀಸಲಾತಿಯ ಲಾಭದಿಂದ ಉತ್ತಮ ಮಟ್ಟದಲ್ಲಿ ಬದುಕುತ್ತಿದ್ದಾರೆ. ಇವರಲ್ಲಿ ಬೆರಳೆಣಿಕೆಯ ವ್ಯಕ್ತಿಗಳನ್ನು ಹೊರತುಪಡಿಸಿ, ಉಳಿದವರಿಗೆ ದಲಿತರಿಗೆ ಅರಿವು ಮೂಡಿಸಬೇಕೆಂಬ ಪ್ರಜ್ಞೆ ಇಲ್ಲ. ಅವರ ಕಷ್ಟ ನೋವುಗಳನ್ನು ಕೇಳುವ ತಾಳ್ಮೆ ಕೂಡ ಇಲ್ಲ. ಇದಕ್ಕಿಂತ ಇನ್ನೊಂದು ದುರಾದೃಷ್ಟಕರ ಸಂಗತಿಯೆಂದರೆ, ದಲಿತ ನೌಕರಿಯಲ್ಲಿರುವ ಜನರೇ ಹಳ್ಳಿ-ನಗರಗಳಲ್ಲಿ ಅಯ್ಯಪ್ಪಸ್ವಾಮಿಗೆ ಯಾತ್ರೆ ಮಾಡುವುದು. ದೇವರ ಹೆಸರಲ್ಲಿ ಕೋಳಿ, ಕುರಿ ಕೊಡುವುದು. ತನ್ನ ಬಡ್ತಿ ಪಡೆಯಲು, ಮಕ್ಕಳ ಮಂದಿಯಲ್ಲಿ ಆರೋಗ್ಯ ಕೆಟ್ಟಾಗ ಗಂಡ ಹೆಂಡ್ತಿಯವರು ದೇವರ ಸೇವೆ ಮಾಡುತ್ತ ಮೌಢ್ಯವನ್ನು ಅನುಕರಿಸುತ್ತಿದ್ದಾರೆ. ಈ ವಿಚಾರಗಳು ಅಲ್ಪ ಸ್ವಲ್ಪ ಕಲಿಯುತ್ತಿರುವ, ಅಕ್ಷರ ಜ್ಞಾನದಿಂದ ಹೊರಗುಳಿದವರಲ್ಲಿ ಬಲವಾದ ಕಂದಚಾರಗಳನ್ನು ಗಟ್ಟಿಗೊಳಿಸುತ್ತಿವೆ. ವೈಜ್ಞಾನಿಕವಾಗಿ ಪ್ರಶ್ನಿಸುವ ಯುವಕ ಯುವತಿಯರಲ್ಲಿ ಮನೆಯ ವಾತಾವರಣದಲ್ಲಿ ಗೊಂದಲಗಳನ್ನೇರ್ಪಡಿಸಿವೆ. ಈ ವಿಚಾರಗಳು ವೈಯುಕ್ತಿಕ ಇರಬಹುದು. ತನ್ನ ಸಮುದಾಯದ ಮೇಲೆ ಎಂತಹ ಪರಿಣಾಮ ಬೀರುತ್ತದೆಂಬ ಕನಿಷ್ಠ ಪ್ರಜ್ಞೆ ಇವರಿಗಿಲ್ಲ.

ದಲಿತ ನೌಕರರು ಎಲ್ಲ ಕ್ಷೇತ್ರಗಳಲ್ಲಿ ಇದ್ದಾರೆ. ಉಳಿದವರಿಗೆ ಆರ್ಥಿಕವಾಗಿ ಸಹಾಯ ಮಾಡಲು ವಿಚಾರ ಮುಟ್ಟಿಸಲು ಹಿಂಜರಿಯುತ್ತಿದ್ದಾರೆ. ಸಂಘಟನೆಯ ಮೂಲಕ ತಾಲ್ಲೂಕು, ಜಿಲ್ಲಾಮಟ್ಟದಲ್ಲಿ ವೈಚಾರಿಕತೆಯ ಇಂದಿನ ಅಗತ್ಯ ಶಿಕ್ಷಣದ ಬಗ್ಗೆ ಹೇಳಲು ಹಿಂಜರಿಯುತ್ತಿದ್ದಾರೆ. ನಮ್ಮ ಶಿಕ್ಷಣದ ಮಟ್ಟ ಏನಾಗಿದೆ? ಮೀಸಲಾತಿ ಇನ್ನೂ ಎಷ್ಟು ವರ್ಷ ಇರಬೇಕು? ಅಷ್ಟು ವರ್ಷವೂ ಹುದ್ದೆಗಳನ್ನು ಎಷ್ಟು ಪಾರದರ್ಶಕವಾಗಿ ತುಂಬಬೇಕು. ಮೀಸಲಾತಿಯ ನಂತರದ ಪರಿಸ್ಥಿತಿಯನ್ನು ಯಾವ ಮಟ್ಟದಲ್ಲಿ ಎದುರಿಸಲು ಶಿಕ್ಷಣ ಪಡೆಯಬೇಕು. ತಂತ್ರಜ್ಞಾನ, ಕಂಪ್ಯೂಟರ್, ಜಾಗತೀಕರಣದ ನಡುವೆ ಬದುಕಲು ಸಾಧ್ಯವೆಂಬ ಅರಿವನ್ನು ಮೂಡಿಸಲು ಇಂದಿನ ಶಿಕ್ಷಣ ಸೋಲೊಪ್ಪಿಕೊಂಡಿದೆ. ಇಂದಿನ ವರ್ತಮಾನಕ್ಕೆ ತಕ್ಕಂತೆ ವೈಜ್ಞಾನಿಕ ಶಿಕ್ಷಣದ ತರಬೇತಿ ಪಡೆಯಬೇಕೆಂಬುದನ್ನು ಹೇಳುತ್ತಿಲ್ಲ. ಇದನ್ನು ಬಿಟ್ಟು ಯಾರು ಏನು ಹೇಳಿದರು ತಲೆ ಅಲ್ಲಾಡಿಸಿಕೊಂಡು ಪ್ರಶಸ್ತಿಗಾಗಿ ತಮ್ಮ ನೈತಿಕ ಜವಾಬ್ದಾರಿಗಳು ತಮ್ಮವಲ್ಲವೆಂದು ವರ್ತಿಸುತ್ತಿದ್ದಾರೆ. ಅಷ್ಟಕ್ಕೂ ಸುಮ್ಮನಿರದೆ ಕೆಲವರು ತಮ್ಮ ತಮ್ಮ ಸಭೆಗಳಲ್ಲಿ ಮೇಲ್ವರ್ಗದವರನ್ನು ಮೆಚ್ಚಿಸಲು ರಾಜಕೀಯ ಮುಖಂಡರು, ವಿಚಾರವಂತರು, ಸಾಹಿತಿಗಳು ನಿಜವಾದ ಅಂಬೇಡ್ಕರ್ ವಿಚಾರಗಳನ್ನು ಹೇಳುತ್ತಿಲ್ಲ . ತಾವು ಮೀಸಲಾತಿ ಇಲ್ಲದಿದ್ದರೂ ತಮ್ಮ ಸ್ವಂತ ಪ್ರತಿಭೆಯಿಂದ ಬೆಳೆಯುತ್ತಿದ್ದೆ ಎಂಬ ಅಹಂ ಕೂಡ ತೋರಿಸುತ್ತಿದ್ದಾರೆ. ಏಕೆಂದರೆ ಇವರಿಗೆ ಗೊತ್ತಿದೆ ಮೀಸಲಾತಿ ಲಾಭ ತಮ್ಮ ಮಕ್ಕಳಿಗೂ ಸಿಕ್ಕೇ ಸಿಗುತ್ತೆಂದು, ದಲಿತರಲ್ಲಿ ಮೊದಲ ತಲೆಮಾರು ವಿದ್ಯಾವಂತರಾದವರಿಗಿಂತ, ಅಧಿಕಾರದಲ್ಲಿರುವ ನಾವು ತಮ್ಮ ಮಕ್ಕಳಿಗೆ ಸೀಟು ಮತ್ತೊಂದು ಕೊಡಿಸಲು ರಾಜಕೀಯ ಮುಖಂಡರ ಒತ್ತಡ ತರಬಲ್ಲೆವು. ಅಲ್ಪ ಸ್ವಲ್ಪ ಲಂಚವನ್ನು ಕೊಡಲು ಸಮರ್ಥರಿದ್ದೇವೆ. ನಂತರ ಮುಂದೆಯೂ ಮೀಸಲಾತಿ, ಖಾಸಗೀಕರಣದ ಕಾರಣದಿಂದ ದೂರ ವಾದರೂ ಶಿಕ್ಷಣವನ್ನು ವರ್ತಮಾನಕ್ಕೆ ತಕ್ಕಂತೆ ತಮ್ಮ ಮೊಮ್ಮಕ್ಕಳು ಕಲಿಯುತ್ತಾರೆಂದು ನಂಬಿದ್ದಾರೆ. ಮುಂದಿನ ದಿನಗಳಲ್ಲಿ ಮೇಲ್ವರ್ಗ ದವರು ಮಾಡಲು ಹಿಂಜರಿಯುವ ಕೆಲಸಕ್ಕಾದರೂ ತಮ್ಮ ಮೊಮ್ಮಕ್ಕಳು ಲಾಯಕ್ಕೂ ಆಗುತ್ತಾರೆಂದು ದೂರಾಲೋಚನೆಯಲ್ಲಿ ಮುಳುಗಿದ್ದಾರೆ. ಅದಕ್ಕೇನೆ ಹೊಟ್ಟೆಗೆ ಬಟ್ಟೆಗೆ ನೆರವಾದ ನೌಕರಿ ಪಡೆದ ಜನ ತಣ್ಣಗಿದ್ದಾರೆ. ಬೋರಾಡಿ ಕೂಗಾಡಿದರೂ ಬಡ್ತಿ ವೇತನ ಹೆಚ್ಚಳಕ್ಕೆ ಅಷ್ಟೆ? ಅಂಬೇಡ್ಕರ್ ಜನ್ಮ ದಿನದ ಆಚರಣೆಗೆ ದುಡ್ಡು ಕೊಟ್ಟು ಸಭೆಯಲ್ಲಿ ಅಧ್ಯಕ್ಷತೆ-ಹಾರಕ್ಕೆ ತೃಪ್ತಿಯಾಗಿ ತನ್ನ ಸಮುದಾಯದ ಹಿತಾಸಕ್ತಿಗೆ ಮಂಕು ಬೂದಿ ಎರಚಿ ಸಹ ಕನಸು ಕಾಣುತ್ತಿದ್ದಾರೆ.

ಆದ್ದರಿಂದ ದಲಿತ ವಿದ್ಯಾರ್ಥಿ ಸಮುದಾಯ ಎಚ್ಚೆತ್ತುಕೊಳ್ಳಬೇಕು, ನಮ್ಮ ಮಕ್ಕಳೆಲ್ಲ ಖಾಸಗಿ ಶಾಲೆಯಲ್ಲಿ ಕಲಿಯುತ್ತಿರುವವರಲ್ಲ. ಆ ರೀತಿ ಕಲಿತು ಬಂದವರಿಗೆ ಸ್ಪರ್ಧಿಯಾಗಬೇಕಾದರೆ ಎಲ್ಲ ಕ್ಷೇತ್ರಗಳ ವೈಜ್ಞಾನಿಕವಾದ ವರ್ತಮಾನಕ್ಕೆ ತಕ್ಕಂತೆ ಶಿಕ್ಷಣವಂತರಾಗಬೇಕು. ಬರೀ ಭಾಷಣದಿಂದ ಏನು ಆಗುವುದಿಲ್ಲ. ಬಸವಣ್ಣನು ಹೇಳಿದಂತೆ 'ಕಾಯಕವೆ ಕೈಲಾಸ' ಎಂಬಂತೆ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಬೇಕು. ಅಲ್ಲಮ ಪ್ರಭು ಹೇಳಿದಂತೆ 'ಅರಿವೆ ಗುರುವಾಗಬೇಕು' ಸಿದ್ಧಾಂತಗಳಿಂದ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಬೇಕು.

ಡಾ॥ ಬಿ.ಆರ್. ಅಂಬೇಡ್ಕರ್‌ರವರ ವಿಚಾರಗಳನ್ನು ಹೇಳುವ,ಕೇಳುವ ನಾವುಗಳು ಈ ವಿಚಾರಗಳನ್ನು ನಮ್ಮಲ್ಲಿ ರಕ್ತಗತಗೊಳಿಸಿಕೊಳ್ಳಬೇಕು. ಅವು ನಿರಂತರವಾಗಿ, ಅನುವಂಶಿಕವಾಗಿ ವ್ಯಕ್ತಿತ್ವವನ್ನು ರೂಪಿಸುವಂತಾಗಬೇಕು. ಬರೀ ಭೂತಕಾಲದಲ್ಲಿ ನಡೆದು ಹೋದ ಘಟನೆಯನ್ನು ವಿಜೃಂಭಣೆಯಿಂದ ಹೇಳಿದರೆ ಸಾಲದು.

ಭೂತಕಾಲದ ನೋವು-ನಲಿವುಗಳನ್ನು ಹೇಳುವುದರ ಮೂಲಕ ಸಿಟ್ಟು ರೋಷ ಹುಟ್ಟಿಸುವುದಷ್ಟೆ ಅಲ್ಲ. ಆ ಸಿಟ್ಟಿಗೆ ಪರಿಹಾರ ಕಂಡುಕೊಳ್ಳಬೇಕು. ಆ ದಿಕ್ಕಿನಲ್ಲಿ ವರ್ತಮಾನದಲ್ಲಿ ಕಾರ್ಯಪ್ರವೃತರಾಗುವ ಮೂಲಕ ಭವಿಷ್ಯತ್ತಿನ ಆಲೋಚನೆಗಳು ನಮ್ಮ ಮುಂದಿರಬೇಕು. ಜೊತೆಗೆ ನಾವು ಕಲಿಯುವ ಶಿಕ್ಷಣ ವಾಸ್ತವ ಬದುಕಿನ ಜೀವ ಚೈತನ್ಯದ ಸೆಲೆಯಾಗಬೇಕು. ಇವತ್ತಿನ ದಿನಗಳಲ್ಲಿ ಅಂಬೇಡ್ಕರ್ ವಿಚಾರಗಳಿಗೆ ಕಂಪ್ಯೂಟರ್, ತಂತ್ರಜ್ಞಾನ, ಜಾಗತೀಕರಣ, ಖಾಸಗೀಕರಣವನ್ನು ಎದುರಿಸುವ ಚೈತನ್ಯ ಏದೆ. ಆದ್ದರಿಂದ ನಾವುಗಳು ಹೊಸ ಹೊಸ ವಿಚಾರಗಳಿಗೆ ಸ್ಪಂದಿಸುವ ಮೂಲಕ ಅವುಗಳಿಗೆ ಆರೋಗ್ಯ ಪೂರ್ಣವಾಗಿ ಹೊಂದಿಕೊಳ್ಳುವ ಜಾಣ್ಮೆ ಬೆಳೆಸಿಕೊಳ್ಳಬೇಕು. ಇದರ ಬಗ್ಗೆ ಅಂಬೇಡ್ಕರ್ ವಿಚಾರ ಕುರಿತು ಹೇಳುವ ಪ್ರಜ್ಞಾವಂತರು ಇತರರಿಗೆ ಅರಿವು ಮೂಡಿಸಬೇಕು.

ಈ ದೃಷ್ಟಿಯಲ್ಲಿ ದಲಿತ ವರ್ಗ ಹಿಂದುಳಿದ, ಬಹುಸಂಖ್ಯಾತರು ಹೋರಾಟ ನಡೆಸಬೇಕೆಂದು ಅಂಬೇಡ್ಕರ್ ಹೇಳಿ ಈ ರೀತಿ.

ಹಿಂದೂಗಳ ಸಾಮಾಜಿಕ ವ್ಯವಸ್ಥೆಯು ಕೆಳಗುರುಳಬೇಕೆಂದರೆ ಅದು ಎರಡು ಸಂದರ್ಭಗಳ ಮಾತ್ರ.

೧. ಸಾಮಾಜಿಕ ವ್ಯವಸ್ಥೆಯು ದಿನನಿತ್ಯದ ಆಘಾತಗಳನ್ನು ಎದುರಿಸುವಂತಾಗಬೇಕು.

೨. ಆಲೋಚನೆಗಳಲ್ಲಿ ಹಾಗೂ ಕೆಲಸ ಕಾರ್ಯಗಳಲ್ಲಿ ಹಿಂದೂಗಳಿಗಿಂತ ಭಿನ್ನ ಹಾಗೂ ಸ್ವತಂತ್ರರಾಗದ ಹೊರತು ದಿನನಿತ್ಯ ಆಘಾತಗಳನ್ನು ಸೃಷ್ಟಿ ಮಾಡುವುದು ಸಾಧ್ಯವಾಗುವುದಿಲ್ಲ.

‘ಕಪೋಲಿ’ಯ ಕಪೋಲದಲ್ಲಿಳಿದ ಕಣ್ಣೀರ ಕತೆ



ಜಂಬಣ್ಣ ಅಮರಚಿಂತ

ಬಾಬಾರವರಿನ್ನೂ ಬರಲಿಲ್ಲವಲ್ಲ
ಎದೆಯ ಕೊಡತುಂಬಾ ಪ್ರೀತಿ ಜಲ ಹೊತ್ತು
ಕಾಯುತ ಕೂತಿರುವೆ ಅವ್ರು ಹಾದು ಹೋದ ಹಾದಿ
ಬರಬೇಕಾದ ಬಾಬಾರಿನ್ನೂ ಬರಲಿಲ್ಲವಲ್ಲ

ಕೆಲಸದ ನಿಮಿತ್ತ ಬಾಬಾ ಕಪೋಲಿಗೆ ಬಂದು
ಬಳಲಿ ಬಾಯಾರಿಕೆಯಿಂದ ಅಲೆದರು ಅಂದು
ಒಬ್ಬರು ನೀಡಲಿಲ್ಲ ಕುಡಿಯಲು ನೀರು
ಬಂಜರೆದೆಯ ಸೆಲೆ ಬತ್ತಿದ ಜನರು
‘ಅಸ್ಪೃಶ್ಯ ನೀನು; ಅಂಟದ ನೆಂಟನು
ಕೀರ್ತಿವೆತ್ತ ಮೈಲಿಗೆ ಮೂರ್ತಿ ನೀನು
ಬ್ಯಾರಿಸ್ಟರು ನೀನಾದರೆ ನಮಗೇನಂತೆ
ಹೋಗಯ್ಯಾ ನೀರಿಲ್ಲ; ಮಾಡದಿರು ತಂಟೆ’

ಹೀನಾಯವಾಗಿ ಹೋಟೆಲ್ಲಿನವ ಬಾಬಾರ ತಳ್ಳಲು
ಹೊರಗೆ ನಿಂತಿದ್ದೆ ಕ್ರೂರದೃಶ್ಯ ನೋಡುತ ನಾನು
ಓಡಿದೆ; ಮನೆಗೋಡಿದೆ ನೀರು ತರಲು
ಬಾಯಾರಿಕೆಯಿಂದ ಬೆಂದ ಬಾಬಾರ ತಣಿಸಲು

ಬಾಬಾರು ಹೋಗಿದ್ದರು ಕಪೋಲಿ ತಾ ಬಿಟ್ಟು
ತಂದೆನೆಂದರೂ ನೀರು, ತಂದೆಯ ದಾಹ ತಣಿಸಲಿಲ್ಲ
ನಿಂತಿರುವೆ ಅಂದಿನಿಂದ ಅಲ್ಲಿ ಇಂದಿನತನಕ

ಬಾಬಾ ಹಾದು ಹೋದ ಕಪೋಲಿ ಹಾದಿಯಲ್ಲಿ
ಕಪೋಲದಲ್ಲಿ ಕಣ್ಣೀರಿಳಿಸುತ ಬಾಬಾ, ಬಾ ಎಂದು
‘ಇಕೋ ತಂದಿರುವೆ ನಿನಗಾಗಿ ನೀರು ಕುಡಿ’ ಎಂದು

ಸಾಮಾಜಿಕ ನ್ಯಾಯವನ್ನು ತರ್ಕದಿಂದ ತರಲು ಸಾಧ್ಯವಿಲ್ಲ. ಏಕೆಂದರೆ ತರ್ಕ ತನ್ನ ಸ್ವಹಿತಾಸಕ್ತಿಗೆ ಎಲ್ಲಿಯವರೆಗೆ ತೊಂದರೆ ಉಂಟಾಗುವುದಿಲ್ಲವೋ ಅಲ್ಲಿಯವರೆಗೆ ತರ್ಕ ಕೆಲಸ ಮಾಡಬಲ್ಲದು. ಸ್ವಹಿತಾಸಕ್ತಿಗಳ ಜೊತೆ ಸಂಘರ್ಷವುಂಟಾದಾಗ ಅದು ಸೋಲುತ್ತದೆ. ಅಸ್ಪೃಶ್ಯತೆ ವಿಷಯದಲ್ಲಿ ಅನೇಕ ಹಿಂದೂಗಳಿಗೆ ಒಂದಲ್ಲ ಒಂದು ಭಾವನೆ ಇದ್ದೆ ಇರುತ್ತದೆ. ಆದ್ದರಿಂದ ಅಸ್ಪೃಶ್ಯ ಎರಡು ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಮೊದಲನೆಯದು ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವಲ್ಲಿ ಹಿಂದೂ ಧರ್ಮವು ಸಮರ್ಥವಾಗಿದೆ ಎಂದು ಭಾವಿಸುವುದೇ ತಪ್ಪು; ಈ ಕೆಲಸವನ್ನು ಕ್ರೈಸ್ತ, ಬೌದ್ಧ ಇಸ್ಲಾಂ ಧರ್ಮಗಳು ಮಾಡಬಲ್ಲವು ಎಂದಿದ್ದಾರೆ.

ಆದ್ದರಿಂದ ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಸಂಘರ್ಷ ಆಗೇ ಆಗುವುದು. ಆರ್ಥಿಕವಾಗಿ ನೋಡಿದರೆ ಮೈತ್ರಿಕೂಟಕ್ಕೆ ಇದರಲ್ಲಿ ಅಸ್ಪದವಿದ್ದಂತಿಲ್ಲ. ಅಸ್ಪೃಶ್ಯರು ಯಾವುದಕ್ಕಾಗಿ ಹೋರಾಡಬೇಕು. ‘ಶಿಕ್ಷಣ ಹಾಗೂ ಜ್ಞಾನದ’ ಪ್ರಸಾರ –ಇವೆರಡಕ್ಕಾಗಿ ಅವರು ಹೋರಾಡಬೇಕು. ವಿಶೇಷ ಹಕ್ಕು ಪಡೆದ ವರ್ಗದವರ ಶಕ್ತಿ ಜನರ ನಡುವೆ ಎಡೆಬಿಡದೆ ಪ್ರಚಾರಗೊಂಡಿರುವ ಸುಳ್ಳುಗಳ ಮೇಲೆ ನಿಂತಿದೆ. ಆದ್ದರಿಂದ ಅನ್ಯಾಯ, ಅನರ್ಥ, ಅನಾಚಾರಗಳನ್ನು ವಿರೋಧಿಸುವುದಕ್ಕೆ ಮುಂಚೆ ಅದರ ಆಧಾರವಾದ ಸುಳ್ಳನ್ನು ಬಯಲು ಮಾಡಿ ವಾಸ್ತವ ಏನೆಂದು ಅರಿತುಕೊಳ್ಳಬೇಕು. ಇದು ಶಿಕ್ಷಣದ ಮೂಲಕ ಮಾತ್ರ ಸಾಧ್ಯ ಎಂದಿದ್ದಾರೆ ಅಂಬೇಡ್ಕರ್.

ಎರಡನೆಯದು ಅಧಿಕಾರಕ್ಕೆ ಸಂಬಂಧಿಸಿದ್ದು. ಒಂದು ಹಿತಾಸಕ್ತಿಯು ಇನ್ನೊಂದು ಹಿತಾಸಕ್ತಿಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಯಾಕೆ ಬಯಸುತ್ತದೆ? ಹಾಗಿದ್ದ ಮೇಲೆ ಒಂದು ಶಕ್ತಿಯನ್ನು ನಾಶಗೊಳಿಸಲು ಇನ್ನೊಂದು ಶಕ್ತಿಯ ಸಮಸ್ಯೆ ಇದೆ. ಒಂದರ ಅಧಿಕಾರ ಕಿತ್ತೊಗೆಯಲು ಇನ್ನೊಂದಕ್ಕೆ ಅಧಿಕಾರ ಬೇಕು. ಅದು ರಾಜಕೀಯ ಅಥವಾ ಆರ್ಥಿಕ ಸ್ವರೂಪದ್ದಾಗಿರುತ್ತದೆ.

ಹೀಗಾಗಿ ಆದಷ್ಟು ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳುವುದು ಅಸ್ಪೃಶ್ಯನಿಗೆ ಅತ್ಯಗತ್ಯವಾಗಿದೆ.

ಕೆಲಸಕ್ಕೆ ಬಾರದ ಈ ಸಾಮಾಜಿಕ ಅಥವಾ ಆರ್ಥಿಕ ಕ್ಷೇತ್ರದಲ್ಲಿನ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಅಸ್ಪೃಶ್ಯ ಸಾಕಷ್ಟು ರಾಜಕೀಯ ಶಕ್ತಿಯನ್ನೂ ಪಡೆಯಲಾರ, ಎಷ್ಟೇ ರಾಜಕೀಯ ಶಕ್ತಿ ಸಂಪಾದಿಸಿದರೂ ಹಿಂದೂಗಳಿಗಿರುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಶಕ್ತಿಯ ಆಗಾಧತೆಯ ಮುಂದೆ ಅಲ್ಪವೇ ಅನ್ನಿಸುತ್ತದೆ.

ಈ ರೀತಿ ರಾಜಕೀಯ ಶಕ್ತಿ ಸಿಕ್ಕಿದರೂ ಕೂಡ ಅಸ್ಪೃಶ್ಯ ಶಾಸಕಾಂಗದಲ್ಲಿ ತನ್ನ ಪ್ರಾತಿನಿಧ್ಯಕ್ಕೆ ಹಿಂದೂಗಳನ್ನೇ ಅವಲಂಬಿಸಿದರೆ ಅದು ಯಾವ ಉಪಯೋಗಕ್ಕೂ ಬರುವುದಿಲ್ಲ. ಯಾಕೆಂದರೆ ಹಿಂದೂಗಳ ರಾಜಕೀಯ ಜೀವನ ಅಸ್ಪೃಶ್ಯರ ಆರ್ಥಿಕ ಹಾಗೂ ಸಾಮಾಜಿಕ ಹಿತಾಸಕ್ತಿಗಳಿಗೆ ತದ್ವಿರುದ್ಧವಾದ ಆಸಕ್ತಿಯನ್ನು ಅವಲಂಬಿಸಿದೆ.

ಆದ್ದರಿಂದ ದಲಿತರಾದ ನಾವುಗಳು ತಮ್ಮಲ್ಲಿಯ ಮೇಲುಕೀಳು ಭಾವನೆ ಬಿಟ್ಟು ಒಟ್ಟಾಗಬೇಕು. ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಒಟ್ಟೊಟ್ಟಿಗೆ ಹೋರಾಡಬೇಕು. ನಾವು ಸ್ವತಂತ್ರ ರಾಜಕೀಯ ಅಧಿಕಾರ ಹಿಡಿಯುವ ಪಕ್ಷವಾಗಿ ಹೊರಹೊಮ್ಮಬೇಕಾದರೆ, ದಲಿತರಂತೆ ನೂರಾರು ಕಷ್ಟ ನೋವು ಬಡತನದಿಂದ ನರಳುತ್ತಿರುವ ಮುಸ್ಲಿಂ, ಕ್ರೈಸ್ತರು, ಹಿಂದುಳಿದವರು ಇದ್ದಾರೆ. ಇವರು ಬೇರೆ ಯಾರೂ ಅಲ್ಲ.

ಕಾಲಾಂತರಗಳಲ್ಲಿ ದಲಿತರೆ ಅಲ್ಲಿ ಹೋಗಿ ಸೇರಿದ್ದಾರೆ. ಆದರೆ ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಯಾವ ಬದ ಲಾವಣೆಯೂ ಆಗಿಲ್ಲ. ನಮ್ಮಂತೆಯ ರಾಜಕೀಯ, ಆರ್ಥಿಕ, ಸಾಮಾಜಿಕತೆಯಲ್ಲಿ ಗುಲಾಮರಾಗಿದ್ದಾರೆ. ಆದ್ದರಿಂದ ನಾವೆಲ್ಲರೂ ಒಟ್ಟಾಗಬೇಕಾಗಿದೆ. ಜಾತಿ, ಭೇದ, ಮತ, ಲಿಂಗ, ತಾರತಮ್ಯ, ಕೀಳರಿಮೆ ಮೇಲರಿಮೆ ಬಿಟ್ಟು ಒಂದಾಗಿ ಸ್ವತಂತ್ರ ರಾಜಕೀಯ ಅಧಿಕಾರವನ್ನು ಹಿಡಿಯಬೇಕು. □

ಬೌದ್ಧನಾಗುವುದು ಹೇಗೆ?

ಬೋಧಿವೃಕ್ಷ

ಪರಸ್ಪರ ಪ್ರೀತಿ-ಗೌರವ ಶಾಂತಿ-ಸಮಾನತೆ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧಧಮ್ಮ ಜಗತ್ತಿನಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ, ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ ಪುಸ್ತಕದ ಕನ್ನಡಾನುವಾದವನ್ನು ಓದುಗರಿಗಾಗಿ ನೀಡುತ್ತಿದೆ.

ಅನುವಾದ:
ಡಾ|| ಪಿ.ವಿ. ನಾರಾಯಣ್

೧) ಹಾಗಾದರೆ, ಅದೃಷ್ಟ ಎಂಬುದಿದೆಯೇ?

ನಿಘಂಟು, ಅದೃಷ್ಟ ಎಂದರೆ 'ಒಬ್ಬ ವ್ಯಕ್ತಿಗೆ ಸಂಭವಿಸುವ ಒಳ್ಳೆಯದೋ ಕೆಟ್ಟದ್ದೋ ಆದ ಘಟನಾವಳಿಯೆಲ್ಲ ಆಕಸ್ಮಿಕ ವಿಧಿ ಅಥವಾ ಹಣೆಯ ಬರಹದಿಂದ ಸಂಭವಿಸುತ್ತದೆ ಎಂಬ ನಂಬಿಕೆ'. ಈ ನಂಬಿಕೆಯನ್ನು ಬುದ್ಧನು ಖಂಡತುಂಡವಾಗಿ ನಿರಾಕರಿಸಿದ. ಸಂಭವಿಸುವ ಎಲ್ಲ ಘಟನೆಗಳಿಗೂ ನಿರ್ದಿಷ್ಟ ಕಾರಣ ಅಥವಾ ಕಾರಣಗಳಿರುತ್ತವೆ ಹಾಗೂ ಕಾರಣ-ಕಾರ್ಯಗಳ ನಡುವೆ ಯಾವುದೋ ಸಂಬಂಧವಿರುತ್ತದೆ ಎಂದು ವಿವರಿಸಿದ. ಉದಾಹರಣೆಗೆ, ರೋಗ ಬರಲು ನಿರ್ದಿಷ್ಟ ಕಾರಣಗಳಿರುತ್ತವೆ. ರೋಗಾಣುಗಳ ಜೊತೆ ಸಂಪರ್ಕಕ್ಕೆ ಬಂದ ವ್ಯಕ್ತಿಯು ಅವುಗಳು ಅವನಲ್ಲಿ ನೆಲೆಯೂರಲು ಅವಕಾಶವಾಗುವಷ್ಟು ದುರ್ಬಲನಾಗಿರಬೇಕು. ಕಾರಣ (ರೋಗಾಣುಗಳು ಹಾಗೂ ದುರ್ಬಲ ದೇಹ' ಮತ್ತು ಕಾರ್ಯ (ರೋಗ)ಗಳ ನಡುವೆ ಇಲ್ಲಿ ನಿರ್ದಿಷ್ಟ ಸಂಬಂಧವಿದೆ. ರೋಗಾಣುಗಳ ಜೀವಕೋಶಗಳ ಮೇಲೆ ದಾಳಿಮಾಡಿದಾಗ ರೋಗವುಂಟಾಗುತ್ತದೆಂಬುದು ನಮಗೆ ತಿಳಿದಿದೆ. ಆದರೆ ಏನೇನೋ ಬರೆದ ಲೋಹದ ಚೂರನ್ನು ದೇಹದ ಮೇಲೆ ಧರಿಸುವುದಕ್ಕೂ ಹಣವಂತನಾಗುವುದಕ್ಕೂ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೂ ಅಂತಹ ಯಾವುದೇ ಸಂಬಂಧವಿರುವುದು ಕಾಣುವುದಿಲ್ಲ. ಏನು ಸಂಭವಿಸಿದರೂ ಅದಕ್ಕೆ ಕಾರಣ ಅಥವಾ ಕಾರಣಗಳಿರುತ್ತವೆಯೇ ಹೊರತು ಆಕಸ್ಮಿಕ, ವಿಧಿ ಅಥವಾ ಹಣೆಯ ಬರಹದಿಂದ ಅಲ್ಲ ಎಂದು ಬೌದ್ಧಧಮ್ಮವು ಪ್ರತಿಪಾದಿಸುತ್ತದೆ. ಅದೃಷ್ಟದಲ್ಲಿ ನಂಬಿಕೆಯಿಟ್ಟವರು ಏನನ್ನೋ ಪಡೆಯಲು ಸದಾ ತವಕದಿಂದಿರುತ್ತಾರೆ-ಸಾಮಾನ್ಯವಾಗಿ ಹೆಚ್ಚು ಹಣ ಮತ್ತು ಆಸ್ತಿ. ಇದಕ್ಕಿಂತಲೂ ನಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ಉತ್ತಮಪಡಿಸಿಕೊಳ್ಳುವುದು ಬಹುಮುಖ್ಯ ಎಂದು ಬುದ್ಧನು ಬೋಧಿಸುತ್ತಾನೆ. ಅವನು ಹೇಳುವುದು

'ಆಳವಾದ ಜ್ಞಾನ ಮತ್ತು ಕೌಶಲ್ಯಗಳ ಪಡೆಯುವುದು
ಒಳ್ಳೆಯ ಶಿಕ್ಷಣ ಪಡೆಯುವುದು ಮತ್ತು ಮೃದುವಾಗಿ
ಮಾತನಾಡುವುದು
ಇವೇ ಒಳ್ಳೆಯ ಮಂಗಳ
ತಾಯ್ತಂದೆಯರನ್ನು ಪೋಷಿಸುವುದು, ಹೆಂಡತಿ-ಮಕ್ಕಳನ್ನು
ಕಾಪಾಡುವುದು
ಸರಳವಾದ ಬದುಕನ್ನು ನಡೆಸುವುದು
ಇವೇ ಒಳ್ಳೆಯ ಮಂಗಳ

ಉದಾರಿಯಾಗಿರುವುದು, ಬಾಂಧವರಿಗೆ ಸಹಾಯ ಮಾಡುತ್ತದೆ
ತನ್ನ ನಡತೆಯಲ್ಲಿ ಶುದ್ಧನಾಗಿರುವುದು
ಇವೇ ಒಳ್ಳೆಯ ಮಂಗಳ
ಕೆಡುಕು ಮತ್ತು ಮದ್ಯಸೇವನೆಯಿಂದ ದೂರವಿರುವುದು
ಸದ್ಗುಣಗಳನ್ನು ದೃಢಗೊಳಿಸಿಕೊಳ್ಳುವುದು
ಇವೇ ಒಳ್ಳೆಯ ಮಂಗಳ

ಗೌರವ, ವಿನಯ, ತೃಪ್ತಿ, ಕೃತಜ್ಞತೆ
ಹಾಗೂ ಸುಧಮ್ಮವನ್ನು ಕೇಳುವುದು
ಇವೇ ಒಳ್ಳೆಯ ಮಂಗಳ
-ಎಸ್‌ಎನ್ ೨೬೧-೨೬೫

೨) ನೀವು ಇದುವರೆಗೆ ಹೇಳಿದ್ದೆಲ್ಲ ನನ್ನ ಆಸಕ್ತಿಯನ್ನು ಕೆರಳಿಸಿದವು. ನಾನು ಬೌದ್ಧನಾಗುವುದು ಹೇಗೆ?

ಒಂದಾನೊಂದು ಕಾಲದಲ್ಲಿ ಉಪಾಲಿ ಎಂಬ ವ್ಯಕ್ತಿಯಿದ್ದ. ಅವನು ಬೇರೊಂದು ಮತದ ಅವಲಂಬಿ. ಅವನು ಒಮ್ಮೆ ಬುದ್ಧನ ಬಳಿ ಹೋಗಿ ಅವನೊಡನೆ ವಾದ ಮಾಡಿ ಅವನನ್ನು ಮತಾಂತರಿಸಲು ಬಯಸಿದ. ಆದರೆ ಬುದ್ಧನೊಡನೆ ಮಾತನಾಡಿದ ಬಳಿಕ, ಅವನಿಂದ ಪ್ರಭಾವಿತನಾಗಿ ತಾನೇ ಬುದ್ಧನ ಅನುಯಾಯಿಯಾಗಲು ನಿರ್ಧರಿಸಿದ. ಆದರೆ ಬುದ್ಧ ಅಂದದ್ದು ಹೀಗೆ:

'ಮೊದಲು ಸರಿಯಾಗಿ ಪರಿಶೀಲನೆ ಮಾಡು. ನಿನ್ನಂಥ ಪ್ರಸಿದ್ಧನಾದ ವ್ಯಕ್ತಿ ಸರಿಯಾಗಿ ಪರಿಶೀಲನೆ ನಡೆಸುವುದು ಒಳ್ಳೆಯದು'.

'ಮೊದಲು ಸರಿಯಾಗಿ ಪರಿಶೀಲನೆ ಮಾಡು' ಎಂದು ಭಗವಂತನೇ ಹೇಳಿದ್ದರಿಂದ ನನಗೆ ಮತ್ತಷ್ಟು ಸಂತೋಷವಾಗಿದೆ, ತೃಪ್ತಿಯಾಗಿದೆ. ಮತ್ತೊಂದು ಮತದವರು ನನ್ನನ್ನು ಅನುಯಾಯಿಯಾಗಿ ಪಡೆದಿದ್ದರೆ ಅವರು ಊರೆಲ್ಲ ಡಂಗುರ ಹೊಡೆದು, 'ಉಪಾಲಿಯು ನಮ್ಮ ಧರ್ಮವನ್ನು ಸೇರಿದ್ದಾನೆ' ಎಂದು ಸಾರುತ್ತಿದ್ದರು. ಆದರೆ ಭಗವಂತನು ನನಗೆ ಹೇಳಿದ್ದು: 'ಮೊದಲು ಸರಿಯಾಗಿ ಪರಿಶೀಲನೆ ಮಾಡು, ನಿನ್ನಂಥ ಪ್ರಸಿದ್ಧನಾದ ವ್ಯಕ್ತಿ ಸರಿಯಾಗಿ ಪರಿಶೀಲನೆ ನಡೆಸುವುದು ಒಳ್ಳೆಯದು'. ಎಂದು.

ಬೌದ್ಧಧಮ್ಮದಲ್ಲಿ ತಿಳುವಳಿಕೆಯು ಅತ್ಯಂತ ಪ್ರಮುಖವಾದದ್ದು. ಈ ತಿಳುವಳಿಕೆಯನ್ನು ಪಡೆಯಲು ಕಾಲ ಹಿಡಿಸುತ್ತದೆ. ಹೀಗಾಗಿ ದಿಢೀರನೆ ಬೌದ್ಧಧಮ್ಮಕ್ಕೆ ನುಗ್ಗಬೇಡಿ. ಎಷ್ಟು ಬೇಕೋ ಅಷ್ಟು ಸಮಯ ತೆಗೆದುಕೊಳ್ಳಿ. ಪ್ರಶ್ನೆಗಳನ್ನು ಕೇಳಿ, ಜಾಗರೂಕತೆಯಿಂದ ಪರಿಶೀಲನೆ ಮಾಡಿ, ಆನಂತರ ನಿಮ್ಮ ತೀರ್ಮಾನವನ್ನು ಕೈಗೊಳ್ಳಿ. ಬಹಳ ಜನ ಅನುಯಾಯಿಗಳನ್ನು ಪಡೆಯಬೇಕೆಂಬ ಚಪಲ ಬುದ್ಧನಿಗಿರಲಿಲ್ಲ. ತನ್ನ ಉಪದೇಶಗಳನ್ನು ಜನರು ಜಾಗರೂಕತೆಯಿಂದ ವಿಚಾರಿಸಿ ವಸ್ತುಸ್ಥಿತಿಗಳನ್ನು ಅರಿತ ನಂತರ ಅನುಸರಿಸಬೇಕೆಂಬುದು ಅವನ ಆಸೆಯಾಗಿತ್ತು.

೩) ಹೀಗೆ ಮಾಡಿದ ಮೇಲೆಯೂ ಬುದ್ಧನ ಉಪದೇಶಗಳು ನನಗೆ ಸರಿಕಂಡು ಬೌದ್ಧಧಮ್ಮಾವಲಂಬಿಯಾಗಬೇಕೆನಿಸಿದರೆ, ನಾನು ಮಾಡಬೇಕಾದ್ದೇನು?

ಒಂದು ವಿಶಾಸವನ್ನೋ ಬೌದ್ಧರ ಗುಂಪನ್ನೋ ಸೇರಿ ಅವರಿಗೆ ಬೆಂಬಲ ನೀಡುತ್ತ ಅವರಿಂದ ಬೆಂಬಲ ಪಡೆಯುತ್ತ ಬುದ್ಧನ ಉಪದೇಶಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಿರಿ. ಆಮೇಲೆ ನೀವು ಸಿದ್ಧರಾದಾಗ, ಮೂರು ಶರಣುಗಳನ್ನು ಪಡೆದು ನೀವು ಔಪಚಾರಿಕವಾಗಿ ಬೌದ್ಧ ನಾಗಬಹುದು.

೪) ಈ ಮೂರು ಶರಣುಗಳು ಯಾವುವು?

ಶರಣು ಎನ್ನುವುದು ತೊಂದರೆಯಾದಾಗಲೋ ತಮಗೆ ರಕ್ಷಣೆ ಹಾಗೂ ಭದ್ರತೆಯು ಬೇಕೆನಿಸಿದಾಗಲೋ ಹೋಗಿ ಸೇರುವ ಜಾಗ. ಅನೇಕ ಬಗೆಯ ಆಶ್ರಯತಾಣಗಳಿವೆ. ಜನರಿಗೆ ಸಂತೋಷವಿಲ್ಲದಾಗ, ತಮ್ಮ ಸ್ನೇಹಿತರಲ್ಲಿ ಆಶ್ರಯ ಪಡೆಯುತ್ತಾರೆ; ಚಿಂತನೆಯುಂಟಾದಾಗ ಮತ್ತು ಭಯ ಗೊಂಡಾಗ ಅವರು ಹುಸಿ ಭರವಸೆಗಳನ್ನೋ ನಂಬಿಕೆ ಗಳನ್ನೋ ಆಶ್ರಯಿಸಬಹುದು. ಮರಣ ಸನ್ನಿಹಿತವಾದಾಗ, ಅವರು ನಿತ್ಯ ಸ್ವರ್ಗವಿದೆಯೆಂಬ ನಂಬಿಕೆಯಲ್ಲಿ ಆಶ್ರಯ ಪಡೆಯಬಹುದು. ಆದರೆ, ಬುದ್ಧನು ನುಡಿದಂತೆ, ಇವಾವುದೂ ನಿಜವಾದ ಆಶ್ರಯವಲ್ಲ; ಏಕೆಂದರೆ ಅವು ವಸ್ತುಸ್ಥಿತಿಯನ್ನು ಆಧರಿಸಿದ ಸಮಾಧಾನವನ್ನಾಗಲೀ ಭದ್ರತೆಯನ್ನಾಗಲೀ ನೀಡಲಾರವು.

ಇವು ಸುರಕ್ಷಿತವಾದ ಆಶ್ರಯಗಳಲ್ಲ
ಉತ್ತಮ ಆಶ್ರಯಗಳಲ್ಲ;
ಈ ಆಶ್ರಯದಲ್ಲಿ ಯಾರೂ
ಎಲ್ಲ ದುಃಖಗಳಿಂದ ಮುಕ್ತನಾಗಲಾರ.

ಆದರೆ ಬುದ್ಧನು ಧಮ್ಮ ಸಂಘಗಳಲ್ಲಿ
ಶರಣು ಪಡೆದವನು
ನಿಜ ತಿಳಿವಳಿಕೆಯಿಂದ
ನಾಲ್ಕು ಸತ್ಯಗಳನ್ನು ಅರಿತವನು.

ದುಃಖ, ದುಃಖದ ಕಾರಣ
ದುಃಖವನ್ನು ನಿಲ್ಲಿಸುವುದು
ದುಃಖವನ್ನು ನಿಲ್ಲಿಸಲುಬೇಕಾದ
ಅಷ್ಟಾಂಗಿಕ ಮಾರ್ಗ,

ಇದೇ ಸುರಕ್ಷಿತ ಶರಣು,
ಇದೇ ಅತ್ಯುತ್ತಮ ಶರಣು,
ಈ ಆಶ್ರಯದಿಂದಲೇ
ಎಲ್ಲ ದುಃಖಗಳಿಂದ ಮುಕ್ತಿ
-ಧಮ್ಮಪದ ೧೯೦-೧೯೨

ಬುದ್ಧನಲ್ಲಿ ಆಶ್ರಯ(ಶರಣು) ಪಡೆಯುವುದು ಎಂದರೆ, ಬುದ್ಧನ ಹಾಗೆಯೇ ತಾನೂ ಪೂರ್ಣಜ್ಞಾನವನ್ನು ಪಡೆಯಬಹುದು ಮತ್ತು ಪರಿಪೂರ್ಣತೆಯನ್ನು ಸಾಧಿಸಬಹುದು ಎಂಬ ವಾಸ್ತವವನ್ನು ಆತ್ಮವಿಶ್ವಾಸದಿಂದ ಅಂಗೀಕರಿಸುವುದು. ಧಮ್ಮಕ್ಕೆ ಶರಣು ಹೋಗುವುದೆಂದರೆ, ನಾಲ್ಕು ಉದಾತ್ತ ಸತ್ಯಗಳನ್ನು ಅರಿತುಕೊಳ್ಳುವುದು ಹಾಗೂ ಅಷ್ಟಾಂಗಿಕ ಮಾರ್ಗವನ್ನು ಆಧರಿಸಿದ ಜೀವನವನ್ನು ನಡೆಸುವುದು. ಸಂಘಕ್ಕೆ ಶರಣಾಗುವುದೆಂದರೆ, ಈ ಅಷ್ಟಾಂಗಿಕ ಮಾರ್ಗದಲ್ಲಿ ನಡೆಯುವವರ ಕಡೆ ಬೆಂಬಲ, ಸ್ಫೂರ್ತಿ ಹಾಗೂ ಮಾರ್ಗದರ್ಶನಕ್ಕಾಗಿ ನೋಡುವುದು. ಇವುಗಳನ್ನು ಅನುಸರಿಸುವವನು ಬೌದ್ಧನಾಗುತ್ತಾನೆ; ಈ ಮೂಲಕ ನಿರ್ವಾಣದ ಕಡೆಗೆ ಮೊದಲ ಹೆಜ್ಜೆ ಇಡುತ್ತಾನೆ.

೫) ಮೂರು ಆಶ್ರಯಗಳನ್ನು (ಶರಣು) ಪಡೆದ ಮೇಲೆ ನಿಮ್ಮ ಬದುಕಿನಲ್ಲಿ ಆಗಿರುವ ಬದಲಾವಣೆಗಳೇನು?

ಕಳೆದ ೨೫೦೦ ವರ್ಷಗಳಲ್ಲಿ ಅಸಂಖ್ಯಾತ ಇತರರಿಗೆ ಆಗಿರುವಂತೆಯೇ ನನ್ನಲ್ಲೂ, ಬುದ್ಧನ ಉಪದೇಶಗಳಿಂದಾಗಿ, ಈ ಕಷ್ಟಕರ ಜಗತ್ತಿಗೆ ಅರ್ಥವಿದೆ ಎಂದು ಗುರುತಿಸಲು ಸಾಧ್ಯವಾಗಿದೆ, ಅರ್ಥವಿಹೀನ ಬದುಕಿಗೆ ಅರ್ಥವಂತಿಕೆಯು ಪ್ರಾಪ್ತವಾಗಿದೆ. ನನ್ನ ಬದುಕಿಗೆ ದಾರಿದೀಪಗಳಾದ ಮಾನವೀಯವೂ ಕರುಣಾಮಯವೂ ಆದ ನೈತಿಕತೆಯನ್ನು ಪಡೆಯುವಂತಾಗಿದೆ, ಅವುಗಳಿಂದ ಮುಂದಿನ ಜನ್ಮದಲ್ಲಿ ನಾನು ಶುದ್ಧ ಹಾಗೂ ಪರಿಪೂರ್ಣ ಸ್ಥಿತಿಯನ್ನು ಹೇಗೆ ಪಡೆಯಬಹುದೆಂಬ ಬೋಧೆಯಾಗಿದೆ. ಒಬ್ಬ ಪ್ರಾಚೀನ ಕಾಲದ ಕವಿಯು ಬುದ್ಧನ ಬಗ್ಗೆ ಹೀಗೆ ಬರೆದಿದ್ದಾನೆ:

ಅವನಿಗೆ ಶರಣಾಗುವುದೆಂದರೆ;
ಅವನ ಗುಣಗಾನ ಮಾಡುವುದೆಂದರೆ,
ಅವನಿಗೆ ಗೌರವ ಸಲ್ಲಿಸಿ
ಅವನ ಧಮ್ಮಕ್ಕೆ ಬದ್ಧನಾಗುವುದೆಂದರೆ
ಅರಿವಿನಿಂದ ಕಾರ್ಯವೆಸಗುವುದು.

ನಾನು ಈ ಮಾತುಗಳನ್ನು ಸಂಪೂರ್ಣವಾಗಿ ಒಪ್ಪುತ್ತೇನೆ.

೬) ನನ್ನ ಗೆಳೆಯನೊಬ್ಬ ನನ್ನನ್ನು ತನ್ನ ಮತಕ್ಕೆ ಮತಾಂತರಗೊಳಿಸಲು ಸದಾ ಪ್ರಯತ್ನಪಡುತ್ತಿದ್ದಾನೆ. ನನಗೆ ಅವನ ಮತದಲ್ಲಿ ಆಸಕ್ತಿಯಿಲ್ಲ, ಅದನ್ನು ಅವನಿಗೆ ಹೇಳಿಯೂ ಇದ್ದೇನೆ. ಆದರೆ ನನ್ನನ್ನವನು ನನ್ನ ಪಾಡಿಗೆ ಬಿಡುತ್ತಿಲ್ಲ, ನಾನು ಏನು ಮಾಡಲಿ?

ತನ್ನ ಮತವನ್ನು ಮತ್ತೊಬ್ಬರ ಜೊತೆ ಹಂಚಿಕೊಳ್ಳುವುದು ಒಳ್ಳೆಯದೇ. ಆದರೆ ನಿಮ್ಮ ಸ್ನೇಹಿತರಿಗೆ ಹಂಚಿಕೊಳ್ಳುವುದು ಮತ್ತು ಹೇರುವುದು ಇವುಗಳ ನಡುವಣ ವ್ಯತ್ಯಾಸ ತಿಳಿಯದೆಂದು ನನಗನ್ನಿಸುತ್ತದೆ. ನನ್ನ ಬಳಿ ಒಂದು ಸೇಬಿನ ಹಣ್ಣಿದ್ದರೆ, ಅದರಲ್ಲಿ ಅರ್ಧವನ್ನು ನಿಮಗೆ ಕೊಟ್ಟಾಗ ನೀವು ತೆಗೆದುಕೊಳ್ಳುತ್ತೀರಿ. ಆದರೆ ನೀವು 'ಧನ್ಯವಾದಗಳು. ನನ್ನ ಹೊಟ್ಟೆ ತುಂಬಿದೆ' ಎಂದು ಹೇಳಿದರೂ ಅರ್ಧ ಸೇಬನ್ನು ತೆಗೆದುಕೊಳ್ಳಲು ನಾನು ನಿಮ್ಮನ್ನು ಒತ್ತಾಯಿಸಿದಾಗ, ಅದಕ್ಕೆ ಮಣಿದು ನೀವು ತೆಗೆದುಕೊಂಡರೆ ಅದನ್ನು ಹಂಚಿಕೊಳ್ಳುವುದು ಎಂದು ಹೇಳುವುದು ಕಷ್ಟ. ನಿಮ್ಮ ಸ್ನೇಹಿತರಂತಹ ಜನರು ತಮ್ಮ ಕೆಟ್ಟ ನಡವಳಿಕೆಯನ್ನು ಹಂಚಿಕೊಳ್ಳುವುದು, ಪ್ರೇಮ ಅಥವಾ ಔದಾರ್ಯ ಎಂಬ ಹೆಸರಿನಲ್ಲಿ ಮುಚ್ಚಿ ಕೊಳ್ಳುತ್ತಾರೆ. ಅವರು ಯಾವ ಹೆಸರಿನಿಂದಲೇ ಕರೆಯಲಿ, ಅವರ ನಡತೆಯು ಶುದ್ಧಾಂಗವಾಗಿ ಅನಾಗರಿಕವಾದದ್ದು, ಕೆಟ್ಟದ್ದು ಮತ್ತು ಸ್ವಾರ್ಥಪರವಾದದ್ದು.

ನೀವು ಮೊದಲು ಅರ್ಥಮಾಡಿಕೊಳ್ಳಬೇಕಾಗಿರುವುದೆಂದರೆ, ಅವರು ನಿಮ್ಮ ನಿಜವಾದ ಸ್ನೇಹಿತರಲ್ಲ ಎಂಬುದನ್ನು. ನಿಜವಾದ ಸ್ನೇಹಿತನು ನೀವಿರುಂತೆಯೇ ನಿಮ್ಮನ್ನು ಒಪ್ಪಿಕೊಳ್ಳುತ್ತಿದ್ದ, ನಿಮ್ಮ ಇಷ್ಟಗಳನ್ನು ಗೌರವಿಸುತ್ತಿದ್ದ. ಈ ವ್ಯಕ್ತಿ ನಿಮ್ಮನ್ನು ಮತಾಂತರಗೊಳಿಸಲೆಂದೇ ಸ್ನೇಹಿತನಂತೆ ಸೋಗು ಹಾಕಿರಬಹುದೆಂಬುದು ನನ್ನ ಅನುಮಾನ. ತಮ್ಮ ಆಸೆಗಳನ್ನು ನಿಮ್ಮ ಮೇಲೆ ಹೊರಿಸಲು ಪ್ರಯತ್ನಿಸುವವರು ಗೆಳೆಯರಲ್ಲ.

೭) ತನ್ನ ಮತವನ್ನು ನನ್ನೊಡನೆ ತಾನು ಹಂಚಿಕೊಳ್ಳಬಯಸುವನೆಂದು ಹೇಳುತ್ತಾನಲ್ಲ?

ತನ್ನ ಮತವನ್ನು ಮತ್ತೊಬ್ಬರ ಜೊತೆ ಹಂಚಿಕೊಳ್ಳುವುದು ಒಳ್ಳೆಯದೇ. ಆದರೆ ನಿಮ್ಮ ಸ್ನೇಹಿತರಿಗೆ ಹಂಚಿಕೊಳ್ಳುವುದು ಮತ್ತು ಹೇರುವುದು ಇವುಗಳ ನಡುವಣ ವ್ಯತ್ಯಾಸ ತಿಳಿಯದೆಂದು ನನಗನ್ನಿಸುತ್ತದೆ. ನನ್ನ ಬಳಿ ಒಂದು ಸೇಬಿನ ಹಣ್ಣಿದ್ದರೆ, ಅದರಲ್ಲಿ ಅರ್ಧವನ್ನು ನಿಮಗೆ ಕೊಟ್ಟಾಗ ನೀವು ತೆಗೆದುಕೊಳ್ಳುತ್ತೀರಿ. ಆದರೆ ನೀವು 'ಧನ್ಯವಾದಗಳು. ನನ್ನ ಹೊಟ್ಟೆ ತುಂಬಿದೆ' ಎಂದು ಹೇಳಿದರೂ ಅರ್ಧ ಸೇಬನ್ನು ತೆಗೆದುಕೊಳ್ಳಲು ನಾನು ನಿಮ್ಮನ್ನು ಒತ್ತಾಯಿಸಿದಾಗ, ಅದಕ್ಕೆ ಮಣಿದು ನೀವು ತೆಗೆದುಕೊಂಡರೆ ಅದನ್ನು ಹಂಚಿಕೊಳ್ಳುವುದು ಎಂದು ಹೇಳುವುದು ಕಷ್ಟ. ನಿಮ್ಮ ಸ್ನೇಹಿತರಂತಹ ಜನರು ತಮ್ಮ ಕೆಟ್ಟ ನಡವಳಿಕೆಯನ್ನು ಹಂಚಿಕೊಳ್ಳುವುದು, ಪ್ರೇಮ ಅಥವಾ ಔದಾರ್ಯ ಎಂಬ ಹೆಸರಿನಲ್ಲಿ ಮುಚ್ಚಿ ಕೊಳ್ಳುತ್ತಾರೆ. ಅವರು ಯಾವ ಹೆಸರಿನಿಂದಲೇ ಕರೆಯಲಿ, ಅವರ ನಡತೆಯು ಶುದ್ಧಾಂಗವಾಗಿ ಅನಾಗರಿಕವಾದದ್ದು, ಕೆಟ್ಟದ್ದು ಮತ್ತು ಸ್ವಾರ್ಥಪರವಾದದ್ದು.

೮) ಹಾಗಾದರೆ ಅವನನ್ನು ತಡೆಯುವುದು ಹೇಗೆ?

ತುಂಬ ಸುಲಭ. ಮೊದಲು, ನಿಮಗೇನು ಬೇಕು ಎಂಬುದರ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಸ್ಪಷ್ಟತೆಯಿರಲಿ. ಎರಡನೆಯದಾಗಿ, ಹಾಗೆಂದು ಅವರಿಗೆ ಸ್ಪಷ್ಟವಾಗಿಯೂ ಸಂಕ್ಷಿಪ್ತವಾಗಿಯೂ ಹೇಳಿಬಿಡಿ. ಮೂರನೆಯದಾಗಿ, 'ಈ ವಿಷಯ ದಲ್ಲಿ ನಿನ್ನ ನಂಬಿಕೆಯೇನು?' ಅಥವಾ 'ನನ್ನ ಜೊತೆ ಸಭೆಗೆ ನೀನು ಯಾಕೆ ಬರುವುದಿಲ್ಲ?' ಎಂಬಂತಹ ಪ್ರಶ್ನೆಗಳನ್ನು ಅವರು ಹಾಕಿದರೆ, ಸ್ಪಷ್ಟವಾಗಿ ಆದರೆ ಸೌಜನ್ಯಪೂರ್ವಕವಾಗಿ ನಿಮ್ಮ ಮೊದಲಿನ ಹೇಳಿಕೆಯನ್ನು ಮತ್ತೆ ಹೇಳಿ 'ನಿಮ್ಮ ಆಹ್ವಾನಕ್ಕೆ ವಂದನೆಗಳು, ಆದರೆ ನಾನು ಬರಲಾರೆ'.

'ಯಾಕೆ?'

'ಅದು ನನ್ನ ವಿಚಾರ. ನಾನು ಬರಲು ಸಾಧ್ಯವಿಲ್ಲ.'

'ಅಲ್ಲಿ ತುಂಬ ಕುತೂಹಲಕರ ವ್ಯಕ್ತಿಗಳು ಬರುತ್ತಾರೆ.'

'ಇರಬಹುದು, ಆದರೆ ನಾನು ಬರಲಾರೆ.'

'ನಾನು ನಿಮ್ಮನ್ನು ಕರೆಯುತ್ತಿರುವುದು ನಿಮ್ಮ ಬಗ್ಗೆ ನನಗೆ ಆಸಕ್ತಿ ಇರುವುದರಿಂದ.'

'ನನ್ನ ಬಗ್ಗೆ ಆಸಕ್ತಿ ಹೊಂದಿರುವುದಕ್ಕಾಗಿ ನಿಮಗೆ ವಂದನೆಗಳು, ಆದರೆ ನಾನು ಬರಲಾರೆ.'

ಹೀಗೆ ಸ್ಪಷ್ಟವಾಗಿಯೂ ತಾಳ್ಮೆಯಿಂದಲೂ ಪಟ್ಟು ಹಿಡಿದು ಹೇಳಿ, ಮಾತನ್ನು ಮುಂದುವರಿಸಲು ಅವಕಾಶ ನೀಡದಿದ್ದರೆ,ಕೊನೆಗೆ ಅವರು ನಿಮ್ಮ ಕೈಬಿಡುತ್ತಾರೆ. ಹೀಗೆ ಮಾಡಬೇಕಾಗಿ ಬಂದದ್ದು ನಾಚಿಕೆಗೇಡಿನ ವಿಷಯ. ಆದರೆ ತಮ್ಮ ನಂಬಿಕೆಗಳನ್ನಾಗಲೀ ಬಯಕೆಗಳನ್ನಾಗಲೀ ಇತರರ ಮೇಲೆ ಹೇರಲು ಸಾಧ್ಯವಿಲ್ಲ ಎಂಬುದನ್ನು ಅವರಿಗೆ ಕಲಿಸಬೇಕಾದದ್ದು ಅವಶ್ಯಕ.

೯) ಬೌದ್ಧರು ಧಮ್ಮವನ್ನು ಇತರರ ಜೊತೆ ಹಂಚಿಕೊಳ್ಳಬೇಕೇ?

ಹೌದು, ಹಂಚಿಕೊಳ್ಳಬೇಕು. ಆದರೆ ಬಹುಮಂದಿ ಬೌದ್ಧರಿಗೆ ಹಂಚಿಕೊಳ್ಳುವುದಕ್ಕೂ ಹೇರುವುದಕ್ಕೂ ಇರುವ ವ್ಯತ್ಯಾಸ ತಿಳಿದಿದೆ ಎಂದು ಭಾವಿಸಿದ್ದೇನೆ. ಯಾರಾದರೂ ಬೌದ್ಧಮತದ ಬಗ್ಗೆ ವಿಚಾರಿಸಿದರೆ ಅವರಿಗೆ ವಿವರಿಸಿ, ಅವರು ಕೇಳದಿದ್ದರೆ ಬುದ್ಧನ ಉಪದೇಶಗಳ ಬಗ್ಗೆ ವಿವರಿಸಿ. ಮಾತು ಅಥವಾ ನಡತೆಯಿಂದ ಇದರಲ್ಲಿ ತಮಗೆ ಆಸಕ್ತಿ ಇಲ್ಲವೆಂದು ಅವರು ತೋರ್ಪಡಿಸಿಕೊಂಡರೆ, ಅದನ್ನು ಗೌರವಿಸಿ ಅವರ ಪಾಡಿಗೆ ಅವರನ್ನು ಬಿಡಿ. ಮಾತುಗಳಿಗಿಂತ ನಡತೆಯ ಮೂಲಕ ನೀವು ಧಮ್ಮದ ಬಗ್ಗೆ ಇತರರಿಗೆ ತಿಳಿಹೇಳುವುದು ಮುಖ್ಯ ಎಂಬುದನ್ನು ನೆನಪಿಡಿ.

ಸೌಜನ್ಯ, ಅನುಕಂಪೆ, ತಾಳ್ಮೆ, ನೇರನಡತೆ ಮತ್ತು ಪ್ರಾಮಾಣಿಕತೆಗಳ ಮೂಲಕ ನೀವು ಧಮ್ಮದ ಹೆಗ್ಗಳಿಕೆಯನ್ನು ಜನರಿಗೆ ತಿಳಿಸಿಕೊಡಿ. ನಿಮ್ಮ ಮಾತು ನಡವಳಿಕೆಗಳಲ್ಲಿ ಧಮ್ಮವು ಹೊಮ್ಮುತ್ತಿರಲಿ. ನಾವೆಲ್ಲ, ನಾನೂ ನೀವೂ, ಧಮ್ಮವನ್ನು ಚೆನ್ನಾಗಿ ಅರಿತರೆ, ಅದನ್ನು ಪೂರ್ತಿ ಅನುಸರಿಸಿದರೆ, ಇತರರ ಜೊತೆ ಉದಾರವಾಗಿ ಹಂಚಿಕೊಂಡರೆ, ಅದರಿಂದ ನಮಗೆ ಮಾತ್ರವಲ್ಲ ಬೇರೆಯವರಿಗೂ ಅನುಕೂಲವಾಗುತ್ತದೆ.

(ಮುಗಿಯಿತು)

ಪುಸ್ತಕ ಬೇಕಾದಲ್ಲಿ
ಬುದ್ಧ ಜೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ.ನರಸೀಪುರ ತಾಲೂಕು
ಮೈಸೂರು ಜಿಲ್ಲೆ
ಇವರಿಗೆ ಬರೆದು ತರಿಸಿಕೊಳ್ಳಬಹುದು
ಬೆಲೆ ರೂ. ೩೦/-

SAMVADA' Kannada Monthly. APRIL 2004 RNI-KAR KAN/2002/9246 CPMG/KA/BGW-706/2003-05



ಸಂವಾದ

ಅಂಬೇಡ್ಕರ್ ವಿಶೇಷಾಂಕ